ಪೌರುಷ ಪರೀಕ್ಷೆ

ಬಸವರಾಜ ಕಟ್ಟೀಮನಿ



ಪೌರುಷ ಪರೀಕ್ಷೆ

ಐತಿಹಾಸಿಕ ಕಾದಂಬರಿ

ಬಸವರಾಜ ಕಟ್ಟೀಮನಿ

ಮಾರಾಟಗಾರರು :

ಮೋಹನ ಪ್ರಕಾಶನ

ಕೃಷ್ಣಮೂರ್ತಿಪುರಂ :: ಮೈಸೂರು

ಪ್ರಕಾಶಕರು :
ಬಸವರಾಜ ಕಟ್ಟೀಮನಿ
ಅಂಕಲಗಿ (ಜಿಲ್ಲೆ : ಬೆಳಗಾವಿ)

ಮೊದಲನೆಯ ಮುದ್ರಣ ೧೯೫೮

ಬೆಲೆ : ಎರಡು ರೂಪಾಯಿ

ಮುದ್ರಕರು :
ಶ್ರೀ ಶಕ್ತಿ ಎಲೆಕ್ಟ್ರಿಕ್ ಪ್ರೆಸ್
ಕೃಷ್ಣಮೂರ್ತಿಪುರಂ, ಮೈಸೂರು

ಮುನ್ನುಡಿ

ವಿಜಯನಗರ ಸಾಮ್ರಾಜ್ಯದ ಪತನದ ತರುವಾಯ ಕರ್ನಾಟಕದಲ್ಲಿ ಹೆಸರು ಪಡೆದ ಸ್ವತಂತ್ರ ಸಂಸ್ಥಾನಗಳಲ್ಲಿ ಕಿತ್ತೂರು ಪ್ರಮುಖವಾದುದು. ಕ್ರಿ.ಶ. ೧೫೮೫ ರಿಂದ ೧೮೨೪ ರವರೆಗೆ, ೨೪೦ ವರ್ಷಗಳ ಕಾಲ ಹನ್ನೆರಡು ಜನರು ಈ ರಾಜ್ಯವನ್ನಾಳಿದರು. ಸುತ್ತುಮುತ್ತಲಿನ ಪ್ರಬಲ ಶತ್ರುಗಳನ್ನೂ, ದಾಳಿಗಳನ್ನೂ, ಸಮರಗಳನ್ನೂ ಧೈರ್ಯದಿಂದ ಎದುರಿಸಿ ತನ್ನ ಸ್ವತಂತ್ರ ಅಸ್ತಿತ್ವವನ್ನುಳಿಸಿಕೊಂಡು ಬಾಳಿದ ಈ ರಾಜ್ಯದ ಕಥೆ ತುಂಬ ರೋಮಾಂಚಕಾರಿಯಾಗಿದೆ. ಈ ರಾಜವಂಶದಲ್ಲಿ ಅತ್ಯಂತ ಸಾಹಸಿಯೂ ಪರಾಕ್ರಮಿಯೂ ಅಂತೆಯೇ ಪ್ರಖ್ಯಾತನೂ ಆದ ಮಲ್ಲಸರ್ಜನ ಆಳಿಕೆಯ ದಿನಗಳಲ್ಲಂತೂ ಒಂದರ ಹಿಂದೊಂದರಂತೆ ಅತಿ ಮುಖ್ಯವಾದ ಘಟನೆಗಳು ಸಂಭವಿಸಿದುವು. ತನ್ನ ಆಳಿಕೆಯ ಆರಂಭಕಾಲದಲ್ಲಿಯೇ ಈ ಅರಸು, ಟೀಪುಸುಲ್ತಾನನ ಸೆರೆಯಾಳುವಾಗಬೇಕಾದ ಪ್ರಸಂಗ ಬಂದೊದಗಿತು. ಸೆರೆಯಿಂದ ಪಾರಾಗಿ ಬಂದು ಮಲ್ಲಸರ್ಜ ಮತ್ತೆ ತನ್ನ ರಾಜ್ಯವನ್ನು ವಶಪಡಿಸಿಕೊಂಡ ಕಥೆಯೇ ಈ ಕಾದಂಬರಿಯ ವಸ್ತುವಾಗಿದೆ.

ಸಾಮಾಜಿಕ ಕಾದಂಬರಿಗಿಂತ ಐತಿಹಾಸಿಕ ಕಾದಂಬರಿ ರಚಿಸುವುದು ಹೆಚ್ಚಿನ ಹೊಣೆಗಾರಿಕೆಯ ಕಾರ್ಯವಾಗಿದೆ. ಐತಿಹಾಸಿಕ ಸತ್ಯದ ಆವರಣದಲ್ಲಿಯೇ ಲೇಖಕನ ಕಲ್ಪನೆ ಕೆಲಸ ಮಾಡಬೇಕಾಗುತ್ತದೆ. ಕಿತ್ತೂರು ರಾಜ್ಯದ ಇತಿಹಾಸ ಒಂದೇ ಕಡೆ ಸಮಗ್ರವಾಗಿ ಸಿಕ್ಕುವುದಿಲ್ಲ. ಸಂಸ್ಥಾನಕ್ಕೆ ಸಂಬಂಧಪಟ್ಟ ಕಾಗದಪತ್ರಗಳೂ ದಾಖಲೆಗಳೂ ಪುಣೆ–ಮುಂಬಯಿ–ಲಂಡನ್‌ಗಳ ಮ್ಯೂಜಿಯಂಗಳಲ್ಲಿ ಬಿದ್ದುಕೊಂಡಿವೆ. ಬೈಲಹೊಂಗಲದ ಚೆನ್ನಮ್ಮರಾಣಿ ಇತಿಹಾಸ ಮಂಡಲದವರು ಸಾಕಷ್ಟು ಶ್ರಮವಹಿಸಿ ಕೆಲವು ದಾಖಲೆಗಳನ್ನೂ ಕಾಗದಗಳನ್ನೂ ಸಂಗ್ರಹಿಸಿದ್ದಾರೆ. ಮಲ್ಲಸರ್ಜನ ಕಾಲದಲ್ಲಿಯೇ ರಚಿಸಲ್ಪಟ್ಟ ಕೆಲವು ಕಾವ್ಯಗಳನ್ನೂ ಅವರು ಪ್ರಕಟಿಸಿದ್ದಾರೆ. ಗೆಜೆಟಿಯರುಗಳಲ್ಲೂ ಅಲ್ಪಸ್ವಲ್ಪ ಮಾಹಿತಿ ದೊರೆಯುತ್ತದೆ. ಈ ಸಾಹಿತ್ಯ

ವೆಲ್ಲವನ್ನೂ ಅಭ್ಯಸಿಸಿದ ತರುವಾಯವೇ ಪ್ರಸ್ತುತ ಕಾದಂಬರಿ ರಚಿಸಲಾಗಿದೆ. ಇದರ ಮುಂದಿನ ಕಥೆಯನ್ನೂ ಯಥಾಪ್ರಕಾರವಾಗಿ ಕಾದಂಬರೀ ರೂಪದಲ್ಲಿ ಚಿತ್ರಿಸುವ ಯೋಚನೆಯಿದೆ. ವೀರರಾಣಿ ಚೆನ್ನಮ್ಮನ ಅಮರ ಚರಿತ್ರೆಯೂ ಈ ಮಾಲೆಯಲ್ಲಿಯೇ ಸಮಾವೇಶವಾಗುತ್ತದೆ.

—ಬಸವರಾಜ ಕಟ್ಟೀಮನಿ

೧

ಮನೆಯ ಅಂಗಳದಲ್ಲಿ ಕತ್ತಿ ಮಸೆಯುತ್ತ ಕುಳಿತಿದ್ದ ಮಡಿವಾಳ ಹಠಾತ್ತನೆ ಕತ್ತೆತ್ತಿ, ಓಣಿಯಲ್ಲಿ ಕಳ್ಳ ಹೆಜ್ಜೆಯಿಕ್ಕುತ್ತ ನಡೆದಿದ್ದ ಆ ವ್ಯಕ್ತಿಯತ್ತ ದೃಷ್ಟಿ ತಿರುಗಿಸಿದ. ನಿಧಾನವಾಗಿ ಕಿತ್ತೂರಿನ ಮೇಲೆ ಹರಡುತ್ತಿದ್ದ ಮಬ್ಬುಗತ್ತಲಲ್ಲಿ ಆ ವ್ಯಕ್ತಿ ಯಾರೆಂಬುದು ತಿಳಿಯುವುದು ದುಸ್ತರವೇ ಆಗಿತ್ತು. ಆದರೂ, ಅಲ್ಲಲ್ಲಿ ನಿಂತು ಸುತ್ತಮುತ್ತ ದೃಷ್ಟಿ ಬೀರುತ್ತ, ಆಗಾಗ ಹಿಂದೆ ಹೊರಳಿ ನೋಡುತ್ತ, ತನ್ನನ್ನು ಯಾರೂ ಹಿಂಬಾಲಿಸುತ್ತಿಲ್ಲವೆಂದು ಖಚಿತಪಡಿಸಿಕೊಂಡು ಮತ್ತೆ ನಾಲ್ಕಾರು ಹೆಜ್ಜೆ ನಡೆದು ಪುನಃ ಅನುಮಾನದಿಂದ ತಿರುಗಿ ನೋಡುತ್ತ ನಡೆದಿದ್ದ ಆ ವ್ಯಕ್ತಿ ಯಾವುದೋ ರಹಸ್ಯಮಯ ಕಾರ್ಯಕ್ಕಾಗಿಯೇ ಹೊರಟಿದ್ದುದಂತೂ ಸ್ಪಷ್ಟವಾಗಿತ್ತು.

ಮಸೆದು ಮಸೆದು ಹರಿತವಾಗಿ, ಪಡಸಾಲೆಯಿಂದ ಬರುತ್ತಿದ್ದ ಬೆಳಕಿನಲ್ಲಿ ಮಿರುಮಿರನೆ ಮಿಂಚುತ್ತಿದ್ದ ಕರವಾಳವನ್ನು ಒರೆಗೆ ಸೇರಿಸಿ ಮಡಿವಾಳ, ಪಡಸಾಲೆಯಲ್ಲಿ ಪಣತಿಗಳನ್ನು ತಯಾರಿಸುತ್ತ ಕುಳಿತಿದ್ದ ತಂದೆಯತ್ತ ಹೊರಳಿ ಮೆಲುದನಿಯಲ್ಲಿ ಮಾತನಾಡಿದ:

“ಮತ್ತೇನೋ ಹೊಸಾ ಪಿತೂರಿ ನಡದಂಗ ಕಾಣುತೈತಿ ಅಪ್ಪಾ. ಅವ ಹೆಂಗ ತುಡುಗನಂಗ ನಡದಾನ, ನೋಡಿದಿಯಾ? ಅವ ಯಾರೋ ಗೂಢಚಾರನೇ ಇರಬೇಕು. ಎಲ್ಲಿ ಹೊಂಟಾನೋ ನೋಡಿ ಬರ್ತೀನಿ.”

“ಹೂಂ. ಹೋಗಿ ಬಾ. ನಾ ಬ್ಯಾಡಾಂದರೆ ನೀನೆಲ್ಲಿ ಕೇಳುತೀ? ನಿನಗಿದೊಂದು ಹುಚ್ಚು....” ಎಂದ ಸಿದ್ಧರಾಮಪ್ಪ, ತನ್ನ ಕಾಯಕವನ್ನು ಹಾಗೆಯೇ ಮುಂದುವರಿಸುತ್ತ.

ಮಣ್ಣು ಹದಗೊಳಿಸುವ ಕಾರ್ಯದಲ್ಲಿ ಮಗ್ನಳಾಗಿದ್ದ ಅವನ ಸೊಸೆ ಸಿದ್ಧಮತಿ ಆ ಮಾತು ಕೇಳಿ, ಗಂಡನ ಕಡೆಗೆ ನೋಡುತ್ತಾ ನಸುನಕ್ಕಳು. “ಹೌದು. ಮಾವನ ಮಾತು ನಿಜ. ಇವರದು ಯಾವಾಗಲೂ ಇದೊಂದು ಹುಚ್ಚು. ಮನೆಗೆಲಸದಲ್ಲಿ ಲಕ್ಷ್ಯ ಇಲ್ಲ. ದುಡಿದು ಹಣ ಮಾಡುವ ಮನಸ್ಸಿಲ್ಲ. ಯಾವಾಗಲೂ ಕತ್ತಿವರಸೆ, ಕವಾಯಿತು, ಕುದುರೆ ಸವಾರಿಗಳ

ನಾದವೇ. ಅದರಿಂದಾಗುವ ಲಾಭವೂ ಅಷ್ಟಕ್ಕಷ್ಟೆ....ಆದರೂ ಇವರಿಗೆ ಅದೇ ಹುಚ್ಚೇ...." ಎಂದು ಮನಸ್ಸಿನಲ್ಲಿಯೇ ಅಂದುಕೊಳ್ಳುತ್ತಾ ಮತ್ತೆ ನಕ್ಕಳು ಸಿದ್ಧಮತಿ.

ಅವಳ ನಗುಮೊಗವನ್ನು ವೀಕ್ಷಿಸುತ್ತ ಮೈಮರೆಯುವ ಮನೋಸ್ಥಿತಿಯಲ್ಲಿರಲಿಲ್ಲ ಮಡಿವಾಳ. ಆತ ಲಗುಬಗೆಯಿಂದ ಪಾದತ್ರಾಣ ಮೆಟ್ಟಿಕೊಂಡು ಬೀದಿಗಿಳಿದು ನಡೆದ. ಮತ್ತೆ ಏನು ಹೊಳೆಯಿತೋ, ಪುನಃ ಹಿಂದಿರುಗಿ ಬಂದು, ಪಾದತ್ರಾಣಗಳನ್ನು ತೆಗೆದಿರಿಸಿ ಅವಸರದಿಂದ ಹೊರಟು ಹೋದ.

"ಅಂತೂ ಇಷ್ಟಾದರೂ ತಿಳೀತಲ್ಲ! ಇನ್ನೇನು ನಿನ್ನ ಗಂಡ ದರಬಾರದಾಗ ಮುತ್ಸದ್ದಿಯಾಗಬಹುದು! ಏನಂತೀ ಸಿದ್ದೂ?" ಎಂದು ನಗುತ್ತಾ ಕೇಳಿದ ಸಿದ್ಧರಾಮಪ್ಪ.

"ಮುತ್ಸದ್ದಿಯಾಗೋದಿದ್ದರೆ ಎಂದೋ ಆಗಿ ಹಳೇ ಮಾತಾಗುತ್ತಿತ್ತು. ಪುಗಸಟ್ಟೆ ದುಡಿಯೂದರಾಗ ಇವರು ಬಂಟರದಾರನ್ನೂದು ಅವರಿಗೂ ಗೊತ್ತಾಗಿರಬೇಕು. ದುಡಿದರೆ ದುಡೀಲಿ ಅಂತ ಸುಮ್ಮನಿರಬೇಕು."

ಹೀಗೆ ಮಾವ – ಸೊಸೆಯರ ಮಾತು ನಡೆದಿದ್ದಂತೆಯೇ ಮಡಿವಾಳ ತ್ವರೆಯಿಂದ ಹೊರಟು ಕತ್ತಲಲ್ಲಿ ಕಳ್ಳಹೆಜ್ಜೆಯಿಡುತ್ತ ನಡೆದಿದ್ದ ಆ ವ್ಯಕ್ತಿಯನ್ನು ಹಿಂಬಾಲಿಸಿದ. ಕ್ಷಣಕ್ಷಣಕ್ಕೂ ದಟ್ಟವಾಗುತ್ತಲಿದ್ದ ಅಂಧಕಾರದಲ್ಲಿ, ತನ್ನ ಬೆನ್ನು ಹಿಡಿದು ಬರುತ್ತಿದ್ದ ಈ ಯುವಕ ಆ ವ್ಯಕ್ತಿಗೆ ಕಾಣಿಸಲಿಲ್ಲ. ಹಿಂದಿರುಗಿ ನೋಡುವುದನ್ನು ನಿಲ್ಲಿಸಿ ಆತ ನಿಶ್ಚಿಂತನಾಗಿ ಬಿರುಬಿರನೆ ಸಾಗಿದ್ದ.

ಒಂದೆರಡು ಓಣಿಗಳಲ್ಲಿ ಹಾಯ್ದು, ಸಂಸ್ಥಾನದ ಪ್ರಮುಖ ವ್ಯಕ್ತಿಗಳು ನೆಲೆಸಿದ್ದ ಮುಖ್ಯ ಬೀದಿಯಲ್ಲಿ ಅಡಿಯಿರಿಸಿ, ಅಲ್ಲಿನ ಮನೆಗಳಲ್ಲೆಲ್ಲ ಎದ್ದು ಕಾಣುತ್ತಿದ್ದ ಮಹಡಿಯ ಮನೆಯೊಂದರ ಎದುರು ಆತ ನಿಂತುಕೊಂಡು ಮತ್ತೆ ಹಿಂದಿರುಗಿ ನೋಡಿದ. ಅವನ ಚಲನವಲನಗಳನ್ನು ನಿರೀಕ್ಷಿಸುತ್ತ ತುಸುದೂರದಲ್ಲಿ ಅಡಗಿ ನಿಂತಿದ್ದ ಮಡಿವಾಳ ಆಗಲೂ ಅವನಿಗೆ ಕಾಣಿಸಲಿಲ್ಲ.

ಮಹಡಿ ಮನೆಯೆದುರು ಪಹರೆ ಮಾಡುತ್ತಲಿದ್ದ ಬಿಚ್ಚುಗತ್ತಿಯ ಸೈನಿಕನ ಬಳಿ ಹೋಗಿ ಆತ ಪಿಸುದನಿಯಲ್ಲಿ ಏನನ್ನೋ ಹೇಳಿದ. ಹೆಬ್ಬಾ

ಗಿಲಿನಾಚೆ ಕುಳಿತಿದ್ದ ಇನ್ನೊಬ್ಬ ಸೈನಿಕನನ್ನು ಕೂಗಿ, ಮೊದಲನೆಯ ಸೈನಿಕ, ಆಗಂತುಕನ ಆಗಮನದ ವಿಚಾರ ತಿಳಿಸುತ್ತಲೂ ಆತ ಮನೆಯೊಳಕ್ಕೆ ಹೋಗಿ ಕೊಂಚ ಹೊತ್ತಿನ ತರುವಾಯ ಹಿಂದಿರುಗಿ ಬಂದು, ಬಾಗಿಲು ತೆರೆದು ಬಂದಾತನನ್ನು ಬರಮಾಡಿಕೊಂಡ. ಆತ ಒಳಸೇರಿದೊಡನೆಯೇ ಬಾಗಿಲು ಮತ್ತೆ ಮುಚ್ಚಿಕೊಂಡಿತು.

ಮರೆಯಲ್ಲಿ ನಿಂತು ಎಲ್ಲವನ್ನೂ ವೀಕ್ಷಿಸುತ್ತಿದ್ದ ಮಡಿವಾಳ ಮುಂದೇನನ್ನು ಮಾಡುವುದೆಂಬುದು ಹೊಳೆಯದೆ ಕೆಲಹೊತ್ತು ಸುಮ್ಮನೆ ನಿಂತುಕೊಂಡಿದ್ದ. ಅವನ ತಲೆಯಲ್ಲಿ ಪರಸ್ಪರ ವಿರುದ್ಧವಾದ ವಿಚಾರಗಳು ಒಂದರ ಹಿಂದೊಂದರಂತೆ ನುಗ್ಗುತ್ತಿದ್ದುವು. ಕಳ್ಳನಂತೆ ನಡೆದು ಬಂದು ದಿವಾನರ ಮನೆಯಲ್ಲಿ ಪ್ರವೇಶಿಸಿದ ಈ ಮನುಷ್ಯ ವೈರಿಗಳ ಗೂಢಚಾರನೇ ಇರಬಹುದೆಂದು ಹೇಗೆ ಹೇಳುವುದು? ವೈರಿಗಳ ಸಮಾಚಾರ ತಿಳಿದುಕೊಂಡು ಬರಲೆಂದು ದಿವಾನರೇ ಈತನನ್ನು ಕಳಿಸಿರಬಾರದೇಕೆ?

ಆದರೆ ಈತ ಕಿತ್ತೂರಿನ ಗೂಢಚಾರನೇ ಆಗಿದ್ದ ಪಕ್ಷದಲ್ಲಿ, ಈ ಊರಿನಲ್ಲಿಯೇ ಹೀಗೆ ಹೆದರುತ್ತ ಹೆದರುತ್ತ, ಸಂದೇಹಕ್ಕಾಸ್ಪದವಾಗುವಂತೆ ವರ್ತಿಸುತ್ತ ಬರಲು ಕಾರಣವೇನು? ಈತ ನಿಜವಾಗಿಯೂ ನಮ್ಮವನೇ ಆಗಿದ್ದರೆ ಈ ನಗರದಲ್ಲಿ ಇವನಿಗೇಕೆ ಭಯವಾಗಬೇಕು? ಛೆ, ಛೆ, ಹಾಗೆಂದಿಗೂ ಇರಲಾರದು. ಈತ ನಮ್ಮ ಗೂಢಚಾರನಾಗಿರುವುದು ಶಕ್ಯವೇ ಇಲ್ಲ.

ನಮ್ಮವನಲ್ಲವಾದರೆ ಈತ ಇನ್ನಾರವನು ಹಾಗಾದರೆ? ಪೇಶವೆಯರ ಕಡೆಯವನಿರಬಹುದೇ? ಟೀಪುವಿನ ಕಡೆಯವನಿರಬಹುದೇ? ನರಗುಂದವನ್ನು ಕೈವಶಮಾಡಿಕೊಂಡ ಟೀಪುವಿನ ಸೇನೆಯೇನೋ ಇತ್ತ ಕಡೆಗೇ ಹೊರಟು ಬರುತ್ತಿರುವ ವಾರ್ತೆಯಿದೆ. ಕಿತ್ತೂರಿನ ಪರಿಸ್ಥಿತಿಯನ್ನು ಪ್ರತ್ಯಕ್ಷವಾಗಿ ನೋಡಿ ತಿಳಿದುಕೊಂಡು ಹೋಗುವ ಉದ್ದೇಶದಿಂದ ಟೀಪುವಿನ ಬೇಹುಗಾರರು ಇಲ್ಲಿಗೆ ಗುಪ್ತರೀತಿಯಲ್ಲಿ ಬರುವ ಸಂಭವವೂ ಇಲ್ಲದಿಲ್ಲ. ಈ ಹೊತ್ತಿಗಾಗಲೇ ಅವರು ಬಂದಿರಲೂಬಹುದು. ವೇಷಾಂತರ ಮಾಡಿಕೊಂಡು ಅಲ್ಲಲ್ಲಿ ಅಲೆಯುತ್ತ ತಮ್ಮ ಕಾರ್ಯವನ್ನೂ ಸಾಗಿಸಿರಬಹುದು. ಆದರೆ....

ದಿವಾನರ ಮನೆಗೆ ಬಂದ ಮನುಷ್ಯನೂ ಟೀಪುವಿನ ಬೇಹುಗಾರರಲ್ಲೊಬ್ಬನಾಗಿರಬಹುದೆಂಬ ವಿಚಾರವನ್ನೊಪ್ಪಲು ಮಡಿವಾಳನ ಮನಸ್ಸು ಸಿದ್ಧವಾಗ

ಲಿಲ್ಲ. ಟೀಪುವಿನ ಕಡೆಯ ರಾಯಭಾರಿಗಳು ಮಾತುಕತೆಗಾಗಿ ಕಿತ್ತೂರಿನ ಆಸ್ಥಾನಕ್ಕೆ ಬರುವುದೇನೂ ಅಸಹಜವಲ್ಲ. ಆದರೆ ಗೂಢಚಾರರು? ಕತ್ತಲಲ್ಲಿ ಒಂಟಿಯಾಗಿ, ಯಾರಿಗೂ ಗೊತ್ತಾಗದಂತೆ ದಿವಾನರ ಮನೆಗೆ ಅವರು ಬರಲೇನು ಕಾರಣ? ಛೆ? ಅದು ಸಾಧ್ಯವೇ ಇಲ್ಲ....

ಹೀಗೆ ವಿಚಾರ ಮಾಡುತ್ತ ಅಷ್ಟು ಹೊತ್ತು ಅಲ್ಲಿಯೇ ನಿಂತುಕೊಂಡಿದ್ದ ಮಡಿವಾಳ ಥಟ್ಟನೆ ಅಲ್ಲಿಂದ ಹಿಂದಿರುಗಿ, ಮತ್ತೊಂದು ಓಣಿಗೆ ಬಂದು ದೊಡ್ಡ ಮನೆಯೊಂದರಲ್ಲಿ ಪ್ರವೇಶಿಸಿ, ಅಂಗಳದಲ್ಲಿದ್ದ ಆಳು ಮನುಷ್ಯನನ್ನು ವಿಚಾರಿಸಿದ :

"ವೀರಸಂಗಪ್ಪನವರಿದಾರೇನು ಮನಿಯೊಳಗ?"

"ಊಟಕ್ಕೆ ಕುಂತಾರ. ಈಗೇನು ಅವಸರ ಮಡಿವಾಳಪ್ಪ? ನಾಳೆ ಬೆಳಗಿನಾಗ ಬಾರಲ್ಲ?" ಎಂದ ಆಳು ಮನುಷ್ಯ.

"ಊಹೂಂ. ಈಗಿಂದೀಗ ಭೇಟಿಯಾಗಲಿಕ್ಕೇ ಬೇಕು. ಅವಸರದ ಕೆಲಸ ಐತಿ ಅಂತ ಹೇಳು ಸರದಾರ್ ಸಾಹೇಬರಿಗೆ."

"ನೀ ಯಾವಾಗಲೂ ಹೀಗೇ. ಗಡಿಬಿಡಿ ಮಾಡಿಕೊಂಡೇ ಬರ್ತೀ!" ಎಂತ ಗೊಣಗುತ್ತ ಆಳು ಒಳಗೆ ಹೋಗಿ ಒಂದು ನಿಮಿಷದ ಬಳಿಕ ಹೊರಳಿ ಬಂದು ಹೇಳಿದ :

"ಧಣೇರ ಊಟ ಮುಗೀತು, ನಿನ್ನ ಕರೀತಾರ. ಹೋಗು."

ವೀಳಯವನ್ನು ಮೆಲ್ಲುತ್ತ, ಅಟ್ಟದ ಮೇಲಿನ ನಡುಮನೆಯಲ್ಲಿ ತೂಗುಮಂಚದ ಮೇಲೆ ಕುಳಿತಿದ್ದ ವೀರಸಂಗಪ್ಪ, ಮುಜುರೆ ಮಾಡುತ್ತ ಬಂದ ಮಡಿವಾಳನನ್ನು ಮುಗುಳ್ನಗೆಯಿಂದ ಸ್ವಾಗತಿಸಿ,

"ಬಾ ಮಡಿವಾಳಪ್ಪಾ. ಏನು ಮಹತ್ವದ ಸುದ್ದಿ ತಂದಿದ್ದೀ? ಕೂಡ್ರು ಆ ಜಾಜೀಮದ ಮ್ಯಾಲ," ಎಂದು ಹೇಳಿದ.

ಮಡಿವಾಳ ಕುಳಿತುಕೊಳ್ಳಲಿಲ್ಲ; ನಿಂತುಕೊಂಡೇ ಮಾತನಾಡಿದ :

"ಈ ಹೊತ್ತಿನಾಗ ತ್ರಾಸ ಕೊಟ್ಟದ್ದಕ್ಕೆ ಸರದಾರ ಸಾಹೇಬರು ಕ್ಷಮಾ ಮಾಡಬೇಕು. ಆದರೂ, ನಿಮಗೊಂದು ಸುದ್ದಿ ತಿಳಿಸಲೇಬೇಕಾಗಿತ್ತು ಅಂತ ಬಂದೆ."

"ನಿನ್ನ ಮ್ಯಾಲ ನನಗೆ ಪೂರಾ ನಂಬಿಕೆಯದ ಮಡಿವಾಳಾ. ನಿನ್ನಂಥಾ

ವಿಶ್ವಾಸದ ಶೂರರಿಂದಲೇ ನಮ್ಮ ಕಿತ್ತೂರು ಸುರಕ್ಷಿತವಾಗಿ ಉಳಿದದ್ದು. ಹೇಳು. ಏನದು ಸುದ್ದಿ ?"

ತಾನು ನೋಡಿ ಬಂದುದೆಲ್ಲವನ್ನೂ ಸ್ವಲ್ಪದರಲ್ಲಿ ವಿವರಿಸಿ ಹೇಳಿ ಮಡಿವಾಳನೆಂದ :

" ಕಂಡದ್ದು ಕಂಡಂತೆ ಹೇಳಿದೀನಿ. ಮುಂದಿನವೆಲ್ಲಾ ನಿಮ್ಮ ಮ್ಯಾಲ ಸರದಾರ್ ಸಾಹೇಬರೇ."

" ಇಲ್ಲಿ ಬಂದು ಇದನ್ನು ತಿಳಿಸಿ ಚಲೋ ಮಾಡಿದಿ ಮಡಿವಾಳಾ. ಪ್ರಭುಗಳಿಗೆ ಹೇಳಿ ನಿನಗೆ ತಕ್ಕ ಇನಾಮು ಕೊಡಿಸ್ತೇನಿ," ಎಂದು ನುಡಿದು ವೀರ ಸಂಗಪ್ಪ ತೂಗುಮಂಚ ಬಿಟ್ಟೆದ್ದು ಅಸ್ವಸ್ಥ ಚಿತ್ತದಿಂದ ಅತ್ತಿತ್ತ ಅಡಿಯಿಡುತ್ತ ಕೇಳಿದ.

" ಆ ಮನುಷ್ಯನ ಚಹರೆ ಹ್ಯಾಗಿತ್ತು ಮಡಿವಾಳಾ ? "

" ಕತ್ತಲಾಗ ಏನೂ ಕಾಣುವಂತಿರಲಿಲ್ಲರೀ. ಅವ ಈ ಊರವನಲ್ಲ ಅನ್ನುವದು ಮಾತ್ರ ಖಾತ್ರಿ."

" ಅದೇನೋ ಸರಿ. ಆದರೆ, ಎಲ್ಲಿಯವನ ಆಗಿರಬಹುದು ? "

" ಅದೇ ಗೂಢ ಆಗ್ಯೆತಿ ನನಗೂ ಆಗಿನಿಂದ. ದಿವಾನರೇ ಅವನ್ನ ನೇಮಿಸಿರಬಹುದೇನ್ರೀ? ವೈರಿಗಳ ಸುದ್ದಿ ತಿಳಕೊಳ್ಳಲಿಕ್ಕೆ ?"

" ಅವರು ಗೂಢಚಾರರನ್ನಿಟ್ಟಿದ್ದರೂ ಇರಬಹುದು. ಆದರೆ, ಅವರು ಹೀಗ್ಯಾಕೆ ಕಳ್ಳತನದಿಂದ ಬಂದಾರು? ಇದರಲ್ಲೇನೋ ಮೋಸ ಇದ್ದಂತೆ ಕಾಣ್ತದ ಮಡಿವಾಳಾ. ಕಿತ್ತೂರಿನ ಮ್ಯಾಲ ಮತ್ತೇನು ಗಂಡಾಂತರ ಬರ್ತದೋ! ಸುತ್ತಲೂ ಶತ್ರುಗಳೇ ಶತ್ರುಗಳು. ಪೇಶವೆಯರಿಗೆ ನಮ್ಮನ್ನು ಕಂಡರಾಗದು. ಪಟವರ್ಧನರೂ ನಮ್ಮ ಬಗ್ಗೆ ಹೊಟ್ಟೆಕಿಚ್ಚು ಮಾಡುವವರೇ. ಆ ಟೀಪುವಂತೂ ಕೈತೊಳಕೊಂಡು ಬೆನ್ನು ಹತ್ತಿದಾನೆ. ನಮ್ಮ ಪ್ರಭುಗಳೋ ಇನ್ನೂ ಚಿಕ್ಕವರು......ಈ ಸಂಧಿ ಸಾಧಿಸಿ ಯಾರೋ ಘಾತ ಮಾಡುವಂತೆ ಕಾಣ್ತದ."

" ದಿವಾನಸಾಹೇಬರದು ಏನಾರೆ ಒಳ ಹೊಡೆತ ಇರಬಹುದು ಅಂತೀರಾ ?"

" ಇರಬಹುದು. ಇರಲಿಕ್ಕಿಲ್ಲ. ರಾಜಕಾರಣದಾಗ ಹೀಗೇ ಇರ್ತದ ಅಂತ ಖಚಿತವಾಗಿ ಏನೂ ಹೇಳಬರೂದಿಲ್ಲ."

"ದಿವಾನರೂ ನಮ್ಮ ವೈರಿಗಳ ಪಕ್ಷ ಕಟ್ಟಿದರೆ ದೇವರೇ ಗತಿ!"

"ದೇವರೇ ಕಾಪಾಡಬೇಕು. ಆದರೆ, ದಿವಾನರ ಬಗ್ಗೆ ನಾವು ಈಗಲೇ ಹೀಗೆಲ್ಲಾ ಆಡುವದು ಚಲೋದಲ್ಲ ಮಡಿವಾಳಾ. ಆ ಮನುಷ್ಯ ಯಾವುದೊಂದು ಬೇರೆ ಕೆಲಸಕ್ಕಾಗಿ ದಿವಾನರ ಹತ್ತಿರ ಬಂದಿದ್ದಾನು. ಅದೇನು ಅನ್ನುವದನ್ನು ತಿಳಿದುಕೊಳ್ಳದೆ ಈಗಲೇ ನಾವು ದಿವಾನರ ಮ್ಯಾಲೆ ಸಂಶಯ ತಗೋಬಾರದು."

"ಅದೇನೋ ಸರಿ. ಆದರೆ ಸಂಶಯ ಬರುವ ಹಂಗೇ ಅಲ್ಲಿ ನಡದೈತಲ್ಲರಿ?"

"ಆದೂ ನಿಜ. ಬಂದ ಮನುಷ್ಯ ಯಾರು, ಯಾತಕ್ಕೆ ಬಂದಾನೆ ಎಲ್ಲಾ ಕೇಳಿ ತಿಳಿದುಕೊಳ್ಳೋಣ. ಬಾ, ದಿವಾನರ ಮನೆಗೇ ಹೋಗಿ ಬರೋಣು."

ತೆಳುಬಟ್ಟೆಯ ಅಂಗಿ ತೊಟ್ಟು, ಉತ್ತರೀಯ ಹೊದೆದು, ಕಿರುಗತ್ತಿಯನ್ನು ಸೊಂಟದಲ್ಲಿ ಸಿಲುಕಿಸಿ ವೀರಸಂಗಪ್ಪ ಸಿದ್ಧವಾದ. ಜೊತೆಯಲ್ಲಿ ಹೊರಟ ಆಳಿಗೆ ಬೇಡವೆಂದು ಹೇಳಿ ಮಡಿವಾಳನೊಡನೆ ಅವನೊಬ್ಬನೇ ನಡೆದ.

ಅವರು ದಿವಾನರ ಮನೆಯೆದುರು ಬರುತ್ತಿದ್ದ ಹಾಗೆಯೇ, ಹೆಬ್ಬಾಗಿಲು ನಿಧಾನವಾಗಿ ತೆರೆಯಿತು. ಸ್ವಲ್ಪ ಸಮಯದ ಮುನ್ನ ಒಳಗೆ ಹೋಗಿದ್ದ ಆ ವ್ಯಕ್ತಿಯೇ ಮತ್ತೆ ಹೊರಬಂದು ತ್ವರೆಯಿಂದ ಹೆಜ್ಜೆಯಿಡುತ್ತ ನಡೆಯತೊಡಗಿದ.

ವೀರಸಂಗಪ್ಪ, ದಿವಾನನನ್ನು ನೋಡುವ ವಿಚಾರ ತ್ಯಜಿಸಿ, ಆ ಗೂಢಚಾರನನ್ನೇ ಹಿಡಿದು ಅವನ ಮುಖದಿಂದಲೇ ವಿಷಯವನ್ನರಿತುಕೊಳ್ಳಬೇಕೆಂದು ನಿಶ್ಚಯಿಸಿದ. ಗೂಢಚಾರ ಮುಂದೆ ನಡೆದು ಇನ್ನೊಂದು ಓಣಿಗೆ ತಿರುಗಿದೊಡನೆಯೇ ವೀರಸಂಗಪ್ಪ ಥಟ್ಟನೆ ಅವನ ಮೇಲೆರಗಿ, ತನ್ನ ಭದ್ರವಾದ ಬಾಹುಗಳಲ್ಲಿ ಅವನನ್ನು ಬಿಗಿಯಾಗಿ ಹಿಡಿದುಕೊಂಡ. ಅಂಥ ಪ್ರಸಂಗಗಳಲ್ಲಿ ಬಲ್ಲಿದನಾಗಿದ್ದ ಮಡಿವಾಳಪ್ಪನೂ ಚತುರತೆಯಿಂದ ಓಡಿ ಬಂದು ತನ್ನ ರುಮಾಲನ್ನೇ ತೆಗೆದು ಅದರಿಂದ ಗೂಢಚಾರನ ಕೈಗಳೆರಡನ್ನೂ ಬಿಗಿದು ಕಟ್ಟಿದ. ಇದೆಲ್ಲವೂ ಮಿಂಚಿದಂತೆ ನಡೆದು ಹೋಯಿತು. ಗೂಢ

ಚಾರನಿಗೆ ಕತ್ತಿ ಹಿರಿಯುವ ಅವಕಾಶವೂ ಲಭಿಸಲಿಲ್ಲ. ಆತ ಬಾಯಿ ತೆರೆದು ಕೂಗಿಕೊಳ್ಳುವಂತೆಯೂ ಇರಲಿಲ್ಲ. ಕೂಗಿಕೊಳ್ಳುವುದರಿಂದ ತನಗಾಗುವ ಲಾಭಕ್ಕಿಂತ ಹಾನಿಯೇ ಹೆಚ್ಚೆಂಬುದು ಅವನಿಗೂ ತಿಳಿದಿತ್ತು. ಅಂತೆಯೇ, ಬಂದುದೆಲ್ಲಾ ಬರಲಿ ಎಂದುಕೊಂಡು ಅವನೂ ಸುಮ್ಮನಾದ.

ಅವನನ್ನು ಮನೆಗೆ ಸಾಗಿಸಿಕೊಂಡು ಬಂದು, ಅಟ್ಟದ ಮೇಲಿನ ಖಾಸಗೀ ಕೊಠಡಿಗೇ ಎಳೆದೊಯ್ದು ದೀಪದ ಬೆಳಕಿನಲ್ಲಿ ಅವನ ಮುಖವನ್ನು ಸೂಕ್ಷ್ಮವಾಗಿ ನೋಡಿದ ವೀರಸಂಗಪ್ಪ. ಆ ಗೂಢಚಾರ ಅಂಥ ಬಲಶಾಲಿಯಾದ ಆಸಾಮಿಯೇನೂ ಆಗಿರಲಿಲ್ಲ. ಐದು ಅಡಿ ಎತ್ತರದ ಸಾಧಾರಣ ತರದ ಆಳು. ಕೋಲಿನಂತೆ ನೀಳವಾಗಿದ್ದ ದುರ್ಬಲದೇಹ. ಮುಖದ ಮೇಲೆ ಗಡ್ಡಮೀಸೆಗಳೂ ವಿಶೇಷವಾಗಿರಲಿಲ್ಲ. ಅವನು ಬಯಲುಸೀಮೆಯವನಲ್ಲವೆಂಬುದಂತೂ ಸುಲಭವಾಗಿ ಗೊತ್ತಾಗುವಂತಿತ್ತು. ಮಲೆನಾಡಿನ ಕಡೆಯವನೋ ಇಲ್ಲವೆ ಉತ್ತರದ ಸೀಮೆಯವನೋ ಇರಬಹುದು—ಎಂದುಕೊಳ್ಳುತ್ತಾ ವೀರಸಂಗಪ್ಪ ಮೊದಲನೆಯ ಪ್ರಶ್ನೆ ಕೇಳಿದ :

"ಏನಪ್ಪಾ, ಯಾರು ನೀನು ?"

ತಲೆ ಬಾಗಿಸಿಕೊಂಡು ಮೂಲೆಯಲ್ಲಿ ಮುದುಡಿ ಕುಳಿತಿದ್ದ ಗೂಢಚಾರ ಮಿಸುಗಾಡಲಿಲ್ಲ. ಯಾವ ಪ್ರಶ್ನೆಗೂ ಉತ್ತರವೀಯದೆ ಮೌನವಾಗಿದ್ದುಬಿಡುವುದೆಂದೇ ಆತ ನಿಶ್ಚಯಿಸಿದಂತಿತ್ತು.

"ಹೇಳು. ಯಾರು ನೀನು ? ಎಲ್ಲಿಯವನು ?" ಎಂದು ಪುನಃ ಪ್ರಶ್ನಿಸಿದ ವೀರಸಂಗಪ್ಪ.

"ಹೇಳು. ಒಳ್ಳೆ ಮಾತಿಗೆ ನೀನ್ಯಾರನ್ನೂದನ್ನ ಹೇಳಿಬಿಡು. ಸರದಾರ ಸಾಹೇಬರು ನಿನಗೇನೂ ಮಾಡೂದಿಲ್ಲ," ಎಂದು ಮಡಿವಾಳನೂ ಹೇಳಿದ.

ಬಂಡೆಗಲ್ಲಿನಂತೆ ಬಿಸ್ಮಗೆ ಬಿಗಿದುಕೊಂಡು ಕುಳಿತಿದ್ದ ಗೂಢಚಾರ ತಲೆಯನ್ನು ಮೇಲೆತ್ತಲಿಲ್ಲ, ತುಟಿಗಳನ್ನೂ ಬಿಚ್ಚಲಿಲ್ಲ.

ಸಾಮೋಪಾಯದಿಂದ ಫಲವಿಲ್ಲವೆಂದು ಮನವರಿಕೆಯಾಗುತ್ತಲೂ ವೀರಸಂಗಪ್ಪ ದಂಡೋಪಾಯ ಕೈಗೊಳ್ಳುವುದು ಅನಿವಾರ್ಯವಾಯಿತು.

"ಅವನನ್ನು ಮೊದಲು ನೆಟ್ಟಗೆ ತಪಾಸು ಮಾಡು ಮಡಿವಾಳಾ—

ಆಯುಧ ಇದ್ದರೆ ಕಸಿದುಕೋ. ಪತ್ರಗಿತ್ರ ಇದ್ದರೂ ಇರಬಹುದು.”

ಆದರೆ ಅವನ ಬಳಿ ಪತ್ರವೇನೂ ಸಿಕ್ಕಲಿಲ್ಲ. ಆತನ ಸೊಂಟದಲ್ಲಿದ್ದ ಪುಟ್ಟ ಕಠಾರಿಯೊಂದನ್ನು ತೆಗೆದುಕೊಂಡು ವೀರಸಂಗಪ್ಪನಿಗೊಪ್ಪಿಸಿದ ಮಡಿವಾಳ.

ದೀಪದ ಹತ್ತಿರ ಕಠಾರಿಯನ್ನೊಯ್ದು ವೀರಸಂಗಪ್ಪ ಅದನ್ನು ಚೆನ್ನಾಗಿ ಪರೀಕ್ಷಿಸಿ ನೋಡಿದ. ಆಯುಧಗಳ ವಿಚಾರ ಅವನಿಗೆ ಅಪರಿಚಿತವಾದು ದೇನೂ ಆಗಿರಲಿಲ್ಲ. ಕಠಾರಿಯ ತಿರುವು, ಹಿಡಿಕೆಯ ಮೇಲಿನ ಕೆತ್ತನೆ ಕೆಲಸ ಗಳನ್ನು ಗಮನಿಸುತ್ತಲೂ ಅದು ದಕ್ಷಿಣದೇಶದಲ್ಲಿ ಸಿದ್ಧವಾದುದೆಂಬುದು ಮನ ದಟ್ಟಾಯಿತು. ಆತ ಟೀಪುವಿನ ಬೇಹುಗಾರನಾಗಿರುವುದೇ ನಿಜ ಎಂದು ಕೊಳ್ಳುತ್ತಾ ವೀರಸಂಗಪ್ಪ ಮತ್ತೆ ಮಾತನಾಡಿದ:

“ನೀನಾರೆಂಬುದಂತೂ ನನಗೆ ಗೊತ್ತಾಯ್ತು. ಈಗ ಪ್ರಾಣದ ಮ್ಯಾಲ ಆಸೆಯಿದ್ದರೆ ಬಾಯಿ ಬಿಚ್ಚಿ ಮಾತನಾಡು. ನಿನ್ನನ್ನು ಯಾರು ಕಳಿಸಿದರು? ದಿವಾನರ ಹತ್ತರ ಯಾತಕ್ಕೆ ಹೋಗಿದ್ದಿ ?”

ಗೂಢಚಾರ ಆಗಲೂ ಮಾತನಾಡದಿರಲು ವೀರಸಂಗಪ್ಪ ಮಡಿವಾಳ ನಿಗೆ ಸಂಜ್ಞೆ ಮಾಡಿದ. ಗೂಢಚಾರನ ಬಳಿಯಲ್ಲಿಯೇ ನಿಂತು ಸರದಾರನ ಆಜ್ಞೆಗಾಗಿ ಕಾಯುತ್ತಿದ್ದ ಮಡಿವಾಳ ಕೂಡಲೇ ಮುನ್ನುಗ್ಗಿ, ಗೂಢಚಾರನ ಮುಖವನ್ನೆತ್ತಿ ಅವನ ಕೆನ್ನೆಗೊಂದು ಬಲವಾದ ಏಟು ಹಾಕಿದ. ಇಪ್ಪ ತ್ತೈದರ ಪ್ರಾಯದ ಬಲಶಾಲಿಯಾದ ಆ ಯುವಕನ ಶಕ್ತಿಪೂರಿತ ಕೈಯ ಹೊಡೆತಕ್ಕೆ ತತ್ತರಿಸಿ ನಡುಗಿದ ಗೂಢಚಾರ. ಅವನ ದೇಹದಲ್ಲಿದ್ದ ನೆತ್ತ ರೆಲ್ಲವೂ ಕಣ್ಣುಗಳಿಗೇರಿ ಬವಳಿ ಬರುವಂತಾಯಿತು. ಅದರಿಂದ ಚೇತರಿಸಿ ಕೊಳ್ಳುವಷ್ಟರಲ್ಲಿಯೇ ಮೊದಲಿನಕಿಂತಲೂ ಕ್ರೂರವಾದ ಇನ್ನೊಂದು ಏಟು ಬಿದ್ದು ಅವನ ಕೆನ್ನೆ ಮೂಳೆಗಳನ್ನೇ ಮುರಿದಂತಾಯಿತು. “ಅಯ್ಯೋ ಅಮ್ಮಾ!” ಎಂದು ಕಿರಿಚಿಕೊಂಡು ಆತ ತನ್ನ ಕೈ ಬಿಡಿಸಿಕೊಳ್ಳಲು ಪ್ರಯತ್ನಿ ಸಿದ. ರುಮಾಲಿನ ಕಟ್ಟು ಬಿಗಿಯಾಗಿದ್ದಿತಾದುದರಿಂದ ಅವನ ಆ ಪ್ರಯ ತ್ನವೂ ವ್ಯರ್ಥವಾಯಿತು.

ಒಂದರ ಹಿಂದೊಂದು ರಪರಪನೆ ಏಟು ಹಾಕುತ್ತಾ ಮಡಿವಾಳನೆಂದ:

“ಬರೀ ಹೊಡೆತ ತಿಂದೇ ಸಾಯುತೀಯೋ, ಇಲ್ಲಾ ಬಾಯಿ ಬಿಚ್ಚು

ತೀಯೋ ? ನಿನ್ನ ಕೊಲ್ಲೂದಕ್ಕೆ ನನಗೇನು ಮನಸಿಲ್ಲ. ಮಾತಾಡು, ಜೀವ ಉಳಿಸಿಕೋ."

ಹತ್ತಿಪ್ಪತ್ತು ಏಟು ಬೀಳುತ್ತಲೂ ಗೂಢಚಾರನ ಬಾಯಿಯಿಂದ ರಕ್ತ ಸುರಿಯತೊಡಗಿತು. ಮೂರು ನಾಲ್ಕು ಹಲ್ಲುಗಳೂ ಮುರಿದು ಬಿದ್ದವು. ಮಾತನಾಡದಿದ್ದರೆ ತನ್ನ ಪ್ರಾಣ ಉಳಿಯುವುದಿಲ್ಲವೆನ್ನುವುದು ಖಚಿತವಾಗುತ್ತಲೂ ಆತ ಯೋಚಿಸತೊಡಗಿದ. ಎಂಥ ಕಠಿಣ ಪ್ರಸಂಗದಲ್ಲೂ ಗುಟ್ಟು ಬಿಡಕೂಡದೆಂಬ ಆಜ್ಞೆಯೇನೋ ಇದೆ. ಪ್ರಾಣ ಹೋಗುವ ಸಮಯ ಬಂದರೂ ಕೂಡಾ ಗುಟ್ಟು ರಟ್ಟುಮಾಡಬಾರದು. ಅದು ತನ್ನ ಕರ್ತವ್ಯ. ಆ ಕರ್ತವ್ಯವನ್ನು ನೆರವೇರಿಸುವುದಕ್ಕಾಗಿಯೇ ತನಗೆ ವೇತನವೂ ದೊರೆಯುತ್ತಿದೆ. ಅನ್ನವಿಟ್ಟು ಸಾಕುತ್ತಿರುವ ಧಣಿಗೆ ಎರಡು ಬಗೆಯಬಾರದು; ಪ್ರಾಣವನ್ನುಳಿಸಿಕೊಳ್ಳುವ ಆಸೆಗೆ ಬಿದ್ದು, ಮಹತ್ವದ ಸಮಾಚಾರವನ್ನು ವೈರಿಗಳಿಗೆ ತಿಳಿಸಬಾರದು. ನಿಜ. ಅದೆಲ್ಲಾ ನಿಜ. ಆದರೂ......ಈ ಹೊಡೆತ ಹೇಗೆ ತಾಳುವುದು? ಈ ನೋವು ಹೇಗೆ ಸಹಿಸುವುದು? ತನ್ನೆಲ್ಲ ಹಲ್ಲುಗಳನ್ನೂ ಉದುರಿಸದೆ ಬಿಡುವುದಿಲ್ಲ ಈ ಭಯಂಕರ ಮನುಷ್ಯ. ಇವನ ಈ ರಾಕ್ಷಸ ಕೈಯಿಂದ ಇನ್ನು ಹತ್ತಿಪ್ಪತ್ತು ಹೊಡೆತ ಬಿದ್ದರೆ ತನ್ನ ಜೀವವೂ ಉಳಿಯದು. ಇಷ್ಟು ಬೇಗ ಪ್ರಾಣ ಬಿಡಬೇಕೇ? ದೂರದ ಊರಿನಲ್ಲಿದ್ದ ಹೆಂಡತಿಯನ್ನೂ ಮಕ್ಕಳನ್ನೂ ಕಣ್ಣೆದುರು ತಂದುಕೊಂಡು ಗೂಢಚಾರ ಒಂದು ನಿಶ್ಚಯಕ್ಕೆ ಬಂದ. "ಇಲ್ಲ, ಈಗಲೇ ಪ್ರಾಣ ಬಿಡುವಂತಿಲ್ಲ. ಅವರನ್ನೆಲ್ಲಾ ನೋಡಿ ಆಗಲೇ ಒಂದು ವರ್ಷ ಆಗುತ್ತಾ ಬಂತು. ಇನ್ನೇನು ಒಂದೆರಡು ತಿಂಗಳಲ್ಲೇ ಊರಿಗೆ ಹೊರಡಲು ಅಪ್ಪಣೆ ದೊರೆಯಬಹುದು. ಒಮ್ಮೆ ಹೆಂಡಿರುಮಕ್ಕಳನ್ನು ನೋಡಿ, ಸಂಬಳದ ಹಣವನ್ನು ಅವರಿಗೊಪ್ಪಿಸುತ್ತೇನೆ. ಆಮೇಲೆ ಬೇಕಾದರೆ ಪ್ರಾಣ ಬಿಡಲು ಪರವಿಲ್ಲ."

ನೆತ್ತರಲ್ಲಿ ಮಿಂದು ಕೆಂಪಗಾಗಿದ್ದ ನಾಲಗೆಯನ್ನು ತುಟಿಗಳ ಮೇಲಾಡಿಸಿ ಆತ ಹೇಳಿದ:

"ಹೊಡೀಬ್ಯಾಡಿ, ಹೊಡೀಬ್ಯಾಡಿ. ಎಲ್ಲಾ ಹೇಳ್ತೀನಿ, ಮೊದಲು ಅಷ್ಟು ನೀರು ಕೊಡಿ ಕುಡಿಯೋಕೆ."

ಆಳು ತಂದುಕೊಟ್ಟ ನೀರಿನಿಂದ ಬಾಯಿ ಮುಕ್ಕಳಿಸಿ, ಕಿಟಕಿಯ

ಮೂಲಕ ಉಗುಳಿ, ಸ್ವಲ್ಪ ನೀರು ಕುಡಿದು ಸುಧಾರಿಸಿಕೊಂಡ ತರುವಾಯ ಆತ ಹೇಳಿದ:

"ಇದರಲ್ಲಿ ನನ್ನ ತಪ್ಪೇನೂ ಇಲ್ಲ ಸರದಾರ್‌ಜಿ. ಧಣಿಗಳು ಹೇಳಿದಂತೆ ಮಾಡುವ ಸೇವಕ ನಾನು."

"ಅದು ನಮಗೇನು ಗೊತ್ತಿಲ್ಲವೆ? ನಿನ್ನ ತಪ್ಪೇನೂ ಇಲ್ಲವಾದರೂ, ನಾವು ನಮ್ಮ ಹಿತಕ್ಕಾಗಿ ನಿನ್ನಂಥ ಸೇವಕನನ್ನು ಹಿಡಿದು ವಿಚಾರಿಸಲೇ ಬೇಕಾಗುತ್ತದೆ. ಹೂಂ, ಹೇಳು. ನಿನ್ನನ್ನು ಯಾರು ಕಳಿಸಿದಾರೆ?"

"ಸರದಾರ್ ವೆಂಕಟರಂಗಯ್ಯನವರು."

"ವೆಂಕಟರಂಗಯ್ಯನವರು? ಯಾರಪ್ಪಾ ಅವರು?"

"ಹಜರತ್ ಟೀಪೂಸುಲ್ತಾನ್ ಸಾಹೇಬರ ಸರದಾರರು."

"ನಮ್ಮ ದಿವಾನರಿಗೂ ನಿಮ್ಮ ವೆಂಕಟರಂಗಯ್ಯನವರಿಗೂ ಮೊದಲಿನಿಂದ ದೋಸ್ತಿ ಅದ ಏನು?"

"ಆದೇನೊ ನನಗೆ ತಿಳಿಯದು. ಅವರು ಹೇಳಿದ ಕೆಲಸ ಮಾಡೋದಷ್ಟು ನನ್ನ ಪಾಲಿಗೆ ಸೇರಿದ್ದು."

"ದಿವಾನರಿಗೇನು ಹೇಳಿಕಳಿಸಿದರು ನಿಮ್ಮ ಸರದಾರರು?"

"ಅದೂ ನನಗೆ ಗೊತ್ತಿಲ್ಲ. ಒಂದು ಕಾಗದ ಕೊಟ್ಟಿದ್ದನ್ನು ದಿವಾನ್ ಸಾಹೇಬರಿಗೆ ಮುಟ್ಟಿಸಿ ಬಂದೆನಷ್ಟೆ."

"ನಿಜ ಹೇಳು. ಸುಳ್ಳು ಹೇಳಿ ಇಲ್ಲಿಂದ ನೀ ಪಾರಾಗಲಾರೆ," ಎಂದ ವೀರಸಂಗಪ್ಪ ದರ್ಪದ ಧ್ವನಿಯಲ್ಲಿ.

"ಸುಳ್ಳು ಹೇಳೋಲ್ಲ ಸ್ವಾಮಿ. ಇದ್ದ ವಿಚಾರಾನೇ ಹೇಳಿದೀನಿ.

"ಸರಿ. ಆ ಪತ್ರ ಓದಿದ ಬಳಿಕ ದಿವಾನ್ ಸಾಹೇಬರು ನಿನ್ನೆದುರು ಏನಾದರೂ ಹೇಳಿರಲೇಬೇಕಲ್ಲ? ಉತ್ತರ ಬರೆದೂ ಕೊಟ್ಟಿರಬಹುದು?"

"ಇಲ್ಲ ಸ್ವಾಮಿ, ಏನೂ ಹೇಳಲಿಲ್ಲ. ಉತ್ತರ ನಾಳೆ ಕಳಿಸಿಕೊಡ್ತೀನಿ, ನೀನು ಹೋಗು ಅಂತಂದರು."

"ಇವ ಅನ್ನೋದು ನಿಜ ಇರಬಹುದೇ ಮಡಿವಾಳಾ?"

"ಇದ್ದರೂ ಇದ್ದೀತು," ಎಂದ ಮಡಿವಾಳ, ಸಂಶಯದ ಧ್ವನಿಯಲ್ಲಿಯೆ.

"ಹುಮ್! ನೀನೀಗ ಉಂಡು ಆರಾಮವಾಗಿ ಮಲಗಿ ನಿದ್ದೆ ಮಾಡು,"

ಎಂದು ಗೂಢಚಾರನಿಗೆ ಹೇಳಿ ವೀರಸಂಗಪ್ಪ ಆಳು ಮನುಷ್ಯನನ್ನು ಕರೆದು ತಟ್ಟೆಯಲ್ಲಿ ಊಟ ತುಂಬಿಕೊಂಡು ಬರಲು ತಿಳಿಸಿದ. ಅಟ್ಟದ ಹಿಂಭಾಗ ದಲ್ಲಿದ್ದ, ಕಿಟಕಿಯಿಲ್ಲದ ಕೊಠಡಿಯೊಂದರಲ್ಲಿ ಗೂಢಚಾರನನ್ನು ಬಂಧನದ ಲ್ಲಿಡಲಾಯಿತು. ಆ ಕೊಠಡಿಯ ಗೋಡೆ–ಬಾಗಿಲು–ಮೇಲ್ಕಟ್ಟು ಎಲ್ಲವೂ ಗಟ್ಟಿಮುಟ್ಟಾಗಿದ್ದು ಅಲ್ಲಿಂದ ತಪ್ಪಿಸಿಕೊಂಡು ಹೋಗುವುದು ಅಶಕ್ಯವಾ ಗಿತ್ತು.

ಕೊಠಡಿಯೆದುರು ಇಬ್ಬರು ಆಳುಗಳನ್ನು ಕಾವಲಿಗಿಟ್ಟು ಗೂಢಚಾರ ನನ್ನು ಎಚ್ಚರದಿಂದ ನೋಡಿಕೊಳ್ಳುವಂತೆ ಕಟ್ಟುನಿಟ್ಟಾದ ಅಪ್ಪಣೆ ವಿಧಿಸಿ ವೀರಸಂಗಪ್ಪ ಮತ್ತೆ ಹೊರಗೆ ಹೊರಟ. ಒಂದು ಗಳಿಗೆಯೂ ತಡಮಾಡದೆ ಮುಂದಿನ ಕ್ರಮ ಕೈಗೊಳ್ಳಬೇಕಾದುದು ಅಗತ್ಯವಾಗಿತ್ತು. ಕಿತ್ತೂರಿನ ವಿರುದ್ಧ ನಡೆದಿರುವ ಒಳಸಂಚಿನಲ್ಲಿ ದಿವಾನರು ಸೇರಿಕೊಂಡಿರುವರೇ ಎಂಬು ದನ್ನು ಒರೆಗೆ ಹಚ್ಚಿ ಪರೀಕ್ಷಿಸಿ ನೋಡಬೇಕಾದುದು ಮುಖ್ಯ ಕೆಲಸವಾಗಿತ್ತು. ಅದು ಅಷ್ಟು ಸುಲಭವಾದ ಕೆಲಸವೂ ಆಗಿರಲಿಲ್ಲ. ಗೂಢಚಾರನನ್ನು ಹಿಡಿದು ಬಂಧಿಸಿದಷ್ಟು ಸುಲಭವಾಗಿ ವೀರಸಂಗಪ್ಪ ದಿವಾನರನ್ನು ಸೆರೆಹಿಡಿ ಯಲು ಬರುವಂತಿರಲಿಲ್ಲ. ಅರಸರ ತರುವಾಯ, ರಾಜ್ಯದಲ್ಲೆಲ್ಲಾ ಅತ್ಯಂತ ಉಚ್ಚ ಅಧಿಕಾರಿಯಾಗಿದ್ದ ದಿವಾನರನ್ನು ಅವರ ಕೈಕೆಳಗಿನ ಸರದಾರನೊಬ್ಬ ಬಂಧಿಸಲೆತ್ನಿಸುವುದು ಹಾಸ್ಯಾಸ್ಪದ ವಿಚಾರವೇ ಆಗುತ್ತಿತ್ತು. ಅಲ್ಲದೆ, ಒಂದು ಸಮಯ, ದಿವಾನರು ನಿರಪರಾಧಿಯಾಗಿಯೇ ಇದ್ದ ಪಕ್ಷದಲ್ಲಿ ಇಂಥ ಧಾಷ್ಟ್ರ್ಯಕ್ಕೆ ತೊಡಗಿದ ತಪ್ಪಿಗಾಗಿ ತನಗೆ ಘೋರ ಶಿಕ್ಷೆ ವಿಧಿಸಲ್ಪಡುವ ಸಂಭವವೂ ಇತ್ತು. ಅಂತೆಯೆ, ಈ ವಿಷಯದಲ್ಲಿ ತಾನೊಬ್ಬನೇ ಮುಂದು ವರಿಯುವ ಬದಲು ತನಗಿಂತಲೂ ಉಚ್ಚ ಅಧಿಕಾರಿಯಾದ ಇನ್ನೊಬ್ಬರೊಡನೆ ಸಮಾಲೋಚನೆ ಮಾಡಿ ಅವರ ಸಲಹೆಯಂತೆ ನಡೆದುಕೊಳ್ಳುವುದೇ ಸೂಕ್ತ ಮಾರ್ಗವೆಂದು ವೀರಸಂಗಪ್ಪನಿಗೆ ತೋರಿತು.

ಪ್ರಸಂಗ ಬಂದರೆ ದಿವಾನರನ್ನೂ ಬಂಧಿಸಬಲ್ಲ ಪ್ರಭಾವಶಾಲಿ ವ್ಯಕ್ತಿ ಯಾರು? ಎಂದು ಯೋಚಿಸಿದಾಗ ಸೇನಾಪತಿಯಾದ ತಿಮ್ಮನಗೌಡನೇ ಏಕಮಾತ್ರ ಸಮರ್ಥ ವ್ಯಕ್ತಿಯೆಂದು ಅನಿಸಿತು. ತಿಮ್ಮನಗೌಡನ ಮೇಲೆ ದೊರೆಗಳಿಗೂ ಪೂರ್ಣ ನಂಬುಗೆ; ಕಿತ್ತೂರಿನ ಪ್ರಜೆಗಳ ಮೇಲೂ ಅವನ

ವರ್ಚಸ್ಸು. ಅವನು ಕೈಗೊಂಡ ಕ್ರಮವನ್ನು ದರಬಾರದ ಇತರ ಮುತ್ಸದ್ದಿಗಳೂ ವಿರೋಧಿಸಲಾರರು. ಸೇನೆಯಂತೂ ಅವನ ಅಂಕಿತದಲ್ಲಿಯೇ ಇರುವುದು. ಸರಿ, ತಿಮ್ಮನಗೌಡನನ್ನೇ ಕಂಡು ಎಲ್ಲವನ್ನೂ ತಿಳಿಸುವುದೆಂದು ಗೊತ್ತುಮಾಡಿಕೊಂಡು ವೀರಸಂಗಪ್ಪ ಅಟ್ಟ ಇಳಿದು ನಡೆದ.

"ನೀನೂ ಬರ್ತೀಯಾ ನನ್ನ ಸಂಗಡ ಮಡಿವಾಳಾ?"

"ನೀವು ಬ್ಯಾಡಂದರೆ ಬರೂದಿಲ್ಲ."

"ನಿನ್ನ ಊಟವಿನ್ನೂ ಆಗಿದೆಯೋ ಇಲ್ಲೋ! ಇಲ್ಲೇ ಊಟ ಮುಗಿಸಿಬಿಡು. ಆವ್ಮ್ಯಾಲ ಹೋಗೋಣ."

"ಊಟ ಏನೂ ಬ್ಯಾಡ ಸರದಾರ್ ಸಾಹೇಬ್. ಸಂಜೀಕಡೆಗೆ ಅಷ್ಟು ರೊಟ್ಟಿ ಹೊಡೆದಿದ್ದೆ. ಹೊಟ್ಟೆ ತುಂಬಿದ್ದೇ ಅದ."

"ಹಾಗಾದರೆ ನಡೆ. ಹೋಗೋಣ. ಅಲ್ಲೇ ಮತ್ತಷ್ಟು ರೊಟ್ಟಿ ಹೊಡೆದೀಯಂತೆ!"

ಎಲ್ಲಿಗೆ ಹೋಗುವುದೆಂದು ಪ್ರಶ್ನಿಸಲಿಲ್ಲ ಮಡಿವಾಳ. ಅಂಥ ಸಂದರ್ಭಗಳಲ್ಲಿ ಆ ಪ್ರಶ್ನೆಯನ್ನೆತ್ತಬಾರದೆಂಬುದನ್ನು ಆತ ಅನುಭವದಿಂದ ಅರಿತುಕೊಂಡಿದ್ದ.

೨

ದರಬಾರದ ಇತರ ಅಧಿಕಾರಿಗಳ ಮನೆಗಳೆಲ್ಲ ನಗರದಲ್ಲಿಯೇ ಇದ್ದುವಾದರೂ ಸೇನಾನಾಯಕ ತಿಮ್ಮನಗೌಡನೊಬ್ಬನ ಮನೆ ಮಾತ್ರ ನಗರದಿಂದ ಅರ್ಧ ಮೈಲಿ ದೂರದಲ್ಲಿತ್ತು. ಕೆಲವು ವರ್ಷಗಳ ಹಿಂದೆಯಷ್ಟೆ ತಿಮ್ಮನಗೌಡ ಆ ಸ್ಥಳದಲ್ಲಿ ತನಗೆ ತಕ್ಕುದಾದ ಭವ್ಯ ಹಾಗೂ ಭದ್ರಮನೆ ಕಟ್ಟಿಕೊಂಡಿದ್ದ. ಅದರ ಸುತ್ತಲೂ ವಿಶಾಲವಾದ ಮೈದಾನವಿತ್ತು. ಆ ಮೈದಾನದಲ್ಲಿಯೇ ಕಿತ್ತೂರಿನ ಸೇನೆಯ ಕವಾಯಿತು ನಡೆಯುತ್ತಿತ್ತು. ಕವಾಯಿತು ನಡೆಯುವ ಸ್ಥಳಕ್ಕೆ ಸಮೀಪವಾಗಿರಲೆಂಬ ಉದ್ದೇಶದಿಂದಲೇ ಸೇನಾನಾಯಕ ಅಲ್ಲಿ ಹೊಸ ಮನೆ ಕಟ್ಟಿಸಿದ್ದ. ಆ ಮನೆ ಸಿದ್ಧವಾಗಿ ಸೇನಾಪತಿ ತನ್ನ ಪರಿವಾರ ಸಮೇತನಾಗಿ ಅಲ್ಲಿ ನೆಲೆಸಿದ ತರುವಾಯ ಇನ್ನಿತರ ಸಣ್ಣ ದೊಡ್ಡ ಸೇನಾಧಿ

ಕಾರಿಗಳೂ ಅದರ ಸಮೀಪದಲ್ಲಿಯೆ ಮನೆಗಳನ್ನು ಕಟ್ಟಿಸಿಕೊಂಡಿದ್ದರು. ಅವುಗಳ ಸುತ್ತಲೂ ಸೈನಿಕರ ಪುಟ್ಟ ಪುಟ್ಟ ಮನೆಗಳು ತಲೆಯೆತ್ತಿದ್ದುದರಿಂದ ಆ ಸ್ಥಳದಲ್ಲಿ ಚಿಕ್ಕದೊಂದು ಹಳ್ಳಿಯೇ ನಿರ್ಮಿತವಾಗಿತ್ತು. ಆ ಹಳ್ಳಿಗೆ ಹೆಸರಿಡುವ ಗೋಜಿಗೆ ಯಾರೂ ಹೋಗಿರಲಿಲ್ಲವಾದರೂ ಅದರ ಯಜಮಾನನಾದ ತಿಮ್ಮನಗೌಡನ ಹೆಸರೇ ಆ ಹಳ್ಳಿಗೂ ರೂಢವಾಗಿ ಜನರು ಅದನ್ನು ತಿಮ್ಮಾಪುರವೆಂದು ಕರೆಯತೊಡಗಿದ್ದರು. ತಿಮ್ಮನಗೌಡನ ಏಕನಿಷ್ಠ ಸೇವೆಗೆ ಸಂತುಷ್ಟರಾಗಿದ್ದ ಕಿತ್ತೂರಿನ ದೊರೆಗಳು ತಿಮ್ಮಾಪುರದ ಸುತ್ತಲಿನ ಹಲವು ಹಳ್ಳಿಗಳನ್ನು ಅವನ ಮನೆತನಕ್ಕೆ ಉಂಬಳಿಯಾಗಿ ಕೊಡಮಾಡಿದ್ದರು. ಆ ಹಳ್ಳಿಗಳ ಉತ್ಪನ್ನದಿಂದ ಬರುತ್ತಿದ್ದುದರಲ್ಲಿ ತಿಮ್ಮನಗೌಡನ ಸಂಸಾರ ಸುಖದಾಯಕವಾಗಿ ಸಾಗಿತ್ತು. ಹೆಂಡಿರು ಮಕ್ಕಳು, ಮೊಮ್ಮಕ್ಕಳು, ಸಂಬಂಧಿಕರು, ಆಳುಕಾಳುಗಳಿಂದ ಮನೆ ತುಂಬಿ ಸಮೃದ್ಧವಾಗಿತ್ತು. ಹಿರಿಯ ಮಗ ಚೆನ್ನಗೌಡ ವಯಸ್ಸಿಗೆ ಬಂದು ತಂದೆಯ ಕಾರ್ಯಗಳಲ್ಲಿ ನೆರವಾಗತೊಡಗಿದ್ದ. ತಿಮ್ಮನಗೌಡನಿಗೆ ಯಾವುದರ ಕೊರತೆಯೂ ಇರಲಿಲ್ಲ. ಆದರೂ ಅವನ ಮನಸ್ಸಿಗೆ ಪೂರ್ಣ ನೆಮ್ಮದಿಯಿದ್ದಿತೆಂದು ಅನ್ನಲಾಗದು. ನಾಲ್ಕು ಕಡೆಗಳಿಂದಲೂ ಶತ್ರುಗಳಿಂದ ಸುತ್ತುವರಿಯಲ್ಪಟ್ಟ ತನ್ನ ಪ್ರೀತಿಯ ಕಿತ್ತೂರಿನಮೇಲೆ ಯಾವಾಗ ಯಾವ ಗಂಡಾಂತರ ಕವಿಯುವುದೋ ಎಂಬ ಚಿಂತೆಯೇ ಅವನನ್ನು ಸರ್ವದಾ ಕಾಡುತ್ತಿತ್ತು. ಗುಪ್ತನಿಧಿಯನ್ನು ಕಾಯುವ ರಾಜಸರ್ಪದಂತೆ ಆತ ಕಿತ್ತೂರನ್ನು ಸಂತತ ಎಚ್ಚರಿಕೆಯಿಂದ ಕಾಯುತ್ತಲಿದ್ದ.

ದೊರೆಯ ಆಪ್ತಮಿತ್ರನೂ ಸರದಾರನೂ ಆದ ವೀರಸಂಗಪ್ಪ ಭೆಟ್ಟಿಗೆ ಬಂದಿರುವನೆಂಬ ಸುದ್ದಿ ಸೇವಕನಿಂದ ತಿಳಿದಾಗ ತಿಮ್ಮನಗೌಡ ಅದೇತಾನೆ ಊಟ ಮುಗಿಸಿ ಜಗುಲಿಯ ಮೇಲೆ ಕುಳಿತು ಸೇನೆಗೆ ಸಂಬಂಧಪಟ್ಟ ಲೆಕ್ಕಗಳನ್ನುಪರಿಶೀಲಿಸುತ್ತಿದ್ದ. ದುಂದುಗಾರಿಕೆಯೆಂದರೆ ಅವನಿಗಾಗದು. ಕಿತ್ತೂರು ರಾಜ್ಯದ ರಕ್ಷಣೆಗಾಗಿಯೂ ವೈರಿಗಳ ಮರ್ದನಕ್ಕಾಗಿಯೂ ಅವಶ್ಯವಿದ್ದ ಸೇನೆಯನ್ನು ಆಧುನಿಕ ಶಸ್ತ್ರಾಸ್ತ್ರ ಮದ್ದುಗುಂಡುಗಳ ಸಮೇತ ಸಿದ್ಧವಾಗಿಡಲು ಅಗತ್ಯವಿದ್ದಷ್ಟು ಹಣ ಖರ್ಚುಮಾಡಲು ಆತ ಹಿಂದುಮುಂದು ನೋಡುತ್ತಿರಲಿಲ್ಲವಾದರೂ ನಿರ್ಲಕ್ಷ್ಯದಿಂದಾಗಲಿ, ಭ್ರಷ್ಟಾಚಾರದಿಂದಾಗಲಿ ಅಪವ್ಯಯ

ವೇನೂ ಆಗದಂತೆ ಕಟ್ಟುನಿಟ್ಟಾಗಿ ನೋಡಿಕೊಳ್ಳುವುದರಲ್ಲೂ ಆತ ತಪ್ಪುತ್ತಿರಲಿಲ್ಲ. ಅಂದಂದಿನ ಖರ್ಚುವೆಚ್ಚಗಳ ಲೆಕ್ಕವನ್ನು ಅಂದಂದೇ ಸಿದ್ಧಗೊಳಿಸಬೇಕೆಂಬುದು ಅವನ ಕಟ್ಟಾಣತಿಯಾಗಿತ್ತು. ಕರಣಿಕರು ತಯಾರಿಸಿದ ಲೆಕ್ಕವನ್ನು ಪ್ರತಿದಿನವೂ ರಾತ್ರಿ ಮಲಗುವ ಮುನ್ನ ತಾನೇ ಸ್ವತಃ ನೋಡಿ ಪರಿಶೀಲಿಸುವ ಪರಿಪಾಠವಿಟ್ಟುಕೊಂಡು ಅದನ್ನೊಂದು ವ್ರತದಂತೆ ತಪ್ಪದೆ ಪಾಲಿಸುತ್ತ ಬಂದಿದ್ದ. ಅಂತೆಯೇ ಸೇನೆಯ ಖರ್ಚಿನ ಬಗೆಗೆ ದರಬಾರದಲ್ಲಿ ಎಂದೂ ಯಾವ ಟೀಕೆಗೂ ಆಸ್ಪದ ದೊರೆತಿರಲಿಲ್ಲ. ತಿಮ್ಮನಗೌಡನ ಶಿಸ್ತು ಪ್ರೇಮ, ಅಚ್ಚುಕಟ್ಟುತನ, ನಿಯಮನಿಷ್ಠೆಗಳು ಎಲ್ಲರ ಮೆಚ್ಚುಗೆಯನ್ನೂ ಗಳಿಸಿಕೊಂಡಿದ್ದುವು. ಅವನು ಸೇನಾಧಿಪತ್ಯ ಸ್ವೀಕರಿಸುವ ಮೊದಲು ಅವ್ಯವಸ್ಥೆಯ ತವರಿನಂತಿದ್ದ ಸೇನೆ, ಅವನ ಕೈಯಲ್ಲಿ ಅಧಿಕಾರ ಬಂದಂದಿನಿಂದೀಚೆಗೆ ಸುವ್ಯವಸ್ಥಿತವೂ ಶಿಸ್ತುಬದ್ಧವೂ ಆಗಿ ಮಾರ್ಪಾಡು ಹೊಂದಿತ್ತು. ಸ್ವಯಂಶೂರನೂ ಪರಾಕ್ರಮಿಯೂ ಧೀರೋದಾತ್ತ ಸ್ವಭಾವದವನೂ ಆಗಿದ್ದ ತಿಮ್ಮನಗೌಡನನ್ನು ಅವನ ಕೈಕೆಳಗಿನ ಅಧಿಕಾರಿಗಳೂ ಸೈನಿಕರೂ ಆದರದಿಂದ ಕಾಣುತ್ತಿದ್ದರು. ತಿಮ್ಮನಗೌಡ ಯಾರ ಮೇಲೂ ಅಧಿಕಾರದ ದರ್ಪ ತೋರಿಸದೆ, ಸೋದರತೆಯ ಪ್ರೇಮದಿಂದಲೇ ವರ್ತಿಸುತ್ತಿದ್ದ. ಅಂತೆಯೇ ಅವನ ಆಜ್ಞೆ ದಂಡಿನಲ್ಲಿ ದೇವವಾಕ್ಯದಂತಾಗಿತ್ತು.

ಸೇನಾಪತಿಯ ಮಹಾಮನೆಯ ಸುತ್ತಲೂ ಭದ್ರವಾದ ಗೋಡೆಗಳಿದ್ದುವು. ಕೋಟೆಯ ಗೋಡೆಗಳಂತೆಯೇ ಅವುಗಳನ್ನು ಕಟ್ಟಲಾಗಿತ್ತು. ಹೆಬ್ಬಾಗಿಲಲ್ಲಿ ಯಾವಾಗಲೂ ಸಶಸ್ತ್ರ ಸೈನಿಕರ ಪಹರೆಯಿರುತ್ತಿತ್ತು. ಸೇನಾಪತಿಯ ಅನುಮತಿಯ ವಿನಾ ಯಾರಿಗೂ ಪ್ರವೇಶ ದೊರೆಯುತ್ತಿರಲಿಲ್ಲ. ಅಂತೆಯೇ, ವೀರಸಂಗಪ್ಪನೂ ಕೆಲವು ನಿಮಿಷಗಳ ಕಾಲ ಹೆಬ್ಬಾಗಿಲಿನ ಹೊರಗೇ ನಿಂತುಕೊಂಡಿರಬೇಕಾಯಿತು. ಸೇನಾಪತಿಯ ಅನುಮತಿ ಬರುತ್ತಲೂ ದಿಡ್ಡಿಯ ಬಾಗಿಲು ತೆರೆದು ವೀರಸಂಗಪ್ಪನನ್ನೂ ಅವನ ಜೊತೆಗಾರನನ್ನೂ ಒಳಗೆ ಬಿಡಲಾಯಿತು. ಅವರು ಒಳಸೇರಿದ ಮರುಕ್ಷಣವೇ ಬಾಗಿಲು ಮತ್ತೆ ಭದ್ರವಾಗಿ ಮುಚ್ಚಲ್ಪಟ್ಟಿತು.

ಲೆಕ್ಕದ ಪುಸ್ತಕಗಳನ್ನು ಪೆಟ್ಟಿಗೆಯಲ್ಲಿಟ್ಟು ಬೀಗ ಜಡಿದು, ತಿಮ್ಮನಗೌಡ ವೀರಸಂಗಪ್ಪನನ್ನು ಬರಮಾಡಿಕೊಳ್ಳಲೆಂದು ಎದ್ದುನಿಂತ. ಕಂಬಗಳ

ಉಂಗುರಗಳಲ್ಲಿ ಉರಿಯುತ್ತಿದ್ದ ದೀವಟಿಗೆಗಳ ಕೆಂಬೆಳಕಿನಲ್ಲಿ ಆರು ಅಡಿ ಎತ್ತರದ ಅವನ ಭೀಮಕಾಯ ತನ್ನ ಸಕಲ ಶಕ್ತಿಯಿಂದ ಕಂಗೊಳಿಸುತ್ತಿತ್ತು. ಬಗಲುಗಸೆಯಂಗಿಯನ್ನು ನೂಕಿ ಎದ್ದು ಕಾಣುತ್ತಿದ್ದ ವಿಶಾಲವಾದ ಎದೆ. ಪೊದೆಯಂತೆ ಬೆಳೆದ ಅಚ್ಚ ಕರಿಯ ಬಣ್ಣದ ಹುಬ್ಬು. ತಿದ್ದಿ ತೀಡಿದ ಭವ್ಯವಾದ ಕಲ್ಲಿ ಮಿಸೆ, ಹುಲಿಯ ಕಣ್ಣುಗಳನ್ನು ನೆನಪಿಗೆ ತಂದುಕೊಡುವಂತಿದ್ದ ಉಗ್ರ-ಗಂಭೀರ ಕಣ್ಣು. ಎಂಥ ಉನ್ಮತ್ತರ ಎದೆಯಲ್ಲೂ ಭಯಮಿಶ್ರಿತ ಆದರವನ್ನಿಕ್ಕಿಸುವಂಥ ರೂಪು ಆ ಸೇನಾಪತಿಯದು.

"ಸೇನಾಪತಿಯವರಿಗೆ ಶರಣು ಶರಣಾರ್ಥಿ." ತಲೆ ಬಾಗಿಸಿ ಕೈ ಮುಗಿಯುತ್ತ ಹೇಳಿದ ವೀರಸಂಗಪ್ಪ. ಮಡಿವಾಳ ಮಾತ್ರ ಸೈನಿಕರಿಗೊಪ್ಪುವ ರೀತಿಯಲ್ಲಿ ಸೆಟೆದು ನಿಂತು ಮುಜುರೆ ಸಲ್ಲಿಸಿದ.

ಅವರಿಬ್ಬರ ವಂದನೆಗಳಿಗೆ ಪ್ರತಿಯಾಗಿ ತಾನೂ ವಂದಿಸುತ್ತ ತಿಮ್ಮನಗೌಡ ಹೇಳಿದ:

"ಬರ್ರಿ ಸರದಾರಸಾಹೇಬರೆ. ಬರ್ರಿ ಕೂಡ್ರಿ. ನೀನೂ ಕೂಡ್ರಪ್ಪಾ ಮಡಿವಾಳಾ. ಮೊದಲು ಊಟ ಮುಗಿಯಲಿ. ಆಮೇಲೆ ಬಂದ ಕಾರ್ಯ ನೋಡಿಕೊಳ್ಳೋಣ."

"ನನ್ನ ಊಟ ಮುಗಿದದ ನಾಯಕರೆ. ಇವನೊಬ್ಬ ಉಣ್ಣಲಿ."

ಮಡಿವಾಳನನ್ನು ಊಟಕ್ಕೆ ಕಳಿಸಿ ವೀರಸಂಗಪ್ಪನನ್ನು ಒಳಗಿನ ಖಾಸಗೀ ಕೋಣೆಗೆ ಕರೆದುತಂದು ಪೀಠದ ಮೇಲೆ ಕೂಡ್ರಿಸಿ ತಿಮ್ಮನಗೌಡ ಕೇಳಿದ:

"ಇಂಥ ರಾತ್ರಿಯೊಳಗೆ ಇಷ್ಟು ದೂರ ಬಂದಿರಲ್ಲ ಸರದಾರಸಾಹೇಬರು? ಏನೋ ಮಹತ್ವದ ಕೆಲಸವಿರಬೇಕು."

"ನಾಯಕರು ಸರಿಯಾಗಿ ತಿಳಿದುಕೊಂಡಿರಿ. ಅಂಥಾ ನಾಜೂಕು ಕೆಲಸವಿಲ್ಲದೆ ನಿಮಗೆ ಈ ಅಪವೇಳೆಯಲ್ಲಿ ತ್ರಾಸ ಕೊಡಲಿಕ್ಕಾಗ್ತದೇನು?"

"ಮಡಿವಾಳ ಎಲ್ಲಿ ಸಿಕ್ಕ ನಿಮಗೆ? ಅವನನ್ನೂ ಕರೆದುತಂದೀರಿ?"

"ಅವನಿಂದಾಗಿಯೇ ಇಲ್ಲಿ ಬರಬೇಕಾಯ್ತು ನಾಯಕರೆ. ಮಡಿವಾಳ ಇವತ್ತು ಒಂದು ಮಹತ್ವದ ಕೆಲಸ ಮಾಡಿದ್ದಾನೆ," ಎಂದ ವೀರಸಂಗಪ್ಪ ಹೇಳುತ್ತಿದ್ದಂತೆಯೇ ಒಬ್ಬ ಆಳು ಹಾಲು-ಹಣ್ಣು ತೆಗೆದುಕೊಂಡು ಬಂದುದರಿಂದ ಮಾತನ್ನು ತಡೆಹಿಡಿದ.

"ಬಾಗಿಲು ಮುಚ್ಚಿಕೊಂಡು ಹೋಗು ರುದ್ರಾ. ಇತ್ತ ಕಡೆಗೆ ಯಾರನ್ನೂ ಬಿಡಬೇಡ" ಎಂದು ಆಳಿಗೆ ಅಪ್ಪಣೆ ಮಾಡಿ ತಿಮ್ಮನಗೌಡ ಹೇಳಿದ :

"ಹಣ್ಣು ತಗೊಳ್ರಿ ಸರದಾರರೆ. ಇಂದೇ ಬೆಳಿಗ್ಗೆ ಗಂದಿಗವಾಡದಿಂದ ಬಂದಾವೆ."

ಹಣ್ಣು ತಿನ್ನುತ್ತಲಿದ್ದ ಹಾಗೆಯೇ, ಗೂಢಚಾರನ ಆಗಮನದ ವಿಚಾರವೆಲ್ಲವನ್ನು ತಿಳಿಸಿ ವೀರಸಂಗಪ್ಪನೆಂದ :

"ಸ್ವಲ್ಪವೂ ತಡಮಾಡದೆ ಈ ವಿಷಯ ಬಗೆಹರಿಸಬೇಕಂತ ಅನಿಸಿತು. ಆದಕ್ಕಾಗಿ ಬಂದೆ."

"ಚಲೋ ಮಾಡಿದಿರಿ ಬಂದು. ಆ ಗುಪ್ತಚಾರನನ್ನ ಸೆರೆಹಿಡಿದದ್ದು ಒಳ್ಳೇದೇ ಆಯ್ತು. ಅವನಿಂದ ಹೆಚ್ಚಿನದೇನೂ ತಿಳಿಯಲಿಕ್ಕಿಲ್ಲ ಅಂತೀರಾ?"

"ವೆಂಕಟರಂಗಯ್ಯ ಕೊಟ್ಟ ಪತ್ರವನ್ನಷ್ಟು ಮುಟ್ಟಸಿದೆ, ನನಗಿನ್ನೇನೂ ತಿಳೀದು ಅಂತ ಅವ ಅಂತಾನೆ."

ಒಂದು ಗಳಿಗೆ ಮೌನವಾಗಿ ಯೋಚಿಸುತ್ತಿದ್ದು ಅನಂತರ ತಿಮ್ಮನಗೌಡ ಕೇಳಿದ :

"ಆ ಗುಪ್ತಚಾರನ ಮಾತು ನಿಜ ಅಂತ ನಿಮಗನಿಸ್ತದೇನು?"

"ಪೂರಾ ನಿಜ ಅಂತ ಅನಿಸುವದಿಲ್ಲ. ಹೇಳಿಕೇಳಿ ಗುಪ್ತಚಾರ. ಏನಾದರೂ ಸುಳ್ಳೊಂದು ಸೊಟ್ಟೊಂದು ಹೇಳಿ ನಮ್ಮ ಕೈಯಿಂದ ಪಾರಾಗಿ ಹೋಗುವ ಹಂಚಿಕೆ ಹಾಕಿರಬಹುದು."

"ಸರಿಯಾಗಿ ಹೇಳಿದಿರಿ. ನನಗೂ ಹಾಗೇ ಅನಿಸ್ತದ. ಅಲ್ಲದೆ, ಆ ವೆಂಕಟರಂಗಯ್ಯ ಇವನ ಕೈಯೊಳಗೆ ಪತ್ರ ಕೊಟ್ಟಿರುವದೂ ಶಕ್ಯ ಇಲ್ಲಂತ ಅನಿಸ್ತದ."

"ನನಗೂ ಅನಿಸಿತು ಹಾಗೇ. ಇವ ಬಂದದ್ದು ಒಬ್ಬನೇ. ಸಂಗಡ ಸಹಾಯಕರೂ ಇಲ್ಲ. ನಮ್ಮ ಕೈಗೆ ಸಿಕ್ಕುಬಿದ್ದರೆ ಆ ಪತ್ರ ಸಹಜವಾಗಿ ಸಿಗುತ್ತಿತ್ತು. ಟೀಪುವಿನ ಮುತ್ಸದ್ದಿಗಳು ಇಷ್ಟು ಮೂರ್ಖರಾಗಿರುವುದು ಶಕ್ಯವೆ? ಅವನು ಪತ್ರ ಕೊಟ್ಟಿರಲಿಲ್ಲ. ಹೇಳುವ ಮಾತನ್ನು ಹೇಳಿ ಕಳಿಸಿರಬೇಕು."

" ಹಾಗೇ ಮಾಡಿರಬೇಕು. ಅದೇನೇ ಇರಲಿ. ಅವನು ನಮ್ಮ ದಿವಾನರಿಗೇನು ಹೇಳಿಕಳಿಸಿರಬಹುದು ? ನಿಮಗೇನನಿಸ್ತದ ? "

" ನನಗಂತೂ ಏನೂ ತಿಳಿಯುಲೊಲ್ಲದು. ಅದಕ್ಕೇ ನಿಮ್ಮ ಹತ್ತಿರ ಬಂದೆ," ಎಂದು ಒಂದೊಂದು ಶಬ್ದವನ್ನೂ ಎಚ್ಚರಿಕೆಯಿಂದ ಆಡಿದ ವೀರ ಸಂಗಪ್ಪ.

ಮತ್ತೊಂದು ಗಳಿಗೆ ಸುಮ್ಮನೆ ಕುಳಿತಿದ್ದು ಅನಂತರ ಕೇಳಿದ ತಿಮ್ಮನ ಗೌಡ :

" ದಿವಾನರನ್ನ ಅವರು ಒಡೆದುಕೊಳ್ಳುವ ಪ್ರಯತ್ನ ನಡಸಿರಬಹುದು ಅಂತೀರಾ ? "

" ನಾಯಕರಿಗೇನು ಅನಿಸ್ತದ ? "

" ನಾನೊಬ್ಬ ಸೈನಿಕ. ಯುದ್ಧಭೂಮಿಯಲ್ಲಿ ನಿಂತು ವೈರಿಗಳ ರುಂಡ ಚೆಂಡಾಡುವದಷ್ಟು ನನಗೆ ಗೊತ್ತು. ರಾಜಕಾರಣದ ಇಂಥಾ ನಾಜೂಕು ವಿಷಯ ನಿಜವಾಗಿ ನನಗೆ ತಿಳಿಯುವದು ಕಷ್ಟ. ಮುತ್ಸದ್ದಿಗಳಾದ ನಿಮ್ಮಂಥ ವರೇ ಇದರಲ್ಲಿ ನಮಗಿಂತ ಬುದ್ಧಿವಂತರು " ಎಂದು ನಗುತ್ತಾ ಹೇಳಿದ ತಿಮ್ಮನಗೌಡ.

ವೀರಸಂಗಪ್ಪ ವಿಚಾರಕ್ಕೊಳಗಾದ. ಸೇನಾನಾಯಕ ತನ್ನನ್ನು ದೊಡ್ಡ ಜವಾಬ್ದಾರಿಯಲ್ಲಿ ಸಿಲುಕಿಸುತ್ತಿರುವದಂತೂ ಸ್ಪಷ್ಟವಾಗಿತ್ತು. ರಾಜಕಾರಣದ ಸೂಕ್ಷ್ಮ ವಿಚಾರಗಳು ಅರ್ಥವಾಗುವುದಿಲ್ಲವೆಂದು ಹೇಳಿ ಆತ ಈ ಹೊಣೆಗಾರಿಕೆಯನ್ನು ತನ್ನ ಮೇಲೆಯೇ ಹೊರಿಸಲು ಪ್ರಯತ್ನಪಡುತ್ತಿದ್ದಾನೆ. ದಿವಾನರಿಗೆ ಸಂಬಂಧಪಟ್ಟ ಮಾತು. ರಾಜ್ಯದ ಆ ಹಿರಿಯ ಅಧಿಕಾರಿಯ ಬಗೆಗೆ ಲಘುವಾದ ಮಾತು ಆಡುವುದು ಬಹಳ ಕಷ್ಟ.

" ನಿಮಗಿಂತ ನಾನು ಬುದ್ಧಿವಂತನೆಂತ ನನಗೇನು ಅನಿಸುವುದಿಲ್ಲ ನಾಯಕರೆ, ನೀವು ನಮಗೆಲ್ಲಾ ಹಿರಿಯರು. ಸಂಸ್ಥಾನದ ಮುಖ್ಯ ಆಧಾರ ಸ್ತಂಭರು. ನಿಮಗೆ ತಿಳಿದಷ್ಟು ನನಗೇನು ತಿಳಿದೀತು ? "

" ಇರಲಿ, ನಮ್ಮಿಬ್ಬರಲ್ಲಿ ಯಾರು ಹೆಚ್ಚು ಬುದ್ಧಿವಂತರೆಂಬ ವಾದ ಈಗ ಬೇಡ. ಕಿತ್ತೂರಿನ ಮುಖ್ಯ ಮುಖ್ಯ ಜನರನ್ನು ತಮ್ಮ ಕಡೆಗೆ ಒಡೆದು ಕೊಳ್ಳಲು ನಮ್ಮ ವೈರಿಗಳು ಯತ್ನಿಸುವದೂ ಸಹಜವೇ. ಹಿಂದೆ ಕೂಡಾ

ಎಷ್ಟೋ ಸಾರಿ ಹೀಗೇ ನಡೆದದ. ರಕ್ತಪಾತ–ಲಢಾಯಿ–ಸಾವು–ನೋವು ಯಾವುದೂ ಇಲ್ಲದೇನೇ ಕೋಟೆಯನ್ನ ವಶಮಾಡಿಕೊಳ್ಳಲು ವೈರಿಗಳೆಲ್ಲಾ ಬಯಸುವದು ಸ್ವಾಭಾವಿಕ. ಅವರು ನಮ್ಮ ದಿವಾನರಿಗೆ ಪತ್ರವನ್ನೂ ಕಳಿಸಿರಬಹುದು. ಅಷ್ಟು ಮಾತ್ರಕ್ಕೆ ನಾವು ದಿವಾನರ ಮೇಲೆ ಸಂಶಯಪಟ್ಟುಕೊಳ್ಳಬಾರದು. ಪಿತೂರಿಯಾಗೂದು ಶಕ್ಯ ಇಲ್ಲ ಅಂತ ಅವರು ಉತ್ತರ ಕಳಿಸಿರಲೂಬಹುದು."

" ಹೌದು ನಾಯಕರೆ. ಹಾಗಾಗಿರುವದೂ ಶಕ್ಯ ಅದ."

" ಈಗ ನೋಡಿರಿ. ವೈರಿಗಳು ನನ್ನ ಕಡೆಗೂ ಒಬ್ಬ ದೂತನನ್ನ ಕಳಿಸಿ ನನ್ನನ್ನ ಒಡೆದುಕೊಳ್ಳಲು ಯತ್ನಿಸಬಹುದು ಅಂತ ತಿಳಿಯೋಣ. ಅವ ಬಂದು ನನಗೆ ಭೆಟ್ಟಿಯಾದದ್ದು ನಿಮಗೆ ಗೊತ್ತಾಯ್ತು ಅಂತ ತಿಳಿಯೋಣ. ಆಗ ನನ್ನ ಮೇಲೂ ನೀವು ಸಂಶಯಪಟ್ಟುಕೊಳ್ಳಬಹುದೋ ಏನೋ."

" ಛಿ. ಛಿ. ಇದೆಂಥ ಮಾತು ನಾಯಕರೆ? ಕಿತ್ತೂರಿಗಾಗಿ ಪ್ರಾಣವನ್ನೂ ಅರ್ಪಿಸಬಲ್ಲ ನಿಮ್ಮ ಬಗ್ಗೆ ಯಾರಿಗೂ ಸಂಶಯ ಬರುವಂತಿಲ್ಲ."

" ಹಾಗಾದರೆ ದಿವಾನರ ಮೇಲಾದರೂ ಯಾಕೆ ಸಂಶಯಪಟ್ಟುಕೊಳ್ಳಬೇಕು? ಕಿತ್ತೂರಿಗಾಗಿ ಅವರೂ ಪ್ರಾಣಕೊಡಲಾರರೇ?"

ಕಿತ್ತೂರಿನ ಸದ್ಯದ ದಿವಾನರು ಸಂಸ್ಥಾನಕ್ಕಾಗಿ ಪ್ರಾಣ ತ್ಯಜಿಸಲು ಸಿದ್ಧರಾಗಬಹುದೆಂಬ ವಿಚಾರದಲ್ಲಿ ವೀರಸಂಗಪ್ಪನಿಗೆ ಅನುಮಾನವೇ ಇತ್ತು. ಆದರೆ ಆ ಅನುಮಾನವನ್ನು ಆತ ಈ ಸಂದರ್ಭದಲ್ಲಿ ಪ್ರಕಟಗೊಳಿಸಲಿಲ್ಲ.

" ಅವರು ಪ್ರಾಣ ಕೊಡಬಹುದೋ ಇಲ್ಲವೋ ಎಂಬ ಮಾತು ಬೇರೆ. ಆದಳೂ ಈಗ, ನಡೆದದ್ದರ ಬಗ್ಗೆ ನಾವು ಎಚ್ಚರದಿಂದಿರೂದು ಒಳ್ಳೇದು ಅಂತ ನಿಮಗೂ ಅನಿಸುವದಿಲ್ಲೇನು?"

" ಎಚ್ಚರದಿಂದಿರುವದು ಅಗತ್ಯ. ಇಲ್ಲಿಗೆ ಬಂದು ನೀವು ನನಗೆ ಈ ಸುದ್ದಿ ತಿಳಿಸಿದ್ದೂ ಉತ್ತಮವೇ ಆಯ್ತು. ಬೆಳಗಾಗುವಷ್ಟರಲ್ಲೇ ಆ ಗುಪ್ತ ಚಾರರನ್ನ ಕೋಟೆಯಲ್ಲಿರುವ ಸೆರೆಮನೆಗೆ ಸಾಗಿಸಿಬಿಡಬೇಕು."

" ದಿವಾನರು ಟೇಪುವಿನ ಸರದಾರರಿಗೆ ಉತ್ತರ ಕಳಿಸುವವರಿದಾರಂತೆ. ಅದರ ಬಗೆಗೂ ಏನಾದರೂ ವ್ಯವಸ್ಥೆಯಾಗಬೇಕಲ್ಲವೆ?"

"ಅವರು ಉತ್ತರ ಕಳಿಸುವರೊ ಇಲ್ಲವೊ, ಉತ್ತರವೇನೂ ಅಗತ್ಯವಿಲ್ಲಂತ ಚಾರನಿಗೆ ಹೇಳಿದ್ದರೂ ಹೇಳಿರಬಹುದು. ಆದರೂ ನಾವು ನಮ್ಮ ಕರ್ತವ್ಯ ಮಾಡುವದು ಅಗತ್ಯ. ಅದಕ್ಕೆಲ್ಲಾ ಯೋಗ್ಯವ್ಯವಸ್ಥೆ ಮಾಡುತ್ತೇನೆ. ನೀವು ನಿಶ್ಚಿಂತರಾಗಿರ್ರಿ."

"ನಾಳೆ ಮುಂಜಾನೆ ದಿವಾನರನ್ನ ಅರಮನೆಗೇ ಕರಿಸಿಕೊಂಡು ರಾಜರ ಸಮಕ್ಷಮ ಈ ವಿಷಯತೆಗೆದರೆ ಹ್ಯಾಗಾದೀತು ?"

"ಸಾಕ್ಷಿ— ಪುರಾವೆ ಏನೂ ಇಲ್ಲದೆ ನಾನು ಇಂಥ ವಿಷಯ ಮಾತಾಡಲಿಕ್ಕೂ ಬರುವದಿಲ್ಲವಲ್ಲ ?"

"ಗುಪ್ತಚಾರ ದಿವಾನರ ಮನೆಯಲ್ಲಿ ಪ್ರವೇಶ ಮಾಡಿದ್ದಕ್ಕೆ ಮಡಿವಾಳ ಸಾಕ್ಷಿ. ಅಲ್ಲಿಂದ ಹೊರಬಂದದ್ದಕ್ಕೆ ನಾನು ಸಾಕ್ಷಿ."

"ಅವ ಬಂದದ್ದು ಹೋದದ್ದು ದೊಡ್ಡದಲ್ಲ ಸರದಾರರೆ. ದಿವಾನರಂದ ಮೇಲೆ ಎಷ್ಟೋ ಮಂದಿ ಅವರನ್ನ ನೋಡಲು ಬರ್ತಾರೆ. ಅದೆಲ್ಲಾ ನಡೆಯೂದೇ. ಇಷ್ಟರ ಮೇಲೇ ನಾವು ಅವರ ಬಗ್ಗೆ ಅನುಮಾನಪಟ್ಟುಕೊಳ್ಳುವದು ನ್ಯಾಯವಲ್ಲ."

"ನಿಮ್ಮ ಮಾತು ಒಪ್ಪಿದೆ. ಆದರೂ, ನಿಮ್ಮೆದುರು ಮನಸು ಬಿಚ್ಚಿ ಹೇಳಬೇಕಾದರೆ, ನಿಮ್ಮ ಮೇಲಿದ್ದಷ್ಟು ವಿಶ್ವಾಸ ನನಗೆ ಅವರ ಮೇಲಿಲ್ಲ ಅಂತಲೇ ಹೇಳಿಯೇನು."

"ಅದ್ಯಾಕೆ ?"

"ಯಾಕೋ ! ಅಂತೂ ಅವರ ಬಗ್ಗೆ ಪೂರ್ಣ ನಂಬಿಕೆ ಬರಲೊಲ್ಲದು. ಇಷ್ಟು ಮಾತ್ರ ನಿಜ. ಕಿತ್ತೂರಿಗಿಂತ ಹೆಚ್ಚಾಗಿ ಪುಣ್ಯ ಪಟ್ಟಣದ ಬಗ್ಗೆ, ಕಿತ್ತೂರು ರಾಜರಿಗಿಂತ ಹೆಚ್ಚಾಗಿ ಪೇಶವೆಯರ ಬಗ್ಗೆ — ಪಟವರ್ಧನರ ಬಗ್ಗೆ—ನಮ್ಮ ದಿವಾನರಿಗೆ ಅಭಿಮಾನವಿದ್ದಂತೆ ಕಾಣ್ತದ."

"ಅದ್ಯಾಕೆ ಹೀಗೆನಿಸಬೇಕು ನಿಮಗೆ? ದಿವಾನರು ಅಂಥಾದ್ದು ಏನು ಮಾಡಿದಾರೆ ?"

"ಪ್ರತ್ಯಕ್ಷವಾಗಿ ಏನೂ ಮಾಡಿಲ್ಲವಾದರೂ ಎಷ್ಟೋ ಸಾರಿ ಅಪ್ರತ್ಯಕ್ಷವಾಗಿ, ಯಾರಿಗೂ ತಿಳಿಯದಂತೆ ಪೇಶವೆಯರಿಗೂ ಪಟವರ್ಧನರಿಗೂ ಅನುಕೂಲವಾಗುವಂತೆ ಕೆಲಸ ಮಾಡಿದಾರೆ. ನಿಮಗೂ ಗೊತ್ತಿರಬಹುದು."

"ಪೇಶವೆ—ಪಟವರ್ಧನರ ವೈರ ಕಟ್ಟಿಕೊಂಡರೆ ಕಿತ್ತೂರಿಗೇ ಹಾನಿಯಾಗಬಹುದೆಂಬ ವಿಚಾರದಿಂದ ಅವರು ಹಾಗೆ ಮಾಡಿರಬಹುದು."

"ಅವರಿಂದ ಹಾನಿಯಾಗುವದೇನು ಉಳಿದದ ನಾಯಕರೆ? ಕಿತ್ತೂರಿನ ಬೊಕ್ಕಸ ಎಲ್ಲಾ ಬರಿದು ಮಾಡಿದರು, ವೀರಪ್ಪ ದೇಸಾಯರನ್ನ ಸೆರೆ ಹಿಡಿದು ಅಪಮಾನ ಮಾಡಿದರು, ಈಗಲೂ ಕಿತ್ತೂರಿನ ಮೇಲೆ ಅವರ ಕಣ್ಣು ಇದ್ದದ್ದೇ. ಕಿತ್ತೂರು ಸ್ವತಂತ್ರವಾಗಿದ್ದರೆ ಅವರಿಗೆ ಹೊಟ್ಟೀಕಿಚ್ಚು."

"ಅದೆಲ್ಲಾ ನಿಜ ಸರದಾರರೆ. ಪೇಶವೆ—ಪಟವರ್ಧನರಿಂದ ನಮಗೆ ಬಹಳ ಅನ್ಯಾಯ ನಡೆದದ, ನಿಜ. ಆದರೂ ನಾವು ಈ ಸಮಯದಲ್ಲಿ ಅವರ ವೈರ ಕಟ್ಟಿಕೊಳ್ಳುವುದು ಜಾಣತನವಲ್ಲ. ಈ ಕಡೆಗೆ ಟೀಪು ಹೊಂಚು ಹಾಕಿ ಕೂತಾನೆ—ಕಿತ್ತೂರನ್ನ ಮತ್ತೆ ನುಂಗಲಿಕ್ಕೆ. ಮೊನ್ನೆ ಮೊನ್ನೆ ನರಗುಂದವನ್ನೂ ಅವ ಹಿಡಿದುಕೊಂಡ. ಇನ್ನು ಅವನ ಹದ್ದಿನ ಕಣ್ಣು ಕಿತ್ತೂರಿನತ್ತ ತಿರುಗಲೂಬಹುದು. ಇಂಥ ವೇಳೆಯಲ್ಲಿ ನಮಗೆ ಪೇಶವೆ—ಪಟವರ್ಧನರ ಸಹಾಯವಿದ್ದರೆ ಒಳ್ಳೇದಲ್ಲವೇನು?"

"ಸಹಾಯ ಬೇಕು. ನಿಜ. ಆದರೆ ಆ ಸಹಾಯ ಸಮಾನರಾದ ಗೆಳೆಯರಿಂದ ಬರಬೇಕು. ನಮ್ಮನ್ನು ಮಾಂಡಲಿಕರಂತೆ ನಡಸಿಕೊಳ್ಳುವ ಆ ಸೊಕ್ಕಿನ ಜನರಿಂದ...."

"ಒಬ್ಬೊಬ್ಬರದು ಒಂದೊಂದು ಕಾಲ ಸರದಾರರೆ. ಈಗ ಪೇಶವೆಯರ ಮೇಲುಗೈ ಆದ. ನಾಳೆ ಅವರಂತೇ ನಾವೂ ಪ್ರಬಲರಾಗಬಹುದು. ದೇವರ ದಯವಿದ್ದರೆ ಕಿತ್ತೂರೂ ಪೂರಾ ಸ್ವತಂತ್ರವಾಗಿ ಸುಖವಾಗಿ ಬಾಳಬಹುದು. ಅದಕ್ಕೆಲ್ಲ ತಾಳ್ಮೆಯಿಂದ ಕಾಯಬೇಕಾಗ್ತದ. ದಿವಾನರಲ್ಲಿ ಅಂಥಾ ತಾಳ್ಮೆ ಆದ ಅಂತಲೇ ಅವರನ್ನ ಆ ಸ್ಥಾನಕ್ಕೆ ನೇಮಿಸಿದ್ದರು ವೀರಪ್ಪರಾಜರು."

"ರಾಜರು ಇವರಲ್ಲಿಟ್ಟ ವಿಶ್ವಾಸಕ್ಕೆ ಸರಿಯಾಗಿ ಇವರು ಮಾತ್ರ ನಡೆದುಕೊಳ್ಳಲಿಲ್ಲ."

"ಹಾಗಂತ ತೀರ್ಮಾನ ಮಾಡುವವರ್‍ಯಾರು? ಈಗಲೂ ನಮ್ಮ ತರುಣ ದೊರೆಗಳಿಗೆ ದಿವಾನರಲ್ಲಿ ಪೂರ್ಣ ವಿಶ್ವಾಸ."

"ದೊರೆಗಳಿನ್ನೂ ಚಿಕ್ಕವರು. ದಿವಾನರ ಇತಿಹಾಸ ಅವರಿಗೆ ಚೆನ್ನಾಗಿ ಗೊತ್ತಿಲ್ಲ."

"ಚಿಕ್ಕವರಾದರೂ ನಮ್ಮ ದೊರೆಗಳು ಬಹಳ ಕುಶಾಗ್ರ ಬುದ್ಧಿಯವರು. ಯಾರು ಹ್ಯಾಗೆ ಅನ್ನುವದೆಲ್ಲಾ ತಿಳಿದುಕೊಳ್ಳಬಲ್ಲರು."

"ಹೌದು, ನಾನೇನು ಇಲ್ಲ ಅನ್ನುವದಿಲ್ಲ. ಆದರೂ ಅವರಿಗಿನ್ನೂ ಅನುಭವ ಸಾಲದು. ಮುತ್ಸದ್ದಿಗಳೂ ಅನುಭವಿಕರೂ ಸಲಹೆ ಕೊಡುತ್ತಿದ್ದರೇ ಉತ್ತಮ."

"ಸಲಹೆ ಕೊಡುವವರು ನೀವು—ಮುತ್ಸದ್ದಿಗಳು. ಶಿಲೇದಾರ್ ಸಣ್ಣ ಚೆನ್ನಪ್ಪನವರಿದಾರ, ಅಂದಾಕಾರಿ ಶಿವರುದ್ರಪ್ಪನವರಿದಾರ, ದೊಡವಾಡ ರುದ್ರಪ್ಪನವರಿದಾರ, ಗುರುಪುತ್ರಪ್ಪನವರ ವೀರಪ್ಪನವರಿದಾರ, ದಿವಾನರಿದಾರ. ನಾನೇನು ಬರೀ ಸೈನಿಕ. ದೊರೆಗಳ ಅಪ್ಪಣೆ ಯಾವಾಗ ಆಗ್ತದೋ ಆಗ ಕತ್ತಿ ಎತ್ತುವವನು, ಅಷ್ಟೆ...."

ತಿಮ್ಮನಗೌಡನಿನ್ನೂ ಮಾತು ಮುಗಿಸಿರಲಿಲ್ಲ. ಅಷ್ಟರಲ್ಲಿ ಹೊರಗಡೆ ಏನೋ ಗದ್ದಲವಾದಂತೆ ಕೇಳಿಬರಲು ಆತ ಮಾತು ನಿಲ್ಲಿಸಿ ರುದ್ರನನ್ನು ಕೂಗಿದ.

ರುದ್ರ ಓಡುತ್ತೋಡುತ್ತ ಬಂದು ಹೇಳಿದ;

"ಇಬ್ಬರು ಸವಾರರು ಭೆಟ್ಟಿಗೆ ಬಂದಾರ ಒಡೆಯಾ."

ತಿಮ್ಮನಗೌಡ ವೀರಸಂಗಪ್ಪ ಇಬ್ಬರೂ ಪರಸ್ಪರ ಮುಖ ನೋಡಿದರು. ಇಂಥ ಸಮಯದಲ್ಲಿ ಸವಾರರು ಭೆಟ್ಟಿಗೆ ಬರುವುದೆಂದರೆ ಏನೋ ವಿಶೇಷವಿರಲು ಸಾಕು. ಕಿತ್ತೂರಿನ ಮೇಲೆ ಮತ್ತಾವ ಗಂಡಾಂತರ ಬರಲಿದೆಯೊ?

ಅವರಿಬ್ಬರೂ ಮೌನವಾಗಿ ಹೊರಗೆ ಬಂದರು. ಅಂಗಳದಲ್ಲಿ ತೇಕುತ್ತ ನಿಂತಿದ್ದ ಅಶ್ವಾರೋಹಿಗಳ ಮುಜುರೆ ಸ್ವೀಕರಿಸುತ್ತ ತಿಮ್ಮನಗೌಡ ವಿಚಾರಿಸಿದ :

"ಏನ್ರಪ್ಪಾ, ಏನು ಸುದ್ದಿ ?"

"ಟೀಪೂನ ದಂಡು ಇತ್ತ ಕಡೆಗೇ ಹೊರಟೈತಿ ನಾಯಕರೆ."

"ನೀವು ಅದನ್ನ ಎಲ್ಲಿ ನೋಡಿದಿರಿ ?"

"ಐದು ಹರದಾರಿ ದೂರದಲ್ಲಿ. ನೋಡಿದ ಕೂಡಲೇ ಸುದ್ದಿ ತಿಳಿಸಲು ಓಡಿಬಂದೆವು."

"ಈಗ ಅವರು ಎಲ್ಲಿ ಬೀಡುಬಿಟ್ಟಿದ್ದಾರೆ ?"

" ಅದನ್ನ ತಿಳಕೊಳ್ಳಲು ನಾವು ಅಲ್ಲಿ ನಿಲ್ಲಲಿಲ್ಲ ನಾಯಕರೇ. ಮೊದಲು ತಮಗೆ ಈ ಸುದ್ದಿ ತಿಳಿಸಬೇಕಂತ ಹೊರಟುಬಂದೆವು."

" ಅದು ಟೀಪುವಿನ ದಂಡು ಅಂತ ಖಾತ್ರಿ ಮಾಡಿಕೊಂಡೇ ಬಂದಿರಾ?"

" ಹೌದು ನಾಯಕರೆ. ಉದ್ದುದ್ದ ಗಡ್ಡಾ ಬಿಟ್ಟುಕೊಂಡು ಜೊಣ್ಣಾ ಹಾಕಿಕೊಂಡು ದೀನ್ ದೀನ್ ಅಂತ ಒದರುವ ಸೈನಿಕರಿದ್ದರಲ್ಲ ಅಲ್ಲಿ....."

" ಸರಿ. ಸೇನೆ ಎಷ್ಟು ದೊಡ್ಡದಿರಬಹುದು ? ಅದನ್ನೇನಾದರೂ ತಿಳಿದು ಕೊಂಡಿರಾ ?"

" ಎಂಟು ಹತ್ತು ಸಾವಿರದ ವರೆಗೂ ಇರಬಹುದು ಒಡೆಯಾ. ಎರಡು ಮೂರು ಸಾವಿರ ಕುದುರೆ ಸವಾರರೇ ಇದ್ದಂತೆ ಕಂಡಿತು. ಎಂಟು ಹತ್ತು ತೋಫುಗಳೂ ಕಾಣಿಸಿದುವು."

" ಅವರು ಇತ್ತ ಕಡೆಗೇ ಹೊರಟಿರಬಹುದೆಂದು ಹ್ಯಾಗೆ ಹೇಳ್ತೀರಿ ?" ಎಂದು ಕೇಳಿದ ವೀರಸಂಗಪ್ಪ.

" ದೀನ್ ದೀನ್ ಅನ್ನೋದಲ್ಲದೆ ' ಕಿತ್ತೂರ್ ಕಿತ್ತೂರ್....ಕಿತ್ತೂರ್ ಲೇಂಗೇ ' ಅಂತಲೂ ಅವರು ಒದರುತ್ತಿದ್ದರು, ಒಡೆಯಾ."

" ಒಳ್ಳೇದು. ನೀವೀಗ ಹೋಗಿ ಊಟ ಮಾಡಿ ದಣಿವಾರಿಸಿಕೊಳ್ಳಿ." ಎಂದು ಹೇಳಿ ಅವರಿಗೆ ಅಪ್ಪಣೆಯಿತ್ತು ವೀರಸಂಗಪ್ಪನತ್ತ ಹೊರಳಿ ತಿಮ್ಮನ ಗೌಡನೆಂದ :

" ಈಗಿಂದೀಗ ನಾವು ಕೋಟೆಗೆ ಹೋಗಿ ರಕ್ಷಣೆಯ ತಯಾರಿ ಸುರು ಮಾಡಬೇಕು ಸರದಾರರೆ. ಟೀಪುವಿನದು ಯಾತರದೂ ಭರವಸೆಯಿಲ್ಲ. ರಾತ್ರಿಯೆಲ್ಲಾ ಸಂಚುಮಾಡಿ ಬೆಳಗಾಗುವಷ್ಟರಲ್ಲಿ ಅವ ಕಿತ್ತೂರನ್ನ ಮುತ್ತಿ ದರೂ ಮುತ್ತಬಹುದು. ಅವನ ಸೇನಾಪತಿ ಬುರ್ಹಾನುದ್ದೀನನೂ ಬಹಳ ಧೂರ್ತನಿದಾನ."

" ಹಿಂದೆ ಈ ಭಾಗವನ್ನ ಕೈಯಲ್ಲಿಟ್ಟುಕೊಂಡವರು ಅವರು. ಹಾದಿ ಗಳು ಅವರಿಗೇನೂ ಅಪರಿಚಿತವಲ್ಲ. ಕೋಟೆಯ ಗುಟ್ಟುಗಳೂ ಗೊತ್ತಿದಾವ."

ಟೀಪುವಿನ ಸೇನೆಯ ಚಲನವಲನಗಳನ್ನರಿತುಕೊಂಡು ವರದಿಯೊಪ್ಪಿ ಸುವಂತೆ ಆಜ್ಞೆವಿಧಿಸಿ ಹತ್ತುಜನರನ್ನು ಆ ಕೆಲಸಕ್ಕಾಗಿ ಕಳಿಸಿ ತಿಮ್ಮನಗೌಡ ತನ್ನ ಮಗನನ್ನು ಕರೆದು ಹೇಳಿದ.

“ಈ ರಾತ್ರಿಯಲ್ಲೇ ಮನೆಯವರೆಲ್ಲಾ ಕೋಟೆಯೊಳಗಿನ ಮನೆಗೆ ಹೊರಡಬೇಕು ಚೆನ್ನಣ್ಣ. ಅದರ ತಯಾರಿ ಮಾಡು. ನಾ ಕೋಟೆಗೆ ಹೋಗಿ ಬರ್ತೇನೆ.”

ಬಗಲು ಬಂಡಿಯ ಮೇಲೆ ಸಮವಸ್ತ್ರ ಏರಿಸಿ, ಆಯುಧ ಧರಿಸಿಕೊಂಡು ಸಿದ್ಧನಾದ ತಿಮ್ಮನಗೌಡ. ಅವನ ಆದೇಶದಂತೆ ಒಡನೆಯೇ ರಣಕಹಳೆ ಮೊಳಗತೊಡಗಿತು. ಮನೆಗಳಲ್ಲಿ ನಿದ್ರಿಸಿದ್ದ ಸೈನಿಕರೂ ಸೇನಾಧಿಕಾರಿಗಳೂ ಎಚ್ಚತ್ತುಕೊಂಡು ಬಂದು ಸೇನಾಪತಿಯ ಮಹಾಮನೆಯೆದುರು ಒಟ್ಟುಗೂಡಿದರು. ಎರಡು ತಾಸುಗಳ ಅವಧಿಯಲ್ಲಿಯೇ ಎಲ್ಲರೂ ಆಯುಧಪಾಣಿಗಳಾಗಿ ಕೋಟೆಯಲ್ಲಿ ಉಪಸ್ಥಿತರಾಗಿರುವಂತೆ ಆಜ್ಞೆ ವಿಧಿಸಿ ಅಂಗರಕ್ಷಕ ಪಡೆಯವರೊಡನೆ, ವೀರಸಂಗಪ್ಪ ಮಡಿವಾಳರನ್ನೊಡಗೂಡಿ ಮುಂದೆ ಸಾಗಿದ ಸೇನಾಪತಿ.

ಕಿರಿಯ ದಂಡನಾಯಕ ಗುರುಸಿದ್ಧಪ್ಪನನ್ನು ಕೋಟೆಗೆ ಕರೆದುತರಲು ಚಾರನೊಬ್ಬ ನಗರಕ್ಕೆ ಧಾವಿಸಿದ.

“ದಿವಾನರನ್ನೂ ಕರೆಸುವದಿಲ್ಲೇನು ನಾಯಕರೆ?” ಎಂದು ವೀರಸಂಗಪ್ಪ ಕೇಳಿದಾಗ ತಿಮ್ಮನಗೌಡ ತಲೆ ಅಲ್ಲಾಡಿಸಿ ಉತ್ತರವಿತ್ತ:

“ಅವರನ್ನ ಕರೆಸುವ ಅಧಿಕಾರ ನನಗಿಲ್ಲ. ಅದು ರಾಜಾಸಾಹೇಬರೊಬ್ಬರದೇ.”

“ಈಗ ನಾವು ಅವರನ್ನಾದರೂ ಎಬ್ಬಿಸಬೇಕಲ್ಲ?”

“ಅದರ ಅಗತ್ಯವಾದರೂ ಏನು? ಪಾಪ, ದೊರೆಗಳ ನಿದ್ದೆಯನ್ಯಾಕೆ ಕೆಡಿಸಬೇಕು? ಆಳುಗಳಾದ ನಾವಿರುವವರೆಗೆ ಅವರಿಗ್ಯಾಕೆ ತ್ರಾಸ ಆಗಬೇಕು? ನಮ್ಮ ತಯಾರಿ ನಾವು ಮಾಡೋಣ. ಅವರಿಗೇನೂ ಅಪಾಯವಿಲ್ಲ.”

೩

ಮಧ್ಯರಾತ್ರಿಯ ಸಮಯ ಕಳೆದು ಹೋಗಿದ್ದಿತಾದರೂ ಕುಂಬಾರ ಸಿದ್ಧರಾಮಪ್ಪನ ಮನೆಯಲ್ಲಿ ಮಾತ್ರ ದೀಪವುರಿಯುತ್ತಲೇ ಇತ್ತು. ಮಾವ ಸೊಸೆ ಇಬ್ಬರೂ ಆಗಲೂ ತಮ್ಮ ಕೆಲಸದಲ್ಲಿಯೇ ನಿರತರಾಗಿದ್ದರು. ಒಂದರ ಹಿಂದೊಂದರಂತೆ ಪಣತಿಗಳು ರೂಪುಗೊಂಡು ಗೋಡೆಯ ಬಳಿಯ ಸ್ಥಳದಲ್ಲಿ

ಒಟ್ಟುಗೂಡುತ್ತಿದ್ದುವು. ಮಣ್ಣು ಮೆತ್ತಿ ಮೆತ್ತಿ ಸಿದ್ಧಮತಿಯ ಕೈಗಳೆರಡೂ ಸೋತುಹೋಗಿದ್ದುವು. ನಿದ್ರೆಯಿಂದಾಗಿ ಕಣ್ಣುಗಳೂ ಮೇಲಿಂದ ಮೇಲೆ ಬಾಡುತ್ತಿದ್ದುವು. ರಾತ್ರೆ ಊಟವನ್ನೂ ಮಾಡಿರಲಿಲ್ಲವಾದುದರಿಂದ ಆಯಾಸ ಅಧಿಕವಾದಂತೆ ತೋರುತ್ತಿತ್ತು. ಅವರು ಊಟಕ್ಕೇಳುವ ಮೊದಲೇ ಮಡಿವಾಳ ಹೊರಟುಹೋಗಿದ್ದ. ಈಗ ಬಂದಾನು, ಇನ್ನೊಂದು ಗಳಿಗೆಗೆ ಬಂದಾನು ಎಂದು ಕಾದು ನೋಡಿದ್ದರು. ಅವನನ್ನು ಬಿಟ್ಟು ತಾವಿಬ್ಬರೇ ಊಟಮಾಡಲು ಇಷ್ಟವಿರಲಿಲ್ಲ. ಸಿದ್ಧಮತಿಯಂತೂ ಗಂಡ ಊರಲ್ಲಿದ್ದಾಗಲೆಲ್ಲ, ಅವನ ಊಟ ಮುಗಿದ ವಿನಾ ಬಾಯಲ್ಲಿ ನೀರನ್ನೂ ಹಾಕಿಕೊಳ್ಳುತ್ತಿರಲಿಲ್ಲ. ಸಿದ್ಧರಾಮಪ್ಪ, ಅವಳ ಹಾಗೆ ಕಟ್ಟುನಿಟ್ಟಾಗಿ ವರ್ತಿಸುತ್ತಿರಲಿಲ್ಲವಾದರೂ ಪ್ರೀತಿಯ ಸೊಸೆ ಉಣ್ಣದೆ ಉಪವಾಸವಿದ್ದಾಗ ಅವನಿಗೂ ಉಣ್ಣಲು ಮನಸ್ಸಾಗುತ್ತಿರಲಿಲ್ಲ. ಊಟ ತಪ್ಪಿಸಿ ಹೋದ ಮಗನ ಬಗೆಗೆ ಮನಸ್ಸಿನಲ್ಲಿಯೇ ಗೊಣಗಿಕೊಳ್ಳುತ್ತ ಆತನೂ ಬರಿ ಹೊಟ್ಟೆಯಲ್ಲಿಯೇ ಇದ್ದುಬಿಡುತ್ತಿದ್ದ.

ಈ ರಾತ್ರಿಯೂ ಹಾಗೆಯೇ ನಡೆದಿತ್ತು.

"ಈಗ ಬರ್ತೀನಂತ ಹೋದವನು ಇಷ್ಟೊತ್ತಾದರೂ ಬರಲಿಲ್ಲವಲ್ಲ ಸಿದ್ದೂ?"

"ಇದೇನು ಹೊಸಾ ಮಾತೇ ಮಾವಾ? ಯಾವಾಗಲೂ ಹೀಗೇ ಅಲ್ಲ ಇವರು?"

"ಅವ ಯಾವನೋ ಬಿಕನೇಸಿ ಹಾದ್ಯಾಗ ಹೊಂಟ ಅಂತ ಅವನ್ನ ಹಿಡುಕೊಂಡು ಬರಲಿಕ್ಕೆ ಇವ ಹೊಂಟ! ಇವನ ಕೈಗೆ ಅವ ಸಿಕ್ಕನೋ ಇಲ್ಲೋ. ಅವನ ಬೆನ್ನು ಹತ್ತಿ ಎಷ್ಟು ದೂರ ಹೋಗಿಬಿಟ್ಟನೋ ಯಾರು ಬಲ್ಲರು?"

"ಯಾರದಾರೆ ಬೆನ್ನು ಹತ್ತಿದರಾತು, ಕೈಲಾಸಕ್ಕೆ ಹೋದರೂ ಬಿಡುವವರಲ್ಲ!" ಎಂದು ನಗುತ್ತಾ ನುಡಿದಳು ಸಿದ್ಧಮತಿ.

"ಗಡಿಗೀ ಮಾಡುವ ಕುಂಬಾರರ ಮನಿಯಾಗ ಹುಟ್ಟಿ ಇವ ಇದೆಲ್ಲಾ ಎಲ್ಲಿ ಕಲಿತನೋ ಶಿವನೇ ಬಲ್ಲ. ಕಾರ್ತೀಕ ಹತ್ತರ ಬಂತು. ಅಷ್ಟರೊಳಗಾಗಿ ನಾಕು ಸಾವಿರ ಪಣತಿ ತಯಾರು ಮಾಡಿ ಅರಮನೆಗೆ ಕೊಡಬೇಕು.

ಅಷ್ಟು ಮಾಡಿದರ ಇನ್ನು ಆರು ತಿಂಗಳು ತ್ರಾಸವಿಲ್ಲದೆ ಕಳೀಬಹುದು. ಇವನೂ ಕುಂತು ಅಷ್ಟು ಕೆಲಸಾ ಮಾಡಿದರ ಅಷ್ಟೇ ಹಣ ಆದರೂ ಬಂದೀತು. ಆದನ್ನ ಬಿಟ್ಟು ಹಿಂಗೆ ಪಿರೀ ಪಿರೀ ತಿರುಗುತಾನ! ತಿರುಗಿದರ ತಿರುಗಲಿ ಅಂದರೂ ಉಂಡಾದರೂ ತಿರುಗುತಾನೇ! ಆದೂ ಇಲ್ಲ. ಊಟದ ಅರಿವೂ ಬಿಟ್ಟು ಅಲೀತಾನಲ್ಲ!"

"ದೊಡ್ಡವರ ಗೆಳೆತನ ಮಾಡಿದರ ಹೀಂಗ ಆಗೂದು ತಪ್ಪೂದಿಲ್ಲ ಮಾವಾ."

"ಹುಮ್. ನೀನನ್ನೂದು ನಿಜ. ಗಡಿಗೀ ಮಡಕೀ ಹಂಚೂ ಪಣತಿ ಮಾಡಿ ಹೊಟ್ಟಿ ತುಂಬಿಕೊಳ್ಳುವ ಕುಂಬಾರರೆಲ್ಲಿ! ಗಾದಿಯ ಮ್ಯಾಲ ಕುಂತು ದೇಶಾ ಆಳುವ ದೊರೆಗಳೆಲ್ಲಿ! ಅವರಿಗೂ ನಮಗೂ ಎಂಥಾ ನಂಟು? ಮಡಿವಾಳಗ ಇದ್ಯಾವದೂ ತಿಳಿಯುವುದಿಲ್ಲ."

"ದೊರೆಗಳೇ ತಾವಾಗಿ ಇವರ ಗೆಳೆತನ ಮಾಡಿದರ ಇವರಾದರೂ ಏನು ಮಾಡಿಯಾರು ಮಾವಾ?" ಎಂದಳು ಸಿದ್ಧಮತಿ, ಗಂಡನ ರಕ್ಷಣೆಗೆ ಧಾವಿಸುತ್ತ.

"ಮಡಿವಾಳನ ಮ್ಯಾಲ ಮಲ್ಲಸರ್ಜ ದೊರೆಗೆ ಬಹಳ ಪ್ರೀತಿ....ಇವನ ಕತ್ತಿವರಸೆ ಅಂದರ ಅವರಿಗೆ ಮೆಚ್ಚು. ಇವನ ಸಂಗಡಲೇ ಅವರೂ ಕತ್ತಿ ತಿರುವೂದು ಕಲಿತುಕೊಂಡರು. ಅದೆಲ್ಲಾ ನಿಜ. ಆದರೂ, ದೊರೆಗಳ ಸಂಗಡ ಇಷ್ಟು ಸಲಿಗೆ ಅಂದರೆ ನನಗ ಅಂಜಿಕೀನೇ ಆಗುತೈತಿ. ನನಗಿರೂದು ಇವನೊಬ್ಬನೇ ಒಬ್ಬ ಮಗ. ಲಢಾಯಿಯ ಹುಚ್ಚು ಹಿಡಿದು ಇವ ಮನೀ ಬಿಟ್ಟು ಹೋದ ಅಂದರ ಮುಂದೇನು ಗತಿ ಅಂತ?"

ಸಿದ್ಧಮತಿಯನ್ನೂ ಅದೇ ಚಿಂತೆ ಕಾಡುತ್ತಿತ್ತು. ಸೈನಿಕರ ಜೀವನವೆಂದರೆ ಯಾವಾಗಲೂ ಕತ್ತಿಯ ಮೇಲೆ ನಡೆದ ಹಾಗೆ. ಯಾವ ಗಳಿಗೆಗೆ ಹೇಗೋ ಏನೋ—ಯಾವುದರದೂ ಭರವಸೆಯಿಲ್ಲ. ಪೌರುಷವಂತನೂ ಪ್ರತಾಪಶಾಲಿಯೂ, ಅರಸರ ಅಭಿಮಾನಕ್ಕೆ ಪಾತ್ರನೂ ಆದ ತನ್ನ ಆ ಗಂಡನ ಬಗೆಗೆ ಸಿದ್ಧಮತಿಗೆ ಅಪಾರವಾದ ಅಭಿಮಾನವಿತ್ತು. ಅವನ ಸಾಹಸ ಪ್ರೇಮದ ಬಗೆಗೆ ಹೆಮ್ಮೆಯೂ ಇತ್ತು. ಸೊಂಟದ ಪಟ್ಟಿಗೆ ಕತ್ತಿ ಬಿಗಿದು ಆತ ಹೊರಗಡೆ ಹೊರಟು ನಿಂತಾಗಲೆಲ್ಲ ಅವನ ಗಂಡು ಠೀವಿಯನ್ನು ನೋಡಿ

ನೋಡಿ ಅವಳು ಆನಂದಿಸುತ್ತಿದ್ದದಿತ್ತು. ಅಂಥ ವೀರನ ಕೈಹಿಡಿಯುವ ಭಾಗ್ಯ ತನಗೆ ಲಭಿಸಿತಲ್ಲಾ ಎಂದು ಹಿಗ್ಗಿ ಮೈಮರೆಯುತ್ತಿದ್ದದಿತ್ತು. ಆ ಹಿಗ್ಗಿನ ಹಿಂದೆಯೇ ಭವಿಷ್ಯಕಾಲದ ಭೀತಿಯೂ ನುಗ್ಗಿಬಂದು ಅವಳ ಹೃದಯವನ್ನು ಹಿಂಡುತ್ತಿತ್ತು.

ಆ ರಾತ್ರೆಯೂ ಆಕೆಯ ಹೃದಯ ಅವನಿಗಾಗಿ ಮೌನವಾಗಿ ರೋದಿಸಿತ್ತು. ಅವಳ ಕೈಗಳೇನೋ ಯಾಂತ್ರಿಕವಾಗಿ ಪಣತಿಗಳನ್ನು ತಯಾರಿಸುತ್ತಿದ್ದವು. ಮನಸ್ಸು ಮಾತ್ರ ಪತಿಯನ್ನೇ ಹಿಂಬಾಲಿಸಿಕೊಂಡು ಹೋಗುತ್ತಿತ್ತು. ಆ ಗುಪ್ತಚಾರ ಎಲ್ಲಿಯವನಾಗಿರಬಹುದು? ಎಲ್ಲಿಗೆ ಹೊರಟಿರಬಹುದು? ಅವನು ಇವರ ಕೈಗೆ ಸಿಕ್ಕಿದನೋ ಇಲ್ಲವೋ? ಇವರು ಹಿಡಿದು ನಿಲ್ಲಿಸುತ್ತಲೂ ಅವನು ಚೂರಿ ತೆಗೆದು ಇವರ ಮೇಲೆ ಏರಿ ಬಂದಿರಬಹುದೇ? ಆ ಗುಪ್ತಚಾರ ಒಬ್ಬೊಂಟಿಯಾಗಿ ಬಂದಿರಬಹುದೆಂದು ಹೇಗೆ ನಂಬುವುದು? ಅವನ ಮುಂದೆಯೂ ಹಿಂದೆಯೂ ಇನ್ನೂ ಅನೇಕ ಸಂಗಡಿಗರಿರಲೂಬಹುದು. ಅವರು ನಾಲ್ಕುಮಂದಿಯಾದರೆ ಇವರು ಒಬ್ಬರೇ ಒಬ್ಬರು. ಒಬ್ಬರೇ ಆದರೂ ಸಹ ಹೆದರದೆ ಅವರೆಲ್ಲರನ್ನೂ ಎದುರಿಸಿ ಕಾದಾಡುವಂಥ ಶಕ್ತಿಯೇನೋ ಇವರಿಗಿದೆ. ಆದರೂ ಪ್ರಸಂಗ ಹೀಗೇ ಬರುವುದೆಂದು ಹೇಳಲು ಬರುವುದಿಲ್ಲ....ಕತ್ತಿ ಕಠಾರಿಗಳ ಸಹವಾಸ ಕಷ್ಟವೇ ಯಾವಾಗಲೂ. ಹೊಡೆದಾಟ ನಡೆದಾಗ ಯಾರಿಗೆ ಎಲ್ಲಿ ಗಾಯವಾಗಬಹುದೆಂಬುದನ್ನು ಹೇಳಲಾಗುವುದಿಲ್ಲ. ಇವರಿಗೇನಾದರೂ ಗಾಯವಾಗಿರಬಹುದೇ? ಇವರೆಲ್ಲಿಗೆ ಹೋದರು? ಇಷ್ಟು ಸಮಯವಾದರೂ ಇನ್ನೂ ಬರಲಿಲ್ಲವಲ್ಲ?

"ಅವರಿಗೇನಾದರೂ ಆಗಿರಲಿಕ್ಕಿಲ್ಲವಷ್ಟೇ ಮಾವಾ?" ಎಂದು ಅವಳು ವಿಹ್ವಲಳಾಗಿ ಕೇಳಿದಳು.

"ದೇವರು ಕಾಪಾಡಲಿ. ಏನೂ ಆಗದಿರಲಿ. ನೀನೇನು ಚಿಂತೀ ಮಾಡಬ್ಯಾಡ ಸಿದ್ದೂ. ರಾತ್ರಿ ಬಹಳ ಆತು. ಹೋಗಿ ಮಲಗಿಬಿಡು," ಎಂದ ಸಿದ್ಧರಾಮಪ್ಪ, ಚಿಂತೆಯಿಂದಲೂ ಹಸಿವು ಆಯಾಸಗಳಿಂದಲೂ ಕಂಗೆಟ್ಟ ಸೊಸೆಯ ಮುಖ ದಿಟ್ಟಿಸುತ್ತ.

"ನನಗೇನು ನಿದ್ದೆ ಬಂದಿಲ್ಲ ಮಾವಾ."

" ಹಾಗಾದರೆ ಹೋಗಿ ಒಂದು ರೊಟ್ಟಿ ಆದರೂ ತಿಂದು ಬಾ. ನಿದ್ದೆ ಬಂದೀತು. ಬರಿ ಹೊಟ್ಟೆಯಿಂದಿದ್ದರ ನಿದ್ದೀನೂ ಬರೂದಿಲ್ಲ."

" ಈಗ ನಿದ್ದೆ ಆದರೂ ಯಾರಿಗೆ ಬೇಕಾಗೈತಿ ಮಾವಾ ? ಗುಡ್ಡದಷ್ಟು ಕೆಲಸ ಉಳಿದೈತಲ್ಲ ಇನ್ನೂ ? ಒಂದು ವಾರದಾಗ ಮಾಡಿಮುಗಿಸಬೇಕಲ್ಲ ?"

" ನನ್ನ ಮೈಯಾಗ ಶಕ್ತಿ ಇರೂತನಕ ನೀನೇನು ನಿದ್ದೀಕೆಟ್ಟು ತ್ರಾಸ ಮಾಡಿಕೋ ಬೇಕಾಗಿಲ್ಲ ಮಗಳೇ. ನಾ ಮುಪ್ಪಿನ ಮುದುಕ ಆಗಿ ಕೈ ಆಡ ದಂತಾದ ಮ್ಯಾಲ ನೀನೇ ದುಡಿದು ನನ್ನ ಸಾಕುವಿಯಂತೆ. ಈಗ ಏಳು–ನಿದ್ದೆ ಮಾಡುಹೋಗು."

" ಇಲ್ಲ ಮಾವಾ, ನಿಜವಾಗಿಯೂ ನನಗ ನಿದ್ದೆ ಬಂದಿಲ್ಲ."

" ಮಡಿವಾಳ ಹೋದದ್ದಾದರೂ ಎಲ್ಲಿಗೆ ಅಂತ ಸೋಜಿಗ.... ಹೋಗಿ ನೋಡಿಯಾದರೂ ಬರಲೇನು ಸಿದ್ದೂ ?"

" ಎಲ್ಲಿ ಅಂತ ಹುಡುಕೂದು ಅವರನ್ನ ಮಾವಾ ?"

" ಹಿಂಗೇ ಹೋಗಿ ಊರೆಲ್ಲಾ ಸುತ್ತಿ ಬಂದರಾತು...." ಎಂದು ಸಿದ್ಧ ರಾಮುಪ್ಪ ಆಡುತ್ತಿದ್ದಂತೆಯೇ, ಹತ್ತಿರದಲ್ಲಿಯೇ ಇದ್ದ ಕೋಟೆಯ ಕಡೆ ಯಿಂದ ತುತ್ತೂರಿಯ ಕೂಗು ಕೇಳಬರತೊಡಗಿತು. ಒಂದೇ ಸಮನೆ, ಏಕ ಪ್ರಕಾರವಾಗಿ, ಗಟ್ಟಿಯಾಗಿ ಹೊರಡುತ್ತಿದ್ದ ಕೂಗು. ಕಿತ್ತೂರಿನಂಥ ರಣ ನಗರದಲ್ಲಿಯೇ ಹುಟ್ಟಿ ಬೆಳೆದಿದ್ದ ಅವರಿಗೆ ಆ ತುತ್ತೂರಿಯ ಮೊರೆತ ಅಪರಿ ಚಿತವೇನೂ ಆಗಿರಲಿಲ್ಲ. ಗಂಡಾಂತರದ ಎಚ್ಚರಿಕೆಯಿಾಯುತ್ತಿದ್ದ ತುತ್ತೂರಿ !.... ಸೈನಿಕರೆಲ್ಲರನ್ನೂ ಕೋಟೆಗೆ ಕರೆಯುತ್ತಿದ್ದ ತುತ್ತೂರಿ !

" ಮತ್ತೇನು ಬಂತೋ ಪ್ರಸಂಗ !" ಎನ್ನುತ್ತಾ ಸಿದ್ಧರಾಮಪ್ಪ ಕೈಯ ಲ್ಲಿನ ಕೆಲಸಬಿಟ್ಟು ಬಾಗಿಲು ತೆಗೆದು ಹೊರಗೆ ಬಂದು ನೋಡಿದ. ತುತ್ತೂ ರಿಯ ಕರೆಯಿನ್ನೂ ಕೇಳುತ್ತಲೇ ಇತ್ತು. ಒಂದೆರಡು ನಿಮಿಷಗಳಲ್ಲಿಯೇ ಓಣಿ ಯಲ್ಲಿ ಚಟುವಟಿಕೆಗಾರಂಭವಾಗಿ, ತೆರೆದ ಬಾಗಿಲುಗಳಿಂದ ದೀಪಗಳ ಬೆಳಕು ಬಂದು ಬೀದಿಯನ್ನು ಬೆಳಗಿಸತೊಡಗಿತು. ಗಾಬರಿಯಿಂದ ಹಾಸಿಗೆಯಿಂದೆದ್ದ ಜನರು ಕೈದೀವಟಿಗೆ ಹಿಡಿದುಕೊಂಡು ಹೊರಬರಲಾರಂಭಿಸಿದ್ದರು.

ನೆರೆಮನೆಯ ಕುಂಬಾರ ನಿಂಗಪ್ಪನೂ ಎಚ್ಚತ್ತುಕೊಂಡು ಬಾಗಿಲಿಗೆ ಬಂದು, ಸಿದ್ಧರಾಮಪ್ಪನನ್ನು ಕಂಡು ಕೇಳಿದ.

" ಏನಾತು ಸಿದ್ಧರಾಮಣ್ಣ ? ತುತೂರಿ ಯಾಕೆ ಒದರುತೈತಿ ?"

" ಏನೋ ಇರಬೇಕು. ಏನನ್ನೋದು ನನಗೂ ಗೊತ್ತಾಗಿಲ್ಲ ಇನ್ನೂ."

" ಟೀಪೂನ ದಂಡು ಬರಬಹುದಂತ ನಿನ್ನೆ ಮಾತಾಡುತಿದ್ದರು ಮಂದಿ. ಅದೇ ಬಂತೋ ಏನೋ !"

" ಬಂದಿದ್ದರೂ ಬಂದಿರಬಹುದು."

ಕೆಲವೇ ನಿಮಿಷಗಳಲ್ಲಿ ಓಣಿ, ಗಂಡಸರು, ಹೆಂಗಸರು ಮಕ್ಕಳುಗಳಿಂದ ತುಂಬಿಕೊಂಡು, ಅವರೆಲ್ಲರ ಗಾಬರಿಯ ಮಾತುಗಳಿಂದಾಗಿ ಗದ್ದಲವೇ ಎದ್ದಂತಾಯಿತು. ಆ ಗದ್ದಲದಲ್ಲಿಯೇ ಹಾದಿಮಾಡಿಕೊಂಡು ಸೈನಿಕರು ಕೋಟೆಯ ಕಡೆಗೆ ಧಾವಿಸುತ್ತಿದ್ದರು. ಓಣಿಯಲ್ಲಿನ ಜನರು ಸೈನಿಕರನ್ನು ನಿಲ್ಲಿಸಿ, ವಿಷಯವೇನೆಂದು ತಿಳಿದುಕೊಳ್ಳಲು ಪ್ರಯತ್ನಿಸುತ್ತಿದ್ದರು. ವಿಷಯ ವೇನೆಂಬುದು ಸೈನಿಕರಿಗಾದರೂ ಎಲ್ಲಿ ಗೊತ್ತಿದ್ದಿತು ? ಇನ್ನಿತರ ನಾಗರಿಕ ರಂತೆ ಅವರೂ ಅಷ್ಟು ಹೊತ್ತು ನಿಶ್ಚಿಂತರಾಗಿ ಮಲಗಿ ನಿದ್ರಿಸುತ್ತಿದ್ದವರೇ. ಟೀಪುವಿನ ಸೇನೆ ತಮ್ಮೂರಿನ ಮೇಲೆ ದಾಳಿ ನಡಸುವ ಸಂಭವವಿದೆಯೆಂಬ ವಿಚಾರವೇನೋ ಅವರಲ್ಲಿ ಅನೇಕರಿಗೆ ತಿಳಿದಿದ್ದಿತಾದರೂ ಆ ದಾಳಿ ಇಷ್ಟು ಬೇಗ ನಡೆಯಬಹುದೆಂದು ಮಾತ್ರ ಅವರಾರೂ ಭಾವಿಸಿರಲಿಲ್ಲ. ಅಂತೆಯೇ, ಅವರು ಯಾವ ಚಿಂತೆಯನ್ನೂ ಇಟ್ಟುಕೊಳ್ಳದೆ ಸುಖವಾಗಿ ಉಂಡು ನಿದ್ರೆ ಹೋಗಿದ್ದರು. ನಟ್ಟಿರುಳಿನಲ್ಲಿಯೇ ತುತ್ತೂರಿಯ ಕರೆ ಕೇಳಿಸಿತ್ತು. ಶತ್ರು ಗಳನ್ನು ಶಪಿಸುತ್ತಾ, ಕಣ್ಣುಗಳಲ್ಲಿ ನಿದ್ದೆಯ ಗುಂಗು ಕವಿದಿದ್ದಂತೆಯೇ ಅವರು ಎದ್ದು ಮನೆಬಿಟ್ಟು ನಡೆದಿದ್ದರು.

" ಟೀಪೂನ ದಂಡೇ ಬರ್ತಿರಬೇಕು. ಇಲ್ಲದಿದ್ದರೆ ಇಂಥ ಅಪರಾತ್ರ್ಯಾಗ ತುತೂರಿ ಯಾಕ ಕೂಗಿಸತಿದ್ದರು ?" ಎಂದ ನಿಂಗಪ್ಪ.

" ಇದ್ದರೂ ಇರಬಹುದು," ಎಂದ ಸಿದ್ಧರಾಮಪ್ಪ. ಆ ಸಂಭಾಷಣೆ ಯಲ್ಲಿ ಅವನ ಲಕ್ಷ್ಯವಿರಲಿಲ್ಲ. ಧಾಳಿಯ ಸಂಭವದೊಡನೆಯೇ ಹೊಸ ಸಮಸ್ಯೆ ಅವನನ್ನೆದುರಿಸಿತ್ತು. ಟೀಪುವಿನ ಸೇನೆಯ ಕ್ರೌರ್ಯ, ಅತ್ಯಾ ಚಾರ ಅವನಿಗೇನು ಅಪರಿಚಿತವಾಗಿರಲಿಲ್ಲ. ಆ ದಂಡು ಪುನಃ ಕಿತ್ತೂರಿನ ಮೇಲೆ ದಾಳಿ ನಡಸುತ್ತಿರುವ ಈ ಸಮಯದಲ್ಲಿ ಪ್ರಾಯದ ಯುವತಿಯಾದ ಸೊಸೆ ಇಲ್ಲಿರುವುದು ಸುರಕ್ಷಿತವಾಗಿರಲಿಲ್ಲ. ಒಡನೆಯೇ ಅವಳನ್ನು ಇಲ್ಲಿಂದ

ಕರೆದೊಯ್ದು ಮೂರು ಹರದಾರಿ ದೂರದಲ್ಲಿದ್ದ ಆಪ್ತರ ಊರಿನಲ್ಲಿ ಬಿಟ್ಟು ಬರಬೇಕಾಗಿತ್ತು. ಹರೆಯದ ಹೆಣ್ಣುಮಕ್ಕಳನ್ನುಳ್ಳ ಮನೆಯವರೆಲ್ಲರೂ ಅದೇ ಎತ್ತುಗಡೆಯಲ್ಲಿ ತೊಡಗಿಕೊಂಡಿದ್ದರು. ಹಣವುಳ್ಳವರು ಅದನ್ನು ಅಡಗಿಸುವುದರಲ್ಲೋ ಅಥವಾ ಅದರೊಡನೆ ಊರು ತ್ಯಜಿಸಿ ಹೊರಡುವುದರಲ್ಲೋ ಮಗ್ನರಾಗಿದ್ದರು. ಸಿದ್ಧರಾಮಪ್ಪ ಹಣದ ಬಗೆಗಾಗಲಿ ಹೊನ್ನಿನೊಡವೆಗಳ ಬಗೆಗಾಗಲಿ ಚಿಂತಿಸುವ ಅಗತ್ಯವಿರಲಿಲ್ಲ. ಅವನ ಬಳಿ ಅವುಗಳ ಸಂಗ್ರಹವಿದ್ದರೆ ತಾನೆ ಚಿಂತಿಸುವುದು? ಪ್ರಾಯದ ಸೊಸೆಯ ಮಾನ ರಕ್ಷಣೆಯೊಂದೇ ಅವನಿಗಿದ್ದ ಚಿಂತೆಯಾಗಿತ್ತು. ಅದರೊಡನೆಯೇ ಮಗನ ವಿಷಯಕವಾದ ಕಳವಳವೂ ಕಾಡುತ್ತಿತ್ತು. ಈ ಸಂದರ್ಭದಲ್ಲಿ ಮಡಿವಾಳ ಮನೆಯಲ್ಲಿಯೆ ಉಪಸ್ಥಿತನಾಗಿದ್ದಲ್ಲಿ ಊರಿಗೆ ಹೊರಡುವ ಮುನ್ನ ಅವನಿಗೆ ಕೆಲವೊಂದು ಮಾತು ಹೇಳಲು ಸಾಧ್ಯವಾಗುತ್ತಿತ್ತು. ಈಗ ತಾನು ಹೊರಟು ಬಿಟ್ಟರೆ ಮತ್ತೆ ಆತನನ್ನು ಯಾವಾಗ ನೋಡಬಹುದೆಂಬುದರ ಭರವಸೆಯಿಲ್ಲ. ಯುದ್ಧಕ್ಕಾರಂಭವಾಗಿ, ಶತ್ರುಸೇನೆ ಊರಿನ ಸುತ್ತಲೂ ಮುತ್ತಿಗೆ ಹಾಕಿ ಕುಳಿತಾಗ ಹೊರಗಿನಿಂದ ಊರಲ್ಲಿ ಪ್ರವೇಶ ಮಾಡುವುದೂ ಕಷ್ಟವೇ. ಯುದ್ಧ ಮುಗಿಯುವವರೆಗೂ ಒಳಗಿನವರು ಒಳಗೇ, ಹೊರಗಿನವರು ಹೊರಗೇ. ಒಬ್ಬರ ಸಮಾಚಾರ ಇನ್ನೊಬ್ಬರಿಗೆ ತಿಳಿಯುವಂತಿಲ್ಲ. ಇನ್ನು ಭೆಟ್ಟಿಯ ಮಾತಂತೂ ದೂರವೇ ಉಳಿಯಿತು. ಅಂತೆಯೇ, ಹೊರಡುವ ಮೊದಲು ಮಡಿವಾಳನನ್ನು ಕಂಡುಬರುವುದೇ ಒಳ್ಳೆಯದೆಂದು ನಿಶ್ಚಯಿಸಿ ಸಿದ್ಧರಾಮಪ್ಪ ಸೊಸೆಯನ್ನು ಕುರಿತು ಹೇಳಿದ:

"ಕೋಟೆಗೆ ಹೋಗಿ ಮಡಿವಾಳನನ್ನ ಹುಡುಕಿ ಭೆಟ್ಟಿಯಾಗಿ ಬರ್ತೀನಿ ಸಿದ್ದೂ, ನೀನು ಊರಿಗೆ ಹೊರಡುವ ತಯಾರಿ ಮಾಡು."

ತಾನು ಊರಿಗೆ ಹೊರಡುವ ಪ್ರಸಂಗ ಬರಬಹುದೆಂದು ಸಿದ್ಧಮತಿಗೂ ಆಗಲೇ ಅನಿಸಿತ್ತು. ಯುದ್ಧಕಾಲದಲ್ಲಿ ಇಲ್ಲಿರುವುದಕ್ಕಿಂತ ದೂರದ ಊರಲ್ಲಿರುವುದೇ ಕ್ಷೇಮಕರವೆಂದು ಅವಳೂ ಬಲ್ಲಳು. ಈ ಮೊದಲು ಅನೇಕ ಬಾರಿ ಅವಳು ಹಾಗೆ ಊರುಬಿಟ್ಟು ಹೋಗಿ, ಯುದ್ಧ ಕೊನೆಗೊಂಡು ಶಾಂತಿ ನೆಲೆಸುವವರೆಗೂ ತನ್ನ ಸೋದರತ್ತೆಯ ಮನೆಯಲ್ಲಿ ಇದ್ದು ಬಂದಿದ್ದಳು. ಈಗ ಮತ್ತೆ ಪಯಣದ ಅವಸರ ಪ್ರಾಪ್ತವಾಗಿತ್ತು. ಆದಕ್ಕೆ ಅವಳು ಸಿದ್ಧ

ವಾಗಿಯೇ ಇದ್ದಳು. ಆದರೂ, ಅಲ್ಲಿಂದ ಹೊರಡುವ ಮುನ್ನ ಒಂದು ಬಾರಿ ಪತಿಯ ಮುಖ ನೋಡಬೇಕೆಂಬ ಹಂಬಲು ಆ ಹೆಣ್ಣಿ ಹೃದಯವನ್ನು ಕಾತರಕ್ಕೀಡು ಮಾಡಿತ್ತು.

"ಕೋಟೆಯೊಳಗ ಅವರು ಸಿಗಬಹುವೇ ಮಾವಾ?"

"ಸಿಕ್ಕರೂ ಸಿಗಬಹುದವ್ವ. ಗದ್ದಲ ನಡೆದೈತಿ ಅಂದಮ್ಯಾಲ ಅವನೂ ಅಲ್ಲಿ ಇರಲಿಕ್ಕೇಬೇಕಲ್ಲ?"

"ಅವರು ಭೆಟ್ಟಿಯಾದರೆ....ಇತ್ತ......" ಎಂದು ಹೇಳು ಹೇಳುತ್ತಲೇ ಅವಳು ಲಜ್ಜಿತಳಾಗಿ ಮಾತನ್ನು ನಡುವೆಯೇ ನಿಲ್ಲಿಸಿದಳು.

ಕನಿಕರ ಬೆರೆತ ಅಕ್ಕರತೆಯಿಂದ ಸೊಸೆಯನ್ನು ನೋಡುತ್ತಾ ಸಿದ್ಧ ರಾಮಪ್ಪ ಮೃದುವಾಗಿ ಮಾತನಾಡಿದ :

"ಕರಕೊಂಡು ಬರ್ತೀನಿ ಸಿದ್ದೂ, ಬಾಗಿಲು ಹಾಕಿಕೊಂಡು ಒಳಗೆ ಹೋಗಿ ನಿನ್ನ ಸೀರೆ, ಕುಬುಸ ಕಟ್ಟಿ ತಯಾರಾಗು. ಅಷ್ಟು ಅಕ್ಕಿ, ಹಿಟ್ಟು ರೊಟ್ಟಿ ಪಲ್ಯವನ್ನೂ ಕಟ್ಟು, ನಾನು ಈಗ ಬಂದುಬಿಡ್ತೀನಿ."

ಜನರಿಂದ ತುಂಬಿದ ಓಣಿಯಲ್ಲಿ ಹೇಗೊ ಹಾದಿ ತೆಗೆಯುತ್ತ ಆತ ಕೋಟೆಯ ಹೆಬ್ಬಾಗಿಲನ್ನು ಸಮಿಾಪಿಸಿದ. ಎಂದಿನಂತೆ ಈ ದಿನವೂ ಬಾಗಿಲು ಭದ್ರವಾಗಿ ಮುಚ್ಚಿಕೊಂಡಿತ್ತು. ಕೆಳಭಾಗದಲ್ಲಿನ ದಿಡ್ಡಿಯ ಬಾಗಿಲಿನಿಂದ ಸೈನಿಕರು ಒಬ್ಬೊಬ್ಬರಾಗಿ ಒಳಗೆ ಪ್ರವೇಶಿಸುತ್ತಿದ್ದರು. ಸೈನಿಕರಲ್ಲದವರನ್ನು ಒಳಗೆ ಬಿಡುವುದಕ್ಕೆ ದುರ್ಗಾಧಿಪತಿಯ ಅಪ್ಪಣೆಯಿರಲಿಲ್ಲ. ಕಿಲ್ಲೇದಾರನ ವಿಶೇಷ ಅನುಮತಿ ದೊರಕಿದ ತರುವಾಯವೇ ಪ್ರವೇಶ ಸಾಧ್ಯವೆಂಬುದು ಗೊತ್ತಾಗುತ್ತಲೂ ಸಿದ್ಧರಾಮಪ್ಪ ಒಂದು ಗಳಿಗೆ ಯೋಚಿಸುತ್ತಿದ್ದು, ಅನಂತರ ಸೈನಿಕರಲ್ಲಿ ಗುರುತಿನ ಮೋರೆಗಳಿಗಾಗಿ ಶೋಧಿಸತೊಡಗಿದ. ಅವರಲ್ಲಿ ಯಾರ ಮೂಲಕವಾದರೂ ಹೇಳಿಕಳಿಸಿ ಮಡಿವಾಳನನ್ನು ಹೊರಗೆ ಬರ ಮಾಡಿಕೊಳ್ಳಬೇಕಾಗಿತ್ತು.

ಹೆಬ್ಬಾಗಿಲಿನೆದುರು ನೆರೆದಿದ್ದ ಸೈನಿಕರನ್ನು ಆತ ದಿಟ್ಟಿಸುತ್ತ ನಿಂತಿದ್ದಂತೆಯೇ ಹತ್ತು ಜನ ಸೈನಿಕರ ನಡುವೆ ಅಶ್ವಾರೋಹಿಯಾಗಿ ಬಂದಿಳಿದ ಸೇನಾಧಿಕಾರಿಯೊಬ್ಬನ ಕಡೆಗೆ ಅವನ ದೃಷ್ಟಿ ಹೊರಳಿತು. ಆ ಅಧಿಕಾರಿ ಬೇರೆ ಯಾರೂ ಆಗಿರದೆ ಕಿತ್ತೂರಿನ ಉಪಸೇನಾಪತಿ ಗುರುಸಿದ್ಧಪ್ಪನೇ

ಆಗಿದ್ದ. ಆತನೊಡನೆ ಸಿದ್ಧರಾಮಪ್ಪನಿಗೆ ಅಲ್ಪಸ್ವಲ್ಪ ಪರಿಚಯವೂ ಇತ್ತು. ಅಂತೆಯೇ, ಆತ ಗುರುಸಿದ್ಧಪ್ಪನನ್ನು ಕುರಿತೇ ಹೇಳಿದ :

" ದಂಡನಾಯಕರಿಗೆ ನಮಸ್ಕಾರ. ನನ್ನನ್ನೂ ಸ್ವಲ್ಪ ಒಳಗೆ ಬಿಡಿಸ್ತೀರಾ ನಾಯಕರೆ ?"

ಅವಸರದಲ್ಲಿದ್ದ ಗುರುಸಿದ್ಧಪ್ಪ ಕೋಟೆಯ ಹೊರಗಡೆ ಅವರಿವರೊಡನೆ ಮಾತನಾಡುತ್ತ ಕಾಲಹರಣ ಮಾಡುವಂತಿರಲಿಲ್ಲ. ಆತ ಬೇಸರದಿಂದಲೇ ಕೇಳಿದ :

" ಯಾಕೆ ? ನಿಂದೇನು ಕೆಲಸ ಅಲ್ಲಿ ?"

" ನನ್ನ ಮಡಿವಾಳನೂ ಒಳಗಿದಾನೆ ನಾಯಕರೇ, ಅವನ್ನ ನೋಡಬೇಕು."

" ಒಳ್ಳೇದು. ಬಾ ಹಾಗಾದರೆ," ಎಂದವನೇ ಗುರುಸಿದ್ಧಪ್ಪ ಕೋಟೆಯಲ್ಲಿ ಪ್ರವೇಶಮಾಡಿದ. ಅವನ ಹಿಂದೆಯೇ ಅವನ ಸಂಗಡಿಗರೂ ಸಿದ್ಧರಾಮಪ್ಪನೂ ನಡೆದು ಬಂದರು.

ಅವರು ಬರುವುದರೊಳಗಾಗಿಯೇ ಕೋಟೆಯಲ್ಲಿ ಸಾವಿರಾರು ದಂಡಾಳುಗಳು ಸೇರಿಕೊಂಡಿದ್ದರು. ಕೋಟೆಯ ವಿಶಾಲವಾದ ಪ್ರಾಕಾರದಲ್ಲಿ ನೂರಾರು ಮಶಾಲುಗಳು ಉರಿಯುತ್ತ ಅದೊಂದು ಬಗೆಯ ರೌದ್ರ ವಾತಾವರಣ ನಿರ್ಮಿಸಿದ್ದುವು. ಕೆನೆಯುತ್ತಿದ್ದ ಕುದುರೆಗಳನ್ನು ಹಿಡಿದುಕೊಂಡು ಕೆಲವರು ಅಶ್ವಾಲಯದತ್ತ ನಡೆದಿದ್ದರೆ ಇನ್ನು ಕೆಲವರು ಅವುಗಳಿಗಾಗಿ ಮೇವು ಹೊತ್ತು ಸಾಗಿಸುತ್ತಿದ್ದರು. ತೋಫುಖಾನೆಯ ಅಂಗಳದಲ್ಲಿ ತ್ವರಿತವಾದ ಚಟುವಟಿಕೆ ನಡೆದಿತ್ತು. ತೋಫುಗಳನ್ನು ಸ್ವಚ್ಛಗೊಳಿಸುತ್ತಿದ್ದವರು ಕೆಲವರು, ಅವುಗಳಿಗೆ ಹಗ್ಗ ಬಿಗಿದು ಬುರುಜುಗಳಿಗೆ ಸಾಗಿಸಲು ಸನ್ನಾಹ ಮಾಡುತ್ತಿದ್ದವರು ಕೆಲವರು. ಬದಿಯಲ್ಲಿಯೇ ಇದ್ದ ಮದ್ದಿನ ಸಂಗ್ರಹಾಲಯದೆದುರು ಇಪ್ಪತ್ತು ಜನ ಬಂದೂಕಧಾರಿ ಸೈನಿಕರು ಸಾಲುಗಟ್ಟಿ ನಿಂತುಕೊಂಡಿದ್ದರು. ದೇವಸ್ಥಾನಗಳಿಂದ ಗಂಟೆಗಳ ಗಣಗಣನಾದ ಕೇಳಬರುತಿತ್ತು. ಅರಮನೆಯಲ್ಲಿ ದೀಪಗಳುರಿಯತೊಡಗಿದ್ದವು. ಸಭಾಭವನದೆದುರು ನಿಲ್ಲಿಸಿದ ದೀವಟಿಗೆಗಳ ಉಜ್ವಲ ಪ್ರಕಾಶದಲ್ಲಿ ಅದರೆದುರು ಕಾವಲು ನಿಂತ ಸೈನಿಕರ ಖಡ್ಗಗಳು ಥಳಥಳನೆ ಹೊಳೆಯುತ್ತಿದ್ದವು. ಅರ

ಮನೆಯಿಂದ ತುಸುದೂರದಲ್ಲಿದ್ದ ಸೇನಾಪತಿಯ ಮನೆಯಲ್ಲಿಯೂ ಬಿರುಸಿನ ಚಟುವಟಿಕೆ ನಡೆದಿತ್ತು.

ಗುರುಸಿದ್ಧಪ್ಪ ಆ ಮನೆಯಲ್ಲಿ ಪ್ರವೇಶಿಸುತ್ತಲೂ ಸಿದ್ಧರಾಮಪ್ಪ ಮತ್ತೆ ಕಾದು ನಿಂತುಕೊಳ್ಳಬೇಕಾಯಿತು. ಕಾವಲು ಮಾಡುತ್ತಿದ್ದ ಸೈನಿಕರಲ್ಲೊಬ್ಬನನ್ನು ಆತ ವಿಚಾರಿಸಿದ:

"ನನ್ನ ಮಗ ಮಡಿವಾಳ ಇಲ್ಲಿ ಇದಾನೇನು?"

"ಯಾವ ಮಡಿವಾಳನೋ ಯಾರಿಗ್ಗೊತ್ತು! ಇಂಥಾ ಗದ್ದಲದಾಗ ಯಾರನ್ನ ಯಾರ ನೋಡತಾರ!" ಎಂದು ಉತ್ತರ ಬಂತು.

ಅಲ್ಲಿ ಕಾದು ನಿಲ್ಲುವುದರಿಂದ ಉಪಯೋಗವಿಲ್ಲವೆಂದುಕೊಂಡು, ಅರಮನೆಯಲ್ಲಾದರೂ ಆತ ಇರುವನೇನೋ ನೋಡಬೇಕೆಂದು ಸಿದ್ಧರಾಮಪ್ಪ ಅತ್ತ ನಡೆದ. ಆತ ಅರಮನೆಯ ಸಮೀಪಕ್ಕೆ ಬರುತ್ತಿದ್ದಂತೆಯೇ ಆಗ ತಾನೆ ಅರಮನೆಯಿಂದಲೇ ಹೊರಬಿದ್ದು ಬಂದ ಮಡಿವಾಳ ಕಾಣಿಸಿಕೊಂಡ.

"ನೀನ್ಯಾಕ ಬಂದಿಯಪ್ಪಾ ಇಲ್ಲಿ?"

"ಸೊಸೆಯನ್ನ ಊರಿಗೆ ಕಳಿಸಿಬರಬೇಕಲ್ಲ ಮಡಿವಾಳಾ. ಅದನ್ನ ಮರತೇ ಬಿಟ್ಟಿಯೇನು?"

"ಹೌದೌದು. ಕಳಿಸಿಬಾರಪ್ಪಾ"

"ರಾತ್ರಿ ಊಟಾ ಕೂಡಾ ಮಾಡದೆ ಹಂಗೇ ಬಂದುಬಿಟ್ಟಿ. ನಿನಗೇನಾಯಿತೋ ಅಂತ ನಾವಿಬ್ಬರೂ ಗಾಬರಿಯಾಗಿದ್ದೆವು. ಈಗ ಒಮ್ಮೆ ಮನೆಗೆ ಬಂದು ಊಟಾಮಾಡಿ ನಿನ್ನ ಹೆಂಡತಿಯನ್ನ ಸಮಾಧಾನ ಪಡಿಸಿ ಬಂದೀಯಂತೆ, ನಡೆಯಪ್ಪಾ."

ಅವಸರದ ಕಾರ್ಯಾರ್ಥವಾಗಿ ಸೇನಾಪತಿಯ ಮನೆಯತ್ತ ಹೊರಟಿದ್ದ ಮಡಿವಾಳಪ್ಪನಿಗೆ ಆ ಸಮಯದಲ್ಲಿ ಮನೆ, ಸಂಸಾರ, ಪ್ರೇಮದ ಮಡದಿ ಎಲ್ಲವೂ ಮರೆತು ಹೋಗಿದ್ದುದರಲ್ಲಿ ಆಶ್ಚರ್ಯವಿರಲಿಲ್ಲ. ತಂದೆ ಬಂದು ಆಕೆಯ ನೆನಪು ಮಾಡಿಕೊಡುತ್ತಲೂ ಅವನ ಚಿತ್ತ ಒಂದು ಕ್ಷಣ ಅವಳತ್ತ ಉಡ್ಡಾಣಮಾಡಿತು. ಆದರೆ ತತ್‌ಕ್ಷಣವೇ ಮನಸ್ಸು ಬದಲಿಸಿ ಆತ ಹೇಳಿದ.

"ಈಗೆಲ್ಲಿ ಬರಲಿಕ್ಕಾಗುತ್ತದೆ ಅಪ್ಪಾ? ಈಗಿಂದೀಗ ನಾಯಕರ ಹತ್ತಿರ ಹೋಗಬೇಕು. ನೂರಾಯೆಂಟು ಕೆಲಸ ಗಂಟುಬಿದ್ದಿವೆ. ಟೀಪೂನ ದಂಡು

ಯಾವಾಗ ಬರುವದೋ ತಿಳಿಯದು. ಅಷ್ಟರೊಳಗಾಗಿ ಎಲ್ಲಾ ತಯಾರಿ ಯಾಗಬೇಕಲ್ಲ? ಯುದ್ಧ ಮುಗಿದು ವೈರಿಗಳನ್ನ ಸೋಲಿಸಿ ಓಡಿಸಿದ ಮ್ಯಾಲ ನಾನೇ ಬಂದು ಆವಳನ್ನ ಕರಕೊಂಡು ಬರ್ತಿನಂತ ಹೇಳು. ನಾ ಹೋಗಲೇ ಹಾಗಾದರೆ?"

"ಒಮ್ಮೆ ಬಂದು ಹೋದರೆ ಆಕೆಗೆ ಎಷ್ಟೋ ಧೈರ್ಯ ಬರತೈತಿ ಮಡಿ ವಾಳಾ. ನಿನ್ನ ನೋಡಬೇಕಂತ ಕಾದಿದಾಳ. ಆಹೆಣ್ಣು ಜೀವವನ್ನ ನೋಯಿಸ ಬಾರದು ತಮ್ಮಾ."

ಅವಳ ಮನಸ್ಸು ನೋಯಿಸಬಾರದು, ಅವಳು ಕಂಬನಿಗರೆಯುವಂತಾಗ ಬಾರದು. ಅದೆಲ್ಲ ಸರಿ. ಪ್ರಾಣಪ್ರಿಯಳಾದ ಆ ಪತ್ನಿಯನ್ನು ಅನಾವಶ್ಯಕ ವಾಗಿ ಹೆಚ್ಚಿನ ದುಃಖಕ್ಕೀಡು ಮಾಡಬಾರದೆಂದು ಮಡಿವಾಳನಿಗೂ ಅನಿಸು ತ್ತಿತ್ತು. ಆದರೂ ಕೋಟೆ ಗಂಡಾಂತರದಲ್ಲಿರುವ ಇಂಥ ವೇಳೆಯಲ್ಲಿ ಕರ್ತವ್ಯ ಚ್ಯುತನಾಗಿ ಪತ್ನಿಯನ್ನು ಕಾಣಲು ಹೋಗುವುದೂ ತಪ್ಪೆಂದೇ ತೋರು ತ್ತಿತ್ತು. ಒಂದು ನಿಮಿಷವನ್ನೂ ವ್ಯರ್ಥಗೊಳಿಸದೆ ತಾವೆಲ್ಲರೂ ಸೇರಿ ರಕ್ಷ ಣೆಯ ಸನ್ನಾಹ ಮಾಡಬೇಕಾದುದು ಅಗತ್ಯವಾಗಿತ್ತು. ದೊರೆಗಳ ಮತ್ತು ದಂಡನಾಯಕರ ವಿಶ್ವಾಸಕ್ಕೆ ಪಾತ್ರನಾದ ತನ್ನಂಥವನು ಈಗ ಕೋಟೆಯನ್ನು ಬಿಟ್ಟು ಕದಲುವುದು ತರವಲ್ಲವೆಂದೇ ಅವನಿಗೆ ತೋರಿತು.

"ಈಗ ನಾ ಬರುವುದು ಶಕ್ಯವೇ ಇಲ್ಲಪ್ಪಾ. ಯಾವಾಗ ದೊರೆಗಳ ಕರೆ ಬರುವುದೋ ಗೊತ್ತಿಲ್ಲ. ಅವರು ಕರೆಕಳಿಸಿದಾಗ ನಾನಿಲ್ಲಿ ಇರದಿದ್ದರೆ ಆವರೇನು ತಿಳುಕೊಂಡಾರು? ಆಮ್ಯಾಲ ಅವರಿಗೆ ಈ ಮಾರಿ ಹ್ಯಾಗೆ ತೋರಿಸೋದು?"

"ನಿನ್ನ ಬಿಟ್ಟು ಒಬ್ಬನೇ ಹೋಗಿ ನಾನಾದರೂ ಆಕೆಗೆ ಹ್ಯಾಗೆ ತೋರಿ ಸಲಿ ಮಾರಿ? ಪಾಪ ಎಷ್ಟು ಮರಗುತೈತೋ ಎಳೆಯ ಜೀವ...." ಎಂದ ವನೇ ಸಿದ್ಧರಾಮಪ್ಪ ಉಕ್ಕಿಬರುತ್ತಿದ್ದ ಕಳವಳವನ್ನು ಹತ್ತಿಕ್ಕಿಕೊಳ್ಳುತ್ತಾ ಅಲ್ಲಿಂದ ಹೊರಟು ನಡೆದ.

ಮಾವನೊಬ್ಬನೇ ಮುಖ ಬಾಡಿಸಿಕೊಂಡು ಬಂದುದನ್ನು ಕಂಡ ಸಿದ್ಧಮತಿ ಎದೆಯಲ್ಲಿನ ದುಃಖವನ್ನೆಲ್ಲಾ ಅಲ್ಲಿಯೇ ಒತ್ತಿ ಹಿಡಿದು ಮೌನ ವಾಗಿ ನಿಂತುಕೊಂಡಳು.

"ಅವ ನೆಟ್ಟಗಿದಾನ ಸಿದ್ದು. ದೊರೆಗಳ ಹತ್ತಿರ ಕೆಲಸದ ಗಡಿಬಿಡಿ ಯಲ್ಲಿದಾನ. ಬರಲಿಕ್ಕಾಗಲಿಲ್ಲ. ಗಂಟು ಕಟ್ಟದಿಯಾ?"

ಸಿದ್ಧಮತಿ ಮಾತಾಡಲಿಲ್ಲ. ಮಾವನ ಪ್ರಶ್ನೆಗೆ ಉತ್ತರವಾಗಿ ಸುಮ್ಮನೆ ತಲೆ ಕೊಡಹಿದಳು, ಅಷ್ಟೆ.

ಅರಮನೆಯಲ್ಲಿ ನಡೆಯಬೇಕಿದ್ದ ದೀಪೋತ್ಸವಕ್ಕಾಗಿ ತಾವು ಹಗಲಿರುಳು ದಣಿದು ಸಿದ್ಧಗೊಳಿಸಿದ್ದ ಪಣತಿಗಳನ್ನು ಶೂನ್ಯ ದೃಷ್ಟಿಯಿಂದ ದಿಟ್ಟಿಸಿನೋಡುತ್ತ ಸಿದ್ಧರಾಮಪ್ಪ ಮನಸ್ಸಿನಲ್ಲಿಯೇ ಹೇಳಿಕೊಂಡ.

"ದೀಪೋತ್ಸವದ ಬದಲು ಭೂತೋತ್ಸವ ಸುರು ಆಯ್ತು ಕಿತ್ತೂರ ಕೋಟೆಯೊಳಗೆ!"

೪

ತುತ್ತೂರಿಯ ಧ್ವನಿ ಮೊಳಗಿದೊಡನೆಯೇ ಕಿತ್ತೂರಿನ ತರುಣ ದೊರೆ ಮಲ್ಲಸರ್ಜನಿಗೂ ಎಚ್ಚರವಾಗಿತ್ತು. ಕದನದ ಕೊಳಗುಳದಂತಿದ್ದ ಕಿತ್ತೂರಿನಲ್ಲಿಯೇ ಹುಟ್ಟಿ ಬೆಳೆದಿದ್ದ ಆತನಿಗೆ ಹದಿನೆಂಟರ ವಯಸ್ಸಿಗಾಗಲೇ ಸೈನಿಕ ಜೀವನ ಅಭ್ಯಾಸವಾಗಿಹೋಗಿತ್ತು. ಅಂತೆಯೇ ತುತ್ತೂರಿ, ಕಹಳೆ–ಕೊಂಬುಗಳ ರಣಗರ್ಜನೆ ಕೇಳಿಬಂದೊಡನೆಯೇ ಸಾಧಾರಣ ಸೈನಿಕರಂತೆ ಅವನಿಗೂ ತಕ್ಷಣವೇ ಎಚ್ಚರವಾಗುತ್ತಿತ್ತು. "ಪೌರುಷವಂತರಾದವರು ಮಾತ್ರವೇ ಕಿತ್ತೂರಿನ ಕೋಟೆಯನ್ನುಳಿಸಿಕೊಳ್ಳಬಲ್ಲರು. ದಂಡಾಳುಗಳ ಸಂಗಡ ಭುಜಕ್ಕೆ ಭುಜ ಹಚ್ಚಿ ನಿಂತು ಕಾದಾಡಬಲ್ಲವನು ಮಾತ್ರವೇ ಇಲ್ಲಿ ದೊರೆಯಾಗಿರಬಲ್ಲ." ಎಂಬುದಾಗಿ ಅವನ ತಂದೆ ವೀರಪ್ಪರಾಜ ಮತ್ತೆ ಮತ್ತೆ ಉಪದೇಶಿಸುತ್ತಿದ್ದುದಿತ್ತು. ವೀರಪ್ಪರಾಜ ಕೇವಲ ಮಾತಿನ ಮಲ್ಲನಾಗಿರದೆ ರಣಧುರಂಧರನೂ ಆಗಿದ್ದ. ಕಿತ್ತೂರಿಗಾಗಿ ಕಾಳಗದಲ್ಲಿ ಕಾದುತ್ತ ಕಾದುತ್ತಲೇ ಆತ ವೀರೋಚಿತವಾದ ಮರಣವನ್ನಪ್ಪಿಕೊಂಡಿದ್ದ. ಅಂಥ ಕಡುಗಲಿಯ ಮಗನಾಗಿ ಜನಿಸಿದ ಮಲ್ಲಸರ್ಜನಲ್ಲೂ ತಂದೆಯ ಧೈರ್ಯ—ಶೌರ್ಯ ಸಾಹಸಾದಿ ಗುಣಗಳು ರಕ್ತಗತವಾಗಿ ಬಂದಿದ್ದುವು. ತಂದೆಯ ಕೊನೆಯ

ದಿನಗಳಲ್ಲಿ ಆತನ ಕೀರ್ತಿಗೆ ಹತ್ತಿದ ಕಲಂಕವನ್ನು ತೊಡೆದುಹಾಕಿ ಕಿತ್ತೂರನ್ನು ಬಲಾಢ್ಯವಾದ ರಾಜ್ಯವನ್ನಾಗಿ ನಿರ್ಮಿಸಬೇಕೆಂದು ಮಲ್ಲಸರ್ಜ ಕನಸು ಕಾಣುತ್ತಿದ್ದ. ಅರಮನೆಯ ಸುಖವಿಲಾಸದ ವಾತಾವರಣದಲ್ಲಿ ಮೈಮರೆತು ಮಲಗಿದ್ದರೆ ಆ ಕನಸು ನನಸಾಗುವುದು ಅಸಾಧ್ಯವೆಂಬುದೂ ಅವನಿಗೆ ಚೆನ್ನಾಗಿ ತಿಳಿದಿತ್ತು. ತನ್ನ ಪರಾಕ್ರಮದ ಬಲದಿಂದಲೇ ಆ ಕನಸು ಕೈಗೂಡುವುದು ಸಾಧ್ಯವೆಂಬ ವಿಚಾರವೂ ಅವನಿಗೆ ಚೆನ್ನಾಗಿ ಮನವರಿಕೆಯಾಗಿತ್ತು.

ಅಂತೆಯೇ ಅಂದು ಅಂಥ ಅವೇಳೆಯಲ್ಲೂ ತುತ್ತೂರಿಯು ಕರೆ ಕೇಳಿಸಿದಾಗ ಆತ ಉತ್ಸಾಹದಿಂದಲೇ ಎದ್ದು ಮಂಚದಿಂದಿಳಿದು ಬಂದು ನಿಲುವಂಗಿ ತೊಟ್ಟುಕೊಂಡು ಶಯನಗೃಹದ ಬಾಗಿಲು ತೆಗೆದು ಹೊರಗೆ ಬಂದ. ಬಾಗಿಲು ಕಿರ್ರೆನ್ನುತ್ತಲೂ, ಹೊರಗಡೆ ಕಾವಲು ಮಾಡುತ್ತಿದ್ದ ಆಳು ಸೆಟೆದುನಿಂತು ಸಲಾಮು ಸಲ್ಲಿಸಿದ.

"ಏನು ಸುದ್ದಿ ಫಕೀರಾ? ತುತೂರಿ ಕೂಗುತಿದೆಯಲ್ಲ?"

ತುತೂರಿಯ ಕೂಗಿಗೆ ಕಾರಣವೇನೆಂಬುದು ಫಕೀರನಿಗೂ ಆಗ ಗೊತ್ತಾಗಿರಲಿಲ್ಲ.

"ನನಗೂ ಗೊತ್ತಿಲ್ಲ ಪ್ರಭೂ, ನಾ ಇಲ್ಲೇ ಇದೀನಿ ಕಾವಲುಮಾಡುತ್ತ. ಹೊರಗೆ ಹೋಗಿ ಕೇಳಿ ಬರಲೇನು?"

"ಬೇಡ, ನಾವೇ ಹೋಗಿ ನೋಡುತ್ತೇವೆ. ಸಣ್ಣಚೆನ್ನಪ್ಪನವರು ಎದ್ದಿದಾರೇನೋ ನೋಡು" ಎಂದು ಆಳಿಗೆ ಹೇಳಿ ಮಲ್ಲಸರ್ಜ ಮುಖ ತೊಳೆದುಕೊಳ್ಳಲೆಂದು ಸ್ನಾನಗೃಹದತ್ತ ನಡೆದಿದ್ದಂತೆಯೇ ಅದೇ ತಾನೆ ಎದ್ದು ವಿಷಯವೇನೆಂದು ತಿಳಿದುಕೊಳ್ಳಲು ಹೊರಗಡೆ ಬರುತ್ತಿದ್ದ ಆತನ ಸೋದರತ್ತೆ ನೀಲಮ್ಮ ಮಲ್ಲಸರ್ಜನೂ ಎದ್ದು ಬಿಟ್ಟಿದ್ದುದನ್ನು ಕಂಡು "ನೀನ್ಯಾಕೆ ಎದ್ದಿಯಪ್ಪಾ ಕುಮಾರಾ? ಸುಮ್ಮನೆ ನಿದ್ದೆಗೆಡಬಾರದು. ಹೋಗಿ ಮಲಗಿಬಿಡು" ಎಂದು ಹೇಳಿದಳು.

"ದೊರೆಯಾದವನು ಮಲಗಿದರೆ ಅವನ ರಾಜ್ಯವೂ ಮಲಗುತ್ತದೆ ಅಂತ ಪೂಜ್ಯ ತಂದೆಯವರು ಮೇಲಿಂದ ಮೇಲೆ ಹೇಳುತ್ತಿರಲಿಲ್ಲವೆ, ಅತ್ತೆಯವರೆ? ನಿದ್ದೆಗೆಡಬಾರದೆಂದು ನಾನು ಮಲಗಿಕೊಂಡರೆ ಕಿತ್ತೂರು ಶತ್ರುಗಳ ಕೈಗೆ ಹೋಗಲು ತಡವಾಗಲಿಕ್ಕಿಲ್ಲ. ನಿಜವಾಗಿ ನಿದ್ದೆ ಮಾಡಬೇಕಾದ

ವರು ನೀವು. ನೀವ್ಯಾಕೆ ವ್ಯರ್ಥವಾಗಿ ಜಾಗರಣೆ ಮಾಡಬೇಕು? ಮೀಸೆ ಹೊತ್ತ ಗಂಡಸು ನಾನಿಲ್ಲವೆ ನೋಡಿಕೊಳ್ಳಲು ?"

"ನಿನ್ನ ತಂದೆಯ ಹಾಗೇ ನೀನೂ ವೀರಾಗ್ರಣಿಯಿರುವಿ ಕುಮಾರಾ. ನಿನ್ನ ಕೈಯಲ್ಲಿ ಕತ್ತಿಯಿರುವವರೆಗೆ ಕಿತ್ತೂರಿಗೇನೂ ಅಂಜಿಕೆಯಿಲ್ಲ. ಹೋಗು, ಮುಖ ತೊಳೆದುಕೊಂಡು ಬಾ. ನಾನೂ ಹೋಗಿ ಏನು ಸುದ್ದಿಯೋ ವಿಚಾರಿಸುತ್ತೇನೆ."

ಮಲ್ಲಸರ್ಜ ಮುಖಮಾರ್ಜನ ಮುಗಿಸಿಕೊಂಡು ಸೊಂಟದ ಪಟ್ಟಿಗೆ ಕಠಾರಿಯನ್ನೂ, ಖಡ್ಗವನ್ನೂ ಬಿಗಿದುಕೊಂಡು ರಣವೇಷದಲ್ಲಿ ಸಜ್ಜಾಗಿಯೇ ಸಭಾಭವನಕ್ಕೆ ಬಂದ. ಅಷ್ಟರಲ್ಲಿಯೇ ಅರಮನೆಗೆ ಧಾವಿಸಿಬಂದಿದ್ದ ಸಣ್ಣ ಚೆನ್ನಪ್ಪ ದೊರೆಗೆ ನಮಸ್ಕಾರ ಸಲ್ಲಿಸುತ್ತ ಮಾತನಾಡಿದ:

"ಪ್ರಭುಗಳು ಈಗಲೇ ಏಕೆ ಎದ್ದುಬಿಟ್ಟಿರಿ? ಅಂಥಾ ವಿಶೇಷವೇನೂ ನಡೆದಿಲ್ಲ ಇನ್ನೂ. ಸೇವಕರಾದ ನಾವೆಲ್ಲ ಇರುವಾಗ ತಮಗೇಕೆ ತ್ರಾಸ?"

"ಅದೆಲ್ಲ ಇರಲಿ ಚೆನ್ನಪ್ಪನವರೆ. ವಿಶೇಷವಿರಲಿ – ಇಲ್ಲದಿರಲಿ. ಈಗ ನಡೆದಿರುವದಾದರೂ ಏನು?"

"ಟೇಪೂನ ದಂಡು ಇತ್ತಕಡೆಗೇ ಹೊರಟಿದೆಯಂತೆ ಪ್ರಭೂ. ಅದಕ್ಕಾಗಿ ಸೇನಾನಾಯಕರು ದಂಡಾಳುಗಳಿಗೆ ಕರೆಕೊಡುತ್ತಿದಾರೆ."

"ನಾಯಕರೆಲ್ಲಿದಾರೆ?"

"ಇಲ್ಲೇ ಇದಾರೆ ಪ್ರಭೂ—ತಮ್ಮ ಕಚೇರಿಯಲ್ಲಿ. ಅವರನ್ನು ಬರ ಮಾಡಿಕೊಳ್ಳೋಣವೇ?"

"ಹೇಳಿ ಕಳಿಸಿರಿ. ಅವರಿಂದ ಎಲ್ಲಾ ಸರಿಯಾಗಿ ತಿಳಿಯಬಹುದು."

ಆದರೆ ತಿಮ್ಮನಗೌಡನಿಂದಲೂ ಹೆಚ್ಚಿನ ವಿವರಗಳು ತಿಳಿದುಬರಲಿಲ್ಲ.

"ದಂಡು ಹೊರಟಿದೆಯೆಂದಷ್ಟು ಗೊತ್ತಾಗಿದೆ ಪ್ರಭೂ. ನಮ್ಮ ಸಿದ್ಧತೆಯಲ್ಲಿ ನಾವಿರುವದೊಳ್ಳೆಯದು ಅಂತ ಕೋಟೆಯಲ್ಲಿ ಸೈನಿಕರನ್ನ ಸೇರಿಸುತ್ತಿದ್ದೇನೆ. ತಮ್ಮ ಅಡ್ಡಿಯೇನೂ ಇಲ್ಲವಷ್ಟೆ?" ಎಂದು ಆತ ಕೇಳಿದ.

"ನಮ್ಮ ಅಡ್ಡಿ? ನಾವೇಕೆ ಅಡ್ಡಿಯಾಗಬೇಕು ನಾಯಕರೆ? ಸುದ್ದಿ ತಿಳಿಯುತ್ತಲೂ ಹೊರಟುಬಂದು ತಯಾರಿಗೆ ತೊಡಗಿ ಒಳ್ಳೆಯದು ಮಾಡಿದಿರಿ. ದಿವಾನರೆಲ್ಲಿದಾರೆ?"

“ಅವರಿನ್ನೂ ಬಂದಂತೆ ಕಾಣಲಿಲ್ಲ ಪ್ರಭೂ.”

“ದಿವಾನರನ್ನೂ ಇತರ ಮುತ್ಸದ್ದಿಗಳನ್ನೂ ಕರೆಕಳಿಸಿರಿ ಚೆನ್ನಪ್ಪನವರೆ. ಅವಸರದ ಆಲೋಚನಾ ಸಭೆ ಸೇರಲಿ,” ಎಂದು ಆಜ್ಞೆಯಿತ್ತು ಮಲ್ಲಸರ್ಜ ಸೇನಾಪತಿಯನ್ನು ಕುರಿತು ಕೇಳಿದ :

“ವೈರಿಯ ಸೇನೆಯನ್ನು ಹೊಡೆದೋಡಿಸುವಷ್ಟು ಸಿದ್ಧತೆ ನಮ್ಮಲ್ಲಿದೆಯೋ ಇಲ್ಲವೋ ನಾಯಕರೆ ?”

“ಅವರು ಹತ್ತು ಸಾವಿರ ಜನರಿದ್ದಾರಂತೆ. ನಮ್ಮಲ್ಲಿ ಅಷ್ಟು ಸೇನೆಯಿಲ್ಲವೆನ್ನುವದು ಪ್ರಭುಗಳಿಗೂ ಗೊತ್ತಿದೆ. ಆದರೂ, ಪೌರುಷದಲ್ಲಿ ನಾವು ಯಾರಿಗೂ ಕಡಿಮೆಯವರಲ್ಲ. ನಮ್ಮ ಒಬ್ಬೊಬ್ಬ ಸೈನಿಕನೂ ವೈರಿಗಳ ನಾಲ್ಕು ನಾಲ್ಕು ಜನರನ್ನು ಎದುರಿಸಿ ಹಿಮ್ಮೆಟ್ಟಿಸಬಲ್ಲ.”

“ತೋಪುಗಳು ಸರಿಯಾದ ಸ್ಥಿತಿಯಲ್ಲಿವೆಯಷ್ಟೆ ?”

“ಅವೂ ಸಜ್ಜಾಗಿವೆ ಪ್ರಭೂ. ಮದ್ದುಗುಂಡುಗಳ ಸಂಗ್ರಹವೂ ಸಾಕಷ್ಟಿದೆ. ಯಾತರದೂ ಕೊರತೆಯಿಲ್ಲ.”

“ಒಂದು ವರ್ಷ ಮುತ್ತಿಗೆ ಹಾಕಿ ಕೂತರೂ ವೈರಿಗಳಿಗೆ ಕೋಟೆ ಸಿಗದಂತಾಗಬೇಕು ನಾಯಕರೆ. ಸೈನಿಕರಿಗೂ ಕುದುರೆ ಒಂಟೆ ಆನೆಗಳಿಗೂ ಒಂದು ವರ್ಷದ ವರೆಗೂ ಸಾಕಾಗುವಷ್ಟು ಕಾಳುಕಡ್ಡಿ ಮೇವು ಸಂಗ್ರಹಿಸಿಡಬೇಕು.”

“ಹೌದು ಪ್ರಭೂ. ಈಗಾಗಲೇ ಉಗ್ರಾಣದಲ್ಲಿ ಸಾಕಷ್ಟು ಅಕ್ಕಿ ಕೂಡಿಬಿದ್ದಿದೆ. ಇನ್ನುಳಿದ ಪದಾರ್ಥಗಳು ಎಂಟು ಹತ್ತು ತಾಸುಗಳಲ್ಲಿ ಬಂದುಬೀಳುವಂತೆ ವ್ಯವಸ್ಥೆಯಾದರಾಯಿತು.”

“ಈಗಿಂದೀಗ ಆ ವ್ಯವಸ್ಥೆಯಾಗಲಿ ಚೆನ್ನಪ್ಪನವರೆ” ಎಂದು ಕಾರಭಾರಿಗೆ ಅಪ್ಪಣೆ ವಿಧಿಸಿ ಮಲ್ಲಸರ್ಜ, ಸೇನಾನಾಯಕನ ಜೊತೆಯಲ್ಲಿಯೆ ಬಂದಿದ್ದ ವೀರಸಂಗಪ್ಪನತ್ತ ದೃಷ್ಟಿ ಹೊರಳಿಸಿ,

“ಸರದಾರರೂ ಇಷ್ಟು ಬೇಗ ಬಂದಿರುವರಲ್ಲ ! ಊರಲ್ಲಿ ವಾತಾವರಣ ಹೇಗಿದೆ ? ಟೀಪುವಿನ ದಂಡು ಬರುವ ಸುದ್ದಿಯಿಂದ ಜನರು ಅಂಜಿಲ್ಲವಷ್ಟೆ ?” ಎಂದು ಕೇಳಿದ.

“ಅಂಜುವ ಜನರು ಎಲ್ಲಾ ಕಡೆಗೂ ಇರುವವರೇ, ಎಲ್ಲರೂ ಶೂರರಾಗಿಯೇ ಇರುವದು ಶಕ್ಯವಿಲ್ಲ ಪ್ರಭೂ.”

"ಆದೇನೋ ನಿಜ. ಆದರೂ, ಈ ವೇಳೆಯಲ್ಲಿ ಕಿತ್ತೂರಿನಲ್ಲಿನ ಜನರಾರೂ ಅಂಜಿ ಓಡದಂತೆ ನೋಡಿಕೊಳ್ಳಬೇಕು ಸರದಾರರೆ. ಜನರು ಪಲಾಯನ ಮಾಡುವದು ವೈರಿಗಳಿಗೆ ಗೊತ್ತಾದರೆ ನಾವು ದುರ್ಬಲರಾಗಿರುವೆವೆಂದೇ ಅವರು ಭಾವಿಸುತ್ತಾರೆ."

"ಹೌದು ಪ್ರಭೂ. ತಮ್ಮ ಮಾತು ನಿಜ."

"ಊರಲ್ಲಿ ಪಿತೂರಿಯಂತೂ ಆಗಲಿಕ್ಕಿಲ್ಲವಷ್ಟೆ?"

"ಸಾಧಾರಣ ಜನರಾರೂ ಪಿತೂರಿ ಆಗಲಿಕ್ಕಿಲ್ಲ. ಆದರೆ...."

"ಯಾಕೆ ಸರದಾರರೆ, ಮಾತಾಡಲು ಅನುಮಾನಿಸುತ್ತಿದೀರಲ್ಲ? ಮುಖ್ಯಮುಖ್ಯ ಜನರಲ್ಲಿ ಯಾರಾದರೂ ಪಿತೂರಿ ಆಗಬಹುದು ಅಂತೀರಾ?"

ಮುಂದೆ ಮಾತನಾಡುವುದೇ ಬೇಡವೇ? ಎಂದು ಯೋಚಿಸುತ್ತ ತಿಮ್ಮನಗೌಡ ಮಡಿವಾಳರ ಮುಖ ನೋಡಿದ ವೀರಸಂಗಪ್ಪ. ಮಡಿವಾಳನ ಮುಖದ ಮೇಲೆ, "ಹೇಳು, ಹೇಳಿಬಿಡು" ಎಂಬ ಪ್ರೋತ್ಸಾಹದ ಸೂಚನೆ ಕಂಡುಬಂದರೆ, ತಿಮ್ಮನಗೌಡನ ಮುಖದ ಮೇಲೆ, "ಬೇಡ, ಈಗಲೇ ಹೇಳಬೇಡ," ಎಂಬ ಸೂಚನೆ ಕಾಣಿಸಿತು. ಮನಸ್ಸಿನಲ್ಲಿನ ಮಾತನ್ನು ಈಗ ಆಡದೆ ಸುಮ್ಮನಿದ್ದು, ದಿವಾನರು ಬಂದ ಬಳಿಕ ಅವರ ಎದುರಿಗೇ ಆಡುವುದೊಳ್ಳೆಯದೆಂದು ಬಗೆದು ವೀರಸಂಗಪ್ಪ ಮೌನ ವಹಿಸಿದ.

ಆದರಾತ ಹಠಾತ್ತನೆ ಮೌನವಹಿಸಿದುದರಿಂದಲೇ ದೊರೆಯ ಮನಸ್ಸಿನಲ್ಲಿನ ಅನುಮಾನ ಇನ್ನಷ್ಟು ಹೆಚ್ಚಿತು. ದರಬಾರದ ಮುತ್ಸದ್ದಿ ಮಂಡಲದಲ್ಲಿ ಯಾರಾದರೂ ವೈರಿಗಳ ಕಡೆ ಒಡೆದಿರಬಹುದೋ ಏನೋ. ಹಾಗಾಗುವುದು ಅಸಂಭವವೇನೂ ಅಲ್ಲವೆಂಬುದಂತೂ ಹಿಂದಿನ ಅನೇಕ ಅನುಭವಗಳಿಂದ ವ್ಯಕ್ತವಾಗಿತ್ತು. ಹೊನ್ನು-ಮಣ್ಣುಗಳ ಆಸೆಗೊಳಗಾಗಿ ತಾಯಿನಾಡಿಗೆ ದ್ರೋಹ ಬಗೆದು ಶತ್ರುಗಳನ್ನು ಸ್ವಾಗತಿಸುವ ಕುಲಕಂಟಕರ ತಂಡ ಎಲ್ಲಾ ಕಡೆಗಳಲ್ಲೂ ಇರುವಂತೆ ಕಿತ್ತೂರಿನಲ್ಲಿಯೂ ಇದ್ದೇ ಇದ್ದಿತು. ಈ ಸಂದರ್ಭದಲ್ಲೂ ವೈರಿಗಳು ಇಂಥವರ ಉಪಯೋಗ ಮಾಡಿಕೊಳ್ಳುವುದು ಸಾಧ್ಯವಿತ್ತು. ಆ ಪಿತೂರಿಗಳಾರೆಂಬುದು ವೀರಸಂಗಪ್ಪನಿಗೆ ತಿಳಿದಿರಬೇಕೆಂದೇ ಮಲ್ಲಸರ್ಜನಿಗನಿಸಿತು. ಯಾವ ಕಾರಣದಿಂದಲೋ ಆತ ಅವರ ಹೆಸರು ಪ್ರಸ್ತಾಪಿಸಲು ಹಿಂಜರಿಯುತ್ತಿರುವಂತಿದೆ—ಈ ಪ್ರಕರಣವನ್ನು

ಹೀಗೇ ಬಿಡದೆ ತಕ್ಷಣವೇ ವಿಚಾರಣೆ ಮಾಡಿ ದ್ರೋಹಿಗಳಿಗೆ ತಕ್ಕ ಶಿಕ್ಷೆ ವಿಧಿಸಿ ಒಳಸಂಚನ್ನು ಮೊಳಕೆಯಲ್ಲಿಯೇ ಹೊಸೆದುಹಾಕುವುದು ಅಗತ್ಯ ವೆಂದು ಬಗೆದು ಮಲ್ಲಸರ್ಜನೆಂದ :

"ಸರದಾರರು ಯಾಕೋ ಹಿಂದೆಮುಂದೆ ನೋಡುತ್ತಿರುವಿರಲ್ಲಾ? ಏನು ವಿಷಯ? ಏನಿದ್ದರೂ ಚಿಂತೆಯಿಲ್ಲ. ಹೇಳಿಬಿಡಿರಿ. ವೈರಿ ಮನೆಬಾಗಿಲಿಗೇ ಬರುತ್ತಿರುವ ಈ ವೇಳೆಯಲ್ಲಿ ನೀವು ಮಿನಮೇಷ ಮಾಡುವದು ಸರಿಯಲ್ಲ. ಕಿತ್ತೂರಲ್ಲಿ ದ್ರೋಹ ನಡೆದಿದ್ದರೆ ಅದನ್ನು ಈಗಿಂದೀಗ ನಿಲ್ಲಿಸುವದೇ ಒಳ್ಳೆಯದಲ್ಲವೇ? ಏನಂತೀರಿ ನಾಯಕರೆ?"

"ನಿಜ ಪ್ರಭೂ. ಹೊರಗಿನ ಹತ್ತು ಸಾವಿರ ಶತ್ರುಗಳಿಗಿಂತ ಒಳಗಿನ ಹತ್ತು ಪಿತೂರಿಗಳಿಂದಲೇ ಹೆಚ್ಚು ಗಂಡಾಂತರ," ಎಂದ ಸೇನಾಪತಿ.

"ಕೇಳಿದಿರಿಲ್ಲೋ ಸರದಾರರೆ? ಮಾತಾಡಿರಿ. ನಿಮ್ಮ ಮನಸ್ಸಿನಲ್ಲಿ ಏನಿದೆಯೋ ಹೇಳಿಬಿಡಿರಿ."

"ಕ್ಷಮಿಸಬೇಕು ಪ್ರಭೂ. ದಿವಾನರು ಬಂದ ಮೇಲೇ ಅದನ್ನ ಹೇಳುವುದು ಒಳ್ಳೆಯದಂತ ಕಾಣ್ತದ."

ದಿವಾನರ ಪ್ರಸ್ತಾಪ ಬರುತ್ತಲೂ ಮಲ್ಲಸರ್ಜ ಚಕಿತನಾದ. ದಿವಾನರ ವಿಚಾರವಾಗಿಯೇ ವೀರಸಂಗಪ್ಪನಿಗೆ ಅನುಮಾನ ಬಂದಿರಬಹುದೊ ಏನೊ. ಅವನೂ ಕೂಡಾ ಕಾರಣವಿಲ್ಲದೆ ಯಾರ ಬಗೆಗೂ ಸಂಶಯಪಟ್ಟುಕೊಳ್ಳುವವನಲ್ಲ. ಸಂಸ್ಥಾನದ ಮೆದುಳಿನಂತಿರುವ ಮುಖ್ಯಮಂತ್ರಿಯ ಬಗೆಗೇ ಅವನಿಗೆ ಸಂದೇಹವುತ್ಪನ್ನವಾಗಬೇಕಾದರೆ ಅಂಥದೊಂದು ಪ್ರಬಲಕಾರಣ ವೇನಾದರೂ ಇದ್ದೇ ಇರಲು ಸಾಕು. ಅದಾವ ಕಾರಣವೊ?

ಮಲ್ಲಸರ್ಜ ಹಾಗೆ ಯೋಚಿಸುತ್ತಲಿದ್ದಂತೆಯೇ ದಿವಾನ ಆಗಮಿಸುತ್ತಿದ್ದ ಸಮಾಚಾರವೂ ಬಂದಿತು. ಆತ ಬಂದು ದೊರೆಗೆ ವಂದಿಸಿ, ಸುತ್ತಲೂ ನೆರೆದಿದ್ದ ಅಧಿಕಾರಿಗಳ ಮೇಲೊಂದು ಬಾರಿ ದೃಷ್ಟಿಯೋಡಿಸಿ, ಅವರಲ್ಲನೇಕರ ಮುಖಗಳ ಮೇಲೆ ಹೊಸ ಭಾವವೊಂದು ಆಡುತ್ತಿದ್ದುದನ್ನು ಗಮನಿಸಿ, ತಾನು ಬರುವ ಮುನ್ನ ತನ್ನ ಬಗೆಗೇ ಮಾತು ನಡೆದಿರಬಹುದೇನೋ ಎಂದು ಯೋಚಿಸುತ್ತ ತನ್ನ ಪೀಠದಲ್ಲಿ ಕುಳಿತುಕೊಂಡ.

"ಇಂದಿನ ಸುದ್ದಿ ಗೊತ್ತಾಯಿತೇ ಪಂತರೆ?" ಎಂದು ಮಲ್ಲಸರ್ಜ ಮಾತಿಗಾರಂಭಿಸಿದ.

" ಎರಡು ಮೂರು ದಿನಗಳ ಮೊದಲೇ ಹೀಗೇನಾದರೂ ಆಗಬಹುದೆಂದು ನನಗೆ ಗೊತ್ತಾಗಿತ್ತು ಪ್ರಭೂ. ಆಗಲೇ ನಾನು ತಮ್ಮೆದುರು ಈ ಬಗ್ಗೆ ಅರಿಕೆ ಮಾಡಿಕೊಂಡೂ ಇದ್ದೆ. ವೈರಿಗಳು ಕೂಚುಮಾಡುತ್ತ ಬರುತ್ತಿರಬಹುದೆಂಬ ವಿಚಾರವೂ ನನಗೆ ನಿನ್ನೆ ರಾತ್ರಿಯೇ ಗೊತ್ತಾಗಿತ್ತು," ಎಂದು ಹೇಳುತ್ತಾ, ಅಲ್ಲಿ ನೆರೆದಿದ್ದ ಜನರ ಮುಖಗಳನ್ನು ಮತ್ತೊಮ್ಮೆ ದೃಷ್ಟಿಸಿನೋಡಿದ ಗುರುನಾಥಪಂತ. ಮಡಿವಾಳ, ವೀರಸಂಗಪ್ಪ, ತಿಮ್ಮನಗೌಡರ ಮುಖಗಳ ಮೇಲೆ ಗೊಂದಲದ ಭಾವ ಮೂಡುತ್ತಿದ್ದುದು ಕಂಡು ಬಂದಿತು.

ಅದನ್ನು ಕಂಡು, ಮನಸ್ಸಿನಲ್ಲಿಯೇ ಗೆಲುವಿನ ನಗೆ ನಗುತ್ತಾ ಗುರುನಾಥಪಂತ ತನ್ನ ಮಾತನ್ನು ಮುಂದುವರಿಸಿದ:

" ನಿನ್ನೆ ರಾತ್ರಿಯೇ ಗೊತ್ತಾಗಿತ್ತು. ಬೆಳಗ್ಗೆ ಬಂದು ಪ್ರಭುಗಳಿಗೆ ಎಲ್ಲಾ ನಿವೇದಿಸೋಣವೆಂದಿದ್ದೆ. ರಾತ್ರಿಯ ಹೊತ್ತಿನಲ್ಲಿ ಸರಕಾರದ ನಿದ್ರಾಭಂಗ ಮಾಡಬಾರದು ಅಂತ...."

" ಅದೇನು ಪಂತರೆ, ರಾತ್ರಿ ಗೊತ್ತಾದದ್ದು ?"

" ಟೀಪುವಿನ ಕಾರಭಾರಿಗಳಿಂದ ಒಂದು ಮಾತು ತಿಳಿದಿತ್ತು ಪ್ರಭೂ. ಅವರು ಒಬ್ಬ ಚಾರನನ್ನು ಕಳಿಸಿ, ಯುದ್ಧವಿಲ್ಲದೆಯೇ ಕಿತ್ತೂರನ್ನು ಒಪ್ಪಿಸುವದೊಳ್ಳೆಯದೆಂದು ಹೇಳಿಕಳಿಸಿದ್ದರು. ದೊರೆಗಳೊಡನೆ ಸಮಾಲೋಚನೆ ಮಾಡಿದ ಮೇಲೆ ಏನೆಂಬುದನ್ನು ತಿಳಿಸುವದಾಗಿ ಹೇಳಿ ಅವನನ್ನು ಕಳಿಸಿಕೊಟ್ಟೆ. ಟೀಪುವಿನ ದಂಡು ಇತ್ತಕಡೆಗೇ ಹೊರಟಿರಬಹುದೆಂದು ಆಗಲೇ ನನಗನಿಸಿತ್ತು."

" ಇಂಥದೊಂದು ಮಹತ್ವದ ಸುದ್ದಿಯನ್ನು ನೀವು ಆಗಿಂದಾಗ ದೊರೆಗಳ ಕಿವಿಗೆ ಹಾಕಿದ್ದರೆ ಚೆನ್ನಾಗುತಿತ್ತೆಂದು ನನಗನಿಸ್ತದ...." ಎಂದ ವೀರಸಂಗಪ್ಪ.

ಹುಬ್ಬುಗಳನ್ನು ಮೇಲಕ್ಕೇರಿಸುತ್ತ ಗುರುನಾಥಪಂತನೆಂದ:

" ಆಗಲೇ ಅರಿಕೆಮಾಡಿಕೊಂಡೆನಲ್ಲ ಪ್ರಭೂ. ರಾತ್ರಿಯ ಹೊತ್ತಿನಲ್ಲಿ ತಮಗೆ ತೊಂದರೆ ಕೊಡಬಾರದು ಅಂತ...."

" ದೊರೆಗಳಿಗೆ ತೊಂದರೆ ಕೊಡಬಾರದೆಂಬ ವಿಚಾರವೇನೋ ಸರಿ.

ನವುಗಾದರೂ ತಿಳಿಸಿದ್ದರೆ ತಯಾರಿಮಾಡಲು ಹೆಚ್ಚು ಸಮಯ ಸಿಕ್ಕುತ್ತಿತ್ತು," ಎಂದ ವೀರಸಂಗಪ್ಪ.

ತನ್ನನ್ನು ಪೇಚಿನಲ್ಲಿ ಸಿಲುಕಿಸಿ, ದೊರೆಯ ಎದುರು ತಪ್ಪಿತಸ್ಥನನ್ನಾಗಿ ಮಾಡುವುದೇ ವೀರಸಂಗಪ್ಪನ ಉದ್ದೇಶವೆಂಬುದು ಗುರುನಾಥಪಂತನಿಗೆ ಆಗಲೇ ಹೊಳೆದಿತ್ತು. ಟೀಪುವಿನ ಕಡೆಯ ಚಾರ ತನ್ನ ಮನೆಗೆ ಬಂದು ಹೋದುದು ಈ ಜನರಿಗೆ ರಾತ್ರಿಯೇ ಗೊತ್ತಾಗಿದೆಯೋ ಏನೊ. ಒಂದು ವೇಳೆ ಹಾಗೆ ಗೊತ್ತಾಗಿದ್ದ ಪಕ್ಷದಲ್ಲಿ, ಇವರು ತನ್ನ ಬಗೆಗೆ ಸಂಶಯಪಟ್ಟುಕೊಳ್ಳುತ್ತಿರುವ ಸಂಭವವೂ ಇಲ್ಲದಿಲ್ಲ. ತಾನಿಲ್ಲಿಗೆ ಬರುವ ಮೊದಲು ದೊರೆಯ ಎದುರು ತನ್ನ ವಿಚಾರವಾಗಿಯೇ ಚಾಡಿ ಹೇಳುತ್ತಿದ್ದರೊ ಏನೊ. ದರಬಾರದ ಅನೇಕ ಜನರಿಗೆ ತನ್ನ ಏಳಿಗೆಯನ್ನು ಕಂಡರೆ ಅಸೂಯೆಯೇ ಇದೆ. ಇವರನ್ನೆಲ್ಲ ಬಿಟ್ಟು, ವೀರಪ್ಪರಾಜರು ತನ್ನನ್ನೇ ದಿವಾನಪದವಿಗೇರಿಸಿದಂದಿನಿಂದಲೂ ಇವರು ಒಳಗೊಳಗೇ ತನ್ನನ್ನು ವಿರೋಧಿಸುತ್ತ ಬಂದಿದಾರೆ. ಆಪ್ಪಿತಪ್ಪಿ ತಾನೊಂದು ತಪ್ಪು ಹೆಜ್ಜೆಯಿಟ್ಟರಾಯಿತು, ಅದನ್ನೇ ದೊಡ್ಡದನ್ನಾಗಿ ಮಾಡಿ ತನ್ನನ್ನು ಈ ಸ್ಥಾನದಿಂದ ಕೆಳಗೆಳೆಯುವ ಆಲೋಚನೆ ಇವರದಾಗಿದೆ. ವೀರಸಂಗಪ್ಪನಿಗಂತೂ ತನ್ನ ಮೇಲೆ ಎಲ್ಲರಿಗಿಂತಲೂ ಹೆಚ್ಚಾದ ಕೋಪ. ಅಂತೆಯೇ, ತನ್ನ ವಿರುದ್ಧವಾಗಿ ಚಿಕ್ಕಪುಟ್ಟ ಘಟನೆಗಳನ್ನೂ ಉಪಯೋಗಿಸದೆ ಬಿಡುವವನಲ್ಲ ಆತ. ತನ್ನ ಮನೆಗೆ ಟೀಪುವಿನ ಚಾರ ಬಂದಿದ್ದುದನ್ನೇ ನೆಪಮಾಡಿ ಈತ ದೊರೆಯ ಮನಸ್ಸಿನಲ್ಲಿ ತನ್ನ ಬಗೆಗೆ ವಿಷಬೀಜ ಬಿತ್ತಲೆತ್ನಿಸುತ್ತಿದ್ದ ಹಾಗಿದೆ. ಈ ವಿಚಾರವನ್ನು ಅವರು ಪ್ರಸ್ತಾಪಿಸುವ ಮೊದಲೇ ತಾನೇ ಅದನ್ನು ಕುರಿತು ಹೇಳಿದುದರಿಂದ ಇವರ ಯೋಚನೆಯೆಲ್ಲ ಬುಡಮೇಲಾಗಿ ಬಿದ್ದುಹೋಯಿತು. ಮುತ್ಸದ್ದಿಗಳ ಮನೆತನದಲ್ಲಿಯೇ ಜನಿಸಿಬಂದ ಈ ಗುರುನಾಥಪಂತ ಇಂಥ ಹುಂಬರಿಗೆಲ್ಲ ಸೊಪ್ಪುಹಾಕುವನೇ?

ಮನಸ್ಸಿನಲ್ಲಿಯೇ ಹಾಗೆ ಅಂದುಕೊಳ್ಳುತ್ತ, ಆತ ವೀರಸಂಗಪ್ಪನಿಗೆ ನೇರವಾಗಿ ಉತ್ತರವೀಯದೆ, ನಿರ್ಲಕ್ಷ್ಯದ ಬಾಣದಿಂದ ಅವನನ್ನು ಗಾಯಗೊಳಿಸುತ್ತ ದೊರೆಯನ್ನು ಕುರಿತೇ ಮಾತನಾಡಿದ:

"ಯುದ್ಧ ಮಾಡುವದೇ ನಿಶ್ಚಿತವಾದ ಬಳಿಕ ಸಿದ್ಧತೆ ಮಾಡುವುದಕ್ಕೆ

ಎಷ್ಟು ಹೊತ್ತು ಬೇಕು ಪ್ರಭೂ? ಮೊದಲು ತಮ್ಮೊಡನೆ ಆಲೋಚಿಸಿ ತಮ್ಮ ವಿಚಾರ ತಿಳಿದುಕೊಂಡ ಬಳಿಕ ಮುಂದಿನ ಕೆಲಸಕ್ಕೆ ತೊಡಗುವುದೊಳ್ಳೆಯದೆಂದು ನನಗನ್ನಿಸಿತ್ತು."

"ಅಂದರೆ? ಯುದ್ಧ ಮಾಡುವ ಬಗ್ಗೆ ನೀವಿನ್ನೂ ಅನುಮಾನ ಮಾಡುತ್ತಿರುವ ಹಾಗಿದೆಯಲ್ಲ ಪಂತಜಿ?" ಎಂದ ತಿಮ್ಮನಗೌಡ.

"ಪ್ರಸ್ತುತ ಪರಿಸ್ಥಿತಿಯಲ್ಲಿ ಸಾಧಕ ಬಾಧಕ ಸಂಗತಿಗಳನ್ನೆಲ್ಲಾ ಸಾವಧಾನದಿಂದ ತೂಗಿನೋಡದೆ ಒಮ್ಮೆಲೇ ದುಡುಕಿ ಒಂದು ನಿಶ್ಚಯಕ್ಕೆ ಬರುವುದು ಮುತ್ಸದ್ದಿತನವಲ್ಲ ನಾಯಕರೆ," ಎಂದು ಹೇಳಿ ಸೇನಾಪತಿಯ ಬಾಯಿ ಮುಚ್ಚಿಸಿದ ಗುರುನಾಥಪಂತ.

ದಿವಾನನ ಮಾತಿನಲ್ಲಿದ್ದ ತಥ್ಯವನ್ನು ಯಾರೂ ಅಲ್ಲಗಳೆಯುವಂತಿರಲಿಲ್ಲ. ದುಡುಕಿ ಕೈಗೊಳ್ಳುವ ಕೆಲಸದಿಂದ ಹಾನಿಯೇ ಹೆಚ್ಚೆಂಬುದು ಮಲ್ಲಸರ್ಜನಿಗೂ ತಿಳಿದಿತ್ತು. ಪ್ರತಿಯೊಂದು ವಿಷಯವನ್ನೂ ಸಮತೋಲ ಬುದ್ಧಿಯಿಂದಲೂ ಸಂಯಮದಿಂದಲೂ ವಿಚಾರಮಾಡಿ ಆಯಾ ಸಂದರ್ಭದಲ್ಲಿ ಹಿತಾವಹವೆನಿಸಬಹುದಾದ ಸಲಹೆಯೀಯುವ ಗುರುನಾಥಪಂತನ ಜಾಣ್ಮೆಯನ್ನು ಕಂಡುಕೊಂಡೇ ಆತನನ್ನು ದಿವಾನನ್ನಾಗಿ ನೇಮಿಸಿದ್ದ ವೀರಪ್ಪರಾಜ. ಗುರುನಾಥಪಂತನ ಸಲಹೆಪಡೆಯದೆ ಯಾವ ಮಹತ್ವದ ಕಾರ್ಯಕ್ಕೂ ಕೈಹಾಕಬಾರದೆಂದು ಮಲ್ಲಸರ್ಜನಿಗೆ ಆತ ಮೇಲಿಂದ ಮೇಲೆ ಉಪದೇಶಿಸಿದ್ದ. ವೀರಪ್ಪರಾಜನ ನಿಧನದ ತರುವಾಯ ಅರಮನೆಯ ಹಿರಿಯ ವ್ಯಕ್ತಿಯೆನಿಸಿಕೊಂಡಿದ್ದ ನೀಲಮ್ಮನೂ ಕೂಡ ದಿವಾನನ ಮಾತಿನಂತೆಯೇ ನಡೆದುಕೊಳ್ಳುವುದು ಕ್ಷೇಮಕರವೆಂದು ಮಲ್ಲಸರ್ಜನಿಗೆ ಮತ್ತೆ ಮತ್ತೆ ಹೇಳುತ್ತ ಬಂದಿದ್ದಳು. ತನ್ನ ತಂದೆ ಮತ್ತು ಅತ್ತೆ ಇಬ್ಬರ ವಿಶ್ವಾಸಕ್ಕೂ ಪಾತ್ರನಾಗಿದ್ದ ದಿವಾನನ ಬಗೆಗೆ ಮಲ್ಲಸರ್ಜನಲ್ಲೂ ಸಹಜವಾದ ಆದರ ವಿಶ್ವಾಸಗಳಿದ್ದುವು. ಇನ್ನೂ ಯುವಕನಾಗಿದ್ದ ತಾನು ಗುರುನಾಥಪಂತನಂಥ ವಯೋವೃದ್ಧ, ಅನುಭವಿಕ, ಬುದ್ಧಿವಂತ ಮುತ್ಸದ್ದಿಯ ಸಲಹೆಯಂತೆ ವರ್ತಿಸುವುದರಲ್ಲಿಯೇ ತನ್ನ ಹಿತವಿದೆಯೆಂದೂ ಆತ ನಂಬಿಕೊಂಡಿದ್ದ.

"ನಿನ್ನೆ ರಾತ್ರಿಯ ಮಾತು ಬಿಟ್ಟುಬಿಡೋಣ. ಈಗ ಏನು ಮಾಡಬೇಕೆಂದು ಯೋಚಿಸೋಣ. ಟೀಪುವಿನ ದಂಡಿನ ವಿಷಯ ಪ್ರಭುಗಳಿಗೆ

ತಿಳಿಯದುದೇನೂ ಅಲ್ಲ. ಅನೇಕ ವರ್ಷಗಳವರೆಗೆ ಆ ದಂಡಿನ ಅಂಕಿತ ದಲ್ಲೇ ಇರುವ ದೌರ್ಭಾಗ್ಯ ನಮ್ಮದಾಗಿತ್ತು. ಶ್ರೀಮಂತ ಪೇಶವೆಯವರ ಕೃಪೆಯಿಂದ ಆ ಪ್ರಸಂಗ ತಪ್ಪಿ ನಾವು ಮತ್ತೆ ಉಸಿರಾಡಿಸಿಕೊಳ್ಳುವಷ್ಟರಲ್ಲೇ ಮತ್ತೊಮ್ಮೆ ಮೊದಲಿನ ಗಂಡಾಂತರವೇ ಬಂದಿದೆ. ಈ ಸಂದರ್ಭದಲ್ಲಿ ನಾವು ಒಂದೊಂದು ಹೆಜ್ಜೆಯನ್ನೂ ಎಚ್ಚರದಿಂದ ಇಡಬೇಕು. ನಾವು ಏನನ್ನು ಮಾಡಿದರೂ ಅದರಿಂದ ಕಿತ್ತೂರಿಗೆ ಉಪಯೋಗವಾಗುವಂತಿರ ಬೇಕು. ಪ್ರಭುಗಳ ಅಭಿಪ್ರಾಯವೇನು ?"

"ನೀವು ಹೇಳುವ ಮಾತು ಸರಿಯಾಗಿದೆ ಪಂತರೆ."

"ಕಿತ್ತೂರಿಗೆ ಉಪಯೋಗವಾಗಬೇಕು ಅಂದರೇನು ? ಸ್ವಲ್ಪ ಬಿಡಿಸಿ ಹೇಳಿದರೆ ಒಳ್ಳೆಯದು." ಎಂದ ಸಣ್ಣ ಚೆನ್ನಪ್ಪ.

"ಅಂದರೆ – ನನ್ನ ಅಭಿಪ್ರಾಯ ಹೀಗೆ. ನಾವು ಯುದ್ಧವನ್ನೇ ಮಾಡಲಿ, ಒಪ್ಪಂದವನ್ನೇ ಮಾಡಿಕೊಳ್ಳಲಿ – ಏನೇ ಮಾಡಿದರೂ ಮುಂದಿನ ದೃಷ್ಟಿ ಇಟ್ಟುಕೊಂಡು ಮಾಡಬೇಕು. ಯುದ್ಧ ಮಾಡುವದೇ ಆದರೆ ಅದ ರಲ್ಲಿ ಗೆಲವು ಸಿಕ್ಕಿ ಕಿತ್ತೂರಿಗೆ ಲಾಭವಾಗುವ ಆಸೆಯಿರಬೇಕು. ಯುದ್ಧದ ಬದಲು ಒಪ್ಪಂದದಿಂದಲೇ ಹೆಚ್ಚು ಲಾಭವಿದೆಯೆಂದು ಅನಿಸಿದರೆ ಒಪ್ಪಂದ ವನ್ನೇ ಮಾಡಿಕೊಳ್ಳಬೇಕು. ಒಟ್ಟಾರೆ ನನ್ನ ಹಂಬಲು ಇಷ್ಟೆ. ನೂರಾರು ವರ್ಷಗಳಿಂದ ಅನೇಕ ದೊರೆಗಳು ಕಷ್ಟಪಟ್ಟು ಕಟ್ಟಿದ ಈ ಕಿತ್ತೂರು ರಾಜ್ಯ ನಮ್ಮ ಅದೂರದರ್ಶಿತನದಿಂದ ಅಪಾಯಕ್ಕೀಡಾಗದೆ ಭದ್ರವಾಗಿ ಉಳಿದು ಕೊಳ್ಳಬೇಕು. ಕಿತ್ತೂರಿನ ನಮ್ಮ ಹೆಮ್ಮೆಯ ರಾಜಮನೆತನ ಆಚಂದ್ರಾ ರ್ಕವಾಗಿ ವೈಭವದಿಂದ ಆಳಿಕೆ ನಡಸಬೇಕು."

"ನಮ್ಮದೂ ಅದೇ ಹಂಬಲು"—ಎಂದ ವೀರಸಂಗಪ್ಪ.

"ಬರೇ ಹಂಬಲು ಇದ್ದರಾಯಿತೇ ? ಆ ಹಂಬಲು ಕಾರ್ಯರೂಪಕ್ಕಿಳಿ ಯುವಂತೆ ಕೆಲಸಮಾಡಬೇಕಾಗುತ್ತದೆ. ಅಲ್ಲವೇ ಪ್ರಭೂ ?"

"ನಿಜ. ನಿಜ."

"ಭರತಖಂಡದ ದಕ್ಷಿಣ ಭಾಗವನ್ನೆಲ್ಲಾ ಗೆದ್ದು ವಿಜೃಂಭಿಸುತ್ತಿರುವ ಟೀಪುವಿನ ಹತ್ತಿರ ಪ್ರಚಂಡ ಸೇನೆಯಿದೆ, ಯುದ್ಧ ಸಾಮಗ್ರಿಗಳಿವೆ, ಹಣ ವಿದೆ; ಫಿರಂಗಿಗಳ ಬಳಿ ಕವಾಯಿತು ಕಲಿತ ಶಿಸ್ತಿನ ಕಾಲಾಳುಗಳಿದಾರೆ,

ವಿದೇಶೀಯ ಗೋಲಂದಾಜರಿದ್ದಾರೆ, ಎಲ್ಲಾ ಇದೆ. ಕಾಲ ಅನುಕೂಲ ವಾಗಿದೆಯೆಂದು ಟೀಪುವಿಗೆ ಇಷ್ಟೆಲ್ಲಾ ಸಾಮರ್ಥ್ಯ ಬಂದಿದೆ. ನಮ್ಮದು ಸಣ್ಣ ರಾಜ್ಯ. ಅವನಷ್ಟು ಜನಬಲವೂ ಇಲ್ಲ, ಧನಬಲವೂ ಇಲ್ಲ, ಅತ್ಯಾಧುನಿಕ ಸಾಮುಗ್ರಿಗಳೂ ಇಲ್ಲ. ಶೌರ್ಯದಲ್ಲಿ ಪರಾಕ್ರಮದಲ್ಲಿ ನಮ್ಮ ಜನರು ಟೀಪುವಿನ ಕಡೆಯವರಿಗೆ ಕಡಮೆಯವರಲ್ಲ. ಆದರೂ, ಯುದ್ಧದ ತಂತ್ರಗಳು ದಿನದಿಂದ ದಿನಕ್ಕೆ ಬದಲಾಗುತ್ತಿರುವ ಈ ಕಾಲದಲ್ಲಿ ಬರಿಯ ಶೌರ್ಯದಿಂದ ಉಪಯೋಗವಾಗುವಂತಿಲ್ಲ. ವೈರಿಗಳ ಸಂಖ್ಯೆ, ಮದ್ದು ಗುಂಡು, ತೋಪು, ಶಿಸ್ತು ಎಲ್ಲವನ್ನೂ ಸಮಬಲದಿಂದ ಎದುರಿಸುವ ಶಕ್ತಿ ನಮಗಿರಬೇಕು. ಹಾಗಿದ್ದರೆ ಮಾತ್ರ ಅಂಥ ವೈರಿಯನ್ನೂ ಸೋಲಿಸಿ ಓಡಿಸಬಹುದು. ಸದ್ಯಕ್ಕಂತೂ ಕಿತ್ತೂರಿನಲ್ಲಿ ಅಂಥ ಸಿದ್ಧತೆಯಿಲ್ಲ ಅನ್ನುವದು ಎಲ್ಲರಿಗೂ ಗೊತ್ತೇ ಇದೆ...." ಎನ್ನುತ್ತಾ ಸಭಿಕರ ಮೇಲೆಲ್ಲ ನೋಟ ಹಾಯಿಸಿದ ಗುರುನಾಥ ಪಂತ.

ಒಂದುಗಳಿಗೆ ಸಭೆಯಲ್ಲಿ ಪೂರ್ಣಮೌನ ನೆಲೆಸಿತ್ತು. ದಿವಾನ ವಾಸ್ತವ ಪರಿಸ್ಥಿತಿಯನ್ನೇ ವಿವರಿಸಿದ್ದ. ಅವನ ಮಾತಿನಲ್ಲಿ ಅತಿಶಯೋಕ್ತಿಯೇನೂ ಇರಲಿಲ್ಲ. ಮಧ್ಯರಾತ್ರಿಯಿಂದಲೂ ಸಮರ ಸನ್ನಾಹ ನಡಸಿದ್ದ ತಿಮ್ಮನಗೌಡನಂಥ ಉತ್ಸಾಹಿಯೂ ಕೂಡ ದಿವಾನನ ವಾದವನ್ನಲ್ಲಗಳೆಯುವಂತಿರಲಿಲ್ಲ. ದಿವಾನನ ಅಭಿಪ್ರಾಯಕ್ಕೆ ವಿರುದ್ಧಾಭಿಪ್ರಾಯ ವ್ಯಕ್ತಗೊಳಿಸುವ ಉತ್ಕಟವಾದ ಇಚ್ಛೆ ವೀರಸಂಗಪ್ಪನಿಗಿದ್ದಿತಾದರೂ ಈ ಸಂದರ್ಭದಲ್ಲಿ ದೊರೆಯ ಒಲವು ಎತ್ತ ಹೊರಳುವುದೆಂಬುದನ್ನರಿತುಕೊಳ್ಳದೆ ಮಾತನಾಡುವುದು ಜಾಣತನವಲ್ಲವೆಂದೇ ಅವನಿಗನ್ನಿಸಿತು. ಸಾಮಾನ್ಯವಾಗಿ ದೊರೆ ದಿವಾನನ ಸಲಹೆಯನ್ನು ತಿರಸ್ಕರಿಸುತ್ತಿರಲಿಲ್ಲವೆಂಬುದೂ ಅವನಿಗೆ ಚೆನ್ನಾಗಿ ಗೊತ್ತಿತ್ತು. ಈ ಸಮಯದಲ್ಲಿಯೂ ದೊರೆ ಗುರುನಾಥ ಪಂತನ ಮಾತಿನಂತೆಯೇ ವರ್ತಿಸುವ ಸಂಭವ ವಿಶೇಷವಾಗಿತ್ತು. ಎಂತಲೇ ವೀರಸಂಗಪ್ಪ ತನ್ನ ಹಟವನ್ನು ಅದುಮಿಹಿಡಿದು ಸುಮ್ಮನೆ ಕುಳಿತುಕೊಂಡ.

"ದಿವಾನರಂತೂ ತಮ್ಮ ಅಭಿಪ್ರಾಯ ಹೇಳಿದಾರೆ. ಇನ್ನು ಸೇನಾನಾಯಕರೂ ಇತರ ಸರದಾರರೂ ತಮ್ಮ ತಮ್ಮ ಅಭಿಪ್ರಾಯ ತಿಳಿಸಲಿ," ಎಂದ ಮಲ್ಲಸರ್ಜ.

ಮತ್ತೆ ಕೆಲವು ಕ್ಷಣ ಎಲ್ಲರೂ ಮೌನವಾಗಿದ್ದರು. ಆ ಮೌನವನ್ನು ಮುರಿದು ಸಣ್ಣ ಚೆನ್ನಪ್ಪ ಮಾತಿಗಾರಂಭಿಸಿದ:

“ದಿವಾನರು ಸತ್ಯಸಂಗತಿಗಳನ್ನೇ ಹೇಳಿದಾರೆ ಪ್ರಭು. ಟೀಪುವಿನ ಸೈನ್ಯದೆದುರು ಕಾದಿ ಜಯ ಪಡೆಯುವ ಶಕ್ತಿ ಸದ್ಯಕ್ಕಂತೂ ನಮ್ಮ ಸೈನ್ಯಕ್ಕಿಲ್ಲ ಅಂತಲೇ ನನ್ನ ಅಭಿಪ್ರಾಯ. ನಮ್ಮಿಂದಾಗದ ಕೆಲಸಕ್ಕೆ ಕೈಹಾಕಿ ಹಾನಿಗೊಳಗಾಗುವುದಕ್ಕಿಂತ ಸದ್ಯಕ್ಕೆ ಟೀಪುವಿನ ಸ್ನೇಹ ಸಂಪಾದಿಸಿ ಸಂಧಾನ ಮಾಡಿಕೊಳ್ಳುವುದೇ ಮೇಲು ಅಂತ ನನ್ನ ಅಲ್ಪಬುದ್ಧಿಗೆ ತೋಚುತ್ತದೆ.”

“ನಮ್ಮ ಸೇನೆಯ ಶಕ್ತಿಯ ಬಗ್ಗೆ ಅಧಿಕಾರವಾಣಿಯಿಂದ ಮಾತಾಡಬಲ್ಲವರೆಂದರೆ ತಿಮ್ಮನಗೌಡರು. ಅವರೇನು ಹೇಳುತ್ತಾರೆ?” ಎಂದ ದೊರೆ.

“ನಿಜವಾಗಿಯೂ ನಮ್ಮ ಸೇನೆ ಇನ್ನಾವ ಸೇನೆಗೂ ತಲೆಬಾಗುವಂಥದಲ್ಲ ಪ್ರಭು. ನಮ್ಮ ಸೇನೆಯ ಸಂಖ್ಯಾಬಲ ಕಡಿಮೆಯೆಂಬ ಮಾತೇನೋ ನಿಜ. ಟೀಪುವಿನ ದಂಡಿನಲ್ಲಿರುವಷ್ಟು ಯುದ್ಧಸಾಮಗ್ರಿಗಳೂ ನಮ್ಮಲ್ಲಿಲ್ಲ. ಅದೂ ನಿಜ. ಆದರೂ ಶಿಸ್ತಿನಲ್ಲಿ, ವ್ಯವಸ್ಥೆಯಲ್ಲಿ, ಪರಾಕ್ರಮದಲ್ಲಿ ನಮ್ಮ ಸೈನಿಕರು ಟೀಪುವಿನ ಸೈನಿಕರಿಗೇನೂ ಕಡಿಮೆಯಿಲ್ಲ. ಅಲ್ಲದೆ, ಯುದ್ಧದಲ್ಲಿ ಮಹತ್ವದ್ದಾದ ಇನ್ನೊಂದು ವಿಷಯವಿದೆ. ತಮ್ಮ ಊರಿಗಾಗಿ, ನಾಡಿಗಾಗಿ, ಅರಸನಿಗಾಗಿ ಅಭಿಮಾನದಿಂದ ಕಾದಾಡುವ ನೂರುಮಂದಿ ಸೈನಿಕರು ಬರಿಯ ಸಂಬಳಕ್ಕಾಗಿ ಕತ್ತಿ ಹಿರಿಯುವ ಸಾವಿರ ಮಂದಿ ಸೈನಿಕರನ್ನೂ ಸುಲಭವಾಗಿ, ಸೋಲಿಸಿ ಓಡಿಸಬಲ್ಲರು. ದಿವಾನರು ಈ ವಿಷಯ ಮರೆತಿರುವ ಹಾಗೆ ಕಾಣುತ್ತದೆ,”— ಎಂದ ತಿಮ್ಮನಗೌಡ.

“ಟೀಪುವಿನ ದಂಡಿಗೆ ಫಿರಂಗಿಗಳಿಂದ ಕವಾಯಿತಿನ ಶಿಕ್ಷಣ ಸಿಕ್ಕಿದೆಯಂತೆ. ಇರಬಹುದು. ಹಿಂದೆ ಆ ದಂಡು ಇಲ್ಲಿದ್ದಾಗಲೇ ಅವರ ಹೊಸ ತಂತ್ರಗಳನ್ನು ನಾವೂ ಕಲಿತುಕೊಂಡು ನಮ್ಮ ಸೇನೆಗೂ ಕಲಿಸಿದ್ದೇವೆ. ನಮ್ಮ ಗೋಲಂದಾಜರೂ ಅನುಭವಿಕರಿದಾರೆ. ನಮ್ಮ ತೋಪುಗಳಿಗೇನು ಜಂಗು ಹತ್ತಿಲ್ಲ. ನಮ್ಮ ಒಂದೇ ಒಂದು ತೋಫು ವೈರಿಗಳ ಮೂರು ತೋಫುಗಳ ಹಲ್ಲು ಮುರಿದು ಮೆಟ್ಟಿ ಹಾಕಬಲ್ಲದು. ನಮ್ಮ ಕುದುರೆ ಸವಾರರ ದಳವಂತೂ ಮುಂಗಾರುಮಳೆಯ ಮಿಂಚು ಸಿಡಿಲಿನಂತೆ ದಾಳಿ ಮಾಡಿ ವೈರಿಗಳ ಫಜೀತಿ ಮಾಡಬಲ್ಲದು,”—ಎಂದ ಗುರುಸಿದ್ಧಪ್ಪ.

“ಕಿತ್ತೂರನ್ನ ಉಳಿಸಲಿಕ್ಕಾಗಿ ಪ್ರಾಣಕ್ಕೆ ಪ್ರಾಣ ಕೊಡುವ ಸಾವಿರಾರು ಮಂದಿ ನಮ್ಮಲ್ಲಿದಾರೆ ಪ್ರಭು. ತಾವು ಯಾತಕ್ಕೂ ಚಿಂತಿಸಬಾರದು” —ಎಂದ ಮಡಿವಾಳಪ್ಪ.

“ನೀವೇನನ್ನುವಿರಿ ವೀರಸಂಗಪ್ಪ?” ಎಂದು ಮಲ್ಲಸರ್ಜ ಪ್ರಶ್ನಿಸಿದ.

“ತಮ್ಮ ಅಭಿಪ್ರಾಯವೇ ನನ್ನ ಅಭಿಪ್ರಾಯ ಪ್ರಭು. ಇದುವರೆಗೆ ಇವರೆಲ್ಲರೂ ತಮ್ಮ ತಮ್ಮ ವಿಚಾರ ತಿಳಿಸಿದಾರೆ. ತಾವು ಎಲ್ಲವನ್ನೂ ತೂಗಿ ನೋಡಿ ಸರಿಯಾದ ನಿರ್ಣಯಕ್ಕೆ ಬರಲು ಸಮರ್ಥರಿದೀರಿ. ತಾವು ಅಪ್ಪಣೆ ಕೊಡಿಸಿದಂತೆ ನಡೆದುಕೊಳ್ಳುವದಷ್ಟೇ ಈ ಸೇವಕನ ಕರ್ತವ್ಯ.”

“ನಮ್ಮ ಹಿತೈಷಿಗಳಾದ ನೀವೆಲ್ಲರೂ ಯುದ್ಧ ಹೂಡಬೇಕೆಂದೇ ಸಲಹೆ ಕೊಟ್ಟರೆ ಸಾವೂ ಅದಕ್ಕೆ ಸಿದ್ಧರಿದ್ದೇವೆ. ಕಿತ್ತೂರಿನ ಜನರು ಹೇಡಿಗಳಲ್ಲವೆನ್ನುವುದು ಆ ಸೊಕ್ಕಿನ ಶತ್ರುವಿಗೊಮ್ಮೆ ತಿಳಿದು ಹೋಗಲಿ. ಇದೇ ಈಗ ನಾಯಕರಾಡಿದ ಮಾತು ನೂರರಷ್ಟು ನಿಜ. ತಾಯಿನಾಡಿಗಾಗಿ ಜೀವದ ಹಂಗು ತೊರೆದು ಕಾದುವ ಸೇನೆಯ ಮುಂದೆ ಬಾಡಿಗೆಯ ಸೈನಿಕರ ಆಟವೇನೂ ನಡೆಯಲಾರದು.”—ಎಂದ ಮಲ್ಲಸರ್ಜ.

“ಟೀಪುವಿನ ಸೈನಿಕರಲ್ಲಿ ಮುಕ್ಕಾಲುಪಾಲು ಜನರು ಬಾಡಿಗೆಯ ಸೈನಿಕರೆಂಬುದು ನಿಜ, ಪ್ರಭು. ಹೊಟ್ಟೆಯ ಪಾಡಿಗಾಗಿ, ಅಲ್ಲಿ ಇಲ್ಲಿ ಸಿಕ್ಕುವ ಲೂಟಿಯ ಆಸೆಗಾಗಿ ಮನೆಮಾರು ಬಿಟ್ಟು ಸೇನೆಗೆ ಸೇರಿ ಬಂದವರು ಅವರು. ಪ್ರಾಣದ ಮೇಲೆ ಪ್ರಸಂಗ ಬಂದಾಗ ಪಲಾಯನ ಹೇಳುವವರೇ ಬಹಳ ಮಂದಿ. ಅಂಥವರನ್ನ ಸೋಲಿಸಲಿಕ್ಕೆ ಹೆಚ್ಚಿನ ಸಿದ್ಧತೆಯೂ ಬೇಕಾಗಿಲ್ಲ ಅಂತಲೇ ನನಗನಿಸ್ತದೆ.”—ಎಂದ ಗುರುಸಿದ್ದಪ್ಪ.

“ಟೀಪುವಿನ ದಂಡು, ನೀವಂದಂತೆ ಬಾಡಿಗೆಯದೇ ಆಗಿದ್ದಲ್ಲಿ ಇಡೀ ದಕ್ಷಿಣಭಾರತವನ್ನೆಲ್ಲಾ ಅದು ಹ್ಯಾಗೆ ಗೆಲ್ಲುತ್ತಿತ್ತು?” ಎಂದು ಸವಾಲು ಹಾಕಿದ ದಿವಾನ.

“ಬರೀ ಬೆದರಿಕೆಯಿಂದ. ಹೈದರ್ ಟಿಪ್ಪುಗಳ ಕ್ರೂರಕೃತ್ಯಗಳಿಗೆ ಅಂಜಿಕೊಂಡು ಅವರು ಪ್ರಚಂಡ ವೀರರಂತಲೇ ಭಾವಿಸಿದರು ನಮ್ಮ ಜನ. ನೂರಾರು ವರ್ಷಗಳ ಹಿಂದೆ ತೊಗಲಕ್ ಮುಹಮ್ಮದನ ಕಾಲಕ್ಕೂ ಬರಿಯ ಅಂಜಿಕೆಯಿಂದಲೇ ಮುಸಲ್ಮಾನರು ಈ ನಾಡು ಗೆದ್ದಿದ್ದರು. ಈಗಲೂ ಹಾಗೇ

ಆಗುತ್ತಿದೆ. ಟೀಪುವನ್ನು ಸೋಲಿಸುವುದು ಶಕ್ಯವೇ ಇಲ್ಲ ಎಂಬ ಭ್ರಾಂತಿಯಿಂದ ಎಲ್ಲರೂ ಅವನೆದುರು ತಲೆಬಾಗಿಸಿ ಶರಣಾಗತರಾಗುತ್ತಿದಾರೆ. ಹಾಗೆ ನಾವೂ ಅವನಿಗೆ ಶರಣುಹೋಗುವದೆಂದರೆ ನನಗಂತೂ ಅಸಹ್ಯ ಅನಿಸುತ್ತದೆ. ನಮ್ಮ ಮಲ್ಲಸರ್ಜ ದೊರೆಗಳು...." ಎಂದು ಹೇಳುತ್ತಾ ದೊರೆಯ ಕಡೆ ನೋಡಿದ ತಿಮ್ಮನಗೌಡ. ಸೇನಾಪತಿಯ ವೀರಾವೇಶದ ನುಡಿಗಳಿಂದ. ಮಲ್ಲಸರ್ಜನ ತರುಣರಕ್ತ ಬಿಸಿಯಾಗಿ ಅವನ ನರನರಗಳಲ್ಲೆಲ್ಲ ಕಾವೇರಿತ್ತು.

"ಟೀಪುವಿನ ಸಂಗಡ ಮರ್ಯಾದೆಯ ಒಪ್ಪಂದ ಮಾಡಿಕೊಳ್ಳುವದು ಬೇರೆ, ಶರಣಾಗತರಾಗಿ ಅವನೆದುರು ತಲೆಬಾಗುವದು ಬೇರೆ. ಶರಣಾಗತಿಯ ವಿಚಾರವೇ ಇಲ್ಲಿ ಇಲ್ಲ ನಾಯಕರೆ. ಅಂಥ ಸಮಯ ಬಂದರೆ ಸಮರ ಭೂಮಿಯಲ್ಲಿ ಕಾದುತ್ತ ವೀರಮೃತ್ಯುವನ್ನಪ್ಪುವೆವೇ ಹೊರತು ಆ ಖಳನಿಗೆ ಶರಣು ಹೋಗುವದಿಲ್ಲ. ಈ ವಿಷಯದಲ್ಲಿ ನಿಮಗೇ ಆಗಲಿ ಇನ್ನಾರಿಗೇ ಆಗಲಿ ಯಾವ ಸಂಶಯವೂ ಬೇಡ."—ಎಂದ ಮಲ್ಲಸರ್ಜ.

"ಜೈ ಮಹಾರಾಜ ಮಲ್ಲಸರ್ಜ ! ಜೈ ರಣಧುರಂಧರ !" ಎಂದು ಹರ್ಷದಿಂದ ಕೂಗಿದ ಮಡಿವಾಳ. ಅರಮನೆಯ ಅಂಗಳದಲ್ಲಿ ನೆರೆದಿದ್ದ ಸೈನಿಕರೂ ಇತರರೂ ಆ ಜಯಕಾರಕ್ಕೆ ಸಹಸ್ರ ಕಂಠಗಳಿಂದ ಮರುದನಿಯಿತ್ತರು. ಒಡನೆಯೇ ದರಬಾರದಲ್ಲಿ ಹೊಸ ಚೇತನವೊಂದು ಸಂಚರಿಸಿದಂತಾಗಿ ವೀರರ ತೋಳುಗಳು ಸ್ಫುರಿಸತೊಡಗಿದುವು. ಅಂಥ ಸ್ಫೂರ್ತಿಯ ಸನ್ನಿವೇಶದಲ್ಲಿಯೇ ಗುರುಸಿದ್ಧಪ್ಪ ಆವೇಶದಿಂದೆದ್ದು, ಒರೆಯಲ್ಲಿದ್ದ ಖಡ್ಗವನ್ನು ರಭಸದಿಂದ ಹಿರಿದು ಝಳಪಿಸುತ್ತಾ ದೊರೆಯೆದುರು ಬಾಗಿನಿಂತು ಹೇಳಿದ :

"ಅನುಮಾನ ಬೇಡ ಪ್ರಭು, ಅರಿಕೆ ಮಾಡಿಕೊಳ್ತೀನೆ. ಯುದ್ಧಕ್ಕೆ ಅಪ್ಪಣೆ ಕೊಡಿರಿ. ವೈರಿಗಳನ್ನೋಡಿಸದೆ ಹಿಂದಿರುಗಿ ಬಂದರೆ ಗುರುಸಿದ್ಧೇಶ ನಾಣೆ ! ತಲೆದಂಡ ! ತಲೆದಂಡ !"

"ನಿನ್ನ ನಿಷ್ಠೆಯನ್ನು ಮೆಚ್ಚಿಕೊಳ್ಳುತ್ತೇವೆ ಗುರುಸಿದ್ಧಪ್ಪಾ. ಆದರೆ, ಈ ವಿಷಯದಲ್ಲಿ ದುಡುಕಿ ನಿಶ್ಚಯಮಾಡುವಂತಿಲ್ಲ. ಸಂಸ್ಥಾನದ ಮೆದುಳಿನಂತಿರುವ ದಿವಾನರೇ ಒಪ್ಪಂದ ಒಳ್ಳೆಯದೆಂದು ಹೇಳುತ್ತಿರುವಾಗ ನಾವು ವಿಚಾರ ಮಾಡಲೇಬೇಕಲ್ಲವೆ ?"

ಗುರುಸಿದ್ಧಪ್ಪನ ಆವೇಶಕ್ಕೆ ತಣ್ಣೀರನ್ನೆರಚಿದಂತಾಯಿತು. ಆತ

ತಲೆ ತಗ್ಗಿಸಿ ಕುಳಿತುಕೊಂಡವನು ಎಷ್ಟೋ ಹೊತ್ತು ಹಾಗೆಯೇ ಕುಳಿತಿದ್ದ. ಮುಂದಿನ ಮಾತುಕತೆಗಳಲ್ಲಿ ಅವನಿಗೆ ಕೊಂಚವೂ ಆಸಕ್ತಿಯುಳಿಯಲಿಲ್ಲ.

"ವೈರಿಯಿಂದ ಒಪ್ಪಂದಕ್ಕಾಗಿ ಬೇಡಿಕೆ ಬಂದ ಮೇಲಲ್ಲವೇ ಈ ಮಾತು? ಅಧಿಕೃತವಾಗಿ ದೊರೆಗಳಿಗಂತೂ ಅವರಿಂದ ಬಿನ್ನಹವೇನೂ ಬಂದಿಲ್ಲ," ಎಂದು ಹೇಳಿ ಚರ್ಚೆಯ ದಿಸೆಯನ್ನೇ ಹೊರಳಿಸಿದ ವೀರಸಂಗಪ್ಪ.

" ಹೌದು. ಹೌದು. ಸರದಾರರನ್ನುವದೂ ನಿಜ. ಟೀಪುವಿನ ಕಡೆಯವರು ಒಪ್ಪಂದದ ಮಾತನ್ನೇ ಎತ್ತದೆ ನೆಟ್ಟಗೆ ಬಂದು ಮುತ್ತಿಗೆ ಹಾಕಿ ಕುಳಿತರೇನು ಮಾಡುವದು? ಯುದ್ಧ ಮಾಡದೆ ನಾವಾಗಿಯೇ ಅವರಿಗೆ ಶರಣಾಗತರಾಗುವದು ಕಿತ್ತೂರಿಗೆ ಶೋಭಿಸದು."—ಎಂದ, ಗುರುಪುತ್ರಪ್ಪನವರ ವೀರಪ್ಪ.

"ದೊರೆಗಳಿಗೆ ಈಗಲೋ ಇನ್ನೊಂದುಗಳಿಗೆಗೋ ಪತ್ರ ಬರಬಹುದೆಂದು ಕಾಣುತ್ತದೆ. ಅದಕ್ಕೆ ಮೊದಲು ನನಗೆ ಸೂಚನೆ ಕೊಡುವುದೊಳ್ಳೆಯದೆಂದು ಚಾರನನ್ನು ಅಟ್ಟಿರಬೇಕು." ಎಂದ ದಿವಾನ.

" ನಿಮಗೆ ಹೇಳಿಕಳಿಸುವುದಾದರೂ ಕೂಡಾ ನಿಮ್ಮ ಮರ್ಯಾದೆಗೆ ತಕ್ಕಂತೆ ರಾಯಭಾರಿಯನ್ನೂ ಪತ್ರವನ್ನೂ ಕಳಿಸಬೇಕಾಗಿತ್ತು. ಹೀಗೆ, ಕತ್ತಲಲ್ಲಿ ಕಳ್ಳತನದಿಂದ ಚಾರನನ್ನು ಕಳಿಸಲು ಕಾರಣವೇನೋ ನನಗಂತೂ ತಿಳಿಯದು." ಎಂದು ಸೂಚ್ಯವಾಗಿ ಮಾತನಾಡಿದ, ದೊಡ್ಡವಾಡ ರುದ್ರಪ್ಪ.

" ನನಗೂ ಅದೇ ಸೋಜಿಗ,"—ಎಂದ, ಅಂದಾಕಾರಿ ಶಿವರುದ್ರಪ್ಪ.

" ದಿವಾನರನ್ನು ತಮ್ಮ ಕಡೆಗೆ ಒಡೆದುಕೊಳ್ಳಲು ಅವರು ಪ್ರಯತ್ನಿಸಿದರೋ ಏನೋ," ಎಂದು ನುಡಿದು, ಅಷ್ಟು ಹೊತ್ತಿನವರೆಗೂ ಮನಸ್ಸಿನಲ್ಲಿಯೇ ಅಡಗಿಸಿಕೊಂಡಿದ್ದ ಅನುಮಾನವನ್ನು ಪ್ರಕಟಪಡಿಸಿದ ವೀರಸಂಗಪ್ಪ.

" ಹೌದು, ಹಾಗಾಗುವದೂ ಶಕ್ಯವಿದೆ,"—ಎಂದ ಶಿವರುದ್ರಪ್ಪ.

" ಯುದ್ಧ ಮಾಡಬಾರದೆಂದು ದಿವಾನರು ಹೇಳಲಿಕ್ಕೂ ಅದೇ ಕಾರಣವಿರಬಹುದೇ ಅಂತ ನನಗೆ ಆಗಿನಿಂದಲೂ ಅನಿಸುತ್ತಿದೆ,"—ಎಂದ ವೀರಸಂಗಪ್ಪ.

ಗುರುನಾಥಪಂತ ಆಸನದಿಂದ ಸಿಡಿದೆದ್ದು ಮಾತನಾಡಿದ :

"ನನ್ನ ಮೇಲೆ ನಿಮಗೆ ಸಂಶಯವಿದ್ದರೆ ಹಾಗೆ ಸ್ಪಷ್ಟ ಹೇಳಿಬಿಡಿರಿ ವೀರ ಸಂಗಪ್ಪ. ಹೀಗೆ ಸುತ್ತಿ ಬಳಸಿ ಆಡುವದೇನೂ ಅಗತ್ಯವಿಲ್ಲ. ನಾನು ನಿಷ್ಠಾವಂತ ಹೌದೋ ಅಲ್ಲವೋ ಎಂದು ನಿಶ್ಚಯಿಸಲು ದೊರೆಗಳು ಸಮರ್ಥರಿದ್ದಾರೆ."

ದಿವಾನನನ್ನು ಸಾಂತ್ವನಗೊಳಿಸುತ್ತ ಮಲ್ಲಸರ್ಜ ಹೇಳಿದ:

"ಶಾಂತರಾಗಬೇಕು ದಿವಾನರು. ನಿಮ್ಮ ಬಗ್ಗೆ ನಮಗೆ ಸಂಶಯ ಬರುವದು ಶಕ್ಯವೇ ಇಲ್ಲ. ವೀರಸಂಗಪ್ಪನವರ ಮಾತನ್ನು ಗಂಭೀರವಾಗಿ ತೆಗೆದುಕೊಳ್ಳಬಾರದು. ಮರೆತುಬಿಡಬೇಕು."

"ಯುದ್ಧ ಬೇಡವೆಂದು ನನ್ನ ಪ್ರಾಮಾಣಿಕ ಅಭಿಪ್ರಾಯ. ಕಿತ್ತೂರಿನ ರಾಜಮನೆತನದ ಹಿತದ ದೃಷ್ಟಿಯಿಂದಲೇ ನಾನು ಹೀಗೆ ಹೇಳುತ್ತಿದ್ದೇನೆ. ಟೀಪುವಿನ ಕಡೆಯವರು ನನ್ನನ್ನೊಡೆದುಕೊಳ್ಳಲು ಪ್ರಯತ್ನಪಡಬಹುದು. ತಾವಾಗಿಯೇ ಅವರು ನನ್ನ ಹತ್ತಿರ ಚಾರನನ್ನು ಕಳಿಸಿದರೆ ಅದರಲ್ಲಿ ನನ್ನದೇನು ತಪ್ಪಿದೆಯೋ ತಿಳಿಯದು. ನಾನು ಅವರಿಗೆ ಅನುಕೂಲನಾದರೆ ಆ ಮಾತು ಬೇರೆ. ಅಂಥ ಪ್ರಸಂಗದಲ್ಲಿ ದೊರೆಗಳು ವಿಧಿಸುವ ದಂಡನೆಗೂ ನಾನು ಪಾತ್ರನಾಗಬಹುದು. ಆದರೀಗ ಅಂಥ ಸಂದರ್ಭವಿಲ್ಲ. ಒಪ್ಪಂದವಾಗಬೇಕೆಂದು ಅವರೂ ಬಯಸಿದಾರೆ, ನನ್ನ ಸ್ವಂತ ಅಭಿಪ್ರಾಯವೂ ಹಾಗೇ ಇದೆ. ಅಂದಮಾತ್ರಕ್ಕೆ ನಾನು ವೈರಿಗಳ ಕಡೆ ಒಡೆದಿರಬಹುದೆಂದು ತಿಳಿಯುವದೆಂದರೆ ನನ್ನ ಮೇಲೆ ಅನ್ಯಾಯ ಮಾಡಿದಂತೆಯೇ ಅಲ್ಲವೇ ಪ್ರಭು?"

"ಹೌದು ಪಂತರೆ. ನಿಮ್ಮ ಬಗ್ಗೆ ಸಂಶಯ ವ್ಯಕ್ತಗೊಳಿಸಿದರೂ ಕೂಡಾ ಅನ್ಯಾಯವೇ ಆದಂತಾಗುತ್ತದೆ."

"ವೀರಸಂಗಪ್ಪನವರು ಇದೇ ಈಗ ಅಂದಮಾತನ್ನು ಹಿಂದೆಗೆದುಕೊಳ್ಳಬೇಕು," ಎಂದ ಗುರುನಾಥಪಂತ.

"ಕ್ಷಮಿಸಬೇಕು. ಸಮಾಚಾರ ವಿಚಾರಮಾಡಿಯೇ ನಾನು ಆ ಮಾತು ಅಂದಿದೇನೆ. ಅದನ್ನು ಹಿಂದೆಗೆದುಕೊಳ್ಳಲು ನನಗೇನೂ ಮನಸ್ಸಿಲ್ಲ," ಎಂದ ವೀರಸಂಗಪ್ಪ.

"ಅಂದರೆ? ನಾನು ದ್ರೋಹಿಯೆಂದೇ ನೀವು ಹೇಳಿದಂತಾಯಿತು,"

"ನೀವು ದ್ರೋಹಿಯೆಂದು ನಾನೇನೂ ಅನ್ನಲಿಲ್ಲ, ಈಗಲೂ ಅನ್ನುತ್ತಿಲ್ಲ. ಆದರೆ, ನಿಮ್ಮ ಬಗ್ಗೆ ನನಗೆ ಸಂಶಯ ಮಾತ್ರ ಖಂಡಿತವಾಗಿಯೂ ಇದೆ. ಪ್ರತ್ಯಕ್ಷವಾದ ರೀತಿಯಲ್ಲಿ ಹಗಲಿನಲ್ಲಿಯೇ ಎಲ್ಲರಿಗೂ ಗೊತ್ತಾಗುವಂತೇ ರಾಯಭಾರಿಯನ್ನ ಕಳಿಸಿ ಸಂಧಾನಕ್ಕೆ ಯತ್ನಿಸಬೇಕಾದವರು, ಬೇರೆ ಎಲ್ಲರನ್ನೂ ಬಿಟ್ಟು ನಿಮ್ಮೊಬ್ಬರಿಗೇ ರಾತ್ರಿಯ ಕತ್ತಲಲ್ಲಿ ಗುಟ್ಟಾಗಿ ಹೇಳಿ ಕಳಿಸಬೇಕಾದರೆ ನಿಮಗೂ ಅವರಿಗೂ ಮೊದಲಿನಿಂದಲೂ ಒಳಗೊಳಗೇ ಏನೋ ಸಂಬಂಧವಿರಲು ಸಾಕು."

ಕುಳಿತುಕೊಂಡಿದ್ದ ದಿವಾನ ಪುನಃ ಎದ್ದು, ಸಂತಾಪದಿಂದ ಮೈಯೆಲ್ಲ ಕಂಪಿಸುತ್ತಿರಲು ದೊರೆಯತ್ತ ತಿರುಗಿ ಹೇಳಿದ:

"ನನ್ನ ಮೇಲೆ ಇವರು ಮಾಡುತ್ತಿರುವ ಭಯಂಕರ ಆರೋಪಗಳನ್ನು ತಾವೂ ಕೇಳಿಕೊಂಡಿದೀರಿ ಪ್ರಭೂ. ನನ್ನ ರಾಜನಿಷ್ಠೆ, ದೇಶನಿಷ್ಠೆ, ಸತ್ಯನಿಷ್ಠೆ ಪ್ರಾಮಾಣಿಕತನ, ಎಲ್ಲವನ್ನೂ ಇವರು ಪ್ರಶ್ನಿಸಿದ್ದಾರೆ. ನನ್ನ ಮೇಲೆ ಹೊರಿಸಿದ ಆರೋಪಗಳನ್ನು ಇವರು ಸಿದ್ಧಮಾಡಿ ತೋರಿಸಬೇಕು, ಅಥವಾ ಈ ಮಾತುಗಳನ್ನು ಹಿಂದೆಗೆದುಕೊಂಡು ಪ್ರಭುಗಳ ಮತ್ತು ಸಭಿಕರ ಕ್ಷಮೆ ಬೇಡಬೇಕು. ನನ್ನ ಮರ್ಯಾದೆಯ ದೃಷ್ಟಿಯಿಂದ ಈ ವಿಚಾರ ಈಗಲೇ ಇತ್ಯರ್ಥವಾಗಲೇಬೇಕು."

ಈ ಪ್ರಕರಣವನ್ನು ಈಗಲೇ ಕೊನೆಗಾಣಿಸಿಬಿಡುವುದೇ ಒಳ್ಳೆಯದೆಂದು ಮಲ್ಲಸರ್ಜನಿಗೂ ತೋರಿತು. ಅಂತೆಯೇ ಆತ ವೀರಸಂಗಪ್ಪನನ್ನು ಕುರಿತು,

"ಶತ್ರುಗಳಿಗೂ ದಿವಾನರಿಗೂ ಮೊದಲಿನಿಂದ ಸಂಬಂಧವಿದ್ದಿತೆಂದು ಯಾವ ಆಧಾರದ ಮೇಲೆ ಹೇಳುತ್ತೀರಿ?" ಎಂದು ವಿಚಾರಿಸಿದ.

"ಸಂಬಂಧ ಇದ್ದೇ ಇದ್ದಿತೆಂದು ನಾನೇನು ಅನ್ನಲಿಲ್ಲ ಸರಕಾರ್. ಇವರೂ ಅವರೂ ಒಬ್ಬರೊಬ್ಬರ ಸಂಗಡ ವರ್ತಿಸುತ್ತಿರುವ ರಹಸ್ಯದ ರೀತಿಯನ್ನ ಕಂಡು—ಏನಾದರೂ ಸಂಬಂಧವಿರಬಹುದೆಂದು ನನಗನಿಸಿತು—ನನಗೆ ಮಾತ್ರ ಅಲ್ಲ—ಯಾರಿಗಾದರೂ ಅನಿಸಬಹುದು. ಯಾಕ್ರೀ, ಶಿವರುದ್ರಪ್ಪನವರೆ, ನಿಮಗೂ ಅನಿಸುವದಿಲ್ಲವೇನು?"

"ಹೌದು ಪ್ರಭು. ಸಂಶಯ ಬರುವದೇನು ಸುಳ್ಳಲ್ಲ."

" ನಾಡಿಗೆ ಗಂಡಾಂತರ ಬಂದಿರುವ ಈ ವೇಳೆಯಲ್ಲಿ ನಾವು ನಾವೇ ಹೀಗೆ ಒಬ್ಬರೊಬ್ಬರ ಬಗ್ಗೆ ಸಂಶಯಪಟ್ಟುಕೊಳ್ಳುತ್ತಾ ಕೂತರೆ ಘಾತವಾದೀತು. ದಿವಾನರಂತೂ ನಮ್ಮ ಹಿತಕ್ಕಾಗೇ ಸಂಧಾನದ ಮಾತು ಆಡುತ್ತಿದ್ದಾರೆ. ಅವರ ಬಗ್ಗೆ ಅಲ್ಲದ ಮಾತಾಡುವುದು ತಪ್ಪು," ಎಂದು ಹೇಳಿ ಆ ಚರ್ಚೆಯನ್ನು ಅಲ್ಲಿಗೇ ಮುಕ್ತಾಯಗೊಳಿಸಿದ ಮಲ್ಲಸರ್ಜ.

" ಹಾಗಾದರೆ ನಾವೀಗ ಯುದ್ಧದ ಸಿದ್ಧತೆ ಮಾಡುವುದು ಬೇಡವೇ ಪ್ರಭೂ ?"

" ನಮ್ಮ ಸಿದ್ಧತೆಯಲ್ಲಿ ನಾವಿರುವದೊಳ್ಳೆಯದೇ. ವೈರಿಗಳು ಬಂದು ದಾಳಿಯಿಟ್ಟರೆ ಹೋರಾಟ ಮಾಡಲೇಬೇಕಾಗುತ್ತದೆ. ಆದಕ್ಕಾಗಿ ಸಕಲ ಸಿದ್ಧತೆಯೂ ಆಗಲಿ," ಎಂದು ಹೇಳಿ ಮಲ್ಲಸರ್ಜ ಅಂದಿನ ಅವಸರದ ಸಭೆಯನ್ನು ವಿಸರ್ಜಿಸಿದ.

೫

ದೊರೆಯ ಅಪ್ಪಣೆಯಂತೆ ಕೋಟೆಯಲ್ಲಿ ಯುದ್ಧದ ಸಿದ್ಧತೆ ಭರದಿಂದ ಸಾಗಿದ್ದಿತಾದರೂ ಆ ಕಾರ್ಯದಲ್ಲಿ ನಿರತರಾಗಿದ್ದವರಾರಿಗೂ ಆ ವಿಚಾರದಲ್ಲಿ ಉತ್ಸಾಹವುಳಿದಿರಲಿಲ್ಲ. ಎಲ್ಲರೂ ತಮ್ಮ ತಮ್ಮ ಪಾಲಿನ ಕೆಲಸಗಳನ್ನು ಯಾಂತ್ರಿಕವಾಗಿ ನೆರವೇರಿಸುತ್ತಿದ್ದರು, ಅಷ್ಟೆ. ವೀರಸಂಗಪ್ಪ, ಗುರುಸಿದ್ದಪ್ಪ, ಮಡಿವಾಳ ಮೊದಲಾದವರಿಗಂತೂ ಘೋರ ನಿರಾಸೆಯಾಗಿತ್ತು. ವೀರಸಂಗಪ್ಪ ಮನೆಗೂ ಹೋಗದೆ ಕೋಟೆಯಲ್ಲಿನ ಸೇನಾಪತಿಯ ಕಾರ್ಯಾಗಾರದಲ್ಲಿಯೇ ಒಂದು ಮೂಲೆ ಹಿಡಿದು ಒರಗಿಕೊಂಡಿದ್ದ. ಸ್ನಾನ–ಪೂಜೆ–ಊಟ ಯಾವುದರಲ್ಲೂ ಅವನಿಗೆ ಆಸಕ್ತಿಯುಳಿದಿರಲಿಲ್ಲ.

" ಹೀಗೆ ಮಾಡಿದರೆ ಹ್ಯಾಗೆ ಸರದಾರರೇ ? ಮನೆಗೆ ಹೋಗಿ ಸ್ನಾನ ಪೂಜೆ ಮುಗಿಸಿಕೊಂಡು ಬರ್‍ರಿ. ಮನೆಯವರು ಕಾಯುತ್ತಿರಬಹುದು," ಎಂದು ತಿಮ್ಮನಗೌಡ ನಾಲ್ಕೈದು ಬಾರಿ ಹೇಳಿದರೂ ಪ್ರಯೋಜನವಾಗಲಿಲ್ಲ. ವೀರಸಂಗಪ್ಪ ತನ್ನ ಸ್ಥಳದಿಂದ ಏಳಲೇ ಇಲ್ಲ.

" ದೊರೆಗಳ ಅಪ್ಪಣೆಯಾದಂತೆ ನಾವೆಲ್ಲಾ ಮಾಡಲಿಕ್ಕೇ ಬೇಕಲ್ಲ ಸರ

ದಾರರೆ? ಯುದ್ಧ ಬೇಡ ಅಂತ ಅವರಿಗೇ ಅನಿಸಿದರೆ ಅವರ ಅಪ್ಪಣೆ ಮುರಿದು ನಾವು ಯುದ್ಧ ಹೂಡಲಿಕ್ಕಾಗುತ್ತದೇನು?"

"ಇದು ದೊರೆಗಳ ಅಪ್ಪಣೆಯಾಗಿದ್ದರೆ ನನಗೇನೂ ಅನಿಸುತಿರಲಿಲ್ಲ ನಾಯಕರೆ—ಆದರಿದು ದಿವಾನರ ಅಪ್ಪಣೆ. ಅವರ ಮಾತಿನಂತೇ ದೊರೆಗಳೂ ನಡೆದುಕೊಳ್ಳುತಾರೆ."

"ಅದಕ್ಕೆ ಯಾರೇನು ಮಾಡುವಂತಿದೆ? ಸದ್ಯಕ್ಕಂತೂ ದೊರೆಗಳಲ್ಲಿ ದಿವಾನರ ಮಾತೇ ನಡೀತದೆ. ಅದಕ್ಕುಪಾಯವಿಲ್ಲ."

"ಕಿತ್ತೂರಿನ ಮರ್ಯಾದೆಯನ್ನ ಕಾಸಿಗೆ ಪಂಚೇರಾಗಿ ಮಾರಿಬಿಡ್ತಾನೆ ಈ ದಿವಾನ. ದೊರೆಗಳಿಗೆ ಇದು ತಿಳಿಯದಾಗಿದೆ. ಎಂಥಾ ದುರ್ದೈವ ನಮ್ಮದು!"

"ಇನ್ನೂ ಆಸೆಯಿದೆಯಲ್ಲ ಸರದಾರರೆ? ಟೀಪುವಿನಂದಂತೂ ಇದುವರೆಗೂ ಯಾವ ಸುದ್ದಿಯೂ ತಿಳಿಯಲಿಲ್ಲ. ಅವರು ಬಂದು ಒಮ್ಮೆಲೇ ಮುತ್ತಿಗೆ ಹಾಕಿದರೆಂದರೆ ಯುದ್ಧ ಇದ್ದೇ ಇದೆಯಲ್ಲ?"

ಆದರೆ, ಎರಡು ದಿನ ಕಳೆದರೂ ಟೀಪುವಿನ ಸೇನೆಯಿಂದ ಯಾವ ವಾರ್ತೆಯೂ ಬರಲಿಲ್ಲ. ಮೂರನೆಯ ದಿನ ರಾಯಭಾರಿಯೊಬ್ಬನ ಮುಖಾಂತರ ಪತ್ರವೊಂದು ಬಂತು. ತಾನು ಕಿತ್ತೂರಿಗೆ ಸ್ನೇಹಿತನಂತೆ ಬರುತ್ತಿರುವುದಾಗಿ ತಿಳಿಸಿ, ತನ್ನನ್ನೂ ತನ್ನ ಸೇನೆಯನ್ನೂ ಸ್ನೇಹ-ವಿಶ್ವಾಸಗಳಿಂದಲೇ ಸ್ವಾಗತಿಸಲಾಗುವುದೆಂದು ಆಶಿಸಿ ಬುರ್ಹಾನುದ್ದೀನ್ ಆ ಪತ್ರ ಬರೆಸಿದ್ದ. ನಯ—ವಿನಯ-ಸೌಜನ್ಯ—ಶಿಷ್ಟಾಚಾರಗಳಿಂದೊಡಗೂಡಿದ ಆ ಕಾಗದ ಎಂಥವರನ್ನೂ ಮರುಳುಗೊಳಿಸುವಂತಿತ್ತು. ದರಬಾರದಲ್ಲಿನ ಅನೇಕ ಜನರು ಸಹಜವಾಗಿಯೇ ಆ ನಯದ ಬಲೆಗೆ ಬಿದ್ದರು.

ಊಟೋಪಚಾರ ವಿಶ್ರಾಂತಿಗಾಗಿ ರಾಯಭಾರಿಯನ್ನು ಅತಿಥಿಗೃಹಕ್ಕೆ ಕಳಿಸಿಕೊಟ್ಟ ತರುವಾಯ ಮತ್ತೆ ಆಲೋಚನಾ ಸಭೆ ಸೇರಿತು. ಪತ್ರದ ಮೋಡಿಗೆ ಮರುಳಾಗಿದ್ದ ಸರದಾರರೆಲ್ಲರೂ ಬುರ್ಹಾನುದ್ದೀನನನ್ನು ನೆಚ್ಚಿಕೆಯಿಂದ ಬರಮಾಡಿಕೊಂಡು ಸ್ನೇಹಿತರಿಗೆ ತಕ್ಕ ಆತ್ಮೀಯತೆಯಿಂದ ಸತ್ಕರಿಸಬೇಕೆಂದು ಅಭಿಪ್ರಾಯಪಟ್ಟರು. ತಿಮ್ಮನಗೌಡ, ಗುರುಸಿದ್ದಪ್ಪ, ಮಡಿವಾಳ, ವೀರಸಂಗಪ್ಪ ಮೊದಲಾದವರಿಗೆ ಮಾತ್ರ ಇದಾವುದೂ ಒಪ್ಪಿಗೆಯಾಗಲಿಲ್ಲ.

"ಬುರ್ಹಾನುದ್ದೀನನ ಸ್ವಭಾವವನ್ನ ನಾನು ಅಷ್ಟಿಷ್ಟು ಬಲ್ಲೆ ಪ್ರಭೂ. ಪತ್ರದಲ್ಲಿ ಬರೆದಂತೆ ಅವನು ಗೆಳೆಯನಾಗಿಯೇ ಇಲ್ಲಿಗೆ ಬರುತ್ತಿರುವನೆಂದು ನಂಬಲು ನನಗಂತೂ ಆಗುವದಿಲ್ಲ," ಎಂದ ತಿಮ್ಮನಗೌಡ.

"ಟೀಪುಸಾಹೇಬ ಅವನ ಸೇನಾಪತಿ ಇಬ್ಬರೂ ಬಹಳ ಧೂರ್ತರಿದಾರೆ ಪ್ರಭೂ. ಕೂದಲೆಳೆಯಿಂದ ಕುತ್ತಿಗೆ ಕೊಯ್ಯುವ ಆ ಕಟುಕರನ್ನು ನಂಬಬಾರದೆಂದೇ ನನ್ನ ಅಭಿಪ್ರಾಯ," ಎಂದ ವೀರಸಂಗಪ್ಪ.

"ನರಗುಂದದಲ್ಲಿ ಅವರು ಮಾಡಿದ ಮೋಸಕೃತ್ಯ ಸ್ವಲ್ಪ ಸ್ವಲ್ಪ ಗೊತ್ತಾಗ್ತಾ ಇದೆ ಪ್ರಭೂ. ಎಂಟು ಹತ್ತು ತಿಂಗಳಿಂದ ಮುತ್ತಿಗೆ ಹಾಕಿದರೂ ನರಗುಂದ ಕೋಟೆ ಅವರ ಕೈಗೆ ಸಿಗಲಿಲ್ಲ ಅಂತ ಭೇದೋಪಾಯ ಮಾಡಿ ತೊರಗಲ್ಲ ಕಾಜಿಯ ಮಧ್ಯಸ್ತಿಕೆಯಿಂದ ಕಾಳೋಪಂತ ಪೇಶೆಯವರನ್ನ ಸೆರೆಹಿಡಿದರಂತೆ."—ಎಂದ ಗುರುಸಿದ್ಧಪ್ಪ.

ನರಗುಂದದಲ್ಲಿ ನಡೆದ ಘಟನೆಗಳ ವಿಚಾರವಾಗಿ ಮಲ್ಲಸರ್ಜನಿಗೆ ವಿವರಗಳಾವುವೂ ತಿಳಿದುಬಂದಿರಲಿಲ್ಲ. ಕೆಲವೇ ದಿನಗಳ ಹಿಂದೆಯಷ್ಟೇ ಬುರ್ಹಾನುದ್ದೀನ ನರಗುಂದವನ್ನು ಕೈವಶಪಡಿಸಿಕೊಂಡು ಅಲ್ಲಿ ಸ್ವಲ್ಪ ಸೇನೆಯನ್ನಿಟ್ಟು ಇತ್ತ ಹೊರಟುಬಂದಿದ್ದನೆಂಬುದಷ್ಟೆ ಅವನಿಗೆ ಗೊತ್ತಿತ್ತು. ನಿಜವಾಗಿಯೂ ಅಲ್ಲಿ ನಡೆದಿದ್ದುದೇನೆಂಬುದು ಮಲ್ಲಸರ್ಜನಿಗಾಗಲಿ ಕಿತ್ತೂರಿನ ಇತರ ಜನರಿಗಾಗಲಿ ತಿಳಿದಿರಲಿಲ್ಲ.

"ಅಲ್ಲಿ ನಿಜವಾಗಿ ನಡೆದದ್ದಾದರೂ ಏನು ಗುರುಸಿದ್ದಪ್ಪ?"

"ನರಗುಂದ ಯವನರ ಕೈಗೆ ಹೋಗುವ ಮೊದಲೇ ಅಲ್ಲಿಂದ ಓಡಿ ಇಲ್ಲಿಗೆ ಬಂದ ಕುಟುಂಬದವರು ಕೆಲವರು ನನಗೆ ಭೆಟ್ಟಿಯಾಗಿದ್ದರು ಪ್ರಭೂ. ಅವರಿಂದಲೇ ನನಗೆ ಅಲ್ಲಿನ ಸಂಗತಿಯೆಲ್ಲಾ ಗೊತ್ತಾದದ್ದು. ಏಳೆಂಟು ತಿಂಗಳ ಹಿಂದೆಯೇ ಟೀಪೂನ ದಂಡು ನರಗುಂದಕ್ಕೆ ಮುತ್ತಿಗೆ ಹಾಕಿದ್ದು ತಮಗೆ ಗೊತ್ತೇ ಇದೆ. ಅದನ್ನ ಓಡಿಸಲಿಕ್ಕಾಗಿ ಪೇಶವೆಯರ ಪರಶುರಾಮ ಭಾವು ಮತ್ತು ಗಣೇಶಪಂತ ಬೆಹರೆ ಬಂದದ್ದೂ ತಮಗೆ ಗೊತ್ತಿದೆ. ಅಷ್ಟರಲ್ಲಿ ಟೀಪೂವಿನ ದಂಡಿಗೆ ಮತ್ತೆ ಹತ್ತು ಸಾವಿರದಷ್ಟು ಸೇನೆ ಬಂದು ಕೂಡಿತು. ಅದನ್ನು ನೋಡಿ ಪರಶುರಾಮ ಭಾವು ಅಂಜಿ, ಯುದ್ಧ ಮಾಡದೆ ಹಾಗೇ ಹಿಂದೆ ಸರಿಯುತ್ತ ಕೃಷ್ಣಾನದಿಯ ವರೆಗೆ

ಹೊರಳಿಹೋದ. ಆ ಸಂಧಿ ಸಾಧಿಸಿ ಬುರ್ಹಾನುದ್ದೀನ್, ಸುಲಭದಲ್ಲಿ ನರಗುಂದವನ್ನ ಹಿಡಿದುಕೊಂಡ. ಆಗಲೂ ಅಲ್ಲಿಯ ದೊರೆ ವೆಂಕಟ ರಾಯರೂ ಕಾರಭಾರಿ ಕಾಳೋಪಂತರೂ ಶರಣುಹೋಗಲು ತಯಾರಿರಲಿಲ್ಲ. ಹೇಗಾದರೂ ಮಾಡಿ ಅವರನ್ನ ಹಿಡಿಯಬೇಕೆಂದು ಮುಸಲತ್ತು ಮಾಡಿದ ವೈರಿಗಳು ತೊರಗಲ್ಲ ಕಾಜಿಯನ್ನ ಕರೆಸಿ ಅವನ ನಂಬಿಕೆಕೊಟ್ಟು, ರಾಜರಿಗೂ ಕಾರಭಾರಿಗಳಿಗೂ ಏನೂ ಅಪಾಯವಾಗದೆಂದು ಭರವಸೆ ಕೊಟ್ಟು ಅವರು ಶರಣು ಬರುವಂತೆ ಮಾಡಿದರು...."

"ನರಗುಂದದ ರಾಜರೂ ಕಾರಭಾರಿಗಳೂ ಈಗ ಎಲ್ಲಿದಾರೆ ಗುರು ಸಿದ್ಧಪ್ಪ?"

"ಅವರನ್ನೂ ಅವರ ಮನೆಯವರನ್ನೂ ಶ್ರೀರಂಗಪಟ್ಟಣಕ್ಕೆ ಕಳಿಸಿ ಕೊಟ್ಟರಂತೆ ಪ್ರಭೂ. ಅಲ್ಲಿ ಅವರ ಗತಿಯೇನಾಯಿತೋ ಗೊತ್ತಿಲ್ಲ."

"ಅವರನ್ನು ಮುಸಲ್ಮಾನರನ್ನಾಗಿ ಮಾಡಲು ಟೀಪು ಪ್ರಯತ್ನಿಸ ಬಹುದು. ಅವನ ಅಪ್ಪಣೆಯಂತೆ ನಡೆದುಕೊಂಡರೋ–ಅವರು ಉಳಿಯು ತ್ತಾರೆ. ಇಲ್ಲದಿದ್ದರೆ ಸಾವಿರಾರು ಜನರಿಗಾದ ಗತಿಯೇ ಅವರಿಗೂ ಆಗು ವುದು ಖಂಡಿತ—" ಎಂದ ವೀರಸಂಗಪ್ಪ.

"ಕಾಜಿಯ ನಂಬಿಕೆ ಕೊಟ್ಟು ಕರೆದೊಯ್ದ ಮೇಲೆ ಹೀಗೆ ವಿಶ್ವಾಸ ಘಾತ ಮಾಡುವರೇನು? ಅವರಿಗೇನೂ ಅಪಾಯವಾಗಲಿಕ್ಕಿಲ್ಲ ಅಂತಲೇ ಅನಿಸ್ತದೆ ಪ್ರಭೂ,"—ಎಂದ ಸಣ್ಣ ಚೆನ್ನಪ್ಪ.

"ಟೀಪೂನ ಸ್ವಭಾವ ನಿಮಗೆ ಸ್ವಲ್ಪಕೂಡಾ ಗೊತ್ತಿಲ್ಲ. ಗೊತ್ತಿದ್ದರೆ ನೀವು ಹೀಗೆ ಮಾತಾಡುತ್ತಿರಲಿಲ್ಲ."—ಎಂದ ಗುರುಸಿದ್ಧಪ್ಪ,

"ಏನು ಪಂತಜಿ? ನಿಮ್ಮ ಅಭಿಪ್ರಾಯವೇನು?"

"ನನ್ನ ಅಭಿಪ್ರಾಯ?" ಗುರುನಾಥಪಂತ ದೊರೆಯ ಕಡೆ ಹೊರಳಿ, ಒಂದು ಕ್ಷಣ ತಡೆದು, ಗಂಟಲು ಸರಿಪಡಿಸಿಕೊಂಡು ನಿಧಾನವಾಗಿ ಮಾತ ನಾಡಿದ. "ಟೀಪೂ ಸಾಹೇಬರ ಚಾರಿತ್ರ್ಯವನ್ನ ನಾನು ತಕ್ಕಮಟ್ಟಿಗೆ ಬಲ್ಲೆ ಪ್ರಭೂ. ತಮ್ಮ ಧರ್ಮದ ಬಗ್ಗೆ ಅವರಿಗೆ ಸಹಜವಾಗಿಯೇ ಗಾಢ ಅಭಿ ಮಾನ ಇದೆ—ನಮಗೆ ನಿಮಗೆ ಎಲ್ಲರಿಗೂ ಇರುವ ಹಾಗೇ. ಇಸ್ಲಾಂ ಧರ್ಮ ವನ್ನ ಎಲ್ಲ ಕಡೆಗೂ ಪ್ರಸಾರ ಮಾಡುವದೇ ತಮ್ಮ ಜೀವನದ ಉದ್ದೇಶ

ಅಂತ ಅವರು ಎಷ್ಟೋ ಸಾರಿ ಸ್ಪಷ್ಟವಾಗಿಯೇ ಹೇಳಿದಾರೆ. ಅಲ್ಲಿ ಇಲ್ಲಿ ಸೆರೆ ಸಿಕ್ಕ ಜನರನ್ನು ಮತಾಂತರಗೊಳಿಸಿ ಇಸ್ಲಾಂ ಧರ್ಮಕ್ಕೆ ಸೇರಿಸಿ ಕೊಳ್ಳಲು ಅವರು ಯತ್ನಿಸಿದ್ದೂ ನಿಜವೇ. ಆದರೂ—ಈ ಸಮಯದಲ್ಲಿ, ಅವರ ಮಾತು ನಂಬಿ ಬಂದ ಈ ಬ್ರಾಹ್ಮಣರಾರನ್ನೂ ಅವರ ಕಾರಭಾರಿ ಗಳನ್ನೂ ಟೀಪುಸುಲ್ತಾನರು ಕುಲಗೆಡಿಸಲಿಕ್ಕಿಲ್ಲ ಅಂತಲೇ ನನಗನಿಸ್ತದೆ. ಆದಗೂ, ದುಷ್ಟರಾದ ಸಲಹೆಗಾರರ ಮಾತಿಗೆ ಬಲಿಬಿದ್ದು ಒಂದು ವೇಳೆ ಕುಲ ಗೆಡಿಸಲೂ ಸಾಧ್ಯವಿದೆ."

"ಧರ್ಮಾಭಿಮಾನಿಗಳಾದ ಆ ಬ್ರಾಹ್ಮಣರು ಗೋಮಾಂಸ ತಿಂದು ಜೀವ ಉಳಿಸಿಕೊಳ್ಳಲು ಸಾಧ್ಯವೇ ಪಂತಜಿ?"

"ಅದು ಮಾತ್ರ ಅಶಕ್ಯವೆಂದೇ ಕಾಣುತ್ತದೆ ಪ್ರಭೂ. ಅವರು ಪ್ರಾಣ ಕೊಡಬಹುದೇ ಹೊರತು ಗೋಮಾಂಸ ತಿನ್ನುವುದು ಶಕ್ಯವಿಲ್ಲ."

"ಹಾಗಾದರೆ ಅವರ ಜೀವ ಹೋಗುವ ಸಂಭವವೂ ಇದೆಯೆ?"

"ಈ ಲೋಕದಲ್ಲಿ ಯಾವುದರ ಭರವಸೆಯಿದೆ ಪ್ರಭೂ? ಒಂದ ಲ್ಲೊಂದು ದಿನ ಎಲ್ಲರ ಜೀವವೂ ಹೋಗಲೇಬೇಕಲ್ಲವೆ?"

"ರಾಜಕಾರಣದ ಮಾತು ನಡೆದಾಗ ಇಂಥ ವೇದಾಂತದಿಂದೇನು ಉಪಯೋಗವೊ ನನಗಂತೂ ತಿಳಿಯದು. ನಮಗೇನು ಗೊತ್ತಿಲ್ಲವೇ ಈ ಸಂಗತಿ? ಹುಟ್ಟಿದವರಿಗೆ ಸಾವು ತಪ್ಪುವದಿಲ್ಲ. ಇಂದಲ್ಲ ನಾಳೆ ಎಲ್ಲರೂ ಸಾಯತಕ್ಕವರೇ. ಹಾಗೆಂದು ಟೀಪುವಿನಂಥ ವೈರಿಗಳ ಕೈಲಿ ಸಿಕ್ಕು ದುರ್ಮರಣಕ್ಕೊಳಗಾಗಬೇಕು ಅಂತೀರೇನು?" ಎಂದು ಗುರುಸಿದ್ಧಪ್ಪ ಸವಾಲು ಹಾಕಿದ.

"ದುರ್ಮರಣಕ್ಕೊಳಗಾಗಬೇಕೆಂಬುದು ನನ್ನ ಅಭಿಪ್ರಾಯವಲ್ಲ ಪ್ರಭೂ. ಟೀಪು ಎಷ್ಟೇ ದುಷ್ಟನಿದ್ದರೂ ಕೆಲವು ಒಳ್ಳೆಯ ಗುಣಗಳೂ ಅವನಲ್ಲಿವೆ. ಅವನನ್ನು ಸಂಪೂರ್ಣ ತಿರಸ್ಕರಿಸದೆ, ಸ್ನೇಹ ಹಸ್ತ ನೀಡಿ ಮುಂದೆ ಬಂದಿ ರುವ ಅವನನ್ನು ಈಗ ಸ್ವಾಗತಿಸಿ, ಅನಾವಶ್ಯಕವಾದ ನರಮೇಧವನ್ನ ತಪ್ಪಿಸಬೇಕೆಂದೇ ನನ್ನ ವಿಚಾರ. ಈ ವಿಚಾರ ಸರಿಯುಲ್ಲವೆಂದು ತಮಗನಿ ಸಿದರೆ ಆ ಮಾತು ಬೇರೆ."

"ಸ್ನೇಹಿತರಂತೆ ಅವರನ್ನ ಸ್ವಾಗತಿಸಬೇಕು ಅಂದರೆ ಹ್ಯಾಗೆ?

ಅವರೂ ಅವರ ಸೇನೆಯೂ ನೆಟ್ಟಗೇ ನಮ್ಮ ಕೋಟೆಯೊಳಗೇ ಬಂದು ಬೀಡು ಬಿಡುವದೋ ಏನು ?"—ಎಂದ ದೊಡ್ಡವಾಡ ರುದ್ರಪ್ಪ.

"ಅದೆಲ್ಲಾ ಹ್ಯಾಗೆ ಸಾಧ್ಯ? ಹಾಗೆ ಅವರ ಸೇನೆಯೂ ನೆಟ್ಟಗೇ ನಮ್ಮ ಕೋಟೆಯೊಳಗೇ ಸೇರಲಿಕ್ಕೆ ನಾವೇನು ಹುಚ್ಚರೇ? ಏನೂ ಕಷ್ಟ ವಿಲ್ಲದೆ ಕಿತ್ತೂರನ್ನ ಅವರ ಕೈಗೊಪ್ಪಿಸಿದಂತಾದೀತಲ್ಲ?"—ಎಂದ ಶಿವ ರುದ್ರಪ್ಪ.

"ಅವರಾದರೂ ಸೇನೆಯನ್ನ ಕೋಟೆಗೇಕೆ ತಂದಾರು? ಬಿಡಿರಿ. ದೂರ ಎಲ್ಲಾದರೂ ಪಾಳಯ ಹಾಕಬಹುದು. ಬುರ್ಹಾನುದ್ದೀನ, ವೆಂಕಟ ರಂಗಯ್ಯ ಮತ್ತು ಕೆಲವರು ಸರದಾರರು ಬಂದು ದೊರೆಗಳ ಆತಿಥ್ಯ ಸ್ವೀಕ ರಿಸಿ ಹೋಗಬಹುದು,"—ಎಂದ ಸಣ್ಣ ಚೆನ್ನಪ್ಪ.

"ಅಂದರೆ? ಟೀಪೂವಿನ ದಂಡು ಬಂದ ಹಾಗೇ ಹೊರಟುಹೋಗ ಬಹುದು ಅಂತೀರಾ?"—ಎಂದ ಗುರುಸಿದ್ಧಪ್ಪ.

"ಸ್ನೇಹಿತರಾಗಿ ಬಂದವರು, ಸ್ನೇಹಿತರಾಗೇ ಹೊರಟು ಹೋಗ ಬೇಕಲ್ಲ?"—ಎಂದ ರುದ್ರಪ್ಪ.

"ಆಮೇಲೆ ಅವರಿಗೂ ನಮುಗೂ ಎಂಥ ಸಂಬಂಧ? ನಾವು ಅವರ ಮಾಂಡಲೀಕರೋ, ಅಥವಾ ಸರಿಸಮಾನರಾದ ಸ್ನೇಹಿತರೋ?"—ಎಂದ ಗುರುಸಿದ್ಧಪ್ಪ.

"ಸ್ನೇಹಿತರು ಅಂದಮೇಲೆ ಸರಿಸಮಾನರು ಅಂತ ಅರ್ಥವೇ ಆಯಿತಲ್ಲ?"

"ದಕ್ಷಿಣಾಪಥವನ್ನೆಲ್ಲಾ ಗೆದ್ದು ಏಕೈಕ ಬಾದಷಹಾ ಆಗಿ ಮೆರೆಯ ಬೇಕಂತ ಸಂಕಲ್ಪಿಸಿರುವ ಟೀಪು ಸರಿಸಮಾನರಾದ ಸ್ನೇಹಿತರನ್ನೇಕೆ ಇಟ್ಟು ಕೊಂಡಾನು? ಸ್ವಲ್ಪ ವಿಚಾರಮಾಡಿ ನೋಡಿರಿ. ಮೈಸೂರಿನ ಸುತ್ತ ಮುತ್ತ ಸ್ವತಂತ್ರವಾಗಿ ಉಳಿದಿರುವ ಟೀಪೂನ ಸ್ನೇಹಿತರು ಯಾರಾದರೂ ಇದ್ದಾರೋ? ತಾನೆಂದರೆ ಅಲ್ಲಾನ ಪ್ರತಿನಿಧಿ—ತನಗೆ ಸರಿಸಮಾನರಾದ ವರು ಈ ಪ್ರಪಂಚದಲ್ಲಿರುವದೇ ಶಕ್ಯವಿಲ್ಲಂತ ಅವನ ಕಲ್ಪನೆ. ಅಂಥ ಟೀಪು ಕಿತ್ತೂರನ್ನು ಸಮಾನತೆಯಿಂದ ನಡಸಿಕೊಳ್ಳುವದು ಶಕ್ಯವೇ ಇಲ್ಲ—"ಎಂದ ತಿಮ್ಮನಗೌಡ.

“ಹಾಗಾದರೆ ನಾವು ಅವನ ಮಾಂಡಲಿಕರಾಗೇ ಇರಬೇಕಾಗಿರುವದು ಅನ್ನಿರಿ.

“ಅದಂತೂ ಸ್ಪಷ್ಟವೇ ಇದೆ. ಈ ಸ್ನೇಹದ ಮಾತುಗಳೆಲ್ಲಾ ಕಾಗದ ಪತ್ರಗಳಲ್ಲಿ, ಅಷ್ಟೆ. ರಕ್ತಪಾತವಿಲ್ಲದೇನೇ ಕೋಟೆ ಸಿಗಲಿ ಅಂತ ಇದೆಲ್ಲಾ ಉಪಾಯ. ನಾವು ಇಷ್ಟನ್ನೂ ಅರಿತುಕೊಳ್ಳದಿದ್ದರೆ ನಮ್ಮಂಥ ಮೂರ್ಖರು ನಾವೇ”—ಎಂದ ವೀರಸಂಗಪ್ಪ.

“ಒಪ್ಪಂದದ ಕರಾರುಗಳೇನು ಅನ್ನುವದು ತಿಳಿದ ಬಳಿಕ ಮುಂದಿನ ಹೆಜ್ಜೆ ಇಡಬಹುದಲ್ಲ?”—ಎಂದ ಶಿವರುದ್ರಪ್ಪ.

“ಹೌದು. ಹಾಗೇ ಮಾಡಬಹುದು. ರಾಯಭಾರಿಯ ಮೂಲಕ ಮೊದಲು ಮಾತುಕತೆ ನಡಸಬಹುದು—” ಎಂದ ಸಣ್ಣ ಚೆನ್ನಪ್ಪ.

ಒಪ್ಪಂದದ ಷರತ್ತುಗಳನ್ನು ತಿಳಿಸಬೇಕೆಂಬಾಶಯದ ಪತ್ರ ಬರೆದು, ನಗರದ ಹೊರಭಾಗದಲ್ಲಿ ದುಬ್ಬನಮರಡಿಯಲ್ಲಿ ಬೀಡು ಬಿಟ್ಟಿದ್ದ ಬುರ್ಹಾನುದ್ದೀನನಿಗೆ ಕಳಿಸಲಾಯಿತು. ಮಾರನೆಯ ದಿನವೇ ಆ ಪತ್ರಕ್ಕೆ ಉತ್ತರವೂ ಬಂದಿತು. “ಒಪ್ಪಂದದ ಷರತ್ತು ತಿಳಿಸಬೇಕೆಂದು ಕೇಳಿದ್ದೀರಿ. ಈ ಸಂದರ್ಭದಲ್ಲಿ ಒಪ್ಪಂದದ ಮಾತೇ ಬರುವುದಿಲ್ಲ. ಯುದ್ಧ ನಡೆದರೆ ತಾನೇ ಒಪ್ಪಂದವಾಗಬೇಕಾದದ್ದು ? ನಾವೂ ನೀವೂ ಸ್ನೇಹಿತರಾದುದರಿಂದ ನಮ್ಮ ನಿಮ್ಮಲ್ಲಿ ಯುದ್ಧದ ವಿಚಾರವೂ ಬರುವುದಿಲ್ಲ. ಅಂತೆಯೇ ಒಪ್ಪಂದದ ಮಾತೂ ಅಪ್ರಸ್ತುತ. ನಾವು ನಿಮ್ಮ ಸ್ನೇಹಿತರಂತೆ ಬಂದಿದ್ದೇವೆ. ಸ್ನೇಹಿತರಂತೆ ಇರುತ್ತೇವೆ. ನೀವೂ ಸ್ನೇಹದಿಂದ ನಡೆದುಕೊಂಡರಾಯಿತು.”

ಈ ಪತ್ರದಿಂದಲೂ ಸಮಸ್ಯೆಯ ಮೇಲೆ ಹೆಚ್ಚಿನ ಬೆಳಕು ಬೀಳಲಿಲ್ಲ. ಧೂರ್ತತನದ ಮಾತುಗಳನ್ನಾಡಿ ಕಿತ್ತೂರನ್ನು ಸುಲಭವಾಗಿ ವಶಪಡಿಸಿಕೊಳ್ಳುವುದೇ ವೈರಿಗಳ ಉದ್ದೇಶವಾಗಿದ್ದುದು ತಿಮ್ಮನಗೌಡ—ಗುರುಸಿದ್ಧಪ್ಪ—ವೀರಸಂಗಪ್ಪ ಮೊದಲಾದವರಿಗೆ ಮನವರಿಕೆಯಾಗಿತ್ತು. ಗುರುನಾಥ ಪಂಥನಿಗೂ ಕೂಡ ವೈರಿಗಳ ಆಶಯ ಪೂರ್ತಿಯಾಗಿ ಗೊತ್ತಾಗಿರಲು ಸಾಕು. ಆದರೂ ಆತ ಯಾವುದೋ ಒಂದು ಪೂರ್ವನಿಶ್ಚಿತ ಯೋಜನೆಗೆ ಕಟ್ಟು ಬಿದ್ದು ಅದೇ ಗಂಡಾಂತರದ ಹಾದಿಯಲ್ಲಿಯೇ ಮುನ್ನಡೆಯಲು ಸಿದ್ಧವಾಗಿದ್ದ. ಬುರ್ಹಾನುದ್ದೀನನ ಕಪಟದ ಮಾತು ನಂಬಿ ಮೋಸ ಹೋಗ

ಬಾರದೆಂದು ತಿಮ್ಮನಗೌಡ ಮೊದಲಾದವರು ವಾದಿಸಿದುದು ವ್ಯರ್ಥವಾಗಿ ಕೊನೆಗೂ ದಿವಾನನ ಇಚ್ಛೆಯೇ ಗೆದ್ದಿತು.

"ನಿಮಗೆ ಉಚಿತ ತೋರಿದಂತೆ ಮಾಡಿರಿ ಪತಂಜಿ. ನಾವೇನು ಬೇಡ ಅನ್ನುವದಿಲ್ಲ," ಎಂದು ಮಲ್ಲಸರ್ಜ ಸ್ಪಷ್ಟವಾಗಿ ಹೇಳಿದ.

"ಸದ್ಯದ ಪ್ರಸಂಗದಲ್ಲಿ ವೈರಿಗಳ ಮನಸ್ಸಿನಂತೆ ನಡೆದುಕೊಳ್ಳುವದರಲ್ಲೇ ಹಿತವಿದೆ ಪ್ರಭೂ," ಎಂದು ಹೇಳಿ ಕೊಂಚ ಹೊತ್ತು ಯೋಚಿಸುತ್ತಿದ್ದು ಮತ್ತೆ ಹೇಳಿದ ದಿವಾನ: "ನಾನು ಇಲ್ಲಿದ್ದು ಎಲ್ಲಾ ನೋಡಿಕೊಳ್ಳುತ್ತೇನೆ. ಟೀಪೂನ ದಂಡು ಇಲ್ಲಿಂದ ಹೊರಟು ಹೋಗುವವರೆಗೂ ತಾವು ಬೇರೆ ಕಡೆ ಯಾವದಾದರೊಂದು ಸುರಕ್ಷಿತ ಸ್ಥಳದಲ್ಲಿರುವದೊಳ್ಳೆಯದೆಂದು ಕಾಣುತ್ತದೆ."

"ಯಾಕೆ? ಅವರು ನಮಗೇನಾದರೂ ಅಪಾಯ ಮಾಡಬಹುದೆಂಬ ಹೆದರಿಕೆಯೇ?"

"ಹಾಗೇನೂ ಇಲ್ಲ ಪ್ರಭೂ. ಆದರೂ ಪ್ರಸಂಗ ಹೀಗೇ ಬಂದೀತು ಅಂತ ಭರವಸೆಯೇನೂ ಇಲ್ಲವಲ್ಲ? ಅದಕ್ಕಾಗಿ ತಾವು ಕೂಡಲೇ ಹೊರಟು ಕೃಷ್ಣಾನದಿಯ ಆಚೆಗೆ ಎಲ್ಲಾದರೂ ಸುರಕ್ಷಿತವಾಗಿದ್ದರೆ ಒಂದು ಚಿಂತೆ ತಪ್ಪುವದು. ರಾಣೀಸಾಹೇಬರಂತೂ ತಲ್ಲೂರಲ್ಲಿ ಕ್ಷೇಮದಿಂದಿದ್ದಾರೆ. ಅವರ ಬಗ್ಗೆ ಏನೂ ಭಯವಿಲ್ಲ. ಈಗ ತಾವು ಮತ್ತು ಮಾಯೀಸಾಹೇಬರಿಬ್ಬರೂ...."

"ನಾವು ಕಿತ್ತೂರು ಬಿಟ್ಟು ಹೊರಡುವ ವಿಚಾರವನ್ನೇ ತೆಗೆಯಬೇಡಿರಿ ಪತಂಜಿ. ಟೀಪುವಿಗೆ ಹೆದರಿ ಹೇಡಿಯಂತೆ ಓಡಿಹೋಗುವ ಕಲ್ಪನೆಯೂ ನಮಗೆ ಅಸಹ್ಯ ಅನಿಸುತ್ತದೆ," ಎಂದು ಸ್ಪಷ್ಟವಾಗಿ ಹೇಳಿದ ಮಲ್ಲಸರ್ಜ.

"ವೈರಿಗಳಿಗಂಜಿ ಓಡಿಹೋಗುವವರಲ್ಲ ನಮ್ಮ ದೊರೆಗಳು—ವೈರಿಗಳ ಧೂಳು ಹಾರಿಸಿ ದಿಕ್ಕಾಪಾಲಾಗಿ ಓಡಿಸಿಬಿಡುವ ವೀರಾಧಿವೀರರು—" ಎಂದ ವೀರಸಂಗಪ್ಪ.

"ಯುದ್ಧ ಮಾಡುತ್ತ ಮಾಡುತ್ತ ಪ್ರಾಣ ಹೋದರೂ ನಮಗೆ ಸಂತೋಷವೇ. ಇಲ್ಲಿಂದ ಹೊರಟು, ಜೀವ ಉಳಿಸಿಕೊಳ್ಳಲು ಅವರಿವರಲ್ಲಿ ಆಶ್ರಯ ಪಡೆಯುವ ಹೇಡಿತನವೆಂದೂ ನಮ್ಮಿಂದಾಗದು," ಎಂದ ಮಲ್ಲಸರ್ಜ.

ದೊರೆಯ ಮನಸ್ಸು ಒಲಿಸಿ ಅವನನ್ನು ಅಲ್ಲಿಂದ ಹೊರಡಿಸಲು ದಿವಾನ ಪರಿಪರಿಯಾಗಿ ಪ್ರಯತ್ನಿಸಿದರೂ ಫಲ ದೊರೆಯಲಿಲ್ಲ. ಕೆಲವು ದಿನಗಳ ಮಟ್ಟಿಗಾದರೂ ಬೇರೆ ಕಡೆ ಇರುವುದರಲ್ಲಿಯೇ ಕಿತ್ತೂರಿನ ಹಿತವಿದೆಯೆಂಬ ಅಂಶವನ್ನು ನೀಲಮ್ಮಾಜಿಯ ಮನಸ್ಸಿನ ಮೇಲೆ ಬಿಂಬಿಸಿ ಆಕೆಯ ಮೂಲಕವೂ ದೊರೆಯ ಮೇಲೆ ಪ್ರಭಾವ ಬೀರಲು ಯತ್ನಿಸಿದುದೂ ವಿಫಲವಾಯಿತು. ಯಾರ ಉಪದೇಶಕ್ಕೂ ಕಿವಿಗೊಡದೆ, ಕಿತ್ತೂರಿನಲ್ಲಿಯೇ ಉಳಿಯುವ ತನ್ನ ನಿಶ್ಚಯಕ್ಕೆ ದೃಢವಾಗಿ ಅಂಟಿಕೊಂಡ ಮಲ್ಲಸರ್ಜ.

ದುಬ್ಬನಮರಡಿಯಲ್ಲಿ ಬೀಡು ಬಿಟ್ಟ ಬುರ್ಹಾನುದ್ದೀನನಿಗೆ ಅನ್ನಧಾನ್ಯ, ಹಾಲು— ತುಪ್ಪ, ಆಡು— ಕುರಿ— ಕೋಳಿ ಮೊದಲಾದ ಸಾಮಗ್ರಿಗಳ ಸರಬರಾಜಿಗಾರಂಭವಾಯಿತು. ತಿಮ್ಮನಗೌಡ—ವೀರಸಂಗಪ್ಪ—ಗುರುಸಿದ್ದಪ್ಪ ಮೊದಲಾದವರೆಲ್ಲ ಕೈ ಕೈ ಹಿಸುಕಿಕೊಳ್ಳುತ್ತ ಸುಮ್ಮನೆ ಕುಳಿತಿರಬೇಕಾಯಿತು. ಟೀಪುವಿನ ದಂಡು ಅಲ್ಲಿ ಪಾಳಯ ಹಾಕಿರುವಷ್ಟು ದಿನವೂ ಅವರಿಗೆ ಮನದಣಿಯ ತಿನ್ನಿಸಿ ರಾಜೋಪಚಾರ ನೀಡಿ ಅವರನ್ನು ಸಂತುಷ್ಟಗೊಳಿಸಿ ಇಲ್ಲಿಂದ ಸಾಗಹಾಕಬೇಕೆಂದು ಗುರುನಾಥಪಂತ ಯೋಚಿಸಿಕೊಂಡಿದ್ದ. ಅಂತೆಯೇ, ಅವರ ಸತ್ಕಾರದಲ್ಲಿ ಯಾವುದಕ್ಕೂ ಕೊರತೆಯಾಗದಂತೆ ಆತ ಎಚ್ಚರಿಕೆ ವಹಿಸಿದ. ಟೀಪುವಿನ ಸೇನೆ ನಿತ್ಯವೂ ಸುಗ್ರಾಸ ಭೋಜನದ ಮೇಲೆ ಕೈಯೆಳೆಯುತ್ತ ಸುಖವಿಲಾಸದಲ್ಲಿ ಕಾಲ ಕಳೆಯತೊಡಗಿತು. ಅದನ್ನು ಕಂಡು ಕಿತ್ತೂರಿನ ಜನರೂ ಧೈರ್ಯ ತಂದುಕೊಂಡು, ಟೀಪುವಿನ ದಂಡಿನ ಬಗೆಗೆ ಯಾವ ವಿಮಂಚನೆಗೂ ಎಡೆಗೊಡದೆ ತಮ್ಮ ನಿತ್ಯದ ವ್ಯವಹಾರಗಳಲ್ಲಿ ನಿರತರಾದರು.

ಆದರೆ, ಕಿತ್ತೂರಿನ ದಂಡು ಮಾತ್ರ ಮೈಮರೆತು ಮಲಗಲಿಲ್ಲ. ಕೋಟೆಯಲ್ಲಿ ಶೇಖರಿಸಲ್ಪಟ್ಟ ಸೈನಿಕರು ಸೇನಾಪತಿಯ ಆಜ್ಞೆಯಂತೆ ಅಲ್ಲಿಯೇ ಉಳಿದರು. ವೈರಿಗಳಿಗೆ ತಿಳಿಯದಂತೆ ಯುದ್ಧದ ಸಿದ್ಧತೆಯೂ ಮುಂದುವರಿಯುತ್ತಿತ್ತು. ದೂರ ದೂರದ ಊರುಗಳಿಂದ ಹಳಬರೂ ತಳವಾರರೂ ಇತರ ಕಾಲಾಳುಗಳೂ ಗುಪ್ತ ಮಾರ್ಗದಿಂದ ಬಂದು ಕೋಟೆಯಲ್ಲಿ ಸೇರಿಕೊಳ್ಳುತ್ತಿದ್ದರು. ರಾತ್ರಿಯ ಅಂಧಕಾರದಲ್ಲಿ ಯಾರಿಗೂ ಗೊತ್ತಾಗದಂತೆ ಅನ್ನಧಾನ್ಯಗಳೂ ಬಂದು ಬೀಳುತ್ತಿದ್ದುವು. ಸ್ನೇಹಿತನಂತೆ

ನಟಿಸುತ್ತ ಬಂದ ಶತ್ರು ತನ್ನ ನಿಜಸ್ವರೂಪ ಪ್ರಕಟಿಸಿ ಕೋಟೆಯ ಮೇಲೇರಿ ಬಂದರೆ, ಅವನನ್ನೆದುರಿಸಿ ಹಿಮ್ಮೆಟ್ಟಿಸಲು ಅಗತ್ಯವಿದ್ದ ಸಕಲಸಿದ್ಧತೆಯನ್ನೂ ಸಾಗಿಸಿದ್ದ ತಿಮ್ಮನಗೌಡ.

೬

ರಾಜವಾಡೆಯ ಅಟ್ಟದ ಮೇಲೇರಿ ರುದ್ರಮ್ಮಾಜಿ ಕಿತ್ತೂರಿನ ದಿಕ್ಕಿಗೆ ದೃಷ್ಟಿಯಿಟ್ಟು ಕುಳಿತಿದ್ದುದಕ್ಕೆ ಎಷ್ಟೋ ಹೊತ್ತಾಗಿ ಹೋಗಿತ್ತು. ಹೊರಗೆ ಬಿಸಿಲು ಬಲಿಯತೊಡಗಿತ್ತು. ತಲ್ಲೂರಿನ ಹೊಲಗಳಲ್ಲಿ ನಡೆದಿದ್ದ ರೈತರ ಚಟುವಟಿಕೆ ನಿಧಾನವಾಗಿ ಕಡಮೆಯಾಗ ತೊಡಗಿತ್ತು. ಹುಲ್ಲು ಮಾಳ ಗಳಿಗೆ ಮೇಯಲು ಹೋಗಿದ್ದ ದನಕರುಗಳು ಸಾವಕಾಶವಾಗಿ ಹೆಜ್ಜೆ ಹಾಕುತ್ತ ಮನೆಗಳಿಗೆ ಹಿಂದಿರುಗತೊಡಗಿದ್ದುವು. ಕೆಳಗಡೆ, ಪೂಜಾಗೃಹ ದಲ್ಲಿ ದೇಸಾಯರ ಪೂಜೆ ಕೊನೆಗೊಂಡಿತೆಂದು ಸೂಚಿಸಲು ಗಂಟೆಯ ಗಣ ಗಣನಾದ ಮೊಳಗತೊಡಗಿತ್ತು.

ತಂದೆಯವರ ಪೂಜೆ ಮುಗಿಯಿತು. ಇನ್ನು ತಾನೂ ಏಳಬೇಕು. ಮಧ್ಯಾಹ್ನವಾಗುತ್ತ ಬಂದರೂ ಇನ್ನೂ ತಾನು ಸ್ನಾನ ಮುಗಿಸಿಲ್ಲ, ಪೂಜೆ ಮುಗಿಸಿಲ್ಲ. ಇನ್ನೇನು, ಸ್ವಲ್ಪಹೊತ್ತಿನಲ್ಲಿಯೇ ಅಪ್ಪನವರು ತನ್ನನ್ನು ಕರೆ ಯುವರು. ತಾನಿನ್ನೂ ಸ್ನಾನವನ್ನೂ ಮಾಡಿಲ್ಲವೆಂದು ತಿಳಿದರೆ ಅವರೇ ನೆಂದುಕೊಳ್ಳುವರೊ....

ಹಾಗೆ ಮನಸ್ಸಿನಲ್ಲಿಯೇ ವಿಚಾರಮಾಡುತ್ತ ರುದ್ರಮ್ಮಾಜಿ ಏಳಲೆತ್ನಿಸಿ ದಳು. ಎದ್ದು ಕೆಳಗಿಳಿದು ಹೋಗುವುದಕ್ಕೂ ಬೇಸರ. ಉಪ್ಪರಿಗೆಯ ಕಿಟಕಿಯನ್ನು ಬಿಟ್ಟು ಕದಲುವುದಕ್ಕೂ ಇಷ್ಟವಿಲ್ಲ. ಕಿತ್ತೂರಿನಲ್ಲಿ ಈ ವೇಳೆಗೆ ಏನು ಅನಾಹುತ ನಡೆದಿದೆಯೊ? ಆ ಟೀಪುವಂತೂ ಭಯಂಕರ ಕ್ರೂರಿಯೆಂಬುದು ಪ್ರಸಿದ್ಧವಾದ ಸಂಗತಿಯೇ ಆಗಿದೆ. ಕಿತ್ತೂರಿನ ದಂಡು ಚಿಕ್ಕದು. ತಂಡತಂಡವಾಗಿ ಬಂದು ನುಗ್ಗುವ ವೈರಿಗಳೆದುರು ಚಿಕ್ಕ ದಂಡಿನ ಆಟ ಎಷ್ಟು ಹೊತ್ತು ನಡೆದೀತು? ಈ ವೇಳೆಗಾಗಲೆ ಸೋತು ಹೋಗಿರ ಬಹುದೇ ಕಿತ್ತೂರು? ಟೀಪುವಿನ ಸೇನೆ ಕೋಟೆಯಲ್ಲಿ ಪ್ರವೇಶಿಸಿರಬಹುದೇ? ದೊರೆಗಳಿಗೆ....

ಬೆಳಗಿನ ಜಾವದಲ್ಲಿ ಕಂಡ ಕನಸಿನ ದೃಶ್ಯ ಮತ್ತೊಂದು ಬಾರಿ ಕಣ್ಣಿನಿದರು ಸುಳಿದು ರುದ್ರಮ್ಮಾಜಿಯ ಎದೆಯನ್ನು ನಡುಗಿಸಿತು. ಓ! ಎಂಥ ಕೆಟ್ಟ ಕನಸು? ಆದರಲ್ಲಿ ಕಾಣಿಸಿದಂತೆಯೇ ನಡೆದಿರಲಾರದಷ್ಟೇ ಕಿತ್ತೂರಿನಲ್ಲಿ? "ದೇವಾ, ಗುರುಸಿದ್ಧೇಶಾ, ಕಿತ್ತೂರನ್ನು ಗಂಡಾಂತರದಿಂದ ರಕ್ಷಿಸು. ನನ್ನ ದೊರೆಯನ್ನು ಕಾಪಾಡು."

ಮನಸ್ಸಿನಲ್ಲಿಯೇ ದೇವರನ್ನು ಪ್ರಾರ್ಥಿಸುತ್ತ ರುದ್ರಮ್ಮಾಜಿ ಮತ್ತೆ ಕಿಟಕಿಯಾಚೆ ದೃಷ್ಟಿಯೋಡಿಸಿದಳು. ತಲ್ಲೂರಿನಿಂದ ಕಿತ್ತೂರು ಸಮೀಪವೇನೂ ಅಲ್ಲ. ನಡುವೆ ಅನೇಕ ಹರದಾರಿಗಳ ಅಂತರವಿತ್ತು. ಗುಡ್ಡ ಬೆಟ್ಟಗಳ ಅಡ್ಡತೆರೆಯನ್ನು ಭೇದಿಸಿಕೊಂಡು ಅವಳ ದೃಷ್ಟಿ ಕಿತ್ತೂರನ್ನು ಕಾಣುವುದು ಸಾಧ್ಯವಿರಲಿಲ್ಲ. ಆದರೂ, ಆಕೆಗೆ ಏನೋ ಒಂದು ಆಸೆ. ಕಿತ್ತೂರಿನ ಸಮಾಚಾರವನ್ನು ತೆಗೆದುಕೊಂಡು ದೂತರಾರಾದರೂ ಬರಬಹುದು. ಇಂಥ ಸಂಕಟದ ಸಂದರ್ಭದಲ್ಲಿ ದೊರೆಗಳು ತನಗೆ ಸುದ್ದಿ ಕಳಿಸದಿರಲಾರರು. ಅಂತೆಯೇ, ಲಕ್ಷ್ಯವನ್ನೆಲ್ಲ ದೃಷ್ಟಿಯಲ್ಲಿಯೇ ಕೇಂದ್ರೀಕರಿಸಿ ರಾಜಮಾರ್ಗವನ್ನೇ ದಿಟ್ಟಿಸುತ್ತ ಆಕೆ ಕಾದುಕುಳಿತಿದ್ದಳು. ಈಗಲೋ ಇನ್ನೊಂದು ಗಳಿಗೆಗೋ ಕುದುರೆ ಸವಾರರು ಬರಬಹುದು, ಎಲ್ಲವನ್ನೂ ತಿಳಿಸಬಹುದು....ಅಲ್ಲಿ ನಿಜವಾಗಿ ನಡೆಯುತ್ತಿರುವುದೇನೆಂಬುದು ಗೊತ್ತಾದರೂ ಕೂಡಾ ಮನಸ್ಸಿಗೆ ಎಷ್ಟೋ ಸಮಾಧಾನವಾಗಬಹುದು....

"ರುದ್ರಾಣೀ...."

ಕರೆ ಕೇಳಿ ಚಕಿತಳಾಗಿ ರುದ್ರಮ್ಮಾಜಿ ಹೊರಳಿ ನೋಡಿದಳು. ತನ್ನನ್ನೆಬ್ಬಿಸಿ ಕರೆದೊಯ್ಯಲು ತನ್ನ ತಾಯಿಯೇ ಬಂದಿದ್ದುದು ಗೊತ್ತಾಗಲೂ ಆಕೆ ಲಜ್ಜಿತಳಾಗಿ ಥಟ್ಟನೆದ್ದು ನಿಂತು ಹೇಳಿದಳು :

"ನೀವ್ಯಾಕೆ ಬಂದಿರಿ ಅಮ್ಮಾಜಿ? ನಾನೇ ಈಗ ಬಂದುಬಿಡ್ತಿದ್ದೆ. ನಿಮ್ಮ ಮೈಯಲ್ಲಿ ಜೇರೆ ನೆಟ್ಟಗಿಲ್ಲ. ಅಂಥದರಲ್ಲಿ ಅಟ್ಟ ಏರುವ ಶ್ರಮ...."

"ಬೆಳಗಿನಿಂದ ನಿನ್ನ ಮುಖವೇ ಕಾಣಲಿಲ್ಲಲ್ಲ ರುದ್ರಾಣೀ? ನಿನಗೇನಾಯಿತೋ ಅಂತ ಓಡಿಬಂದೆ. ಇನ್ನೂ ಸ್ನಾನ ಕೂಡಾ ಮಾಡಿದ ಹಾಗಿಲ್ಲವಲ್ಲ? ಹೀಗ್ಯಾಕೆ ಮಾಡುತ್ತಿರುವೆ ಕಂದಾ?" ಎನ್ನುತ್ತಾ ಮಲ್ಲಮ್ಮಾಜಿ ವಾತ್ಸಲ್ಯದಿಂದ ಮಗಳ ತಲೆಯನ್ನು ನೇವರಿಸಿದಳು.

"ಏನೂ ಇಲ್ಲ ಅವ್ವಾಜಿ. ನನಗೇನಾಗ್ತದೆ? ಏನೂ ಕೆಲಸವಿರಲಿಲ್ಲ ಅಂತ ಸುಮ್ಮನೇ ಇಲ್ಲಿ ಕೂತುಕೊಂಡಿದ್ದೆನಷ್ಟೆ."

ನರಗುಂದದಿಂದ ಹೊರಟ ಟೀಪ್ರುವಿನ ದಂಡು ಕಿತ್ತೂರಿನತ್ತ ಸಾಗಿದ ಸಮಾಚಾರ ಮಲ್ಲಮ್ಮಾಜಿಗೂ ತಿಳಿದಿತ್ತು. ತನ್ನ ಪ್ರೀತಿಯ ಅಳಿಯ ಮಲ್ಲ ಸರ್ಜನ ಬಗೆಗೆ ಆಕೆಯ ಎದೆಯೂ ಕಳವಳದಿಂದ ಮಿಡಿಯುತ್ತಿತ್ತು. ಯುವಕನಾದ ಪತಿಯನ್ನು ನೆನೆದು ತನ್ನ ಕುವರಿ ಚಿಂತಿಸುವುದೂ ಸಹಜವೇ. ಆ ಚಿಂತೆಯಲ್ಲಿಯೇ ಇವಳು ಇನ್ನೆಲ್ಲವನ್ನೂ ಮರೆತು ಇಲ್ಲಿ ಕುಳಿತಿರಬೇಕು. ಹುಚ್ಚು ಹುಡುಗಿ!

ಮಗಳ ಕೈ ಹಿಡಿದುಕೊಂಡೇ ಅಟ್ಟ ಇಳಿದು ಬಂದಳು ಮಲ್ಲಮ್ಮಾಜಿ. ಅವರು ಪೂಜಾಗೃಹದೆದುರು ಹಾಯ್ದು ಸ್ನಾನಗೃಹದ ಕಡೆಗೆ ಹೋಗುತ್ತಿದ್ದ ಹಾಗೆ, ಆಗತಾನೆ ಪೂಜೆ ಮುಗಿಸಿ ಪ್ರಸಾದ ಸ್ವೀಕರಿಸಲು ಅಣಿಯಾಗುತ್ತಿದ್ದ ದೇಸಾಯರು ಕೇಳಿದರು :

"ಇನ್ನೂ ಸ್ನಾನ ಆಗಲಿಲ್ಲವೇ ರುದ್ರಾಣಿ?"

"ಬಂದೆ ಅಪ್ಪಾಜಿ, ಈಗ ಬಂದೆ," ಎನ್ನುತ್ತಾ ರುದ್ರಮ್ಮಾಜಿ ಅವಸರದಿಂದ ಸ್ನಾನಗೃಹಕ್ಕೋಡಿದಳು. ತಮ್ಮ ಆ ಕಿರಿಯ ಕುವರಿಯಲ್ಲಿ ದೇಸಾಯರಿಗೆ ಅಸ್ವಾದೃಶವಾದ ಪ್ರೀತಿ. ಗಂಡುಮಕ್ಕಳನ್ನು ಸಾಕುವಂತೆಯೇ ಅವರು ಆಕೆಯನ್ನು ಸಾಕಿಸಲಹಿದ್ದರು. ಅವಳು ಶಿಶುವಾಗಿದ್ದಾಗಿನಿಂದಲೂ ಅವರ ಪಕ್ಕದಲ್ಲಿಯೇ ಕುಳಿತು ಅವರೊಡನೆಯೇ ಊಟ ಮಾಡುವ ಪದ್ಧತಿಯಿದ್ದುದು ಆಕೆ ದೊಡ್ಡವಳಾದ ಮೇಲೆ ನಿಂತುಹೋಗಿದ್ದಿತಾದರೂ ಊಟ ನಡೆದಾಗ ಅವಳ ಮುಖ ಒಂದು ಬಾರಿಯಾದರೂ ಕಾಣಿಸದಿದ್ದರೆ ಅವರಿಗೆ ಸಮಾಧಾನವಿರುತ್ತಿರಲಿಲ್ಲ. ತವರುಮನೆಯಲ್ಲಿದ್ದಾಗಲೆಲ್ಲ ತಂದೆಗೆ ತುಪ್ಪ ನೀಡುವುದಂತೂ ಅವಳ ನಿತ್ಯನೇಮವೇ ಆದ ಹಾಗಿತ್ತು. ಯಾವುದೇ ಕಾರಣದಿಂದಾಗಲಿ ಆಕೆ ಬಾರದಿದ್ದಾಗ ದೇಸಾಯರಿಗೆ ಊಟವೇ ರುಚಿಸುತ್ತಿರಲಿಲ್ಲ.

ತಂದೆಯ ಈ ಪರಿಪಾಠವನ್ನು ಚೆನ್ನಾಗಿ ಬಲ್ಲ ರುದ್ರಾಣಿ ಲಗುಬಗೆಯಿಂದ ಸ್ನಾನ ಮುಗಿಸಿ, ಒಂದು ನಿಮಿಷದಲ್ಲಿಯೇ ಪೂಜೆಯ ಶಾಸ್ತ್ರವನ್ನೂ ತೀರಿಸಿಬಿಟ್ಟು ತುಪ್ಪದಪಾತ್ರೆಯನ್ನೆತ್ತಿಕೊಂಡು ಬಂದಳು,

“ಮುಂಜಾನೆಯಿಂದ ಕಾಣಲೇ ಇಲ್ಲಲ್ಲ ರುದ್ರಾಣಿ? ಮೈಯಲ್ಲಿ ನೆಟ್ಟಗಿಲ್ಲವೆ?”

“ಇಲ್ಲ ಅಪ್ಪಾಜಿ. ನನಗೇನಾಗಿದೆ? ಏನೂ ಇಲ್ಲ,” ಎಂದು ಆಕೆ ಹೇಳಿದಳಾದರೂ ಆಕೆಯ ಮನಸ್ಸು ಎಂದಿನಂತೆ ಇರಲಿಲ್ಲವೆಂಬುದನ್ನು ಅವಳ ಧ್ವನಿಯೇ ಸೂಚಿಸುತ್ತಿತ್ತು.

ಮಗಳನ್ನು ಕಾಡುತ್ತಿರಬಹುದಾದ ವಿಚಾರವಾವುದೆಂಬುದು ದೇಸಾಯರಿಗೂ ಗೊತ್ತಿರದಿರಲಿಲ್ಲ. ಮೂರುನಾಲ್ಕು ದಿನಗಳಿಂದ ತಲ್ಲೂರಿನಲ್ಲೆಲ್ಲ ಕಿತ್ತೂರಿನ ಮಾತೇ ಕೇಳಬರುತ್ತಿತ್ತು. ನರಗುಂದದಿಂದ ಓಡಿಬಂದ ಸೈನಿಕರನೇಕರು ದೇಸಾಯರನ್ನು ಕಂಡು ಅಲ್ಲಿನ ವಿದ್ಯಮಾನಗಳೆಲ್ಲವನ್ನೂ ಬಣ್ಣಿಸಿ ಹೇಳಿದ್ದರು. ಬುರ್ಹಾನುದ್ದೀನನ ದಂಡು ಕಿತ್ತೂರಿನ ಕಡೆಗೆ ನಡೆದಂದಿನಿಂದಲೂ ಮುಂದೇನು ಸಂಭವಿಸುವುದೋ ಎಂಬ ಆಶಂಕೆಯಿಂದ ದೇಸಾಯರ ಮನಸ್ಸು ಕಳವಳಕ್ಕೀಡಾಗಿತ್ತು. ತಮ್ಮ ಕಳವಳವನ್ನು ಅವರು ಯಾರೆದುರಿನಲ್ಲಿಯೂ ವ್ಯಕ್ತಗೊಳಿಸಿರಲಿಲ್ಲ, ಅಷ್ಟೆ.

ಅಂಥ ‘ಮನೋಸ್ಥಿತಿಯಲ್ಲಿಯೇ ಊಟ ಮುಗಿಸಿ ಅವರು ಹೊರಗೆ ಬಂದೊಡನೆಯೆ ಕಾರಭಾರಿ ಓಡುತ್ತ ಬಂದು ಹೇಳಿದ :

“ಕಿತ್ತೂರಿನಿಂದ ಇಬ್ಬರು ದೂತರು ಬಂದಾರೆ ಸರಕಾರ್.”

“ಬಂದರೇ? ಎಷ್ಟೊತ್ತಾಯ್ತು ಬಂದು?”

“ಅರ್ಧ ತಾಸಾಗುತಾ ಬಂತು ಸರಕಾರ್.”

“ಅವರಿಗೆ ಊಟಕ್ಕೆ ವ್ಯವಸ್ಥೆ ಮಾಡಿದಿರಾ?”

“ಊಟ ಮಾಡಿರಿ ಅಂತ ಹೇಳಿದೆ. ತಮ್ಮನ್ನು ಭೆಟ್ಟಿಯಾದ ಬಳಿಕವೇ ಊಟದ ಮಾತು ಅಂತ ಅಂದರು.”

“ಒಳ್ಳೇದು. ಅವರನ್ನು ಕರೆತನ್ನಿರಿ.”

ವೀಳಯವನ್ನು ನಿಧಾನವಾಗಿ ಜಗಿಯುತ್ತಾ ದೇಸಾಯರು ಮೊಗಸಾಲೆಗೆ ಬಂದು ದಿಂಬಿಗೊರಗಿ ಕುಳಿತುಕೊಂಡರು. ಸೇವಕನೊಬ್ಬ ಲಾವಂಚದ ಬೀಸಣಿಗೆಯಿಂದ ಗಾಳಿ ಹಾಕುತ್ತ ನಿಂತುಕೊಂಡ.

ದೂತರು ತಂದಿತ್ತ ಓಲೆಯನ್ನೊಡೆದು ಓದಿಕೊಂಡು ಅದನ್ನು ಅಂತಃಪುರಕ್ಕೆ ಕಳಿಸಿಕೊಟ್ಟು, ಕಿತ್ತೂರಿನ ಚಾರರತ್ತ ತಿರುಗಿ ದೇಸಾಯರು ಕೇಳಿದರು :

“ಸದ್ಯಕ್ಕಂತೂ ಏನು ಗದ್ದಲವಿಲ್ಲ ಅನ್ನಿರಿ ಹಾಗಾದರೆ?”

“ಏನೂ ಇಲ್ಲ ಸರಕಾರ್.”

“ನಗರದ ಜನರಿಗೇನೂ ತ್ರಾಸವಿಲ್ಲವಷ್ಟೇ ವೈರಿಗಳಿಂದ?”

“ಇಲ್ಲ ಸರಕಾರ್. ಇದುವರೆಗಂತೂ ಏನು ಆಗಿಲ್ಲ.”

“ಒಳ್ಳೆಯದು. ನೀವು ಉಂಡು ವಿರಮಿಸಿಕೊಳ್ಳಿರಿ. ಆಮೇಲೆ ಮತ್ತೆ ಕರೆಸುತ್ತೇವೆ,” ಎಂದು ಅವರಿಗೆ ಅಪ್ಪಣೆಯಿತ್ತು ದೇಸಾಯರು ಅಂತಃಪುರಕ್ಕೆ ಬಂದರು. ತಾಯಿಯ ಕೊಟಡಿಯಲ್ಲಿ ಕುಳಿತು, ಮಲ್ಲಸರ್ಜ ದೊರೆಯಿಂದ ಬಂದ ಕಾಗದವನ್ನು ಓದಿ ಹೇಳುತ್ತಿದ್ದಳು ರುದ್ರಮ್ಮಾಜಿ.

ಅವಳು ಓದಿಮುಗಿಸುವ ವೇಳೆಗೆ ಅಲ್ಲಿಗೆ ಬಂದ ದೇಸಾಯರು ಪತ್ನಿಯನ್ನು ಕುರಿತು ಹೇಳಿದರು:

“ಸದ್ಯಕ್ಕಂತೂ ವೈರಿಗಳಿಂದ ಏನೂ ಅಪಾಯವಿಲ್ಲ ಅಂತ ಕಿತ್ತೂರು ದೊರೆಗಳು ಸ್ಪಷ್ಟವಾಗಿ ಬರೆದಿದ್ದಾರಲ್ಲ! ಅವರ ಮೇಲೆ ಗುರುಸಿದ್ಧೇಶನ ಕೃಪೆಯಿದೆ. ಕಿತ್ತೂರಿನ ಕೂದಲು ಕೊಂಕದಂತೆ ಆತ ಕಾಪಾಡುತ್ತಾನೆ.”

“ಆದರೆ ಅಪ್ಪಾಜಿ, ಸದ್ಯಕ್ಕೆ ಅಪಾಯವಿಲ್ಲವಾದರೆ ಮುಂದೆಯೂ ಇರಲಿಕ್ಕಿಲ್ಲವೇ? ಇಷ್ಟು ದೊಡ್ಡ ದಂಡು ತೆಗೆದುಕೊಂಡು ಬಂದ ವೈರಿ ಸುಮ್ಮನೆ ಹೊರಟುಹೋಗಬಹುದೇ? ಕಿತ್ತೂರನ್ನ ವಶಪಡಿಸಿಕೊಳ್ಳುವ ಆಸೆ ಅವನಿಗಿರಲಿಕ್ಕಿಲ್ಲವೆ?”

“ಸುತ್ತಲಿನ ನಾಡನ್ನೆಲ್ಲಾ ಗೆಲ್ಲುವ ಆಸೆಯಿಂದಲೇ ಅಷ್ಟು ದೂರದ ಮೈಸೂರಿಂದ ಇಲ್ಲಿಗೆ ಬಂದವರು ಅವರು. ಅಂಥವರು ಸುಮ್ಮನೆ ಹೋಗುತ್ತಾರೆಂದರೆ ನಂಬಲಿಕ್ಕಾದೀತೇ ರುದ್ರಾಣೀ? ಅವರಿಂದ ಅಪಾಯವಿದ್ದೇ ಇದೆ. ದಾಳಿ ಮಾಡಲು ಸರಿಯಾದ ಸಮಯ ನೋಡುತ್ತ ಅವರು ಹೊಂಚು ಹಾಕಿ ಕೂತಿಗಬಹುದು.”

“ಅವರು ಹೊಂಚುಹಾಕಿ ಕೂತದ್ದು ಕಿತ್ತೂರವರಿಗೂ ಗೊತ್ತಾಗಿರಬಹುದಲ್ಲ?” ಎಂದಳು ಮಲ್ಲಮ್ಮಾಜಿ.

“ಗೊತ್ತಾಗದೆ ಇರುತ್ತದೆಯೇ? ವೈರಿಗಳ ಸೋಗನ್ನು ನಂಬಿಕೊಂಡು ಮೈಮರೆತು ಕೂಡ್ರುವಷ್ಟು ಹುಚ್ಚರೇನೂ ಅಲ್ಲ ಕಿತ್ತೂರಿನ ಮುತ್ಸದ್ದಿಗಳು. ತಿಮ್ಮನಗೌಡ – ಗುರುಸಿದ್ಧಪ್ಪರಂಥ ಪರಾಕ್ರಮಿಗಳಾದ ಸೇನಾನಾಯಕರೂ ಅಲ್ಲಿರುವಾಗ ಅಂಥ ಭಯವೇನೂ ಇಲ್ಲ. ಆದರೂ....”

"ನಮ್ಮ ಅಳಿಯದೇವರೂ ಶೌರ್ಯದಲ್ಲಿ, ಮುತ್ಸದ್ದಿತನದಲ್ಲಿ ಯಾರಿಗೇನೂ ಕಡಮೆಯವರಲ್ಲ," ಎಂದಳು ಮಲ್ಲಮ್ಮಾಜಿ.

"ನಿಜ. ಈ ವಯಸ್ಸಿಗಾಗಲೇ ಅವರು ನಮ್ಮಂಥ ವಯಸ್ಕರನ್ನು ವಿಚಾರಿಸುವಷ್ಟು ಅನುಭವ ಪಡೆದುಕೊಂಡಿದ್ದಾರೆ. ಆದರೂ.... ಇಂದಿನ ಪರಿಸ್ಥಿತಿಯಲ್ಲಿ ಕಿತ್ತೂರಿಗೆ ಸ್ವಲ್ಪ ಕಷ್ಟವೇ...."

"ಟೀಪೂನ ದಂಡಿನೆದುರು ಕಿತ್ತೂರು ತಡೆಯಲಿಕ್ಕಿಲ್ಲ ಅಂತೀರಾ ಅಪ್ಪಾಜಿ?"

"ಹಾಗಲ್ಲ ರುದ್ರಾಣೀ. ಸರಿಯಾದ ರೀತಿಯಲ್ಲಿ ಯುದ್ಧ ನಡೆದರೆ ಟೀಪುವಿನ ಸೇನೆಗೆ ಕಿತ್ತೂರ ದಂಡು ಸೊಪ್ಪು ಹಾಕಲಿಕ್ಕಿಲ್ಲ. ಆದರೆ ಕಿತ್ತೂರಿನಲ್ಲಿಯೇ ಪಿತೂರಿ ನಡೆದರೆ ನಿಜವಾದ ಸಂಕಟ...."

"ಈಗಲೂ ಪಿತೂರಿಯಾಗಬಹುದೇ ಅಪ್ಪಾಜಿ?"

"ಯಾವದನ್ನೂ ಹೇಳಲಿಕ್ಕಾಗುವಂತಿಲ್ಲ ರುದ್ರಾಣೀ. ಹತ್ತು ಹದಿನೈದು ದಿನಗಳ ಹಿಂದೆ ಕಿತ್ತೂರಿನಿಂದ ಬಂದ ನಮ್ಮ ದೂತರಿಬ್ಬರು ಅಲ್ಲಿಯ ಎಷ್ಟೋ ವಿಷಯ ತಿಳಿದುಕೊಂಡು ಬಂದು ಹೇಳಿದರು. ದಿವಾನರಿಗೂ ಸೇನಾನಾಯಕರಿಗೂ ಮನಸ್ಸು ಸರಿಯಾಗಿಲ್ಲವಂತೆ. ಅವರವರಲ್ಲಿ ಯಾವಾಗಲೂ ಚಕಮಕಿಯಂತೆ. ದಿವಾನರು ಪೂರ್ವವೆಂದದ್ದನ್ನು ಸೇನಾನಾಯಕರು ಪಶ್ಚಿಮ ಅನ್ನುತ್ತಾ ಹೋದರೆ ಒಕ್ಕಟ್ಟು ಹ್ಯಾಗಿ ಉಳಿದೀತು?"

"ನೀವನ್ನುವದು ನಿಜ ಅಪ್ಪಾಜಿ. ದರಬಾರದಲ್ಲಿರುವ ಒಡಕು ನಾನಲ್ಲಿದ್ದಾಗ ನನಗೂ ಸ್ವಲ್ಪಸ್ವಲ್ಪ ಗೊತ್ತಾಗಿತ್ತು. ಅದನ್ನು ಹೋಗಲಾಡಿಸುವದು ಹ್ಯಾಗೆಂದು ಅವ್ವನವರೂ ಚಿಂತಿಸುತ್ತಿದ್ದರು. ಈಗ ಅಲ್ಲಿಯ ಒಡಕು ಇನ್ನೂ ಹೆಚ್ಚಾಗಿದೆಯೊ ಏನೊ. ಇಂಥ ವೇಳೆಯಲ್ಲಿ ನಾನಿಲ್ಲಿ ಇರುವದೊಳ್ಳೆಯದೇ ಅಪ್ಪಾಜಿ? ನನಗೆ ಅಪ್ಪಣೆಕೊಟ್ಟರೆ ಕಿತ್ತೂರಿಗೆ ಹೋಗಬೇಕೆನ್ನುತ್ತೇನೆ," ಎಂದು ಸಂಕೋಚದಿಂದಲೇ ಹೇಳಿದಳು ರುದ್ರಮ್ಮಾಜಿ.

"ನಿನ್ನ ಮನಸ್ಸು ನನಗೂ ಅರ್ಥವಾಗ್ತದೆ ರುದ್ರಾಣೀ. ಆದರೆ, ವೈರಿಗಳು ಬಂದು ಊರ ಹೊರಗೆ ಬೀಡು ಬಿಟ್ಟಿರುವ ಈ ವೇಳೆಯಲ್ಲಿ ನಿನ್ನನ್ನು ಅಲ್ಲಿಗೆ ಕಳಿಸುವುದಾದರೂ ಹ್ಯಾಗೆ? ಈ ಗದ್ದಲ ಮುಗಿದು ಕಿತ್ತೂರಲ್ಲಿ ಮತ್ತೆ ಶಾಂತಿ ನೆಲಸುವ ವರೆಗೂ ನೀನಿಲ್ಲಿಯೇ ಇರುವದೊಳ್ಳೆಯದು."

"ಹೌದು ರುದ್ರಾಣೀ. ನೀನೀಗ ಹೋಗಬಾರದು. ಅಲ್ಲಿ ಇನ್ನೂ ಏನೇನು ಆಗುವವೋ ಯಾರು ಬಲ್ಲರು? ಬೆಂಕಿಯನ್ನ ಕಂಡೂ ಕಂಡೂ ಅದರಲ್ಲೇ ನುಗ್ಗುವದು ಜಾಣತನವಲ್ಲ ಮಗೂ. ಮಲ್ಲಸರ್ಜ ದೊರೆಗಳೂ ಕೂಡಾ ನಿನ್ನನ್ನು ಕಳಿಸಬೇಕೆಂದೇನೂ ಬರೆದಿಲ್ಲವಲ್ಲ?"

ಆ ಮಾತು ರುದ್ರಮ್ಮಾಜಿಯ ಬಾಯಿ ಕಟ್ಟಿತು. ತನ್ನನ್ನು ತಕ್ಷಣವೇ ಕಳಿಸಿಕೊಡಬೇಕೆಂದು ಅವರು ಬರೆಯುಬೇಕಾಗಿತ್ತು. ಅದೇಕೆ ಬರೆಯ ಲಿಲ್ಲವೊ? ಇಂಥ ಸಂಕಟದ ಸಂದರ್ಭದಲ್ಲಿ ತಾನು ಕಿತ್ತೂರಲ್ಲಿಯೆ ಇರಬೇಕಾ ದುದು ಅಗತ್ಯವಲ್ಲವೆ? ತಾನು ಅವರ ಹತ್ತಿರ ಇದ್ದರೆ ಅವರಿಗೂ ಎಷ್ಟೋ ಸಮಾಧಾನವಿರಬಹುದು. ಅರಮನೆಯಲ್ಲಿ ನೀಲಮ್ಮಾಜಿಯವರೂ ಒಬ್ಬರೇ. ತನ್ನ ಜೊತೆಯಿದ್ದರೆ ಅವರೂ ಸ್ವಸ್ಥವಾಗಿರಬಹುದು. ಕಿತ್ತೂರಿನ ಸುತ್ತಲೂ ಗಂಡಾಂತರದ ಬೆಂಕಿ ಉರಿಯುತ್ತಿರುವ ಈ ವೇಳೆಯಲ್ಲಿ ಪಟ್ಟದ ರಾಣಿಯಾದ ತಾನು ಅಲ್ಲಿಯೇ ಇರಬೇಕಾದುದು ತನ್ನ ಕರ್ತವ್ಯ; ಒಂದು ಸಮಯ ಯುದ್ಧಕ್ಕಾರಂಭವಾದರೆ, ತಾನೂ ಕೂಡಾ ಕತ್ತಿ ಹಿಡಿದು ಹೋರಾಡಿ ಕಿತ್ತೂರನ್ನು ರಕ್ಷಿಸಲು ಯತ್ನಿಸಬೇಕಾದುದು ತನ್ನ ಕರ್ತವ್ಯ. ಅದನ್ನೆಲ್ಲ ಬಿಟ್ಟು, ಇಲ್ಲಿ, ತವರುಮನೆಯಲ್ಲಿ ನಿಷ್ಕ್ರಿಯಳಾಗಿ ಕುಳಿತಿರುವುದಾದರೂ ಹೇಗೆ?

ಆದರೆ, ಅದೆಲ್ಲವನ್ನೂ ತಂದೆ ತಾಯಿಯರೆದುರು ಬಿಚ್ಚಿ ಹೇಳು ವಂತೆಯೂ ಇರಲಿಲ್ಲ. ಸ್ತ್ರೀಸಹಜವಾದ ಲಜ್ಜೆ ಅಡ್ಡ ಬಂದು ಅವಳ ಮಾತುಗಳನ್ನು ನಾಲಗೆಯ ಮೇಲೆಯೇ ತಡೆಹಿಡಿಯುತ್ತಿತ್ತು. ತವರು ಮನೆಗೆ ಬಂದ ಹೆಣ್ಣು ಮಗಳು, ಗಂಡನ ಮನೆಗೆ ಹೋಗುವ ಆತುರವೆಷ್ಟೇ ಇದ್ದರೂ ಅದನ್ನು ಬಾಯಿ ಬಿಟ್ಟು ಆಡುವಂತಿಲ್ಲ. ಅವಳನ್ನು ಕರೆದೊಯ್ಯಲು ಗಂಡ ಬಂದಾಗ–ಅವನು ಬರದಿದ್ದರೆ ತಂದೆ ತಾಯಿಗಳು ಕರೆದೊಯ್ದಾಗ ಮಾತ್ರವೇ ಆಕೆ ಹೊರಡಬೇಕು. ತನ್ನನ್ನು ಕಳಿಸಿಕೊಡಬೇಕೆಂದು ಅವ ರೊಂದು ಮಾತು ತಿಳಿಸಿದ್ದರೂ ಸಾಕಾಗುತ್ತಿತ್ತು. ಆಗ ಅಪ್ಪಾಜಿ ಬೇಡ ವೆಂದರೂ ತಾನಿಲ್ಲಿ ನಿಲ್ಲುತ್ತಿರಲಿಲ್ಲ. ಆದರೆ....ಈಗ ಮಾತ್ರ ನಿರುಪಾಯ ವಾಯಿತು. ತನ್ನನ್ನು ಕಳಿಸಬೇಕೆಂದು ಏಕೆ ಬರೆಯಲಿಲ್ಲವೋ ಅವರು? ರಾಜಕಾರಣದ ಗಲಭೆಯಲ್ಲಿ ತನ್ನನ್ನವರು ಮರೆತು ಬಿಟ್ಟರಲಿಕ್ಕಿಲ್ಲವಷ್ಟೆ?

ತನ್ನ ವಿಚಾರವಾಗಿ ಅವರಲ್ಲಿದ್ದ ಪ್ರೇಮ ಈಗಲೂ ಸ್ಥಿರವಾಗಿಯೇ ಇರಬಹುದೇ? ಅಥವಾ....

ಆ ವಿಚಾರ ಬರುತ್ತಲೂ ಆಕೆಯ ಮನಸ್ಸು ಮತ್ತಷ್ಟು ಅಸ್ವಸ್ಥವಾಯಿತು. ದೊರೆಗಳಿನ್ನೂ ಹೊಸ ಹರೆಯುದವರು. ದೊಡ್ಡ ಸಂಸ್ಥಾನವನ್ನಾಳುವ ರಾಜರು. ಅಂಥವರ ಚಿತ್ತ ಚೆಲುವೆಯರ ಕಡೆ ಹೊರಳುವುದರಲ್ಲಿ ಆಶ್ಚರ್ಯವೇನೂ ಇಲ್ಲ. ಯಾರಿಗೆ ಗೊತ್ತು ! ತಾನಿತ್ತ ಬಂದ ಬಳಿಕ ಯಾವಳಾದರೊಬ್ಬ ರಂಭೆ ದೊರೆಗಳ ಮನಸ್ಸನ್ನಾಕರ್ಷಿಸಿಕೊಂಡಿರುವಳೊ ಏನೊ.

ಅಂದು ಬೆಳಗಿನಲ್ಲಿ ಕಂಡ ಕನಸನ್ನು ಮತ್ತೆ ನೆನೆದು ರುದ್ರಮ್ಮಾಜಿ ವಿಚಾರಕ್ಕೀಡಾದಳು. ಏನಿರಬಹುದು ಆ ಕನಸಿನ ಅರ್ಥ? ದೊರೆಗಳಿಗೆ ಅಪಾಯವಿದೆಯೆ? ಅಥವಾ ತನಗೇ ಅಪಾಯವಿದೆಯೇ? ಅವರು ತನ್ನನ್ನು ಬಿಟ್ಟು ದೂರ ದೂರ ಹೋಗುತ್ತಿದ್ದಂತೆ ಕಾಣಿಸಿತ್ತು. ಅವರ ಜೊತೆಯಲ್ಲೇ ಅಸ್ಪಷ್ಟ ಮುಖಮುದ್ರೆಯ ಯಾವುದೋ ಒಂದು ವ್ಯಕ್ತಿಯಿತ್ತು. ಅದನ್ನು ಹಿಂಬಾಲಿಸಿಕೊಂಡು ಅವರು ಬಿರುಬಿರನೆ ಹೊರಟು ಹೋದರು—ಗುಡ್ಡ ಬೆಟ್ಟ ಏರಿ, ಕಣಿವೆಯಿಳಿದು, ಕಡಿದಾದ ಕಂದರವೊಂದರಲ್ಲಿ ಕಾಲು ಜಾರಿ ಬೀಳುವುದರಲ್ಲಿದ್ದಾಗ ತಾನು ಅವರನ್ನು ಹಿಡಿದುಕೊಳ್ಳಲು ಧಾವಿಸಿದ್ದಳು. ಆದರೆ ಅವರು ತನ್ನ ಕೈಗೆ ಸಿಕ್ಕಿರಲಿಲ್ಲ. ಆ ವ್ಯಕ್ತಿಯೊಡನೆ ಅವರೂ ಅದೃಶ್ಯವಾಗಿದ್ದರು. ಅವರು ಪ್ರಪಾತಕ್ಕುರುಳಿದರೆಂದು ಹೆದರಿ ತಾನು ಚೀರಿಕೊಂಡಿದ್ದಳು. ಒಡನೆಯೇ ಎಚ್ಚರವಾಗಿತ್ತು.

ಅವರನ್ನು ಕರೆದೊಯ್ದ ಆ ವ್ಯಕ್ತಿ ಯಾವಳೊಬ್ಬ ತರುಣಿಯೇ ಆಗಿರಬಹುದೇ? ಅವಳ ಬಲೆಯಲ್ಲಿ ಸಿಲುಕಿಕೊಂಡು ದೊರೆಗಳು ತನ್ನನ್ನು ಮರೆತುಬಿಟ್ಟಿರಬಹುದೇ? ಪತ್ರದಲ್ಲಿ ತನ್ನ ಕ್ಷೇಮಸಮಾಚಾರವನ್ನಷ್ಟು ವಿಚಾರಿಸಿ, ತನ್ನನ್ನು ಕರೆಯಿಸುವ ಮಾತನ್ನೇ ಎತ್ತದಿರಲು ಅದೇ ಕಾರಣವಿರಬಹುದೇ?

"ದುಃಖಿಸಬೇಡ ರುದ್ರಾಣೀ. ಇನ್ನು ಕೆಲ ದಿನ ತಡೆದುಕೊ. ಆಮೇಲೆ ದೊರೆಗಳೇ ಬಂದು ನಿನ್ನನ್ನು ಕರೆದೊಯ್ಯುವರು" ಎಂದು ಮಗಳನ್ನು ಸಂತೈಸಲೆತ್ನಿಸಿದರು ದೇಸಾಯರು.

ರುದ್ರಾಣಿ ಮತ್ತೆ ಮಾತನಾಡಲಿಲ್ಲ. ಅಳಿಯನಿಗೆ ಉತ್ತರ ಬರೆಯಿಸ ಲೆಂದು ದೇಸಾಯರು ಹೊರಟುಹೋದರು. ಮಗಳ ಮೈದಡವುತ್ತಾ ಮಲ್ಲಮ್ಮಾಜಿಯೆಂದಳು :

" ಹೋಗಬೇಕು ಅಂತ ಬಹಳ ಆಸೆಯೇ ರುದ್ರಾಣೀ ? "

" ಹೋದರೆ ಒಳ್ಳೆಯದಲ್ಲವೇ ಅಮ್ಮಾಜಿ ? "

" ಹೌದಮ್ಮಾ. ಒಳ್ಳೆಯದೇ. ಆದರೂ, ಕಳಿಸಬೇಕೆಂದು ಅವರು ಬರೆಯದಿದ್ದರೆ ನಾವಾಗಿಯೇ ಕಳಿಸುವದೂ ಒಳ್ಳೆಯದಲ್ಲ. ಹೌದೋ ಅಲ್ಲವೋ ?"

ರುದ್ರಮ್ಮಾಜಿ ಅದನ್ನು ಅಲ್ಲಗಳೆಯುವಂತಿರಲಿಲ್ಲ.

ಅವಳು ಮತ್ತೆ ಮಹಡಿಗೆ ಹೋಗಿ ತನ್ನ ಕೊಟಡಿಯಲ್ಲಿ ಒರಗಿ ಕೊಂಡಳು. ಅವಳ ಹಿಂದೆಯೇ ಬಂದ ಅವಳ ಪ್ರೀತಿಯ ದಾಸಿ ಸಿಂಗಾರಿ, ಒಡತಿಯ ಪಾದಗಳನ್ನೊತ್ತುತ್ತಾ ಮಾತನಾಡಿದಳು :

" ಬಹಳ ಬ್ಯಾಸರಾದಂಗ ಕಾಣ್ತದಲ್ಲ ಒಡತಿಯರಿಗೆ ?"

" ಹೌದು ಸಿಂಗಾರಿ. ಬಹಳ ಬೇಸರ. ಜೀವವೇ ಬೇಡವಾಗಿದೆ," ಎಂದಳು ರುದ್ರಮ್ಮಾಜಿ. ತಾನು ಚಿಕ್ಕವಳಿದ್ದಾಗಿನಿಂದಲೂ ತನ್ನ ಸೇವೆ ಮಾಡುತ್ತಾ ಬಂದ ಆ ದಾಸಿಯಲ್ಲಿ ಆಕೆಗೆ ಸಹಜವಾಗಿಯೆ ವಿಶೇಷವಾದ ಸಲುಗೆಯಿತ್ತು. ಇತರರೆದುರು ಹೇಳಲಾಗದಂಥ ಅಂತರಂಗದ ರಹಸ್ಯ ಗಳನ್ನೂ ಕೂಡಾ ಆಕೆ ಸಿಂಗಾರಿಯೆದುರು ಹೇಳುತ್ತಿದ್ದುದಿತ್ತು.

" ಒಳಿತಾಯ್ತು ಅನ್ನಿರಿ. ಅಷ್ಟು ಬ್ಯಾಸರಾಗಲಿಕ್ಕೇನಾಗಿದೆ? ದೊರೆ ಗಳ ಮೇಲೆ ಸಿಟ್ಟೇ?"

" ಸಿಟ್ಟಲ್ಲ ಸಿಂಗಾರಿ. ನೋಡು. ನಾನಿಲ್ಲಿಗೆ ಬಂದು ಎರಡು ತಿಂಗಳ ಮೇಲಾಗುತಾಬಂತು. ಇನ್ನೂ ಎಷ್ಟು ದಿನ ಅಂತ ಇಲ್ಲಿಯೇ ಇರುವದು? ಅವರು ಬಂದು ಕರೆದುಕೊಂಡು ಹೋಗಬೇಕೋ ಬೇಡವೋ ?"

" ಸುಮ್ಮಸುಮ್ಮನೇ ದೊರೆಗಳ ಬಗ್ಗೆ ಬೇಸರ ಮಾಡಿಕೊಳ್ಳಬಾರದು ಒಡತೀ. ವೈರಿಗಳ ದಂಡು ಬಂದು ಮುತ್ತಿಗೆ ಹಾಕಿರುವಾಗ ಅವರು ರಾಜ ಧಾನಿ ಬಿಟ್ಟು ಬರುವದಾದರೂ ಹ್ಯಾಗೆ ಸಾಧ್ಯ ?"

" ಅವರು ಬರಲು ಸಾಧ್ಯವಾಗದಿದ್ದರೆ ಹೇಳಿಕಳಿಸಬಹುದಾಗಿತ್ತಲ್ಲ? ಅಪ್ಪಾಜಿಯವರೇ ನನ್ನನ್ನು ಕರೆದೊಯ್ದು ಬಿಟ್ಟು ಬರುತ್ತಿರಲಿಲ್ಲವೆ ?"

“ ಹೂಂ ಹಾಗೆ ಮಾಡಲು ಬರುತ್ತಿತ್ತು. ಆದರೂ, ದೊರೆಗಳು ಹಾಗೆ ಬರೆಯದಿರಲಿಕ್ಕೆ ಅಂಥಾದ್ದೊಂದು ಕಾರಣವೂ ಇರಬಹುದು. ಅದೇನೆಂದು ತಿಳಿದುಕೊಳ್ಳದೆ ಬೇಸರಿಸಬಾರದು ಒಡತೀ.”

“ ಮತ್ತಾವಳಾದರೂ ಸುಂದರಿಯ ಮೇಲೆ ಕಣ್ಣು ಬಿದ್ದಿದೆಯೊ ಏನೊ. ಅದಲ್ಲದೆ ಇನ್ನೇನು ಕಾರಣವಿದ್ದೀತು ? ”

“ ಛಿ. ಛಿ. ಅಂಥಾದ್ದೇನೂ ಇರಲಿಕ್ಕಿಲ್ಲ. ದೊರೆಗಳನ್ನ ನಾನೂ ನೋಡಿದೀನಲ್ಲಾ ಸರಿಯಾಗಿ....ನಿಮ್ಮಂಥ ರೂಪವತಿ, ಗುಣವತಿ ರಾಣಿಯಾಗಿರುವಾಗ ಅವರು ಬೇರೆ ಹೆಣ್ಣುಗಳನ್ನ ಕಣ್ಣೆತ್ತಿ ನೋಡುವದೂ ಶಕ್ಯವಿಲ್ಲ.”

“ ದೇಶ ಆಳುವ ರಾಜರಿಗೆ ಏಸೋ ರಾಣಿಯರು—ಅಂತ ಮಾತೇ ಇದೆಯಲ್ಲ ಸಿಂಗಾರೀ ?”

“ ಇರಬಹುದು. ಆದರೆ, ನಮ್ಮ ದೊರೆಗಳ ವಿಷಯದಲ್ಲಿ ಆ ಮಾತಿಗೆ ಅರ್ಥವಿಲ್ಲ. ನೀವು ಆ ಬಗ್ಗೆ ನಿಶ್ಚಿಂತರಾಗಿರಬೇಕು.”

“ ಇವತ್ತು ಮುಂಜಾನೆ ನಾ ಕಂಡ ಕನಸು ಗೊತ್ತಾದ ಮೇಲೆ ನೀನೇನು ಅನ್ನುವಿಯೊ !”

“ ಕನಸೇ ? ಎಂಥ ಕನಸು ಒಡತೀ ?”

ಮತ್ತೆ ಆ ಕನಸನ್ನು ನೆನಪಿಗೆ ತಂದುಕೊಳ್ಳುತ್ತ ಅದನ್ನು ಸಿಂಗಾರಿಗೆ ಹೇಳಿ ರುದ್ರಮ್ಮಾಜಿಯೆಂದಳು :

“ ಅವರನ್ನು ಕರೆದೊಯ್ದ ಆ ವ್ಯಕ್ತಿ ಹೆಂಗಸೇ ಆಗಿರಬಹುದು ಅಂತ ನನಗನಿಸ್ತದೆ.”

“ ಅದು ಹೆಂಗಸೇ ಅಂತ ಹ್ಯಾಗೆ ಹೇಳ್ತೀರಿ ? ಅದರ ಮುಖವನ್ನೇನಾದರೂ ನೀವು ನೋಡಿದಿರಾ ?”

“ ಮುಖವೇನೊ ಸ್ಪಷ್ಟವಾಗಿಕಾಣಲಿಲ್ಲ. ನಿಜ.”

ಒಂದು ನಿಮಿಷ ಸುಮ್ಮನಿದ್ದು, ಮನಸ್ಸಿನಲ್ಲಿಯೇ ಏನನ್ನೋ ವಿಚಾರ ಮಾಡುತ್ತಿದ್ದು, ಅನಂತರ ಸಿಂಗಾರಿಯೆಂದಳು :

“ ಈಗ ಕಿತ್ತೂರಿಗೆ ಬಂದಿರುವ ಗಂಡಾಂತರವನ್ನ ಲಕ್ಷ್ಯಕ್ಕೆ ತಂದುಕೊಂಡರೆ ನಿಮ್ಮ ಕನಸಿನ ಅರ್ಥ ಬೇರೆಯೇ ಆಗ್ತದೆ.”

ರುದ್ರಮ್ಮಾಜಿಗೂ ಆ ಕಲ್ಪನೆ ಯಾವಾಗಲೋ ಬಂದು ಹೋಗಿತ್ತು. ಈಗ ಪುನಃ ಸಿಂಗಾರಿಯ ಬಾಯಿಂದ ಆ ವಿಚಾರ ಹೊರಡುತ್ತಲೂ ಅವಳು ಅಸ್ವಸ್ಥಳಾಗಿ ಥಟ್ಟನೆದ್ದು ಕುಳಿತು, ಸಿಂಗಾರಿಯ ಭುಜಗಳ ಮೇಲೆ ಕೈಗಳನ್ನೂರಿ ಕೇಳಿದಳು:

"ಹಾಗೂ ಆಗುವ ಸಂಭವವಿದೆಯಲ್ಲವೇ ಸಿಂಗಾರೀ ?"

"ಹೌದು ಒಡತೀ. ಸಂಭವವೇನೋ ಇದೆ. ಆದರೆ ದೇವರ ದಯದಿಂದ ಹಾಗಾಗದಿರಲಿ."

"ದೊರೆಗಳು ಇಂಥ ಗಂಡಾಂತರದಲ್ಲಿರುವ ವೇಳೆಯಲ್ಲಿ ನಾನಿಲ್ಲಿ ಹ್ಯಾಗಾದರೂ ಇರಲಿ ಸಿಂಗಾರೀ ?"

"ಬೇರೆ ಉಪಾಯವಿಲ್ಲವಲ್ಲ ಒಡತೀ ?"

"ಉಪಾಯವೇಕಿಲ್ಲ ಸಿಂಗಾರಿ ? ನನಗೇನು ಯುದ್ಧ ಮಾಡಲು ಬರುವದಿಲ್ಲವೆ ? ಕತ್ತಿ ತಿರುವಲು ಬರುವದಿಲ್ಲವೆ ? ನಾನೊಬ್ಬಳೇ ನೂರಾರು ವೈರಿಗಳ ರುಂಡ ಕತ್ತರಿಸಬಲ್ಲೆ."

"ನೀವು ಅಂಥ ವೀರರಮಣಿಯರೇ ಇದ್ದೀರಿ. ನನಗೇನು ಗೊತ್ತಿಲ್ಲವೆ? ಆದರೂ...."

"ಅಪ್ಪಾಜಿಯವರು ನನ್ನನ್ನು ಗಂಡು ಮಗನಂತೆಯೇ ಬೆಳಸಿದ್ದಾರೆ. ಯುದ್ಧ ವಿದ್ಯೆ, ಶಸ್ತ್ರವಿದ್ಯೆ, ಕುದುರೆ ಸವಾರಿ ಎಲ್ಲಾ ಕಲಿಸಿದಾರೆ. ಪ್ರಸಂಗ ಬಂದರೆ ನಾನೂ ಕೂಡಾ ಕಾದಾಡಬೇಕೆಂದೇ ಅಲ್ಲವೇ ಅವರು ನನಗೆ ಇದನ್ನೆಲ್ಲಾ ಕಲಿಸಿದ್ದು ? ಇಂಥ ಸಂದರ್ಭದಲ್ಲಿ ನಾನು ಹೋರಾಡದಿದ್ದರೆ ಇನ್ನ್ಯಾವಾಗ ಹೋರಾಡುವದು ? ನನ್ನ ಕಿತ್ತೂರು ವೈರಿಗಳ ಹಿಡಿತಕ್ಕೆ ಸಿಕ್ಕಿರುವಾಗ ನಾನು ತವರುಮನೆಯಲ್ಲಿ ತಣ್ಣಗೆ ಕೂತಿರುವದಾದರೂ ಹ್ಯಾಗೆ ಸಿಂಗಾರೀ ?"

"ಮತ್ತೇನು ಮಾಡಬೇಕೆನ್ನುತೀರಿ ಒಡತೀ ?"

"ಅಪ್ಪಾಜಿಯವರನ್ನ ಹೇಗಾದರೂ ಒಪ್ಪಿಸಿ ಈಗಿಂದೀಗ ಕಿತ್ತೂರಿಗೆ ಹೊರಡಬೇಕು."

"ಅವರು ಒಪ್ಪುವದು ಕಷ್ಟ."

"ಅವರು ಒಪ್ಪಿದರೂ ಸರಿ, ಒಪ್ಪದಿದ್ದರೂ ಸರಿ. ನಾನಂತೂ ಹೊರಟು ಹೋಗಬೇಕು ಅಂತ ಅನ್ನಿಸುತ್ತಿದೆ."

" ನೀವೊಬ್ಬರೇ ಹೇಗೆ ಹೋಗುವವರು ಒಡತೀ ?"

" ನನ್ನ ಸಂಗಡ ನೀನೂ ಬಂದುಬಿಡು. ಗಂಡು ವೇಷ ಹಾಕಿಕೊಂಡು ಇಬ್ಬರೂ ಹೊರಟುಬಿಡೋಣ."

" ಹೂಂ! ಅದೆಲ್ಲಾದರೂ ಶಕ್ಯವೇ? ನಾನೇನೊ ಗಂಡು ವೇಷ ಹಾಕಿದರೂ ನಡೆದೀತು, ನಾನು ಹೆಣ್ಣು ಅಂತ ಯಾರಿಗೂ ಗೊತ್ತಾಗ ಲಿಕ್ಕಿಲ್ಲ. ನಿಮ್ಮನ್ನು ಮಾತ್ರ ಯಾರಾದರೂ ಗುರುತಿಸಬಹುದು. ಈ ಉಕ್ಕಿಬರುವ ಯೌವನವನ್ನ ಯಾವ ವೇಷ ಮುಚ್ಚಬಲ್ಲದು?" ಎಂದು ನಗುತ್ತಾ ನುಡಿದಳು ಸಿಂಗಾರಿ.

ರುದ್ರಮ್ಮಾಜಿಯೂ ವಿಷಾದದಿಂದ ನಗುತ್ತ ತನ್ನಷ್ಟಕ್ಕೆ ತಾನೆ ಹೇಳಿ ಕೊಂಡಳು :

" ಹೆಣ್ಣಾಗಿ ಹುಟ್ಟುವ ಬದಲು ನಾನು ಗಂಡಾಗಿದ್ದರೆಷ್ಟು ಚೆನ್ನಾಗು ತಿತ್ತು !"

ಮರುಕ್ಷಣವೇ ತನ್ನ ವಿಚಾರದ ವೈಚಿತ್ರ್ಯವನ್ನು ಗಮನಿಸಿ ಅವ ಳೆಂದುಕೊಂಡಳು :

" ಗಂಡಾಗಿ ಹುಟ್ಟಿದ್ದರೆ ಕಿತ್ತೂರಿಗೂ ನನಗೂ ಸಂಬಂಧವೆಲ್ಲಿ ಬರು ತಿತ್ತು ? ಅಯ್ಯೋ ಹುಚ್ಚಿ !"

೭

ಇರುಳಿನ ಎರಡನೆಯ ಪ್ರಹರ ಕಳೆದುಹೋಗಿತ್ತು. ದುಬ್ಬನಮರಡಿಯ ಮೇಲೆ ಬೀಡುಬಿಟ್ಟಿದ್ದ ಟೀಪುವಿನ ದಂಡು ಗಾಢನಿದ್ರೆಯಲ್ಲಿ ತಲ್ಲೀನವಾಗಿತ್ತು. ಪಹರೆಯ ಸೈನಿಕರ ಅಡಿಗಳ ಸದ್ದನ್ನು ಬಿಟ್ಟರೆ ಪಾಳಯದಲ್ಲಿ ಇನ್ನಾವ ಸದ್ದೂ ಕೇಳಬರುತ್ತಿರಲಿಲ್ಲ. ಅಂಥ ಸಮಯದಲ್ಲೂ ಸೇನಾಪತಿ ಬುರ್ಹಾ ನುದ್ದೀನನ ಶಿಬಿರದಲ್ಲಿ ಮಾತ್ರ ದೀಪವುರಿಯುತ್ತಿತ್ತು. ಡೇರಾದ ಹೊರ ಗಡೆ ಬಂದೂಕಧಾರಿ ಸೈನಿಕರು ಎಚ್ಚರದಿಂದ ಕಾವಲು ಮಾಡುತ್ತಿದ್ದರು. ಒಳಗಡೆ, ವಿರಾಮಪೀಠದಲ್ಲೊರಗಿಕೊಂಡು, ಹುಕ್ಕಾದ ನಳಿಗೆಯನ್ನು ಬಾಯ ಲ್ಲಿಟ್ಟುಕೊಂಡು ಆಗಾಗ ಹೊಗೆಯೆಳೆಯುತ್ತ, ಸನಿಯದಲ್ಲಿಯೆ ಕುಳಿತಿದ್ದ

ವೆಂಕಟರಂಗಯ್ಯನೊಡನೆ ಪಿಸುದನಿಯಲ್ಲಿ ಆಪ್ತಾಲೋಚನೆ ನಡಸಿದ್ದ ಬುರ್ಹಾನುದ್ದೀನ.

"ಹಾಗಾದರೆ ಅದೇ ನಿಶ್ಚಯವೇ ಸರದಾರರೆ?"

"ಸುಲ್ತಾನರ ಹುಕುಂ ಅಂತೂ ಹಾಗಿದೆಯಲ್ಲ ಸರಕಾರ್?" ಎಂದ ವೆಂಕಟರಂಗಯ್ಯ.

"ನರಗುಂದದಲ್ಲಿ ಹಾಗಾಯಿತು. ಇಲ್ಲಿ ಹೀಗೆ! ನಮ್ಮನ್ನು ನಂಬಿ ಕುಳಿತ ಜನರನ್ನು ಈ ರೀತಿಯಾಗಿ ಮೋಸಗೊಳಿಸುವದೆಂದರೆ ನನಗೇಕೋ ಅಸಹ್ಯ ಅನಿಸುತ್ತೆ. ಎದುರಾ ಎದುರು ಯುದ್ಧ ಮಾಡಬೇಕು, ಸೋಲು ಗೆಲವು ನಮ್ಮ ಕೈಯಲ್ಲಿನದಲ್ಲ. ಅದೆಲ್ಲಾ ಖುದಾನ ಮರ್ಜಿಯ ಮಾತು. ಒಮ್ಮೆ ಗೆಲ್ಲಬಹುದು, ಒಮ್ಮೆ ಸೋಲಬಹುದು. ಏನೇ ಆದರೂ ಯುದ್ಧವೂ ಸಹ ನೀತಿಯಿಂದಲೇ ನಡೆಯಬೇಕು, ಅಂ, ನೀವೇನು ಅನ್ನುತ್ತೀರಿ?"

"ತಾವು ಹೇಳುವುದೂ ಸರಿಯೆ. ಅನಾದಿಕಾಲದಿಂದಲೂ ನಡೆದು ಬಂದ ಯುದ್ಧನೀತಿಯನ್ನು ಬಿಟ್ಟು ನಾವು ಅಡ್ಡಹಾದಿ ಹಿಡಿಯಬಾರದು ನಿಜ."

"ಎಂಟು ತಿಂಗಳು ಮುತ್ತಿಗೆ ಹಾಕಿ ಕೂತರೂ ನರಗುಂದದವರು ನಮಗೆ ಶರಣು ಬರಲಿಲ್ಲ. ಕೋಟೆಯಲ್ಲಿದ್ದ ಅನ್ನಧಾನ್ಯ ತೀರಿಹೋದಾಗ ನಿರುಪಾಯರಾಗಿ ಕಡೆಯ ಯತ್ನ ಮಾಡಲೆಂದು ನಮ್ಮ ಮೇಲೆ ಬೀಳುವವರಿದ್ದರು. ಆ ಚಕಮುಕಿಯಲ್ಲಿ ನಮ್ಮ ಕಡೆಯ ನೂರಾರು ಮಂದಿಯಾದರೂ ಆಹುತಿಯಾಗುವಂತಿತ್ತು. ಅದನ್ನು ತಪ್ಪಿಸಬೇಕೆಂದು ಸಂಧಾನದ ಮಾತು ತೆಗೆದು ತೊರಗಲ್ಲ ಕಾಜಿಯನ್ನು ನಡುವೆಮಾಡಿ ರಾಜನನ್ನೂ ದಿವಾನನನ್ನೂ ಬರಮಾಡಿಕೊಂಡೆವು. ಅವರ ರಾಜ್ಯವನ್ನು ಅವರಿಗೇ ಕೊಡುವುದಾಗಿಯೂ ಅವರ ಜೀವಕ್ಕೇನೂ ಅಪಾಯವಾಗದೆಂದೂ ವಚನಕೊಟ್ಟೆವು. ಆದರೆ, ನಮ್ಮ ವಚನದಂತೆ ನಡೆದುಕೊಳ್ಳಲು ಶಕ್ಯವಾಗಲಿಲ್ಲ. ಸುಲ್ತಾನರು...."

"ಅದೆಲ್ಲಾ ರಾಜಕಾರಣದ ತಂತ್ರ ಸರಕಾರ್. ಮುತ್ಸದ್ದಿತನದಲ್ಲಿ ನಮ್ಮ ಸುಲ್ತಾನರನ್ನು ಹಿಂದೆಹಾಕುವವರು ಹಿಂದೂದೇಶದಲ್ಲೇ ಇನ್ನೊಬ್ಬರಿಲ್ಲ. ಅವರು ಇಂಥ ಕುಶಾಗ್ರಬುದ್ಧಿಯವರಿರುವರೆಂತಲೇ ಇಷ್ಟು ದೊಡ್ಡ ರಾಜ್ಯ ನಮ್ಮ ವಶವಾಯಿತು. ಅಲ್ಲವೆ?"

"ನಿಜ. ಅದೆಲ್ಲಾ ನಿಜ. ಆದರೂ, ಕೊಟ್ಟ ವಚನಕ್ಕೆ ತಪ್ಪಿ ನಡೆಯುವದೆಂದರೆ ನನ್ನ ಜೀವದ ಮೇಲೇ ಬಂದಂತಾಗುತ್ತೆ. ನರಗುಂದದಲ್ಲಿ ಹಾಗಾಯಿತು. ಇನ್ನು ಇಲ್ಲೂ ಹಾಗೇ ನಡೆಯಬೇಕಾಗಿದೆ...."

"ಇಂಥ ಜನರನ್ನು ಅದೇ ರೀತಿ ನಡಸಿಕೊಳ್ಳುವದೇ ಯೋಗ್ಯವಲ್ಲವೇ ಸರಕಾರ್?"

"ಅಂದರೆ?"

"ನರಿಯನ್ನು ನರಿಯಂತೆಯೇ ನಡಸಿಕೊಳ್ಳುವದರಲ್ಲಿ ತಪ್ಪೇನೂ ಇಲ್ಲವಲ್ಲ?"

"ಕಿತ್ತೂರು ಅಂದರೆ ನರಿಯಂತೆಯೇ ಅನ್ನುವಿರಾ?"

"ಮತ್ತೇನು? ಇಲ್ಲಿಯ ಜನರಲ್ಲಿ ಹುಲಿಯ ಗುಣ ಒಂದಾದರೂ ಇದ್ದರೆ, ನಾವು ಬಂದು ಡೇರಾ ಹಾಕಿ ಕೂತು ಇಷ್ಟು ದಿನ ಆದರೂ ಒಂದು ಗುಂಡನ್ನೂ ಹಾರಿಸದೆ, ಒಂದು ಜೀವವನ್ನೂ ತೆಗೆದುಕೊಳ್ಳದೆ ಸುಮ್ಮನಿರುತ್ತಿದ್ದರೇ? ಅದೇ ನರಗುಂದದಲ್ಲಿ ನೋಡಿದಿರಲ್ಲ, ದಿನಾಲೂ ಒಂದಿಲ್ಲೊಂದು ಚಕಮಕಿ ಇದ್ದೇ ಇರುತ್ತಿತ್ತು. ಇಲ್ಲಿ ಮಾತ್ರ ಎಲ್ಲಾ ತಣ್ಣಗೆ. ಈ ಜನರಲ್ಲಿ ಜೀವವೇ ಇಲ್ಲವೇನೋ ಅಂತಲೂ ನನಗನ್ನಿಸುತ್ತೆ ಆಗಾಗ. ಇಂಥವರನ್ನು ನರಿಗಳೆನ್ನದೆ ಇನ್ನೇನೆನ್ನಬೇಕೋ ತಿಳಿಯದು."

"ಕಿತ್ತೂರಿನ ಜನರನ್ನು ನೀವು ಸರಿಯಾಗಿ ಅರ್ಥಮಾಡಿಕೊಂಡಂತೆ ಕಾಣುವದಿಲ್ಲ ವೆಂಕಟರಂಗಯ್ಯನವರೆ. ಇವರು ನಮಗೆ ಅಂಜಿ ಸುಮ್ಮನೆ ಕುಳಿತಿರಬಹುದೆಂದು ನೀವು ತಿಳಿದಿದ್ದರೆ ಅದು ನಿಮ್ಮ ತಪ್ಪು. ನಾವು ಬಂದ ತಕ್ಷಣ ಯುದ್ಧವನ್ನೇ ಸಾರಿಬಿಟ್ಟಿದ್ದರೆ ಅವರೂ ಯುದ್ಧಮಾಡುತ್ತಿದ್ದರು. ನಾವು ಸ್ನೇಹಿತರಂತೆ ಬಂದು ಅವರ ನಂಬಿಕೆಯನ್ನು ಕೋರಿದ್ದರಿಂದ ನಮ್ಮ ಸ್ನೇಹಹಸ್ತ ಸ್ವೀಕರಿಸಿ ಅವರು ಸುಮ್ಮನಾದರು. ಒಮ್ಮೆ ನಂಬಿದ ಬಳಿಕ ಆ ನಂಬಿಕೆಗೆ ದ್ರೋಹ ಬಗೆಯುವಂಥ ಜನರಲ್ಲ ಇವರು. ಈಗ ನಾವು ಕೈಗೊಳ್ಳಲಿರುವ ಕ್ರಮದಿಂದ ಅಲ್ಲಿ ಏನು ಪ್ರತಿಕ್ರಿಯೆಯಾಗುವದೆಂಬುದನ್ನು ನೀವೇ ನೋಡುವಿರಂತೆ."

"ಅವರೇನು ಮಾಡಬಹುದು ಅಂತೀರಿ ಸರಕಾರ್?"

"ಸ್ನೇಹಿತರಂತೆ ನಟಿಸುತ್ತ ಇದುವರೆಗೆ ಅವರ ಆತಿಥ್ಯ ಸ್ವೀಕರಿಸು

ತ್ತಿದ್ದ ನಾವು ಒಮ್ಮಿಂದೊಮ್ಮೆಲೇ ಶತ್ರುಗಳಂತೆ ಮೇಲೆರಗಿದಾಗ ಅವರು ಕೆರಳದಿರಲಾರರು. ನಾವು ಬಲವಾದ ಪ್ರತಿಭಟನೆಯನ್ನೆದುರಿಸಬೇಕಾಗಿ ಬರಬಹುದು."

"ಖಾನ್‌ಸಾಹೇಬರು ಕ್ಷಮಿಸಬೇಕು. ಕಿತ್ತೂರಿನ ಜನರು ನಮ್ಮ ವಿರುದ್ಧ ಯುದ್ಧಮಾಡಬಹುದಂತ ನನಗೇನು ಅನಿಸುವುದಿಲ್ಲ."

"ಅಷ್ಟು ನಿಶ್ಚಯದಿಂದ ಹೀಗೆ ಅನ್ನಲು ಏನು ಆಧಾರ?"

"ಅಲ್ಲಿ ನಡೆಯುತ್ತಿರುವುದನ್ನೆಲ್ಲಾ ನಮ್ಮ ಗೂಢಚಾರರು ವರದಿ ಮಾಡುತ್ತಲೇ ಇರುವರಲ್ಲ ಸರಕಾರ್? ನಾವು ಏನನ್ನು ಮಾಡಿದರೂ ಅದಕ್ಕೆ ಪ್ರತೀಕಾರ ಮಾಡಬಾರದೆಂದೇ ದಿವಾನರು ನಿಶ್ಚಯಮಾಡಿದಾರಂತೆ."

"ಒಬ್ಬ ದಿವಾನರು ಹಾಗೆ ನಿಶ್ಚಯಮಾಡಿದ ಮಾತ್ರಕ್ಕೆ ಇನ್ನುಳಿದವ ರೆಲ್ಲಾ ಅವರ ನಿಶ್ಚಯದಂತೆಯೇ ನಡೆಯುವರೆಂದು ನಾವೇಕೆ ತಿಳಿಯಬೇಕು. ಈಗಲೂ ಅಲ್ಲಿ ಯುದ್ಧದ ಸಿದ್ಧತೆ ನಡೆದೇ ಇದೆಯೆಂದೂ ಸಮಾಚಾರ ವಿದೆಯಲ್ಲ?"

"ನಡೆದಿರಬಹುದು. ಆದರೆ, ಅದೆಲ್ಲಾ ವ್ಯರ್ಥ. ದಿವಾನರ ಮಾತಿನ ವಿರುದ್ಧ ಹೋಗುವ ಧೈರ್ಯ ಅಲ್ಲಿ ಯಾರಿಗೂ ಇಲ್ಲ, ಸ್ವತಃ ದೊರೆಯೇ ದಿವಾನರು ಕೋರಿದ ಗೆರೆಯನ್ನು ದಾಟುವುದಿಲ್ಲ."

"ದಿವಾನರ ಮಾತನ್ನು ಕೇಳಬಾರದೆಂದೇ ಸೇನಾಪತಿಗಳು ನಿರ್ಧರಿಸಿ ರುವರಂತಲ್ಲ?"

"ದೊರೆಯೇ ದಿವಾನರ ಕೈಯಲ್ಲಿರುವಾಗ ಸೇನಾಪತಿಗಳ ಆಟವೇನು ನಡೆದೀತು ಸರಕಾರ್?"

"ಹಾಗಾದರೆ ಎಲ್ಲವೂ ಸುಲಭವಾಗಿ ಶಾಂತವಾಗಿ ಮುಗಿಯಬಹುದು ಅನ್ನುತ್ತೀರಾ?"

"ಅಲ್ಲಿನ ಪರಿಸ್ಥಿತಿಯನ್ನು ನೋಡಿದರೆ ನನಗಂತೂ ಹಾಗೇ ಅನ್ನಿಸುತ್ತೆ. ಕೊಂಚವೂ ರಕ್ತಪಾತವಿಲ್ಲದೆ ಕೋಟೆ ನಮ್ಮ ವಶವಾಗಬಹುದು."

"ಹಾಗೂ ಆಗಬಹುದೆಂದೇ ಇಟ್ಟುಕೊಳ್ಳೋಣ. ಆದರೆ, ನನ ಗೇಕೋ ಇದು ಸರಿಯೆನಿಸಲೊಲ್ಲದು. ನಂಬಿದವರ ಕೊರಳು ಹೇಗೆ ಕುಯ್ಯುವದು?" ಎನ್ನುತ್ತಾ ಬುರ್ಹಾನುದ್ದೀನ ಆಸನದಿಂದೆದ್ದು ಡೇರೆಯಲ್ಲಿ ಶತಪಥ ಹಾಕತೊಡಗಿದ.

ಸರಳಹೃದಯುದ ಸೇನಾಪತಿಯ ಎದೆಯು ಕಳವಳವನ್ನು ಗಮನಿಸಿದ ಹಾಗೆಲ್ಲ ವೆಂಕಟರಂಗಯ್ಯನಿಗೆ ಒಳಗೊಳಗೇ ತಮಾಷೆಯೆನ್ನಿಸದಿರಲಿಲ್ಲ. ಇಂಥ ಕೋಮಲ ಹೃದಯುದವರು ಸೇನಾನಾಯಕರಾಗುವುದೇ ಅನುಚಿತ ವೆಂದು ಅವನಿಗನಿಸಿತು. ಬುರ್ಹಾನುದ್ದೀನ ಶೂರಪುರುಷ. ಯುದ್ಧ ವಿದ್ಯೆಯಲ್ಲೂ ಪರಿಣತ. ಕಲಿತನದಿಂದ ಕಾದಿ, ರಾಜ್ಯವನ್ನು ವಿಸ್ತರಿಸುವುದರಲ್ಲಿ ಸಮರ್ಥ. ಆದರೆ, ಇಂಥ ಪ್ರಚಂಡ ಸೇನೆಯ ಅಧಿಪತಿಯಲ್ಲಿರಬೇಕಾದ ನಿಷ್ಠುರ ಹೃದಯ ಮಾತ್ರ ಈತನಲ್ಲಿಲ್ಲ. ಪ್ರೇಮದಲ್ಲಿ ಹೇಗೋ, ಹಾಗೆಯೇ ಸಮರದಲ್ಲಿ ಎಲ್ಲವೂ ಕ್ಷಮ್ಯವೆಂಬುದು ಇವನಿಗೆ ತಿಳಿಯದು. ರಾಜ್ಯವಿಸ್ತಾರ ಮಾಡುವುದೆಂದರೆ ಹುಡುಗಾಟದ ವಿಚಾರವಲ್ಲ. ನ್ಯಾಯಾನ್ಯಾಯಗಳನ್ನು ನೋಡುತ್ತ ಕುಳಿತರೆ ಸುಲಭವಾದ ವಿಜಯಗಳು ದೊರೆಯುವುದುಂಟೇ ?

"ತಾವು ಸುಮ್ಮಸುಮ್ಮನೆ ವ್ಯಸನಪಟ್ಟುಕೊಳ್ಳುತ್ತೀರಿ ಸರಕಾರ್. ಕೋಟೆಯನ್ನು ಕೈವಶಪಡಿಸಿಕೊಳ್ಳಬೇಕೆಂದು ಸುಲ್ತಾನರ ಆಜ್ಞೆಯಾಗಿದೆ. ಅದರಂತೆ ನಡೆದುಕೊಳ್ಳುವದು ನಮ್ಮ ಕರ್ತವ್ಯ. ಇದರಲ್ಲಿ ನ್ಯಾಯಾನ್ಯಾಯಗಳ ಪ್ರಶ್ನೆಯೇ ಬರುವದಿಲ್ಲ. ತಾವೇಕೆ ವ್ಯರ್ಥವಾಗಿ ಕಳವಳಪಟ್ಟುಕೊಳ್ಳಬೇಕು ?" ಎಂದ, ವೆಂಕಟರಂಗಯ್ಯ.

"ಊಹೂಂ. ಹಾಗಲ್ಲ ಸರದಾರರೆ. ಈ ಪ್ರಶ್ನೆ ತೊಡಕಿನದಾಗಿದೆ. ಸುಲ್ತಾನರ ಆಜ್ಞೆಯನ್ನು ಶಿರಸಾವಹಿಸಿ ಅದರಂತೆ ನಡೆದುಕೊಳ್ಳಬೇಕಾದದ್ದು ನಮ್ಮ ಕರ್ತವ್ಯ ಅನ್ನುವದೇನೋ ನಿಜ. ಆದರೂ ನಮ್ಮ ಧರ್ಮವನ್ನೂ ನಾವು ಮರೆಯುವಂತಿಲ್ಲ. ಸ್ನೇಹಿತರಂತೆ ಬಂದವರು ಸ್ನೇಹಿತರಂತೆಯೇ ಹೋಗಬೇಕಾದದ್ದು ಧರ್ಮವಲ್ಲವೆ ?"

"ಅದೇನೇ ಇದ್ದರೂ, ನಾವು ಹೇಗೆ ಕಾರ್ಯಮಾಡಬೇಕೆಂದು ವಿಧಿಸುವವರು ಸುಲ್ತಾನರು. ಅವರ ಅಪ್ಪಣೆಯನ್ನು ಪಾಲಿಸಿದರಾಯಿತು. ನಾವು ಬೇರೆ ವಿಚಾರ ಮಾಡಬೇಕಾಗಿಯೇ ಇಲ್ಲ."

"ನಿಜ. ಆದರೂ ನನ್ನ ಮನಸ್ಸು ಸಮಾಧಾನದಿಂದಿಲ್ಲ.... ಸುಲ್ತಾನರಿಗೆ ನಾನು ಸರಿಯಾದ ಸೇನಾಪತಿಯಲ್ಲವೆಂದೂ ಅನಿಸುತ್ತೆ ಒಮ್ಮೊಮ್ಮೆ. ಈ ಚಾಕರಿಯನ್ನು ಬಿಟ್ಟು ನನ್ನೂರಿನಲ್ಲಿ ಸ್ವಸ್ಥವಾಗಿ ಕುಳಿತುಕೊಂಡು ಅಲ್ಲಾನ ಪ್ರಾರ್ಥನೆ ಮಾಡುತ್ತಾ ಒಳ್ಳೆಯ ಜೀವನ ನಡಸಬೇಕೆಂದೂ ಅನಿ

ಸುತ್ತೆ. ಆದರೆ, ಸುಲ್ತಾನರ ಅಪ್ಪಣೆ ಸಿಕ್ಕಲೊಲ್ಲದು...."

"ತಮ್ಮಂಥ ನಂಬಿಗೆಯ ಸೇನಾಪತಿಗಳನ್ನು ಅವರೇಕೆ ಬಿಟ್ಟು ಕೊಟ್ಟಾರು ಸರಕಾರ್ ? ತಾವು ಕೇವಲ ಅವರ ಸೇನಾನಾಯಕರಷ್ಟೇ ಅಲ್ಲ, ನಂಟರೂ ಹೌದು."

"ಈ ನಂಟತನವೇ ನನ್ನನ್ನು ಸಂಕಟದಲ್ಲಿ ಸಿಲುಕಿಸಿದೆ. ಸುಲ್ತಾನರ ಸೇನೆಯಿಂದ ಸುಲಭವಾಗಿ ಮುಕ್ತವಾಗುವಂತಿಲ್ಲ." ಎನ್ನುತ್ತಾ ಬುರ್ಹಾನುದ್ದೀನ ಮತ್ತೆ ಆಸನದಲ್ಲಿ ಮೈಚೆಲ್ಲಿ ಹುಕ್ಕಾದ ಹೊಗೆಯೆಳೆಯ ತೊಡಗಿದ.

"ಹಾಗಾದರೆ ನಾಳಿನ ಕಾರ್ಯಕ್ರಮ ನಿಶ್ಚಯವಾದಂತಲ್ಲವೇ ಸರಕಾರ್ ?"

"ಬೇರೆ ಉಪಾಯವಿಲ್ಲವಲ್ಲ ವೆಂಕಟರಂಗಯ್ಯ ?" ಎಂದು ಬೇಸರದಿಂದಲೇ ನುಡಿದು, ಹುಕ್ಕಾವನ್ನು ಆಚೆ ತಳ್ಳಿ, ಒಂದು ಬಾರಿ ಆಕಳಿಸಿ, ಆಸನದಲ್ಲಿಯೇ ದೇಹವನ್ನೊರಗಿಸಿ ಕಣ್ಣು ಮುಚ್ಚಿಕೊಂಡ ಬುರ್ಹಾನುದ್ದೀನ. ಸೂಚನೆಯನ್ನರಿತುಕೊಂಡು ವೆಂಕಟರಂಗಯ್ಯ ಮೌನವಾಗಿ ಹೊರಟು ನಡೆದ.

ಮರುದಿನ ಇನ್ನೂ ಅರುಣೋದಯವಾಗಿರಲಿಲ್ಲ. ಅಷ್ಟರಲ್ಲಿಯೇ ಟೀಪುವಿನ ದಂಡು ಎದ್ದು ಶಸ್ತ್ರಾಸ್ತ್ರ ಧರಿಸಿ ಆಕ್ರಮಣ ಮಾಡಲು ಸಿದ್ಧವಾಯಿತು. ಎಲ್ಲಕ್ಕೂ ಮುಂದೆ ತೋಫುಗಳು, ಅವುಗಳ ಹಿಂದೆ ಕುದುರೆ ಸವಾರರು, ಅವರ ಹಿಂದೆ ಬಂದೂಕ ಧಾರಿಗಳಾದ ಸೈನಿಕರು ಸಜ್ಜಾಗಿ ನಿಂತರು. ಮುನ್ನಡೆಯಲು ಸೇನಾಪತಿಯ ಆಜ್ಞೆಯಾಗುವುದೊಂದೇ ಉಳಿದಿತ್ತು.

ಬುರ್ಹಾನುದ್ದೀನನ ಪಾಳಯದ ಹೊರಬೀದಿಯ ಬಯಲಲ್ಲಿ ದಂಡು ಹೀಗೆ ಸಜ್ಜಾಗಿ ನಿಂತುದನ್ನು ಕೋಟೆಯ ಮೇಲಿನಿಂದ ಕಂಡ ಕಾವಲಿನವರು ಆ ಸಮಾಚಾರವನ್ನೊಯ್ದು ಕಿತ್ತೂರಿನ ದಳಪತಿಗೆ ಮುಟ್ಟಿಸುತ್ತಲೂ ಆತನೇ ಬಂದು, ಬುರುಜಿನ ಮೇಲೇರಿ ನಿಂತು ವೈರಿಸೇನೆಯ ವ್ಯೂಹವನ್ನು ವೀಕ್ಷಿಸಿದ. ದಾಳಿಗಾಗಿ ಮುನ್ನಡೆಯುವ ಭಂಗಿಯಲ್ಲಿ ನಿಂತು ಆ ಸೇನೆಯನ್ನು ಕಂಡಾಗ ತಿಮ್ಮನಗೌಡನಿಗೆ ವೈರಿಯ ಉದ್ದೇಶದ ಬಗೆಗೆ ಸಂಶಯವೇ ಉಳಿಯಲಿಲ್ಲ.

ವೈರಿಗಳು ದಾಳಿಮಾಡಲು ಹೊರಟಿರುವ ಸಮಾಚಾರ ಅಷ್ಟರೊಳ

ಗಾಗಿ ಕೋಟೆಯಲ್ಲೆಲ್ಲ ಪಸರಿಸಿತ್ತು. ಅದೇತಾನೆ ಎದ್ದು ಸ್ನಾನ ಮುಗಿಸಿ, ಪೂಜೆಗೆ ಅಣಿಯಾಗುತ್ತಿದ್ದ ಮಲ್ಲಸರ್ಜ, ಪೂಜೆಯ ವಿಚಾರ ತ್ಯಜಿಸಿ, ಬಟ್ಟೆ ಧರಿಸಿಕೊಂಡು ಹೊರಗೆ ಬಂದ. ಸ್ವಲ್ಪ ಸಮಯದಲ್ಲಿಯೇ ದಿವಾನನೂ ಬಂದು ಸೇರಿದ.

"ಅವರು ದಾಳಿ ಮಾಡುವದಕ್ಕೇ ತಯಾರಾಗಿರುವರೆಂಬಲ್ಲಿ ಸಂಶಯವಿಲ್ಲ ಪ್ರಭೂ, ನಮಗೂ ಅಪ್ಪಣೆಯಾಗಲಿ," ಎಂದ ತಿಮ್ಮನಗೌಡ.

"ದಂಡು ಸಿದ್ಧವಾದ ಮಾತ್ರಕ್ಕೇ ಅದು ದಾಳಿಮಾಡಲಿಕ್ಕೇ ಹೊರಟಿದೆಯೆಂದು ಹ್ಯಾಗೆ ಹೇಳುತ್ತೀರಿ ನಾಯಕರೆ?" ಎಂದ ದಿವಾನ.

"ದಿನವೂ ನಡೆಯುವ ಕವಾಯತಿನ ವ್ಯೂಹಕ್ಕೂ, ದಾಳಿಗಾಗಿ ಸಜ್ಜಾಗಿ ನಿಂತ ದಂಡಿನ ವ್ಯೂಹಕ್ಕೂ ವ್ಯತ್ಯಾಸವಿರ್ತದೆ, ಪಂತಜಿ."

"ಅವರು ದಾಳಿ ಮಾಡಲಿಕ್ಕೇ ಹೊರಟಿರುವರೆಂದು ನಾವೇಕೆ ತಿಳಿಯಬೇಕು? ಅವರು ಏನು ಮಾಡುವರೆಂಬುದನ್ನು ತಾಳ್ಮೆಯಿಂದ ಕಾದು ನೋಡಿದರೊಳ್ಳೆಯದು ಪ್ರಭೂ!" ಎಂದ ದಿವಾನ.

"ತಾಳ್ಮೆ! ತಾಳ್ಮೆ! ಎಲ್ಲಿಯವರೆಗೆ ತಾಳ್ಮೆ? ಅವರು ನೆಟ್ಟಗೆ ಇಲ್ಲಿಯತನಕ ಬಂದು ನಮ್ಮನ್ನೆಲ್ಲಾ ಹಿಡಿಯುವವರೆಗೂ ತಾಳ್ಮೆಯಿಂದ ನೋಡುತ್ತಿರಬೇಕೆಂದು ನೀವು ಹೇಳುತ್ತಿಲ್ಲವಷ್ಟೆ?" ಎಂದ ಗುರುಸಿದ್ಧಪ್ಪ.

"ಅವರು ಹಾಗೆ ಮಾಡಬಹುದೆಂದು ನನಗೇನು ಅನಿಸುವುದಿಲ್ಲ." ಎಂದು ಶಾಂತವಾಗಿ ನುಡಿದ ದಿವಾನ.

ತಿಮ್ಮನಗೌಡ ದೊರೆಯ ಕಡೆಗೆ ತಿರುಗಿ, ಕಳವಳ–ಸಂತಾಪಗಳಿಂದ ಕಂಪಿಸುವ ಸ್ವರದಲ್ಲಿ ಕೇಳಿದ:

"ಈಗ ಅಳಿವು ಉಳಿವಿನ ಪ್ರಸಂಗ ಪ್ರಭೂ. ತಾವು ವಿಚಾರಮಾಡಿ ಅಪ್ಪಣೆಕೊಡಬೇಕು. ದಿವಾನರ ಹಾಗೆ, ಕಡೆಯವರೆಗೂ ವೈರಿಗಳನ್ನ ನಂಬಿಕೊಂಡು ನಡೆದರೆ ಘಾತವಾಗದಿರದು. ನಮ್ಮ ಕಾಲಮೇಲೆ ನಾವೇ ಕಲ್ಲು ಚೆಲ್ಲಿಕೊಳ್ಳಬಾರದು."

ಯುವಕನಾದ ದೊರೆಗೆ ಉಭಯ ಸಂಕಟಕ್ಕಿಟ್ಟುಕೊಂಡಿತ್ತು. ಮುತ್ಸದ್ದಿಯೂ ಅನುಭವಿಕನೂ, ತಮ್ಮ ವಂಶದ ಹಿತೈಷಿಯೂ ಆದ ದಿವಾನನ ಸಲಹೆಯನ್ನು ಅತಿಕ್ರಮಿಸುವಂತೆಯೂ ಇರಲಿಲ್ಲ. ಘಾತವಾಗುವುದೆಂದು

ಸ್ಪಷ್ಟವಾಗಿ ಹೇಳುವ ಸೇನಾಪತಿಯ ಮಾತನ್ನು ತೆಗೆದುಹಾಕುವಂತೆಯೂ ಇರಲಿಲ್ಲ.

ಆತ ಮಾತನಾಡಲಿಲ್ಲ. ಮೌನವಾಗಿ ಅರಮನೆಯಲ್ಲಿ ಪ್ರವೇಶಿಸಿ, ನೀಲಮ್ಮಾಜಿಯ ಹತ್ತಿರ ಹೋಗಿ ವಿಚಾರಿಸಿದ:

"ಸುದ್ದಿ ಕೇಳಿದಿರಾ ಅತ್ತೆಯವರೆ?"

"ಕೇಳಿದೆನಪ್ಪ. ಮುಂದೇನು ಮಾಡಬೇಕೆಂದಿರುವಿ?"

"ಯುದ್ಧ ಮಾಡಬಾರದೆಂದೇ ದಿವಾನರ ಅಭಿಪ್ರಾಯ. ನಾನೀಗ ಏನು ಮಾಡಬೇಕೋ ತಿಳಿಯದಾಗಿದೆ."

"ದಿವಾನರ ಮಾತಿನಂತೆ ನಡೆದುಕೊಳ್ಳುವದೇ ಒಳ್ಳೆಯದು ತಮ್ಮಾ. ಅವರು ಎಲ್ಲಾ ಯೋಚಿಸಿ, ನಮಗೆ ಅನುಕೂಲವಾಗುವಂಥ ಹಾದಿಯನ್ನೇ ಸೂಚಿಸುತ್ತಾರೆ."

ಆದರೆ, ಈ ಸಂದರ್ಭದಲ್ಲಿ ದಿವಾನ ಸೂಚಿಸುತ್ತಿದ್ದ ಹಾದಿ ಅನುಕೂಲವಾದುದಲ್ಲವೆಂದೇ ಮಲ್ಲಸರ್ಜನಿಗನ್ನಿಸಿತ್ತು. ವೈರಿಗಳು ಬಂದು ಮೇಲೆ ಬಿದ್ದರೆ ಯುದ್ಧ ಮಾಡುವುದೆಂದೇ ನಿಶ್ಚಯಿಸಿ ಅದಕ್ಕಾಗಿ ಸಿದ್ಧತೆಯನ್ನೂ ಮಾಡಿಟ್ಟುಕೊಂಡುದುದಾಗಿತ್ತು. ಅಂಥ ಪ್ರಸಂಗ ಬಂದರೆ ದಿವಾನನೂ ಕೂಡ ಯುದ್ಧ ಮಾಡಲು ಸಲಹೆಯೀಯಬಹುದೆಂದೇ ಆತ ಇದುವರೆಗೆ ಭಾವಿಸಿದ್ದ. ಆದರೆ ಯುದ್ಧದ ವಿಚಾರವೇ ದಿವಾನನಿಗೆ ಅಪ್ರಿಯವಾಗಿದ್ದಿತೆಂಬ ಅಂಶ ಈಗತಾನೆ ಗೊತ್ತಾಗಿತ್ತು. ಬುರ್ಹಾನುದ್ದೀನನ ದಂಡು ಕೋಟೆಯ ಮೇಲೆ ಸಾಗಿ ಬಂದರೂ ಸುಮ್ಮನಿದ್ದು ಕೊನೆಯವರೆಗೂ ಕಾದು ನೋಡಬೇಕೆಂದು ಆತ ಹೇಳುತ್ತಾನೆ. ಇದೊಂದು ವಿಚಿತ್ರವಾದ ಸಲಹೆಯೇ ಅಲ್ಲವೇ? ದಿವಾನ ಹೀಗೆ ಸೂಚಿಸಲು ಕಾರಣವೇನಿರಬಹುದು? ಅವನ ಮನಸ್ಸಿನಲ್ಲಿ ಬೇರಾವುದೊಂದು ವಿಚಾರವಿದ್ದಿರಲಾರದಷ್ಟೆ?

"ಈಗಲೂ ನಾವು ಸುಮ್ಮನಿದ್ದರೆ ಪ್ರಸಂಗ ಮೈಮೇಲೆ ಬರುವಂತೆ ಕಾಣುತ್ತದೆ. ಅದರ ಬದಲು ಯುದ್ಧ ಮಾಡುವುದೇ ಲೇಸು ಅಂತ ನನಗೂ ಅನಿಸುತ್ತದೆ, ಅತ್ತೆಯವರೆ," ಎಂದ ಮಲ್ಲಸರ್ಜ.

ನೀಲಮ್ಮಾಜಿಗೆ ಮಾತ್ರ ಗುರುನಾಥಪಂತನ ಮುತ್ಸದ್ದಿತನದಲ್ಲಿ ಅಪಾರವಾದ ನಂಬುಗೆಯಿತ್ತು. ಈ ಕಠಿಣ ಪ್ರಸಂಗದಲ್ಲಿ ಕಿತ್ತೂರು ಸುರಕ್ಷಿತವಾಗಿ

ಉಳಿಯಬೇಕಿದ್ದರೆ ದಿವಾನನ ಸಲಹೆಯಂತೆ ನಡೆಯುವುದು ಅತ್ಯಗತ್ಯವೆಂದೇ ಆಕೆ ಭಾವಿಸಿದ್ದಳು. ದರಬಾರದಲ್ಲೆಲ್ಲ ಅನುಭವಿಕನೆಂದರೆ ಗುರುನಾಥಪಂತನೊಬ್ಬನೇ. ಅವನ ಮಾತನ್ನು ಮೀರುವುದು ಶ್ರೇಯಸ್ಕರವಲ್ಲವೆಂದೇ ಆಕೆ ತಿಳಿದಿದ್ದಳು.

" ಅಂಥ ಪ್ರಸಂಗ ಬಂದದ್ದೇ ಆದರೆ ಗುರುಸರ್ವೇಶ ಕಾಪಾಡುತ್ತಾನೆ, ಕುಮಾರಾ. ನೀನು ಮಾತ್ರ ದಿವಾನರ ಮಾತನ್ನು ತೆಗೆದುಹಾಕಬಾರದು."

" ವೈರಿಗಳು ಬಂದು ನನ್ನನ್ನು ಹಿಡಿದುಕೊಂಡು ಹೊರಟರೆ ?"

" ಉಹೂಂ. ಅವರು ಹಾಗೇನೂ ಮಾಡಲಿಕ್ಕಿಲ್ಲ. ನಾವು ಅವರ ವಿರುದ್ಧ ಕತ್ತಿಯನ್ನೇ ಎತ್ತದಿರುವಾಗ ಅವರೇಕೆ ನಮ್ಮನ್ನು ಹಿಡಿದಾರು ?"

" ಈ ಟೀಪೂನ ಜನರನ್ನು ನಂಬುವುದು ಬಹಳ ಕಷ್ಟ ಅತ್ತೆಯವರೆ."

" ನಂಬಬೇಕು, ಕುಮಾರಾ, ನಂಬಬೇಕು. ನಂಬಿ ಕರೆದರೆ ಶಿವ ಕೈ ಬಿಡುವದಿಲ್ಲ. ದಿವಾನರು ಹೇಳಿದ ಹಾಗೇ ಮಾಡು. ನೀನಿನ್ನೂ ತರುಣನಿರುವಿ. ಹಿರಿಯ ಮುತ್ಸದ್ದಿಗಳ ಮಾತಿಗೆ ಗೌರವ ಕೊಡಬೇಕು."

ಏನುಮಾಡುವದಕ್ಕೂ ಹೊಳೆಯದೆ ಗೊಂದಲಕ್ಕೊಳಗಾದ ಮಲ್ಲಸರ್ಜ " ಆಗುವುದೆಲ್ಲಾ ಆಗಲಿ," ಎಂದುಕೊಂಡು, ದೇವರ ಮೇಲೆ ಭಾರಹಾಕಿ, ಅರಮನೆಯಿಂದ ಹೊರಗೂ ಬರದೆ, ಅಲ್ಲಿಯೆ ಕುಳಿತುಕೊಂಡ. ಈಗಲೋ ಇನ್ನೊಂದು ಗಳಿಗೆಗೋ ದೊರೆ ಹೊರಗೆ ಬರಬಹುದು, ವೈರಿಗಳನ್ನೆದುರಿಸಲು ಅಪ್ಪಣೆಯಿಯಾಯಬಹುದು—ಎಂದು ಹೊರಗಡೆ ಕಾದುನಿಂತಿದ್ದ ಸೇನಾಪತಿಗಳು ಅವನು ಅಷ್ಟು ಹೊತ್ತಾದರೂ ಬಾರದಿರಲು ನಿರಾಶರಾಗಿ ಕೈಹಿಸುಕಿಕೊಳ್ಳುತ್ತ, ದಿವಾನನನ್ನೂ ವಿಧಿಯನ್ನೂ ಮನಸ್ಸಿನಲ್ಲಿಯೆ ಶಪಿಸುತ್ತ ನಿಷ್ಕ್ರಿಯರಾಗಿ ಕುಳಿತುಕೊಂಡರು.

ಅತ್ತ ಬುರ್ಹಾನುದ್ದೀನನ ದಂಡು ನಿಧಾನವಾಗಿ ಮಾರ್ಗಕ್ರಮಣ ಮಾಡುತ್ತ ನಗರದ ಮುಖ್ಯ ಅಗಸೆಯುವರೆಗೂ ಸಾಗಿಬಂದಿತು.

" ವೈರಿಗಳು ದಾಳಿಮಾಡಲಿಕ್ಕೇ ಬಂದಿದಾರೆ. ಗುಂಡು ಹಾರಿಸಲಿಕ್ಕೆ ಅಪ್ಪಣೆಯಾಗಬೇಕು." ದ್ವಾರರಕ್ಷಕರು ದಿವಾನನ ಬಳಿ ಬಂದು ಕೇಳಿದರು.

" ಗುಂಡು ಹಾರಿಸಲು ದೊರೆಗಳ ಅಪ್ಪಣೆಯಿಲ್ಲ," ಎಂದು ಶಾಂತಸ್ವರದಲ್ಲಿಯೇ ದಿವಾನ ಹೇಳಿದ.

ದ್ವಾರರಕ್ಷಕರು ಬೆರಗಾಗಿ ದಿವಾನನ ಮೊಗವನ್ನೇ ದಿಟ್ಟಿಸುತ್ತ ನಿಂತು ಕೊಂಡರು. ಮೇಲಧಿಕಾರಿಗಳ ಅಪ್ಪಣೆಯ ವಿನಾ ಆಗಸೆಬಾಗಿಲಿನ ಕಾವಲು ಪಡೆಯವರು ಆಕ್ರಮಣಕಾರಿಗಳ ಮೇಲೆ ಗುಂಡು ಹಾರಿಸುವಂತಿರಲಿಲ್ಲ. ರಕ್ಷಣೆಯ ಪ್ರಯತ್ನವೇ ನಡೆಯದಿದ್ದುದರಿಂದ ವೈರಿಸೇನೆ ಅತ್ಯಂತ ಸುಲಭವಾಗಿ ಮಹಾದ್ವಾರವನ್ನು ತೆರೆದು ಕೋಟೆಯ ಕಡೆಗೆ ನುಗ್ಗಿಬಂದಿತು. ಮುಂದಿನ ಸಾಲಿನಲ್ಲಿಯೇ ಇದ್ದ ತೋಫುಗಳನ್ನುಪಯೋಗಿಸಿ ಕೋಟೆಯ ಬಾಗಿಲನ್ನು ಹಾರಿಸಿ ಒಡೆಯಲಾಯಿತು. ವೈರಿಯನ್ನೆದುರಿಸಲು ಅಗತ್ಯವಿದ್ದ ಅಪ್ಪಣೆಯೇ ಇರಲಿಲ್ಲವಾದುದರಿಂದ ಕಿತ್ತೂರಿನ ಸೈನಿಕರೆಲ್ಲರೂ ತಬ್ಬಿಬ್ಬಾಗಿ ದಿಙ್ಮೂಢರಂತೆ ನಿಂತುಕೊಂಡಿದ್ದರು. ಅವರನ್ನೆಲ್ಲ ಬಂದಿಗಳನ್ನಾಗಿಸುತ್ತ ವೈರಿಗಳು ನೇರವಾಗಿ ಅರಮನೆಯ ಕಡೆಗೇ ಸಾಗಿಬಂದರು.

ಅರಮನೆಯ ದರಬಾರ ಗೃಹದಲ್ಲಿ ದಿವಾನನೂ ಇನ್ನಿತರ ಮುತ್ಸದ್ದಿಗಳೂ ನೆರೆದಿದ್ದರು. ವೈರಿಗಳ ದಂಡು ಸಮೀಪಕ್ಕೆ ಬಂದಮೇಲೂ ಕೂಡ ದಿವಾನ ಕೊಂಚವೂ ಚಲನವಲನ ಮಾಡಲಿಲ್ಲ. ಆಗಲಾದರೂ ಕಾದಾಟಕ್ಕೆ ಅನುಮತಿ ದೊರಕಿದರೆ ಅರಮನೆಯನ್ನೂ ದೊರೆಯನ್ನೂ ರಕ್ಷಿಸಿ, ಕೋಟೆಯಿಂದ ಶತ್ರುವನ್ನು ಹೊರದೂಡಬಹುದೆಂದು ಯೋಚಿಸುತ್ತ ಸೇನಾನಾಯಕರು ದೂರದಲ್ಲಿ ನಿಂತುಕೊಂಡು ದಿವಾನನ ಮುಖವನ್ನೇ ನೋಡುತ್ತಿದ್ದರು. ಆದರೆ, ದಿವಾನ ಮಾತ್ರ ಅವರತ್ತ ಹೊರಳಿ ನೋಡದೆ, ಮುಖದಲ್ಲಿ ಯಾವ ಭಾವವನ್ನೂ ವ್ಯಕ್ತಗೊಳಿಸದೆ ಸ್ಥಿತಪ್ರಜ್ಞನಂತೆ ನಿಂತುಕೊಂಡಿದ್ದ.

ಅರಮನೆಯ ಹತ್ತಿರವಾದರೂ ಕಾದಾಟ ನಡೆಯಬಹುದೆಂದು ಭಾವಿಸಿಕೊಂಡಿದ್ದ ಬುರ್ಹಾನುದ್ದೀನನಿಗೆ, ಎಲ್ಲರೂ ಸುಮ್ಮನಿದ್ದುದನ್ನು ಕಂಡು ಪರಮಾಶ್ಚರ್ಯವಾಗದಿರಲಿಲ್ಲ. ತನ್ನ ಮಾತಿನಂತೆಯೇ ಎಲ್ಲವೂ ನಡೆಯುತ್ತಿದ್ದುದನ್ನು ಕಂಡು ವೆಂಕಟರಂಗಯ್ಯನಿಗೆ ಸಹಜವಾಗಿಯೇ ಸಂತೋಷವಾಗಿತ್ತು.

ಅವರು ದರಬಾರ ಗೃಹದೆದುರು ಬರುತ್ತಲೂ ಗುರುನಾಥಪಂತ ಮುಂದಾಗಿ, ಸೇನಾಧಿಕಾರಿಗಳಿಬ್ಬರಿಗೂ ಬಾಗಿ ನಮಿಸುತ್ತ ಮಾತನಾಡಿದ :

" ಬನ್ನಿ ಸರದಾರ ಸಾಹೇಬರೆ, ಬನ್ನಿ, ಕೂತುಕೊಳ್ಳಿರಿ."

" ನಾವು ಕೂತುಕೊಳ್ಳಲು ಬಂದಿಲ್ಲ ಪಂತಜಿ. ನಿಮ್ಮ ರಾಜರೆಲ್ಲಿದ್ದಾರೆ ?" ವೆಂಕಟರಂಗಯ್ಯನೇ ಕೇಳಿದ.

"ಒಳಗಡೆ ಇದ್ದಾರೆ. ತಾವು ಸ್ವಲ್ಪ ಕುಳಿತುಕೊಂಡರೆ ದೊರೆಗಳ ದರ್ಶನ ಲಭಿಸುತ್ತದೆ."

"ದರ್ಶನ ಗಿರ್ಶನದ ಮಾತು ಬಿಡಿ. ಅವೆಲ್ಲಾ ಟೀಪುಸುಲ್ತಾನರ ದರಬಾರದಲ್ಲಿ ಮಾತ್ರ ಆಡತಕ್ಕ ಮಾತುಗಳು. ಈಗ ನಿಮ್ಮ ರಾಜರೂ ನೀವೂ ಎಲ್ಲರೂ ನಮ್ಮ ಸುಲ್ತಾನರ ಸೇವಕರು. ಅವರೆಲ್ಲಿದಾರೆ? ಹೊರಗೆ ಬರಲಿ," ಎಂದು ನಿಷ್ಠುರವಾಗಿ ಹೇಳಿದ ವೆಂಕಟರಂಗಯ್ಯ.

ಆತನ ಮಾತು ಮುಗಿಯುತ್ತಿದ್ದಂತೆಯೇ ಹೊರಗೆ ಬಂದ ಮಲ್ಲಸರ್ಜ. ದಿವಾನನ ಸಲಹೆಯಂತೆ ನಡೆದುಕೊಂಡು ತಾವು ಮೋಸಹೋಗಿದ್ದುದಂತೂ ಸ್ಪಷ್ಟವಾಗಿತ್ತು. ಶಿಸ್ತಿನಿಂದ ನುಗ್ಗಿ ಬರುತ್ತಿದ್ದ ವೈರಿ ಸೇನೆ, ಕೋಟೆಯಲ್ಲಿನ ಆಯಕಟ್ಟಿನ ಸ್ಥಳಗಳೆಲ್ಲವನ್ನೂ ವಶಪಡಿಸಿಕೊಂಡು ಕಿತ್ತೂರಿನ ಸೈನಿಕರನ್ನು ನಿಶ್ಶಸ್ತ್ರರನ್ನಾಗಿ ಮಾಡುತ್ತಿತ್ತು. ತೋಫುಖಾನೆ, ಮದ್ದಿನಾಗರ, ಧಾನ್ಯಸಂಗ್ರಹಾಲಯ, ಖಜಾನೆ, ಶಸ್ತ್ರಾಗಾರ ಮುಂತಾದ ಮಹತ್ವದ ಸ್ಥಳಗಳೆಲ್ಲವೂ ಅವರ ಕೈ ಸೇರಿದ್ದುವು. ಮಲ್ಲಸರ್ಜ ಹೊರಗೆ ಬರುವಷ್ಟರಲ್ಲಿಯೇ ಅರಮನೆಯ ನಾಲ್ಕು ಕಡೆಗಳಲ್ಲೂ ವೈರಿ ಸೈನಿಕರು ಸುತ್ತುವರಿದಿದ್ದರು.

ಹೊರಗೆ ಬಂದ ಮಲ್ಲಸರ್ಜ ಅತ್ತಿತ್ತ ದೃಷ್ಟಿಯೋಡಿಸಿ, ತಿಮ್ಮನಗೌಡ—ಗುರುಸಿದ್ಧಪ್ಪರಿಗಾಗಿ ಹುಡುಕಿದ. ವೈರಿಗಳ ಕೈಗೆ ಸಿಕ್ಕಿಬೀಳಬಾರದೆಂಬ ಯೋಚನೆಯಿಂದ ಅವರು ಯಾವಾಗಲೋ ಅಲ್ಲಿಂದ ಹೊರಟುಹೋಗಿದ್ದರು. ದೊರೆಯ ಆಗಮನವನ್ನು ನಿರೀಕ್ಷಿಸುತ್ತ ಮಡಿವಾಳನೊಬ್ಬ ಮಾತ್ರ ತುಸು ದೂರದಲ್ಲಿ ನಿಂತುಕೊಂಡಿದ್ದ.

ಪರಿಸ್ಥಿತಿಯನ್ನು ಕ್ಷಣಮಾತ್ರದಲ್ಲಿಯೇ ಅರಿತುಕೊಂಡು ಮಲ್ಲಸರ್ಜ ದಿವಾನನ್ನು ಕುರಿತು ಕೇಳಿದ:

"ಏನು ನಡೆದಿದೆ ಪಂತಜಿ? ಇವರೇನು ಅನ್ನುತ್ತಾರೆ?"

ದಿವಾನ ಅದಕ್ಕೆ ಉತ್ತರವೀಯುವ ಮುನ್ನವೆ ಬುರ್ಹಾನುದ್ದೀನನೇ ಮಾತನಾಡಿದ: "ತಾವು ಶ್ರೀರಂಗಪಟ್ಟಣಕ್ಕೆ ಹೊರಟುಬರಬೇಕೆಂದು ಹಜರತ್ ಟೀಪುಸುಲ್ತಾನರ ಆಜ್ಞೆಯಾಗಿದೆ ಸರಕಾರ್."

"ಅವರ ಆಜ್ಞೆಯನ್ನು ನಾವೇಕೆ ಪಾಲಿಸಬೇಕು?"

"ಬೇರೆ ಮಾರ್ಗವೇ ಇಲ್ಲವಲ್ಲ ಸರಕಾರ್? ನಾವಂತೂ ಸುಲ್ತಾನರ

ಆಜ್ಞಾಧಾರಕ ಸೇವಕರು. ಅವರ ಅಪ್ಪಣೆಯಂತೆ ಎಲ್ಲವನ್ನೂ ನಡಸಬೇಕಾಗುತ್ತೆ."

ಕತ್ತಿಯ ಹಿಡಿಯ ಮೇಲೆ ಕೈಯಾಡಿಸುತ್ತ ಮಲ್ಲಸರ್ಜ ಅವಡುಗಚ್ಚಿ ದಿವಾನನತ್ತ ನೋಡಿದ, ತನ್ನ ಅಪ್ಪಣೆಗಾಗಿಯೆ ಕಾದು ನಿಂತಂತಿದ್ದ ಮಡಿವಾಳನ ಕಡೆ ದೃಷ್ಟಿ ಬೀರಿದ, ಸುತ್ತಲೂ ಬಿಚ್ಚುಗತ್ತಿಯ ಕೋಟೆ ಕಟ್ಟಿ ನಿಂತಿದ್ದ ವೈರಿಸೈನಿಕರನ್ನು ವೀಕ್ಷಿಸಿದ, ಕತ್ತಿ ಹಿರಿಯುವುದರಿಂದ ಪ್ರಯೋಜನವೇನೂ ಇಲ್ಲವೆಂಬುದು ಮನವರಿಕೆಯಾಗುತ್ತಲೂ, ಸಂತಾಪದಿಂದ ತುಟಿಯನ್ನು ಕಚ್ಚುತ್ತ ಅಸಹಾಯವಾದ ಹುಲಿಯಂತೆ ಚಡಪಡಿಸುತ್ತ ನಿಂತುಕೊಂಡ.

"ಸ್ನೇಹಿತರಂತೆ ಬಂದ ತಾವು ಹೀಗೆ ಮೋಸ ಮಾಡುವದು ಒಳ್ಳೆಯದೇ ಹ್ಯಾಗೆ ನೀವೇ ವಿಚಾರ ಮಾಡಿರಿ. ನಾವಂತೂ ಕಡೆಯವರೆಗೂ ಗೆಳೆಯರಂತೆಯೇ ನಡೆದುಕೊಂಡಿದ್ದೇವೆ. ನಮ್ಮ ನಂಬಿಕೆಗೆ ಇಂಥ ಪ್ರತಿಫಲ ದೊರೆಯಬಹುದೆಂದು ನಾವಾರೂ ನಿರೀಕ್ಷಿಸಿರಲಿಲ್ಲ," ಎಂದ ದಿವಾನ.

"ಆದಾವುದೂ ನಮಗೆ ತಿಳಿಯದು. ಸುಲ್ತಾನರ ಹುಕುಮಿನಂತೆ ನಡೆದುಕೊಳ್ಳುವದಷ್ಟೇ ನಮಗೆ ಸೇರಿದ್ದು. ಈಗ ನೀವು ಪ್ರತಿಭಟನೆ ಮಾಡದೆ ನಮ್ಮ ಸಂಗಡ ಬಂದರೆ ಒಳ್ಳೆಯದು. ಇಲ್ಲದಿದ್ದರೆ ವ್ಯರ್ಥವಾಗಿ ಜೀವ ಕಳೆದುಕೊಳ್ತೀರಿ," ಎಂದ ವೆಂಕಟರಂಗಯ್ಯ.

"ಇಲ್ಲಿ ಕೋಶಾಧಿಕಾರಿ ಯಾರು?" ಎಂದು ಬುರ್ಹಾನುದ್ದೀನ ಪ್ರಶ್ನಿಸಿದ.

"ನಾನು" ಎನ್ನುತ್ತಾ ಚೆನ್ನಪ್ಪ ಮುಂದೆ ಬಂದ.

ಖಜಾನೆಯ ಬೀಗದ ಕೈಯನ್ನು ಅವನಿಂದ ತೆಗೆದುಕೊಂಡ ತರುವಾಯ ಅವನನ್ನೂ, ಗುರುನಾಥಪಂತ, ತಿಮ್ಮಾಜಿಪಂತ, ದೊಡವಾಡ ರುದ್ರಪ್ಪ ಮೊದಲಾದ ಮುಖ್ಯ ಮುಖ್ಯ ಜನರನ್ನೂ ಸೈನಿಕರ ಪಹರೆಯಲ್ಲಿ ಪಾಳೆಯಕ್ಕೆ ಕಳಿಸಲಾಯಿತು. ಅರಮನೆಯ ಮೇನೆಯನ್ನೇ ತರಿಸಿ ಮಲ್ಲಸರ್ಜನನ್ನು ಅದರಲ್ಲಿ ಕೂಡ್ರಿಸಿ ಪಾಳೆಯಕ್ಕೆ ಹೊರಡಿಸುವ ಸಿದ್ಧತೆ ನಡೆದಿದ್ದಾಗ ಕತ್ತಿ ಹಿರಿಯಲೆತ್ನಿಸಿದ ಮಡಿವಾಳನ ಮೇಲೆ ನಾಲ್ಕಾರು ಜನರು ಬಿದ್ದು ಅವನನ್ನೂ ನಿಶ್ಶಸ್ತ್ರನನ್ನಾಗಿ ಮಾಡಿ ಹೆಡೆಮುರಿಗೆ ಬಿಗಿದು ಕಳಿಸಿಕೊಟ್ಟರು.

ಕೋಟೆಯ ಬಾಗಿಲಿನೆದುರು ತೋಫು ಹಾರಿದಾಗಲೇ ನೀಲಮ್ಮಾಜಿ ಗುಪ್ತಮಾರ್ಗದಿಂದ ಅರಮನೆ ತ್ಯಜಿಸಿ ಹೊರಟುಹೋಗಿದ್ದುದರಿಂದ ಮಲ್ಲ ಸರ್ಜನಿಗೆ ಆಕೆಯ ಚಿಂತೆಯೇನೂ ಇರಲಿಲ್ಲ. "ನಾನು ಇವರ ಬಂದಿಯಾಗಿ ಹೋಗಬೇಕೆಂದು ದೇವರ ಇಚ್ಛೆಯೇ ಇರಬಹುದು. ಬಂದದ್ದೆಲ್ಲಾ ಬರಲಿ. ಗುರುವಿನ ದಯವಿರಲಿ," ಎಂದುಕೊಳ್ಳುತ್ತ ಮಲ್ಲಸರ್ಜ ಎಲ್ಲವನ್ನೂ ಎದು ರಿಸಲು ಮನಸ್ಸನ್ನು ಗಟ್ಟಿಗೊಳಿಸಿದ.

೮

ತನ್ನ ಪ್ರೀತಿಯ ಹೋರಿಗರುವಿಗೆ ಹುಲ್ಲು ತಿನ್ನಿಸುತ್ತ ಪ್ರಭುಸ್ವಾಮಿ ಗಳು ಮಠದ ಕೊಟ್ಟಿಗೆಯಲ್ಲಿ ನಿಂತುಕೊಂಡಿದ್ದರು. ಸ್ವಾಮಿಗಳ ಹಸ್ತದಿಂದ ಆಹಾರ ಸ್ವೀಕರಿಸಿ ಪುಷ್ಟವಾಗಿ ಬೆಳೆದಿದ್ದ ಹೋರಿ ಅವರ ಮೈಗೆ ಮೈ ಹಚ್ಚಿ ನಿಂತು ಆಗಾಗ ಮುಖವೆತ್ತಿ ತನ್ನ ಆಶ್ರಯದಾತನನ್ನು ದಿಟ್ಟಿಸುತ್ತ ಸಮಾ ಧಾನದಿಂದ ಹುಲ್ಲು ಮೆಲ್ಲುತ್ತಿತ್ತು. ಪ್ರತಿನಿತ್ಯವೂ ಅದರ ಮೈದಡವುತ್ತ, ಬೆನ್ನು ತಿಕ್ಕುತ್ತ, ಬಾಲದೊಡನೆ ಆಟವಾಡುತ್ತ ಮುದ್ದಿನಿಂದ ಮೇಯಿಸುವ ಪರಿಪಾಠವನ್ನಿಟ್ಟುಕೊಂಡಿದ್ದ ಸ್ವಾಮಿಗಳು ಅಂದು ಮಾತ್ರ ಅದನ್ನು ಮರೆತು ಕೇವಲ ಯಾಂತ್ರಿಕವಾದ ರೀತಿಯಲ್ಲಿ ದಿನದ ಕಾರ್ಯ ಸಾಗಿಸಿದ್ದರು. ಅವರ ದೇಹ ಅಲ್ಲಿದ್ದಿತಾದರೂ ಮನಸ್ಸು ಮಾತ್ರ ಕಿತ್ತೂರಿನ ಕೋಟೆಯಲ್ಲಿಯೇ ಸುತ್ತುತ್ತಿತ್ತು. ಈ ವೇಳೆಗೆ ಏನೇನು ಅನರ್ಥವಾಗಿರಬಹುದು ಕೋಟೆ ಯಲ್ಲಿ? ನಗರದಲ್ಲಾದರೂ ಏನು ನಡೆದಿದೆಯೊ ಏನೊ.

ಮುನ್ನಾದಿನದ ಬೆಳಗಿನಲ್ಲಿ ನಡೆದ ಘಟನೆಗಳನ್ನೇನೊ ಅವರು ಕೇಳಿ ತಿಳಿದಿದ್ದರು. ಮಲ್ಲಸರ್ಜ, ಗುರುನಾಥಪಂತ, ಸಣ್ಣಚೆನ್ನಪ್ಪ ಮತ್ತಿತರರನ್ನು ವೈರಿಗಳು ಹಿಡಿದುಕೊಂಡು ಹೋದ ವಾರ್ತೆಯೂ ಅವರಿಗಾಗಲೇ ಗೊತ್ತಾ ಗಿತ್ತು. ಅರಮನೆಯಲ್ಲಿದ್ದ ನೀಲಮ್ಮಾಜಿಯ ಗತಿಯೇನಾಯಿತೆಂಬುದು ಮಾತ್ರ ತಿಳಿದುಬಂದಿರಲಿಲ್ಲ. ಆ ವೃದ್ಧೆಯನ್ನೂ ಶತ್ರುಗಳು ಸೆರೆಹಿಡಿದಿರ ಲಿಕ್ಕಿಲ್ಲವಷ್ಟೆ? ದುರ್ದೈವದಿಂದ ಆಕೆಯೂ ಅವರ ಕೈಗೆ ಸಿಕ್ಕಿಬಿದ್ದಿದ್ದರೆ ದೇವರೇ ಕಾಪಾಡಬೇಕು. ಶತ್ರುಗಳು ಮಹಾ ಕ್ರೂರಿಗಳು, ಕಲ್ಲೆದೆಯ ಕಟುಕರು ಎಂಬುದಂತೂ ಪ್ರಸಿದ್ಧವೇ ಇದೆ.

ರಾತ್ರೆಯಿಡೀ ಸ್ವಾಮಿಗಳಿಗೆ ಅದೇ ಯೋಚನೆಯಾಗಿತ್ತು. ಅಂಥ ಸ್ಥಿತಿಯಲ್ಲಿ ಅವರಿಗೆ ನಿದ್ದೆ ಹತ್ತುವುದೂ ಶಕ್ಯವಿರಲಿಲ್ಲ. ಮೂಲಸ್ವಾಮಿಗಳ ಗದ್ದುಗೆಯ ಬಳಿ ಕುಳಿತುಕೊಂಡು ಶಿವನಾಮಸ್ಮರಣೆ ಮಾಡುತ್ತಾ ಇರುಳು ಕಳೆದಿದ್ದರು. ಕಿತ್ತೂರಿನಲ್ಲೆಲ್ಲ ಸುತ್ತುತ್ತ ಲೂಟಿ–ಸುಲಿಗೆಯಲ್ಲಿ ಮಗ್ನರಾಗಿದ್ದ ವೈರಿ ಸೈನಿಕರು ಮಠದಲ್ಲೂ ನುಗ್ಗಿ ಬಂದಿದ್ದರು. ಅದು ಮಠವೆಂಬುದು ಗೊತ್ತಾಗುತ್ತಲೂ ಅಲ್ಲಿ ತಮ್ಮ ದುಷ್ಟಕಾರ್ಯ ನಡಸಲು ಅವರಿಗೆ ಧೈರ್ಯ ಬಂದಿರಲಿಲ್ಲ. ಸಂನ್ಯಾಸಿಗಳ ಮಠದಲ್ಲಿ ಅವರಿಗೆ ಬೆಳ್ಳಿ ಬಂಗಾರ ಸಿಕ್ಕುವುದೂ ಸಾಧ್ಯವಿರಲಿಲ್ಲ. ಬಂದವರು ಬಂದಂತೆಯೇ ಹೊರಟುಹೋಗಿದ್ದರು. ಸಾಧು ಸತ್ಪುರುಷರು ಸ್ವಾಮಿಗಳೇ ಮೊದಲಾದವರಿಗೆ ತೊಂದರೆ ಕೊಡಬಾರದೆಂದು ಬುಧ್ಹಾನುದ್ದೀನನ ಕಟ್ಟಪ್ಪಣೆಯೂ ಇದ್ದೇ ಇದ್ದಿತು.

ಬೆಳಗಿನ ಪೂಜೆಯಲ್ಲೂ ಸ್ವಾಮಿಗಳ ಲಕ್ಷ್ಯ ತೊಡಗಿರಲಿಲ್ಲ. ಪೂಜೆಯ ಶಾಸ್ತ್ರ ಮುಗಿಸಿದವರೇ ದನದ ಕೊಟ್ಟಿಗೆಗೆ ಬಂದಿದ್ದರು. ನಗರದ ಸುತ್ತಲೂ ಶತ್ರುಗಳ ಹಿಂಡು ಕವಿದಿದ್ದುದರಿಂದ ಅಂದು ದನಗಳನ್ನು ಹುಲ್ಲುಗಾವಲಿಗೂ ಬಿಡುವಂತಿರಲಿಲ್ಲ. ಮಠದ ಆಳು ಸಂಗಯ್ಯ ಅವುಗಳಿಗೆಲ್ಲ ಹುಲ್ಲು ಹಾಕಿ ಹೋಗಿದ್ದ.

ಹೋರಿಗರುವಿಗೆ ಹುಲ್ಲು ತಿನ್ನಿಸುತ್ತ ಸ್ವಾಮಿಗಳು ಅಲ್ಲಿ ನಿಂತಿದ್ದ ಹಾಗೆಯೇ ಕೊಟ್ಟಿಗೆಯ ಮೂಲೆಯೊಂದರಿಂದ ಧ್ವನಿ ಕೇಳಬಂದಿತು :

"ಅಡ್ಡ ಬಿದ್ದೆ ಬುದ್ಧೀ."

ಸ್ವಾಮಿಗಳು ಚಕಿತರಾಗಿ, ಧ್ವನಿ ಬಂದ ಕಡೆಗೆ ದೃಷ್ಟಿ ತಿರುಗಿಸಿದರು. ಕೊಟ್ಟಿಗೆಯ ಆ ಮೂಲೆಯಲ್ಲಿ ಕತ್ತಲು ಕವಿದಿದ್ದುದರಿಂದ, ಮಾತನಾಡಿದ ವ್ಯಕ್ತಿ ಯಾರೆಂಬುದು ಗೊತ್ತಾಗುವಂತಿರಲಿಲ್ಲ. ಆದರೂ, ಅದು ಹೆಣ್ಣಿನ ಧ್ವನಿ–ಅದರಲ್ಲೂ ತಮಗೆ ಚೆನ್ನಾಗಿ ಪರಿಚಿತವಾದ ಧ್ವನಿ—ಎಂಬುದಂತೂ ಅವರಿಗೆ ಗೊತ್ತಾಯಿತು. "ಬೆಳಕಿನಲ್ಲಿ ಬಂದು ಮಾತಾಡಿರಿ. ಭಯವೇನೂ ಇಲ್ಲ," ಎಂದು ಅವರು ಹೇಳುತ್ತಿದ್ದ ಹಾಗೆಯೇ ಶಾಲಿನಲ್ಲಿ ಮೈಯನ್ನೆಲ್ಲ ಮರೆಸಿಕೊಂಡಿದ್ದ ವೃದ್ಧೆಯೋರ್ವಳು ಎದ್ದು ಬಂದಳು. ಬೆಳಕಿನಲ್ಲಿ ಅವಳ ಮುಖ ಕಾಣಿಸುತ್ತಲೂ ಸ್ವಾಮಿಗಳು ಬೆಚ್ಚಿಬಿದ್ದರು. ಯಾರಿಗಾಗಿ ರಾತ್ರೆ ಇಡೀ ಅವನು ಚಿಂತಿಸುತ್ತಿದ್ದರೋ ಆ ನೀಲಮ್ಮಾಜಿಯೆ ಅವರೆದುರು ನಿಂತಿದ್ದಳು?

ತಮ್ಮ ಪಾದಕ್ಕೆ ಅಡ್ಡಬಿದ್ದು ಏಳುತ್ತಿದ್ದ ಆಕೆಯನ್ನು ಕುರಿತು ಸ್ವಾಮಿಗಳೆಂದರು: "ಯಾವಾಗ ಬಂದೆ ಅವ್ವಾಜಿ ಇಷ್ಟು ಹೊತ್ತು ಎಲ್ಲಿದ್ದೆ?"

"ನಿನ್ನೆ ರಾತ್ರಿಯೇ ಬಂದೆ ಬುದ್ಧೀ."

"ಅಂದರೆ? ಇಷ್ಟು ಹೊತ್ತು ಇಲ್ಲೇ ಇದ್ದಿಯಾ?"

"ಹೌದು ಬುದ್ಧೀ. ಆ ದುಷ್ಟರ ಕೈಗೆ ಸಿಗದೆ ಉಳಿದುಕೊಳ್ಳಬೇಕಾದರೆ ಇದೇ ಸುರಕ್ಷಿತ ಸ್ಥಾನ ಅಂತನ್ನಿಸಿತು. ರಾತ್ರಿಯೇ ತಮಗೆ ಭೆಟ್ಟಿಯಾಗಬೇಕಾಗಿತ್ತು. ಆದರೆ, ಇಲ್ಲಿಗೂ ವೈರಿಗಳು ಬರಬಹುದು ಅಂತ ಸುಮ್ಮನಿದ್ದೆ. ಅವರು ಬಂದೂ ಹೋದರಲ್ಲ? ಈಗ ಹೊರಗೆ ಯಾರೂ ಇಲ್ಲವಷ್ಟೆ?"

"ಇಲ್ಲ ತಾಯಿ. ಇನ್ನು ಮೇಲೆ ಅವರಿತ್ತ ಸುಳಿಯುವದಿಲ್ಲ. ಆ ಬಗ್ಗೆ ಚಿಂತೆ ಬೇಡ," ಎಂದು ನುಡಿದು ಸ್ವಾಮಿಗಳು ಒಂದು ಕ್ಷಣ ತಡೆದು ಮತ್ತೇನನ್ನೋ ಯೋಚಿಸಿ ಮಾತನಾಡಿದರು: "ಮಠಗಳಲ್ಲಿ ಪ್ರವೇಶಿಸಿ ಗದ್ದಲಮಾಡಬಾರದೆಂದು ಸೇನಾಪತಿಯ ಆಜ್ಞೆಯುವೆಯಂತೆ. ಆದರೂ ಆತನಿಗೆ ಗೊತ್ತಾಗದಂತೆ ದುಷ್ಟರು ಇತ್ತ ಸುಳಿದಾಡುವ ಸಂಭವವೂ ಇದೆ. ನಮ್ಮ ಎಚ್ಚರದಲ್ಲಿ ನಾವಿರುವದೊಳ್ಳೆಯದು. ಸದ್ಯಕ್ಕಂತೂ ನೀನು ಹೊರಗೇ ಸುಳಿಯಬೇಡ ಅವ್ವಾಜಿ. ಮಠದ ಒಳಗೇ ಇದ್ದುಬಿಟ್ಟರೆ ಸರಿ. ಹೂಂ. ಯಾವಾಗ ಊಟ ಮಾಡಿದ್ದೀಯೊ ಏನೊ. ಮೊದಲು ಸ್ನಾನ ಪೂಜೆ ಮುಗಿಸಿ ಪ್ರಸಾದ ತೆಗೆದುಕೊಳ್ಳುವಿಯಂತೆ, ಬಾ."

ಕಿತ್ತೂರಿನ ರಾಜಗುರುಗಳ ಮಠವಾದುದರಿಂದ ಅಲ್ಲಿ ಆಳುಗಳಿಗೇನೂ ಕೊರತೆಯಿರಲಿಲ್ಲ. ಅರಮನೆಯ ಹಿರಿಯಳಾದ ನೀಲವ್ವಾಜಿಯನ್ನು ಅವರೆಲ್ಲರೂ ಬಲ್ಲವರೇ ಆಗಿದ್ದರು. ರಾಜಮನೆತನ ವಿಪತ್ತಿನಲ್ಲಿ ಸಿಲುಕಿಕೊಂಡು ನೀಲವ್ವಾಜಿ ಅರಮನೆ ತ್ಯಜಿಸಿ ಹೊರಡಬೇಕಾಗಿ ಬಂದುದನ್ನು ಕಂಡು ಅವರೆಲ್ಲರಿಗೂ ಕಳವಳವಾಯಿತಾದರೂ ಅಷ್ಟು ದಿನಗಳ ಕಾಲ ಅನ್ನ ನೀಡಿ ಸಲಹಿದ ಒಡತಿಯ ಸೇವೆಯನ್ನು ಕೆಲಕಾಲವಾದರೂ ಮಾಡುವ ಪ್ರಸಂಗ ಲಭಿಸಿದುದಕ್ಕಾಗಿ ಕೊಂಚ ಸಂತಸವೂ ಆಯಿತು.

ಆಳುಗಳನ್ನೆಲ್ಲ ಒಟ್ಟುಗೂಡಿಸಿ, ನೀಲವ್ವಾಜಿ ಅಲ್ಲಿರುವ ವಿಚಾರವನ್ನು ಕುರಿತು ಯಾರೆದುರಿನಲ್ಲೂ ಬಾಯಿ ಬಿಡದಂತೆ ಕಟ್ಟುನಿಟ್ಟಿನ ಎಚ್ಚರಿಕೆ

ವಿಧಿಸಿ, ಸ್ನಾನ–ಪೂಜೆ–ಪ್ರಸಾದ ಇತ್ಯಾದಿ ಎಲ್ಲವನ್ನೂ ನೋಡಿಕೊಳ್ಳುವಂತೆ ಅಡುಗೆಯ ನಾಗಮ್ಮನಿಗೆ ತಿಳಿಸಿ ಸ್ವಾಮಿಗಳು ಹೊರಗಡೆ ಹೊರಟುಹೋದರು.

ಮಧ್ಯಾಹ್ನ ನೀಲಮ್ಮಾಜಿ ಮತ್ತೆ ಭೆಟ್ಟಿಯಾದಾಗ ಸ್ವಾಮಿಗಳು ಕೇಳಿದರು : “ ಇದೆಲ್ಲ ಹೇಗಾಯಿತು. ಅಮ್ಮಾಜಿ? ಸ್ವಲ್ಪ ಕೂಡಾ ಪ್ರತಿಭಟನೆ ಮಾಡದೆ ಕೋಟೆಯನ್ನು ಬಿಟ್ಟುಕೊಟ್ಟರಲ್ಲ.”

“ ಪ್ರತಿಭಟನೆ ಮಾಡಬಾರದೆಂದು ದಿವಾನರು ಸಲಹೆ ಕೊಟ್ಟಿದ್ದರು ಬುದ್ಧೀ. ಅದಕ್ಕೇ ಎಲ್ಲರೂ ಸುಮ್ಮನಿದ್ದರು. ಯುದ್ಧ ಮಾಡಬೇಕೆಂದು ಮಲ್ಲಸರ್ಜನೇನೋ ಹಾತೊರೆಯುತ್ತಿದ್ದ, ನಾನೇ ಬೇಡ ಅಂದೆ.”

“ ಅದೇಕೆ ಬೇಡ ಅಂದದ್ದು ನೀನು? ಯುದ್ಧವಾಗಿದ್ದರೆ ನಮಗೆ ಜಯ ಸಿಕ್ಕುವ ಸಂಭವವೂ ಇತ್ತು. ಏನು ಕಡಮೆಯಾಗಿತ್ತು ನೀಲಮ್ಮಾಜಿ, ಕಿತ್ತೂರಿನಲ್ಲಿ? ಏಳೆಂಟು ಸಾವಿರದ ಸೈನ್ಯ, ಕುದುರೆ ಸವಾರರು, ತೋಫು, ಮದ್ದು ಗುಂಡು, ಎಲ್ಲಾ ಇತ್ತು. ಕೋಟೆಯಲ್ಲಿ ಧಾನ್ಯ ಸಂಗ್ರಹವೂ ಇತ್ತು. ಸಾಕಾದಷ್ಟು ಖಜಾನೆಯಲ್ಲಿ ಹಣಕ್ಕೂ ಕೊರತೆಯಿರಲಿಲ್ಲ. ಅಲ್ಲವೆ?”

“ ಕೊರತೆಯಿರಲಿಲ್ಲ. ಆದರೂ....”

“ ಧೈರ್ಯದಿಂದ ಯುದ್ಧ ಹೂಡಿದರೆ ಆರೇಳು ತಿಂಗಳುಗಳ ವರೆಗೂ ವೈರಿಗಳನ್ನು ಹಣ್ಣು ಮಾಡಲು ಬರುತ್ತಿತ್ತು. ಸುತ್ತೂ ಕಡೆಯಿಂದ ಅವರ ಠಾಣ್ಯದ ಮೇಲೆ ದಾಳಿ ಮಾಡಿ, ಅವರಿಗೆ ಕಾಳು–ಕಡ್ಡಿ ಸಿಗದಂತೆ ನೋಡಿಕೊಂಡು ಅವರನ್ನು ಓಡಿಸಲು ಬರುತ್ತಿತ್ತು. ನಿಮ್ಮ ದಿವಾನರು ಯಾವ ವಿಚಾರವನ್ನೂ ಮಾಡಿದಂತೆ ಕಾಣಲಿಲ್ಲ.”

“ ಅವರ ವಿಚಾರ ಏನಿತ್ತೋ ದೇವರೇ ಬಲ್ಲ, ಬುದ್ಧೀ. ಹಿರಿಯರು ಮುತ್ಸದ್ದಿಗಳ ಸಲಹೆಯಂತೆ ನಡೆದುಕೊಂಡರೇನೇ ಕ್ಷೇಮ ಅಂತ ತಿಳಿದು, ಯುದ್ಧಕ್ಕೆ ಸಿದ್ಧನಾಗಿದ್ದ ಮಲ್ಲಸರ್ಜನನ್ನು ನಾನೇ ತಡೆದೆ. ಹಾಗೆ ಮಾಡಿದ್ದು ತಪ್ಪಾಯಿತೆಂದು ಈಗ ಅನಿಸುತ್ತದೆ. ಮಲ್ಲಸರ್ಜನನ್ನು ಅವರು ಹಿಡಿದೊಯ್ಯಬಹುದೆಂದು ನನಗಾಗಲೇ ಅನಿಸಿದ್ದರೆ ನಾನವನನ್ನು ತಡೆಯುತ್ತಿರಲಿಲ್ಲ.”

“ ಒಬ್ಬ ದಿವಾನನ ಮಾತನ್ನೇ ನಡಸಲು ಹೋಗಿ ಎಂಥಾ ಅನಾಹುತವಾಯಿತಲ್ಲ ನೀಲಮ್ಮಾಜಿ? ಅವರೂ ಹೀಗ್ಯಾಕೆ ಮಾಡಿದರೊ. ಕಿತ್ತೂರನ್ನು

ಅವರಾಗಿಯೇ ವೈರಿಗಳ ಕೈಗೆ ಕೊಟ್ಟ ಹಾಗಾಯಿತಲ್ಲ?"

"ಹಾಗೇ ಆಯಿತು. ಅವರೇಕೆ ಹಾಗೆ ಮಾಡಿರಬಹುದು ಬುದ್ಧೀ? ಅವರನ್ನೂ ವೈರಿಗಳು ಒಡೆದುಕೊಂಡಿರುವರೆಂದು ವದಂತಿಯೆದ್ದಿತ್ತು. ನಾನಂತೂ ಅದನ್ನು ನಂಬಲಿಲ್ಲ."

"ವೈರಿಗಳು ಒಡೆದುಕೊಂಡಿರಲಿಕ್ಕಿಲ್ಲ. ಆದರೂ, ಆ ಗುರುನಾಥ ಪಂತನದು ಏನೋ ಒಳ ಉದ್ದೇಶವಿರಬಹುದು. ಅದಕ್ಕಾಗಿಯೇ ಯುದ್ಧ ಬೇಡವೆಂದು ಆತ ಹೇಳಿರಬಹುದು."

"ಅದೇನು ಉದ್ದೇಶವಿರಬಹುದು ಬುದ್ಧೀ?"

"ನನಂಗಂತೂ ತಿಳಿಯುವುದಿಲ್ಲ ತಾಯಿ. ಈ ರಾಜಕಾರಣಿಗಳು ಬಹಳ ಧೂರ್ತರು. ಅವರು ಆಡುವ ಚದುರಂಗದಾಟ ನಮ್ಮಂಥ ಸಾಮಾನ್ಯರಿಗೆ ಅರ್ಥವಾಗುವದು ಕಷ್ಟ."

"ಇದೆಂಥ ಹಾಳು ಆಟ ಬುದ್ಧೀ? ಇವರಿಂದಾಗಿ ಕಿತ್ತೂರು ವ್ಯರ್ಥ ಹಾಳಾಯಿತಲ್ಲ? ಮಲ್ಲಸರ್ಜನನ್ನು ಶ್ರೀರಂಗಪಟ್ಟಣಕ್ಕೆ ಕಳಿಸುವರೆಂದು ಹೇಳುತ್ತಾರೆ. ಅಲ್ಲಿ ಅವನಿಗೇನೂ ಅಪಾಯವಾಗಲಿಕ್ಕಿಲ್ಲವಷ್ಟೆ?"

"ಟೀಪುವಿನ ಲಹರಿ ಯಾವಾಗ ಹ್ಯಾಗೆ ಹೊರಳುವದೋ ಹೇಳಲು ಬರುವದಿಲ್ಲ. ಅವನು ಮನಸು ಮಾಡಿದರೆ ಮಲ್ಲಸರ್ಜ ಸುರಕ್ಷಿತವಾಗಿ ಉಳಿಯಬಹುದು. ಇಲ್ಲವಾದರೆ ಕಠಿಣ ಪ್ರಸಂಗವೂ ಬರಬಹುದು. ಏನಾದರೂ ಪ್ರಯತ್ನ ಪಟ್ಟು ಈಗಲೇ ಅವನನ್ನು ಕೈದಿನಿಂದ ಪಾರುಮಾಡಲು ಯತ್ನಿಸಬೇಕು."

"ಹೌದು. ಆದರೆ ಅಂಥಾ ಸಾಹಸಕ್ಕೆ ತೊಡಗುವವರಾದರೂ ಯಾರು? ಮುಖ್ಯ ಮುಖ್ಯ ಜನರನ್ನೆಲ್ಲಾ ವೈರಿಗಳು ಹಿಡಿದೊಯ್ದರು...."

"ತಿಮ್ಮನಗೌಡ–ಗುರುಸಿದ್ಧಪ್ಪ ಇಬ್ಬರು ಮಾತ್ರ ಅವರ ಕೈಗೆ ಸಿಗದೆ ಪಾರಾಗಿರುವರೆಂದು ಸುದ್ದಿಯಿದೆ. ಅವರೆಲ್ಲಿರುವರೆಂಬುದು ಮಾತ್ರ ಇನ್ನೂ ಗೊತ್ತಾಗಿಲ್ಲ. ಅವರ ಭೆಟ್ಟಿಯಾದರೆ, ಮಲ್ಲಸರ್ಜನನ್ನು ಬಿಡಿಸಿ ತರುವ ಕೆಲಸ ಅವರಿಗೊಪ್ಪಿಸಲು ಬಂದೀತು."

ಇಲ್ಲಿ, ಕಲ್ಲುಮಠದಲ್ಲಿ ಸ್ವಾಮಿಗಳೂ ನೀಲಮ್ಮಾಜಿಯೂ ಹೀಗೆ ಮಾತನಾಡುತ್ತಲಿದ್ದ ಸಮಯದಲ್ಲಿಯೇ ಕಿತ್ತೂರಿನಿಂದ ನಾಲ್ಕು ಮೈಲಿ ದೂರದಲ್ಲಿದ್ದ

ಹಳ್ಳಿಯೊಂದರಲ್ಲಿ ತಿಮ್ಮನಗೌಡ-ಗುರುಸಿದ್ಧಪ್ಪ-ವೀರ ಸಂಗಪ್ಪ ಮೊದಲಾದವರು ಕೂಡಿಕೊಂಡು ದೊರೆಯನ್ನು ಬಿಡಿಸಿ ತರುವ ವಿಚಾರವಾಗಿಯೇ ಮಾತನಾಡುತ್ತಿದ್ದರು.

"ನಮ್ಮ ಸೈನಿಕರೆಲ್ಲಾ ಎಲ್ಲೆಲ್ಲಿ ಚೆದರಿಹೋದರೋ ಏನೋ. ಈಗ ಅವರನ್ನೆಲ್ಲಾ ಒಂದು ಕಡೆ ಕೂಡಿಸುವದೇ ಬಹಳ ಕಠಿಣ," ಎಂದ ಗುರುಸಿದ್ಧಪ್ಪ.

"ಹತ್ತಿಪ್ಪತ್ತು ಜನರನ್ನ ಇದೇ ಕೆಲಸಕ್ಕೆ ಹಚ್ಚಿದರೆ ಒಂದೆರಡು ದಿನಗಳಲ್ಲೇ ದಂಡುಗಳೆಲ್ಲ ಕೂಡಬಹುದು. ಅವರೇನು ದೂರ ಹೋಗಿರುವದಿಲ್ಲ. ಇಲ್ಲೇ ಇರಬಹುದು, ಸುತ್ತಲಿನ ಹಳ್ಳಿಗಳಲ್ಲಿ," ಎಂದ ವೀರಸಂಗಪ್ಪ.

"ಈಗ ಹೆಚ್ಚು ಜನರನ್ನು ಕೂಡಿಸುವ ಆಗತ್ಯವೂ ಇಲ್ಲವಲ್ಲ ಸರದಾರರೆ. ಮಿಂಚಿನ ದಾಳಿಗೆ ಎಷ್ಟು ಮಂದಿ ಬೇಕೋ ಅಷ್ಟನ್ನೇ ಕೂಡಿಸುವದು," ಎಂದ ತಿಮ್ಮನಗೌಡ.

"ನಾಯಕರು ಹೇಳುವದೂ ಬರಾಬ್ಬರಿ. ಸಾವಿರಾರು ಮಂದಿಯನ್ನ ಕೂಡಿಸಿದರೆ ವೈರಿಗಳಿಗೆ ಸುಳಿವು ಹತ್ತಿ ನಮ್ಮ ಹೊಂಚು ವ್ಯರ್ಥವಾಗಬಹುದು." ಎಂದ ಗುರುಸಿದ್ಧಪ್ಪ :

"ವೈರಿಗಳ ಗೂಢಚಾರರು ನಮ್ಮ ಚಲನವಲನ ಪತ್ತೆ ಮಾಡಲು ಎಲ್ಲಾ ಕಡೆಗೂ ತಿರುಗುತ್ತಿರಲು ಸಾಕು. ನಾವು ಪ್ರತಿಯೊಂದು ಹೆಜ್ಜೆಯನ್ನೂ ಬಹಳ ಎಚ್ಚರಿಕೆಯಿಂದ ಇಡಬೇಕು. ಹಗಲು ಹೊತ್ತಿನಲ್ಲಿ ಇಲ್ಲಿ ಸೈನಿಕರು ಕಾಣಬಾರದು. ಎಲ್ಲಾ ರಾತ್ರಿಯಲ್ಲೇ ಆಗಬೇಕಾದ ಕೆಲಸ."

"ಆ ಹಾಳು ದಿವಾನ ಬಂದು ನಮಗೆಲ್ಲಾ ಇಂಥಾ ಪ್ರಸಂಗ ತಂದಿಟ್ಟ. ಮನೆ ಮಾರು ತೊರೆದು ದಿಕ್ಕಿಲ್ಲದವರಂತೆ ಅಲೆಯಬೇಕಾಗಿ ಬಂತು. ನಮ್ಮ ದೊರೆಗಳನ್ನೀಗಲೇ ಬಿಡಿಸದಿದ್ದರೆ ಅವರ ಮೇಲೆ ಎಂಥಾ ಪ್ರಸಂಗ ಬರುವದೋ ತಿಳಿಯದು."

"ಖಜಾನೆಯನ್ನೂ ಅರಮನೆಯನ್ನೂ ಲೂಟಿ ಮಾಡಿ ಧಾರವಾಡಕ್ಕೆ ಕಳಿಸುತ್ತಿರುವರಂತಲ್ಲ ನಾಯಕರೆ?" ಎಂದ ವೀರಸಂಗಪ್ಪ.

"ಹೌದು ನಿನ್ನೆಯಿಂದಲೇ ಸಾಮಾನು ತುಂಬಿದ ಚಕ್ಕಡಿಗಳು ಧಾರವಾಡದ ಹಾದಿ ಹಿಡಿದು ಹೋಗುತ್ತಾ ಇವೆ."

"ಹಾದಿಯಲ್ಲಿ ಒಮ್ಮೆಂದೊಮ್ಮೆ ಅವರ ಮೇಲೆ ಬಿದ್ದು ಸಿಕ್ಕಿದಷ್ಟು ಸಾಮಾನು ವಶಪಡಿಸಿಕೊಂಡು ಬರಲು ಕೆಲವರನ್ನೇಕೆ ಕಳಿಸಬಾರದು?"

"ಹೌದು. ಆ ಕೆಲಸವೂ ನಡೆಯಬೇಕು. ಆದರೆ ಈಗಲೇ ಬೇಡ ಅಂತಲೇ ಅನಿಸ್ತದೆ. ನಾವು ಉಪಟಳ ಕೊಡುವದರಿಂದ ಸಿಟ್ಟಾಗಿ ಅವರು ಇಲ್ಲೇ ದೊರೆಗಳಿಗೆ ಏನಾದರೂ ಮಾಡಿಯಾರು."

"ಆದಷ್ಟು ಬೇಗ ದೊರೆಗಳನ್ನು ಬಿಡಿಸಿ ತರುವ ಪ್ರಯತ್ನ ನಡೆಯುಬೇಕು ಹಾಗಾದರೆ?" ಎಂದ ಗುರುಸಿದ್ಧಪ್ಪ.

"ಆ ರಾತ್ರಿಯೇ ಗುರುಸಿದ್ಧಪ್ಪನ ನೇತೃತ್ವದಲ್ಲಿ ಇನ್ನೂರು ಜನರ ದಳವೊಂದು ವೈರಿಪಾಳಯದ ಮೇಲೆ ಅನಿರೀಕ್ಷಿತ ದಾಳಿ ನಡಸಿ, ಶತ್ರುಗಳು ಎಚ್ಚತ್ತುಕೊಂಡು ಆಯುಧ ಧರಿಸುವ ಮುನ್ನವೇ ಸಂಧಿ ಸಾಧಿಸಿ ದೊರೆಯನ್ನು ಬಂಧಮುಕ್ತಗೊಳಿಸಲು ಯತ್ನಿಸುವುದೆಂದು ನಿಶ್ಚಯವಾಯಿತು. ಮಲ್ಲಸರ್ಜನನ್ನು ಬಂಧನದಲ್ಲಿರಿಸಿದ ಡೇರೆಯಿದ್ದ ಸ್ಥಳವಂತೂ ಗುಪ್ತಚಾರರ ಮೂಲಕ ಅಷ್ಟರಲ್ಲಿಯೇ ಗೊತ್ತಾಗಿತ್ತು.

ಸುಲಭವಾದ ವಿಜಯದಿಂದ ಬೀಗಿ, ಸುಲಿಗೆ ಲೂಟಿಗಳಿಂದ ಹರ್ಷಿತರಾಗಿ, ವಿಜಯೋತ್ಸವದ ಮದ್ಯಪಾನದಿಂದ ಮೈಮರೆತು ನಿದ್ರಿಸಿದ್ದ ಮೈಸೂರು ಪಾಳೆಯದ ಮೇಲೆ ಆ ರಾತ್ರೆ ಏಕಾಏಕಿಯಾಗಿ ದಾಳಿ ನಡೆಯುತ್ತಲೂ ಕೆಲವು ಗಳಿಗೆಗಳವರೆಗೆ ಅಲ್ಲಿ ಗೊಂದಲವೇ ಗೊಂದಲವಾಯಿತು. ನಡೆಯುತ್ತಿದ್ದುದೇನೆಂಬುದು ತಿಳಿಯುವುದರೊಳಗಾಗಿಯೇ ಕಿತ್ತೂರಿನ ದಂಡಾಳುಗಳು ನುಗ್ಗಿ ಬಂದು ಅರೆನಿದ್ದೆಯಲ್ಲಿದ್ದ ವೈರಿಗಳನ್ನು ಕಡಿದೆಸೆಯತೊಡಗಿದರು. ಛಾವಣಿಯ ಮನೆಯೊಂದರಲ್ಲಿ ಉರಿಯುತ್ತಿದ್ದ ದೀವಟಗೆಯೊಂದು ಆ ಗದ್ದಲದಲ್ಲಿ ಡೇರಾದ ಮೇಲೆ ಬಿದ್ದುಕೊಂಡು ಆ ಭಾಗದಲ್ಲಿ ಬೆಂಕಿಯೆದ್ದು ಉರಿಯತೊಡಗಿತು. ದಿಬ್ಬದ ಮೇಲಿನಿಂದ ಬೀಸಿಬರುವ ಇರುಳಗಾಳಿಯಲ್ಲಿ ಆ ಬೆಂಕಿ ಸುತ್ತಲಿನ ಡೇರೆಗಳಿಗೆ ಹರಡಲು ವಿಳಂಬವಾಗಲಿಲ್ಲ. ಅದನ್ನು ಆರಿಸಲು ಜನರು ಧಾವಿಸುವಷ್ಟರಲ್ಲಿಯೇ, ಸಮೀಪ ಬಂದವರನ್ನು ಸುಟ್ಟು ಹಾಕುವಂತೆ ಧಗಧಗಿಸುತ್ತಾ ಅದು ರೌದ್ರಾಕಾರ ತಳೆದು ವ್ಯಾಪಿಸತೊಡಗಿತು. ಉರಿಯ ಜಳದಿಂದ ಗಾಬರಿಗೊಂಡಿದ್ದ ಕುದುರೆಗಳೂ ಒಂಟೆಗಳೂ ಆನೆಗಳೂ ಹಗ್ಗಗಳನ್ನು ಕಿತ್ತೆಸೆದು ಛಾವಣಿಯಲ್ಲೆಲ್ಲ ಮನ ಬಂದಂತೆ ಓಡತೊಡ

ಗಿದುವು. ಡೇರೆಗಳಲ್ಲಿ ಸುಖವಾಗಿ ನಿದ್ರಿಸುತ್ತಿದ್ದ ಚಿಕ್ಕ ಪುಟ್ಟ ಸೇನಾಧಿಕಾರಿಗಳು ಹೆದರಿ ಎದ್ದು, ಅರ್ಧನಗ್ನ ಸ್ಥಿತಿಯಲ್ಲಿಯೇ ಜೀವವುಳಿಸಿಕೊಳ್ಳಲು ಧಾವಿಸಿದರು.

ಆ ಕೋಲಾಹಲದಲ್ಲಿ ಗುರುಸಿದ್ಧಪ್ಪನೂ ಅವನ ಸಂಗಡಿಗರೂ ಡೇರೆಗಳನ್ನು ಪ್ರವೇಶಿಸಲು ಯಾರಿಂದಲೂ ಆತಂಕವಾಗಲಿಲ್ಲ. ಆದರೆ ಮಲ್ಲಸರ್ಜನನ್ನಿರಿಸಲಾಗಿದ್ದಿತೆಂದು ಹೇಳಲಾಗಿದ್ದ ಡೇರೆಯಲ್ಲಿ ಆತನ ಸುಳಿವಿರಲಿಲ್ಲ ಅದರ ಸುತ್ತಲಿನ ಹಲವು ಡೇರೆಗಳನ್ನು ಹುಡುಕಿದರೂ ಆತ ಕಣ್ಣಿಗೆ ಬೀಳಲಿಲ್ಲ. ಅಂದಿನ ಸಂಜೆಯೇ ದೊರೆಯನ್ನು ಬೇರೆ ಕಡೆ ಸಾಗಿಸಿರಬಹುದೋ ಏನೋ ಎಂದುಕೊಳ್ಳುತ್ತ ಅವರು ವ್ಯಸನಾಕ್ರಾಂತರಾಗಿ ಛಾವಣಿಯಲ್ಲಿ ಸಿಕ್ಕಿದ ಬಹುಮೂಲ್ಯ ವಸ್ತುಗಳನ್ನೆತ್ತಿಕೊಂಡು, ವೈರಿಗಳು ಕಂಡುಹಿಡಿಯುವ ಮುನ್ನವೇ ಅಲ್ಲಿಂದ ಪಾರಾಗಿ ಹೋದರು.

ಮಾರನೆಯ ದಿನ ಬೆಳಕು ಹರಿಯುವ ಮೊದಲೇ ಗೂಢಚಾರನೊಬ್ಬ ಸಮಾಚಾರ ತೆಗೆದುಕೊಂಡುಬಂದ. ಮಲ್ಲಸರ್ಜನನ್ನೂ ಇನ್ನಿತರ ಬಂದಿಗಳನ್ನೂ ಮುನ್ನಾದಿನದ ರಾತ್ರಿಯ ಮೊದಲನೆಯ ಜಾವದಲ್ಲಿಯೇ ಅಲ್ಲಿಂದ ಸಾಗಿಸಲಾಗಿದ್ದಿತು.

"ಅವರನ್ನು ಯಾವ ಕಡೆಗೊಯ್ದರು?"

"ಧಾರವಾಡದ ಕಡೆಗೇ ಒಯ್ದಿರಬೇಕು."

"ಹಗಲು ಹೊತ್ತಿನಲ್ಲಾದರೆ ನಾವು ದಾಳಿಮಾಡಬಹುದೆಂದು ತಿಳಿದೇ ಹೀಗೆ ರಾತ್ರಿ ಸಾಗಿಸಿರಬೇಕು. ಇಷ್ಟು ಹೊತ್ತಿಗೆ ಅವರು ಎಲ್ಲಿರಬಹುದು?"

"ಗರಗಕ್ಕೆ ಮುಟ್ಟಿರಬಹುದು."

"ಕುದುರೆಗಳ ಮೇಲೆ ಹೊರಟರೆ ಧಾರವಾಡದ ಈಚೆಗೇ ನಾವು ಅವರನ್ನು ಸಂಧಿಸಬಹುದು. ಆದರೆ, ವೈರಿಗಳಿಗೆ ತಿಳಿಯದಂತೆ ಹಗಲಲ್ಲಿ ಹೋಗುವದು ಶಕ್ಯವಿಲ್ಲ," ಎಂದ ಗುರುಸಿದ್ಧಪ್ಪ.

"ಕಿತ್ತೂರಿಂದ ಧಾರವಾಡದ ತನಕ ಎಲ್ಲಾ ಕಡೆಗೂ ವೈರಿಗಳು ಹರಡಿಕೊಂಡಿದಾರೆ. ಅವರ ಕಣ್ಣಿಗೆ ಬೀಳದಂತೆ ಹೋಗಬೇಕಾದರೆ ರಾತ್ರೀನೇ ಹೋಗಬೇಕು."

"ಅಷ್ಟರಲ್ಲಿ ದೊರೆಗಳನ್ನವರು ಧಾರವಾಡದ ಕೋಟೆಯಲ್ಲಿಟ್ಟು

ಬಿಟ್ಟಿರುತ್ತಾರೆ. ಮುಂದೆ ಹ್ಯಾಗೆ ಮಾಡುವದು ನಾಯಕರೆ?" ಎಂದ ವೀರಸಂಗಪ್ಪ.

" ಅವರನ್ನು ಬಿಡಿಸುವ ಪ್ರಯತ್ನಕ್ಕಾಗಿಯೇ ಒಂದು ತುಕಡಿಯನ್ನು ಸಿದ್ಧಗೊಳಿಸೋಣ. ನೀವೂ ಗುರುಸಿದ್ಧಪ್ಪನವರೂ ಅದರ ನಾಯಕತ್ವ ವಹಿಸಬೇಕು."

" ಶ್ರೀರಂಗಪಟ್ಟಣದ ವರೆಗೂ ಹೋಗಿ ಪ್ರಯತ್ನಮಾಡೋಣ. ದೊರೆಗಳನ್ನು ಬಿಡಿಸಿಕೊಂಡು ಬಂದ ಮೇಲೇ ಗಡ್ಡ ತೆಗೆಸುವುದು." ಎಂದ ವೀರ ಸಂಗಪ್ಪ.

೯

ಸೆರೆಮನೆಯ ಸಮೀಪದಲ್ಲಿಯೆ ಹರಿಯುತ್ತಿದ್ದ ಕಾವೇರಿಯ ಕಲಕಲ ನಿನಾದ ಕಿವಿಗೆ ಬಿದ್ದಾಗಲೆಲ್ಲ ಮಲ್ಲಸರ್ಜನಿಗೆ ತನ್ನ ರಾಜ್ಯದ ತಾಯಿಯಂತಿದ್ದ ಮಲ್ಲಪ್ರಭೆಯು ನೆನಪಾಗುವುದು. ಅದರೊಡನೆಯೇ ಕಿತ್ತೂರು, ಸಂಗೊಳ್ಳಿ, ತಲ್ಲೂರು ಮೊದಲಾದ ಪ್ರೀತಿಯ ಊರುಗಳು ಆತನ ಮನೋನಯನದೆದುರು ತಲೆದೋರುವುವು. ಕಿತ್ತೂರಿನ ಕೋಟೆ, ಅಲ್ಲಿನ ಅರಮನೆ, ಗುರುಗಳಾದ ಪ್ರಭುದೇವರ ಕಲ್ಲುಮಠ, ತಲ್ಲೂರಿನ ರಾಜಗೃಹ, ಅಲ್ಲಿ ತನ್ನನ್ನೆ ನೆನೆಯುತ್ತ ಕೊರಗುತ್ತಿರಬಹುದಾದ ತನ್ನ ಪಟ್ಟದರಸಿ, ತನ್ನನ್ನು ಕಳೆದುಕೊಂಡು ಶೋಕಿಸುತ್ತ ಕುಳಿತ ತನ್ನ ಸೇನಾಪತಿಗಳು—ಸೇನೆ—ಎಲ್ಲವೂ ಕಣ್ಣೆದುರು ಮೂಡಿ ಅವನ ಮನಸ್ಸನ್ನು ಗಾಸಿಗೊಳಿಸುವುವು. ಗುರುಗಳಾದ ಪ್ರಭುದೇವರನ್ನೂ ಅರಭಾವಿಯ ದುರದುಂಡೀಶ್ವರ ಮಹಾಸ್ವಾಮಿಗಳನ್ನೂ ದಿನವೂ ಪ್ರಾರ್ಥಿಸುತ್ತ ಈ ಕಠಿಣಪ್ರಸಂಗದಿಂದ ಪಾರು ಮಾಡುವಂತೆ ಬೇಡಿಕೊಳ್ಳುವನು.

ಆತನನ್ನು ಶ್ರೀರಂಗಪಟ್ಟಣಕ್ಕೆ ಸಾಗಿಸಿಕೊಂಡು ಬಂದ ಹೊಸದರಲ್ಲಿ, ಆ ಕೊಟಡಿಯಲ್ಲಿ ಆತನೊಬ್ಬನನ್ನೇ ಇರಿಸಲಾಗಿತ್ತು. ಪ್ರತಿ ದಿನವೂ ಎರಡು ಹೊತ್ತು ರಾಗಿಯ ಮುದ್ದೆಯನ್ನೂ ಅಷ್ಟು ಅನ್ನವನ್ನೂ ಕೊಡಲಾಗುತ್ತಿತ್ತು. ಜೊತೆಯಲ್ಲಿ ಸ್ವಲ್ಪ ಎಸರು, ಅಷ್ಟೆ. ಹಾಲು–ತುಪ್ಪಗಳಿಲ್ಲದೆ ಊಟ ಮಾಡುವ ಅಭ್ಯಾಸವೇ ಮಲ್ಲಸರ್ಜನಿಗಿರಲಿಲ್ಲವಾದುದರಿಂದ ಆ ಒಣ ಅನ್ನವನ್ನು ಗಂಟಲಿ

ನಲ್ಲಿಳಿಸಬೇಕಾದರೆ ಮೊದಲಿನ ದಿನಗಳಲ್ಲಿ ತುಂಬಾ ಪ್ರಯಾಸಪಡಬೇಕಾಯಿತು. ಮೂರು ನಾಲ್ಕು ದಿನ ಆಮಶಂಕೆಯೂ ಪೀಡಿಸಿತು. ರಕ್ತ ಭೇದಿಗಾರಂಭವಾಗಿದ್ದಾಗ ಆತ ಊಟ ಮಾಡುವಂತೆಯೂ ಇರಲಿಲ್ಲ. ಎರಡು ಮೂರು ದಿನಗಳ ಕಾಲ ಆತ ಅನ್ನವನ್ನೇ ಮುಟ್ಟದಿರಲು ಸೆರೆಮನೆಯ ಅಧಿಕಾರಿ ಕನಿಕರಿಸಿ ದಿನವೂ ಸ್ವಲ್ಪ ತುಪ್ಪವನ್ನು ಕಳಿಸತೊಡಗಿದ. ಆಮಶಂಕೆ ತೊಲಗಿತಾದರೂ ಆದರಿಂದ ಉದ್ಭವಿಸಿದ ನಿಶ್ಶಕ್ತಿ ಮಾತ್ರ ದೂರವಾಗಲಿಲ್ಲ.

ದೊರೆಯ ಅನಾರೋಗ್ಯದ ಸಮಾಚಾರ, ಸಮೀಪದ ಕೊಟಡಿಯಲ್ಲಿಯೇ ಇದ್ದ ಮಡಿವಾಳನಿಗೆ ತಿಳಿಯುತ್ತಲೂ ಆತ ಹಲವು ಉಪಾಯಗಳಿಂದ ಅಧಿಕಾರಿಗಳನ್ನೊಲಿಸಿಕೊಂಡು, ಮಲ್ಲಸರ್ಜನ ಕೊಟಡಿಗೇ ತನ್ನನ್ನು ಸ್ಥಳಾಂತರಿಸುವಂತೆ ವ್ಯವಸ್ಥೆ ಮಾಡಿಕೊಂಡ. ಮಡಿವಾಳನ ಜೊತೆ ಸಿಕ್ಕಿದ ಮೇಲೆ ಮಲ್ಲಸರ್ಜನಿಗೆ ಅಂಥ ವಿಪನ್ನಾವಸ್ಥೆಯಲ್ಲಿಯೂ ಎಷ್ಟೋ ಸಮಾಧಾನವಾಯಿತು. ಎಂಟು ಹತ್ತು ದಿನಗಳವರೆಗೆ ಸಹಿಸಲಸದಳವಾಗಿದ್ದ ಏಕಾಂತವಾಸ ತಪ್ಪಿಹೋಗಿತ್ತು. ಏನಾದರೂ ಹೆಚ್ಚು ಕಡಿಮೆಯಾದಾಗ ನೋಡಿಕೊಳ್ಳಲು ನಂಬುಗೆಯ ಸೇವಕನೊಬ್ಬ ಲಭಿಸಿದ್ದ. ಅವನೊಡನೆ ಆ ಮಾತು ಈ ಮಾತು ಆಡುತ್ತಲಿದ್ದ ಹಾಗೇ ಹೊತ್ತು ಕಳೆಯುತ್ತಿತ್ತು.

ಅವರನ್ನು ಪಟ್ಟಣಕ್ಕೆ ತೆಗೆದುಕೊಂಡು ಬಂದುದಕ್ಕೆ ಹದಿನೈದು ದಿನಗಳು ಕಳೆದುಹೋಗಿದ್ದುವಾದರೂ ಸುಲ್ತಾನ ಮಾತ್ರ ಅವರನ್ನಿನ್ನೂ ನೋಡಲು ಬರಮಾಡಿಕೊಂಡಿರಲಿಲ್ಲ. ಬೇರೆ ಬೇರೆ ಪ್ರಾಂತಗಳಲ್ಲಿ ನಡೆಯುತ್ತಿದ್ದ ಯುದ್ಧದ ವಿಚಾರಗಳಲ್ಲಿಯೇ ಆತ ತೊಡಗಿಕೊಂಡಿರುತ್ತಿದ್ದುದರಿಂದ ರಾಜಬಂದಿಗಳನ್ನು ಕರೆಯಿಸಿ ಕಾಣಲು ಆತನಿಗೆ ಸಮಯವಿಲ್ಲವೆಂದು ಹೇಳಲಾಗುತ್ತಿತ್ತು.

"ಇನ್ನೂ ಎಷ್ಟು ದಿನ ಹೀಗೇ ಅನಿಶ್ಚಿತ ಸ್ಥಿತಿಯಲ್ಲಿ ಕೊಳೆಯುವದು ಮಡಿವಾಳಾ? ಒಮ್ಮೆ ಆತ ನಮ್ಮನ್ನು ಕರೆಯಿಸಿ ನಮ್ಮ ಪ್ರಕರಣ ಮುಗಿಸಿಬಿಟ್ಟರೆ ಎಷ್ಟೋ ಉತ್ತಮ" ಎಂದು ಮಲ್ಲಸರ್ಜ ಹೇಳಿದಾಗ ಮಡಿವಾಳ ದೊರೆಯನ್ನು ಸಮಾಧಾನ ಪಡಿಸಲೆತ್ನಿಸುತ್ತ,

"ಅವನಿಗೆ ಮನಸ್ಸು ಬಂದಾಗ ಕರೆಯಿಸಲೊಲ್ಲನೇಕೆ? ಹೇಗೂ ಇಲ್ಲಿ

ಸಿಕ್ಕಿಕೊಂಡು ಬಿದ್ದುದಾಗಿದೆ. ಸಮಾಧಾನ ಮಾಡಿಕೊಳ್ಳಬೇಕಲ್ಲ ಪ್ರಭೂ?" ಎನ್ನುತ್ತಿದ್ದ.

"ಸಮಾಧಾನ! ಇಂಥ ಸ್ಥಿತಿಯಲ್ಲಿ ಸಮಾಧಾನ ಹೇಗೆ ಬರಬೇಕು ಮಡಿವಾಳಾ? ನಿಜವಾಗಿ ನಿನಗಾದರೂ ಶಾಂತಿಯೇ ಮನಸ್ಸಿಗೆ?"

"ಇಲ್ಲ ಪ್ರಭೂ. ಆದರೂ ಬೇರೆ ಉಪಾಯವಿಲ್ಲವಲ್ಲ?"

ಸೆರೆಮನೆಯಿಂದ ತಪ್ಪಿಸಿಕೊಂಡು ಪಾರಾಗಿ ಹೋಗುವುದಕ್ಕೂ ಅವರು ಪ್ರಯತ್ನಪಡದಿರಲಿಲ್ಲ; ಕಾವಲುಗಾರರಿಗೆ ಲಂಚದ ಆಸೆ ತೋರಿಸಿ ಅವರನ್ನು ಒಡೆದುಕೊಳ್ಳಲು ಉಪಾಯವಾಗಿ ಯತ್ನಿಸಿದುದಾಗಿತ್ತು. ತಮ್ಮನ್ನು ಪಾರುಮಾಡಿದರೆ, ಆ ಕಾವಲುಗಾರರನ್ನೂ ಜೊತೆಯಲ್ಲಿಯೇ ಕರೆದೊಯ್ದು ಕಿತ್ತೂರು ರಾಜ್ಯದಲ್ಲಿಯೆ ಇಟ್ಟುಕೊಂಡು ಹತ್ತು ಹಳ್ಳಿಗಳನ್ನು ವಂಶಪಾರಂಪರ್ಯವಾಗಿ ಇನಾಮು ಹಾಕಿಕೊಡುವ ಆಮಿಷವನ್ನು ತೋರಿಸಿದುದಾಗಿತ್ತು. ಯಾವುದರಿಂದಲೂ ಏನೂ ಪ್ರಯೋಜನ ಕಂಡುಬಂದಿರಲಿಲ್ಲ. ಟೀಪುವೆಂದರೆ ಥರಥರನೆ ನಡುಗುತ್ತಿದ್ದ ಆ ಕಾವಲುಗಾರರು ಅಂಥ ಸಾಹಸದ ಕೃತ್ಯಕ್ಕೆ ಕೈಹಾಕಲು ಹಿಂಜರಿಯುವುದೂ ಸಹಜವಾಗಿತ್ತು.

"ತಮ್ಮ ಹಳ್ಳಿಯೂ ಬೇಡ, ಜಾಗೀರೂ ಬೇಡ ಮಹಾಸ್ವಾಮಿ. ನಾವು ಬಡವರು. ಈಗ ನಾವು ತಮಗಾಗಿ ಸುಲ್ತಾನನಿಗೆ ದ್ರೋಹ ಬಗೆದರೆ ನಾವು ಎಲ್ಲಿದ್ದರೂ ಬಿಡದೆ ಹಿಡಿದು ತಂದು ಚರ್ಮ ಸುಲಿಯುವಂಥ ರಾಕ್ಷಸ ಆತ. ನಮ್ಮಿಂದಾಗಿ ನಮ್ಮ ಹೆಂಡರು ಮಕ್ಕಳು—ನಮ್ಮ ಸಂಬಂಧಿಕರು—ಎಲ್ಲರೂ ದುರ್ಮರಣಕ್ಕೊಳಗಾಗಬೇಕಾದೀತು;" ಎಂದು ಆ ಕಾವಲುಗಾರರು ಸ್ಪಷ್ಟವಾಗಿಯೇ ಹೇಳಿದ್ದರು.

"ನಮ್ಮನ್ನು ನೋಡಿದ ಬಳಿಕ ಟೀಪು ನಮಗೆ ಯಾವ ಶಿಕ್ಷೆ ವಿಧಿಸಬಹುದು ಊಹಿಸಬಲ್ಲೆಯಾ ಮಡಿವಾಳ?"

"ಶಿಕ್ಷೆ ವಿಧಿಸುವಂಥಾದ್ದು ನಾವು ಏನು ಮಾಡಿದೇವೆ ಪ್ರಭೂ?"

"ಏನೂ ಮಾಡಿಲ್ಲವೆಂಬುದೇನೊ ನಿಜ. ಆದರೆ, ಅದನ್ನೆಲ್ಲಾ ಆತ ನೋಡುವವನೇ ಮಡಿವಾಳ? ನಾವು ಒಂದು ರಾಜ್ಯದ ರಾಜರಾಗಿದ್ದುದೇ ಒಂದು ಅಪರಾಧವಾಗಿ ಕಾಣಬಹುದು ಆತನ ದೃಷ್ಟಿಯಲ್ಲಿ.... ನರಗುಂದದ ರಾಜರ ಗತಿಯೇನಾಯಿತು, ಗೊತ್ತಿಲ್ಲವೆ? ಮೊನ್ನೆ ಕಾವಲುಗಾರರು ಹೇಳುತಿದ್ದರಲ್ಲ?"

"ಆ ತೊರಗಲ್ಲ ಕಾಜಿಯ ಮಾತು ನಂಬಿ ಅವರು ವ್ಯರ್ಥ ಪ್ರಾಣ ಕಳೆದುಕೊಂಡರು. ಅವರನ್ನೂ ಅವರ ದಿವಾನರನ್ನೂ ಟೀಪು ಕೊಲ್ಲಿಸಿದ್ದಲ್ಲದೆ ದಿವಾನನ ಮಗಳೊಬ್ಬಳನ್ನು ಜನಾನಾದಲ್ಲಿ ಸೇರಿಸಿಕೊಂಡನಂತೆ. ಎಂಥಾ ಅನ್ಯಾಯ ಪ್ರಭೂ ?"

"ಅವನೆದುರಿಗೆ ತಲೆಯೆತ್ತಿ ನಿಂತು ಸ್ವತಂತ್ರವಾಗಿ ರಾಜ್ಯವಾಳುವ ರಾಜರನ್ನೆಲ್ಲಾ ಆತ ಮುರಿಬಡಿಯಲು ಯತ್ನಿಸುತ್ತಿದಾನೆ. ನಾವೂ ಕೂಡಾ ಸ್ವತಂತ್ರವಾಗಿಯೇ ಆಳುತ್ತಿದ್ದವರು. ನಮ್ಮ ಮೇಲೂ ಅವನ ರೋಷ ವಿರಲೇಬೇಕು."

"ಇದ್ದೇ ಇರಬೇಕು. ಇಲ್ಲವಾದರೆ ಹಾಗೆ ಒಮ್ಮಿಂದೊಮ್ಮೆ ಅವನ ಸೇನಾಪತಿ ನಮ್ಮ ಕೋಟೆಯ ಮೇಲೇರಿ ಬರುತ್ತಿರಲಿಲ್ಲ."

"ಸುಲ್ತಾನನ ಆಜ್ಞೆಯಿಂದಲೇ ಆ ಸೇನಾಪತಿ ಹಾಗೆ ಮಾಡಿರಬೇಕು."

"ಹಾಗೇ ಇರಬೇಕು ಪ್ರಭೂ. ಆಗ ನಾವು ನಡೆದುಕೊಂಡ ರೀತಿಯ ನೆನಪಾದರೆ ಈಗಲೂ ನಾಚಿಕೆಯಿಂದ ಜೀವ ಹೋದಂತಾಗ್ತದೆ. ನಮ್ಮಲ್ಲಿ ಅಷ್ಟೆಲ್ಲಾ ಶಕ್ತಿಯಿದ್ದೂ ಕೈಯಲ್ಲಿ ಬಳೆಯಿಟ್ಟವರಂತೆ ತಣ್ಣಗೆ ನಿಂತುಕೊಳ್ಳಬೇಕಾಯಿತಲ್ಲ? ಎಂಥಾ ನಾಚಿಗೆಗೇಡಿನ ಸಂಗತಿ !"

"ದಿವಾನನ ಮಾತಿನಂತೆ ನಡೆದರೆ ಒಳ್ಳೆಯದಾದೀತೆಂಬ ಒಂದೇ ಒಂದು ವಿಚಾರದಿಂದ ನಾವೂ ಸುಮ್ಮನಿದ್ದೆವು. ಅಂತೂ ಆದದ್ದು ಆಗಿಹೋಯಿತು. ಇನ್ನು ಅದಕ್ಕಾಗಿ ಚಿಂತಿಸಬಾರದು ಮಡಿವಾಳಾ."

"ಚಿಂತಿಸಬಾರದು, ಆದರೂ ಸುಮ್ಮನಿರಲಿಕ್ಕಾಗುವದಿಲ್ಲವಲ್ಲ ಪ್ರಭೂ? ನಾವು ಯುದ್ಧ ಮಾಡದೆ ತಟಸ್ಥರಾಗಿದ್ದದ್ದು ಕೇಳಿ ಸುತ್ತಲಿನ ರಾಜರು ಬಿದ್ದುಬಿದ್ದು ನಗುತ್ತಿರಬಹುದು. ಪೇಶವೆಯವರೂ, ಪರುಶುರಾಮಭಾವು ಪಟವರ್ಧನರೂ ಎಷ್ಟು ಚೇಷ್ಟೆ ಮಾಡುತ್ತಿರುವರೋ ಏನೋ. ಮೊದಲೇ ಕಿತ್ತೂರು ಅಂದರೆ ಆವರಿಗಾಗದು. ಕಿತ್ತೂರಿಗೆ ಇಂಥ ಅಪಮಾನವಾಗುವದೇ ಬೇಕಾಗಿತ್ತು ಅವರಿಗೆ."

"ದಿವಾನನೂ ಅವರ ಕಡೆಗೇ ಆಗಿದ್ದನೇನೊ ಅಂತ ಇತ್ತಿತ್ತಲಾಗಿ ನನಗನಿಸುತಿದೆ. ಏನಾದರೂ ಆಗಿ, ಅಂತೂ ನಾವು ತಲೆಯೆತ್ತದಂತಾಗಲೇ ಬೇಕೆಂದು ಅವರ ವಿಚಾರ. ನಮ್ಮ ದಿವಾನನಿಗೆ ಪರಶುರಾಮಭಾವು ಏನಾದರೂ ಹೇಳಿ ಕಳಿಸಿದ್ದನೋ ಏನೊ."

“ಇದ್ದರೂ ಇರಬಹುದು ಪ್ರಭು. ಅವರೆಲ್ಲಾ ಒಂದಾಗುವದೂ ಅಶಕ್ಯವಲ್ಲ. ಮೊದಲಿಂದಲೂ ನಮ್ಮ ದಿವಾನ ಪರಶುರಾಮಭಾವೂನ ಹಸ್ತಕನೇ ಆಗಿರಬಹುದು.”

“ಒಂದಿಲ್ಲೊಂದು ದಿನ ನಿಜಸಂಗತಿ ತಿಳಿಯದಿರಲಾರದು. ಆಗ ಎಲ್ಲಾ ತಾನೇ ಗೊತ್ತಾಗುತ್ತದಲ್ಲ ಮಡಿವಾಳಾ? ಮೊದಲು ಇಲ್ಲಿಯ ಪೀಡೆಯೊಂದು ತಪ್ಪಬೇಕು.”

“ಇವತ್ತು ನಾಳೆ ಇಷ್ಟರೊಳಗಾಗಿ ದರಬಾರಕ್ಕೆ ನಮ್ಮನ್ನು ಕರೆಸಬಹುದೆಂದು ಕಾವಲುಗಾರರು ಮಾತಾಡುತ್ತಿದ್ದರು ನಿನ್ನೆ.”

“ಆದಷ್ಟು ಬೇಗ ಇದು ಮುಗಿದುಹೋಗಬೇಕು. ಮುಂದಿನ ಹಾದಿಯಾದರೂ ನಿಚ್ಚಳವಾಗಿ ಕಾಣಿಸೀತು.”

ಮತ್ತೆರಡು ದಿನ ಕಳೆದರೂ ದರಬಾರದಿಂದ ಕರೆ ಬರಲಿಲ್ಲ. ಎಂಟು ದಿನಗಳ ತರುವಾಯ, ಕಡೆಗೊಮ್ಮೆ ಅಧಿಕಾರಿಗಳು ಬಂದು, ಮಾರನೆಯ ದಿನ ಬೆಳಗ್ಗೆ ದರಬಾರ ನೆರೆಯುವುದೆಂದೂ ಸುಲ್ತಾನರ ಎದುರು ಉಪಸ್ಥಿತರಾಗಲು ಸಿದ್ಧವಾಗಿರಬೇಕೆಂದೂ ಹೇಳಿ ಹೋದರು.

“ಸಿದ್ಧತೆಯೆಂದರೇನು? ನಿನಗೇನಾದರೂ ಗೊತ್ತೇ ಮಡಿವಾಳಾ?”

“ಎಂಥಾ ಸಿದ್ಧತೆ ಪ್ರಭೂ? ನಾವೇನು ಗಡ್ಡ ಗಿಡ್ಡ ತೆಗೆಸುವಂತಿಲ್ಲ, ಹೊಸ ಬಟ್ಟೆ ಧರಿಸುವಂತಿಲ್ಲ, ಸುಲ್ತಾನನಿಗೆ ಕಾಣಿಕೆಯನ್ನೂ ಒಯ್ಯುವಂತಿಲ್ಲ....” ಎಂದು ನಗುತ್ತ ನುಡಿದ ಮಡಿವಾಳ.

ಮಲ್ಲಸರ್ಜ ಏನನ್ನೋ ಯೋಚಿಸಿ ಮಾತನಾಡಿದ: “ದರಬಾರಕೆ ಹೋಗುವದೆಂದರೆ ಇನ್ನೊಂದು ಪೀಕಲಾಟ ಬಂದಂತಾಯಿತಲ್ಲ?”

“ಏನು ಪ್ರಭು?”

“ಟೀಪು ಮಹಾ ಅಹಂಕಾರಿ, ಭಯಂಕರ ದುರಭಿಮಾನಿ. ಅವನೆದುರು ನಾವು ತಲೆಬಾಗಿಸಿ ವಂದಿಸದಿದ್ದರೆ ಏನು ಪ್ರತಿಕ್ರಿಯೆಯಾದೀತು?”

“ಅವನು ವಿಪರೀತ ಸಿಟ್ಟಾಗುವದು ಖಚಿತ.”

“ಸಿಟ್ಟು ಬಂದಾಗ ಆತ ಎಂಥಾ ಆಜ್ಞೆ ವಿಧಿಸುವನೆಂಬುದನ್ನು ಯಾರೂ ಊಹಿಸಲು ಸಾಧ್ಯವಿಲ್ಲ. ಏನಾದರೂ ಉಪಾಯ ಮಾಡಿ ಇಲ್ಲಿಂದ ಪಾರಾಗಿ ಹೋಗಿ ಮತ್ತೆ ಕಿತ್ತೂರನ್ನ ವಶಪಡಿಸಿಕೊಳ್ಳುವದೇ ನಮ್ಮ ಉದ್ದೇಶ

ವಾಗಿರುವಾಗ ಆರಂಭದಲ್ಲೇ ಟೀಪುವನ್ನು ಸಿಟ್ಟಿಗೆಬ್ಬಿಸಿ ಗಂಡಾಂತರಕ್ಕೆ ಸಿಕ್ಕಿಕೊಳ್ಳುವದೂ ಸರಿಯಲ್ಲ. ಅಲ್ಲವೇ ?"

" ಹೌದು ಪ್ರಭೂ. ಆ ರಾಕ್ಷಸನನ್ನು ಸಿಟ್ಟಿಗೆಬ್ಬಿಸುವಂಥಾದ್ದು ಏನೂ ಮಾಡಬಾರದು."

" ಹಾಗಾದರೆ ನಾವು ಅವನಿಗೆ ವಂದಿಸಲೇಬೇಕಾಗುವದಿಲ್ಲ ?"

" ಸಿಂಹಾಸನದ ಮೇಲೆ ಕೂಡ್ರುವ ಸುಲ್ತಾನನಿಗೆ ವಂದಿಸುವದರಲ್ಲಿ ತಪ್ಪೇನೂ ಇರಲಾರದು. ತಮ್ಮ ವಂದನೆಗೆ ಪ್ರತಿಯಾಗಿ ಅವನೂ ವಂದಿಸಬೇಕು, ಅಷ್ಟೆ."

" ಅವನಲ್ಲಿ ಅಷ್ಟು ಸೌಜನ್ಯವಿರಬಹುದು ಅಂತ ನಿನಗನಿಸುವದೇ ?"

" ಟೀಪು ಲಹರಿಯ ಮನುಷ್ಯ ಅಂತ ಕೀರ್ತಿಯಿದೆಯಲ್ಲ ಪ್ರಭು ? ಆಯಾ ವೇಳೆಯಲ್ಲಿ ಲಹರಿಗೆ ಬಂದ ಹಾಗೆ ನಡೆದುಕೊಳ್ಳುವವನು ಆತ. ಅವನು ಹೀಗೇ ಮಾಡಬಹುದು ಅಂತ ಅವನ ಮಂತ್ರಿಗಳೂ ಹೇಳಲು ಸಾಧ್ಯವಿಲ್ಲವಂತೆ."

" ಅದಕ್ಕೇ ನಾವು ಹೇಳಿದ್ದು, ದರಬಾರದಲ್ಲಿ ಪೀಕಲಾಟ ಬರುತ್ತದೆ ಅಂತ."

ಸ್ವಲ್ಪ ಹೊತ್ತು ಸುಮ್ಮನಿದ್ದು, ಮತ್ತಾವುದೋ ಯೋಚನೆ ಹೊಳೆಯುತ್ತಲೂ ಮಲ್ಲಸರ್ಜನೆಂದ: " ಟೀಪುವಿನ ಕೈಯಿಂದ ಪಾರಾಗಿ ಹೋಗಬೇಕಾದರೆ ನಾವು ಶಿವಾಜಿ ಮಹಾರಾಜರಂತೆ ತಂತ್ರಗಾರಿಕೆಯಿಂದ ಕೆಲಸ ಮಾಡಬೇಕು. ನಾಳೆ ನೀನೊಬ್ಬನೇ ದರಬಾರಕ್ಕೆ ಹೋಗಿ ಬಾ. ನಾವು ಬರುವದಿಲ್ಲ."

" ಬರದಿದ್ದರೆ ಅವರು ಬಿಡಬೇಕಲ್ಲ ಪ್ರಭು ?"

" ಇವತ್ತು ಸಂಜೆಯೇ ನಾವು ಹಾಸಿಗೆ ಹಿಡಿದು ಬಿಡುತ್ತೇವೆ. ನಮಗೆ ಜಡ್ಡಾಗಿದೆಯೆಂದು ಸುದ್ದಿ ಎಬ್ಬಿಸಿಬಿಡು. ಮುಂಜಾನೆ ಜಡ್ಡು ಅತಿಯಾಯಿತೆಂದು ಹೇಳಿಬಿಟ್ಟರೆ ಸರಿ. ಅವರೇನು ನಮ್ಮನ್ನು ಹೊತ್ತುಕೊಂಡು ಹೋಗುವರೇ ?"

" ಇದು ಒಳ್ಳೆಯ ಯುಕ್ತಿಯೇ. ತಮ್ಮ ಅಸ್ವಾಸ್ಥ್ಯದ ಸುದ್ದಿ ಕೇಳಿದಾಗ ಟೀಪು ಏನು ಮಾಡಬಹುದೋ ?"

" ಆದೂ ಅವನ ಲಹರಿಯ ಮೇಲೇ ಅವಲಂಬಿಸಿದ ಸಂಗತಿ."

ಸಾಯಂಕಾಲ ಸೆರೆಮನೆಯ ಆಳುಗಳು ಊಟ ತೆಗೆದುಕೊಂಡು ಬಂದಾಗ ಮಲ್ಲಸರ್ಜ ಶಾಲು ಹೊದೆದು ಮಲಗಿದ್ದುದನ್ನು ಕಂಡು ಮಡಿವಾಳ ನನ್ನು ವಿಚಾರಿಸಿದರು :

" ಏನಾಯಿತಯ್ಯಾ ನಿಮ್ಮ ರಾಜರಿಗೆ ?"

" ಏನು ಹೇಳುವದಪ್ಪಾ ! ಮುಂಜಾನೆಯಿಂದ ಹಾಸಿಗೆ ಹಿಡಿದು ಬಿಟ್ಟಾರೆ. ಮಧ್ಯಾಹ್ನ ಊಟ ಕೂಡಾ ಮಾಡಲಿಲ್ಲ."

" ಅಯ್ಯೋ ಪಾಪ ! ಒಮ್ಮಿಂದೊಮ್ಮೆಲೇ ಏನಾಯಿತು ಅವರಿಗೆ ?"

" ಏನೋ ಯಾರಿಗ್ಗೊತ್ತು ! ಅಂತೂ ಜಡ್ಡು ಬಂದುಬಿಟ್ಟದೆ."

" ಜಡ್ಡು ? ಅಂದರೇನಯ್ಯಾ ?" ಮೈಸೂರಿನ ಆ ಕಾವಲುಗಾರರಿಗೆ ಆ ಶಬ್ದ ಅರ್ಥವಾಗಲಿಲ್ಲ.

" ಜಡ್ಡು ಅಂದರೆ ಕಸಾರಿಕೆ...."

' ಕಸಾರಿಕೆ ' ಎಂಬ ಶಬ್ದವೂ ಅವರಿಗೆ ಅಪರಿಚಿತವೇ ಆಗಿತ್ತು.

" ಎಂಥೆಂಥಾ ವಿಚಿತ್ರ ಶಬ್ದ ಆಡ್ತೀಯಲ್ಲಯ್ಯಾ ? ಏನು ಭಾಷೇನೋ ನಿಮ್ದು ? ಏನಾಗಿದೆ ಅವರಿಗೆ ? ಏನು ಕಾಹಿಲೆ ?"

" ಕಾಯಿಲೆ ಅಂದರೆ ?"

" ನಮ್ಮ ಶಬ್ದ ನಿಮಗೆ ತಿಳಿಯೋಲ್ಲ. ನಿಮ್ಮದು ನಮಗೆ ತಿಳಿಯೋಲ್ಲ. ಸರಿಹೋಯ್ತು ! ಕಾಹಿಲೆ ಅಂದರೆ ರೋಗ....ಏನು ರೋಗ ಬಂದಿದೆ ನಿಮ್ಮ ರಾಜರಿಗೆ ?"

" ಅದು ನನಗೆ ಹ್ಯಾಗೆ ಗೊತ್ತಾದೀತು ? ನಾನೇನು ವೈದ್ಯನೇ ? ಹಕೀ ಮನೇ ? ಬೆಳಗಿನಿಂದ ಬಾಯಲ್ಲಿ ಏನೂ ಹಾಕದೆ ಹಾಗೇ ನರಳುತ್ತ ಮಲ ಗಿದಾರೆ."

ಕಿತ್ತೂರಿನಂಥ ಸಂಪದ್ಭರಿತ ರಾಜ್ಯವೊಂದರ ಅಧಿಪತಿ ಹೀಗೆ ಔಷಧಿ ಉಪಚಾರಗಳಿಲ್ಲದೆ ಅಸಹಾಯನಾಗಿ ಬಿದ್ದುಕೊಳ್ಳಬೇಕಾದ ಪ್ರಸಂಗ ಬಂದು ದನ್ನು ಕಂಡು ಹಿಂದುಗಳೇ ಆಗಿದ್ದ ಆ ಕಾವಲುಗಾರರಿಗೆ ಕನಿಕರವೆನ್ನಿಸ ದಿರಲಿಲ್ಲ.

" ಯೋಚನೆ ಮಾಡಬೇಡಯ್ಯಾ. ನಾವು ಹೋಗಿ ನಮ್ಮ ಮೇಲಧಿ

ಕಾರಿಗಳಿಗೆ ಇವರ ಕಾಹಿಲೆಯ ಸಮಾಚಾರ ತಿಳಿಸುತ್ತೇವೆ. ವೈದ್ಯರು ಬಂದು ಔಷಧಿ ಕೊಟ್ಟು ಹೋಗಬಹುದು. ಈಗ ನಿಮ್ಮ ರಾಜರು ಎದ್ದು ಊಟಮಾಡಲಿ."

"ಇವರು ಹೇಳಿದ್ದು ಕೇಳಿದಿರಾ ಪ್ರಭು? ಮಧ್ಯಾಹ್ನವೂ ತಾವು ಉಣ್ಣಲಿಲ್ಲ. ಈಗಲಾದರೂ ಎದ್ದು ಸ್ವಲ್ಪ ಅನ್ನ ತೆಗೆದುಕೊಳ್ಳಿರಿ."

"ಏನೂ ಬೇಡ ಮಡಿವಾಳಾ. ಹೊಟ್ಟೆಯಲ್ಲಿ ಬಹಳ ಸಂಕಟವಾಗ್ತದೆ. ಇಂಥಾದ್ದರಲ್ಲಿ ಅನ್ನಗಿನ್ನ ಯಾವದೂ ಹೋಗುವಂತಿಲ್ಲ. ನನಗೇನೂ ಬೇಡ."

ಸೆರೆಮನೆಯ ಆಳುಗಳು ಹೊರಟುಹೋದರು. ಮಹತ್ತ್ವದ ಕೈದಿಗಳ ಆಸ್ವಾಸ್ಥ್ಯದ ವಾರ್ತೆಯನ್ನು ತಡಮಾಡದೆ ತಿಳಿಸಬೇಕೆಂದು ಸುಲ್ತಾನನ ಕಟ್ಟಳೆಯಿತ್ತು. ಅದರಂತೆ ಆಳುಗಳು ಮಲ್ಲಸರ್ಜನ ಅನಾರೋಗ್ಯದ ವಿಚಾರವನ್ನು ಮೇಲಧಿಕಾರಿಗೆ ತಿಳಿಸುತ್ತಲೂ ಆತ ತಕ್ಷಣವೇ ಒಬ್ಬ ವೈದ್ಯರಾಜನನ್ನು ಕಳಿಸಿಕೊಟ್ಟ.

ವೈದ್ಯರಾಜ ಬಂದು, ಮಲ್ಲಸರ್ಜನ ನಾಡಿ, ನಾಲಗೆ, ಕಣ್ಣು, ಎದೆ, ಹೊಟ್ಟೆ ಎಲ್ಲವನ್ನೂ ಪರೀಕ್ಷಿಸಿ ನೋಡಿ, ಯಾವ ರೋಗದ ಸುಳಿವನ್ನೂ ಕಾಣದೆ ಗೊಂದಲದಲ್ಲಿ ಬಿದ್ದು,

"ಏನಾಗಿದೆ ಪ್ರಭು? ಯಾವ ಭಾಗದಲ್ಲಿ ನೋವಿದೆ?" ಎಂದು ವಿಚಾರಿಸಿದ.

"ಕರುಳಿನಲ್ಲಿ ಬಹಳ ಸಂಕಟ."

"ಸೆರೆಮನೆಯ ಒಣ ಆಹಾರದಿಂದ ಕರುಳು ಕೆಟ್ಟಿರಬಹುದು."

"ಕೆಲದಿನಗಳ ಹಿಂದೆ ರಕ್ತವೂ ಬೀಳುತ್ತಿತ್ತು ವೈದ್ಯರಾಜರೆ," ಎಂದ ಮಡಿವಾಳ.

"ಈಗ ರಕ್ತ ಬೀಳುವುದು ನಿಂತಿದೆ ತಾನೆ?"

"ಕೆಲದಿನಗಳಿಂದ ಬೀಳಲಿಲ್ಲ. ಆದರ ಬದಲು ಹೊಟ್ಟೆ ನೋವು ಸುರುವಾಗಿದೆ."

"ಸರಿ. ನಾನೊಂದು ಚೂರ್ಣ ಕೊಟ್ಟಿರುತ್ತೇನೆ. ಇದನ್ನು ಪ್ರತಿ ದಿನವೂ ಮೂರು ಬಾರಿ ನೀರಿನಲ್ಲಿ ತೆಗೆದುಕೊಳ್ಳಿ."

"ಎದ್ದು ಓಡಾಡುವದಕ್ಕೂ ಆಗುವದಿಲ್ಲವಲ್ಲ ವೈದ್ಯರಾಜರೆ?"

"ಕರುಳಿನ ಬೇನೆಯಿರುವಾಗ ಹಾಗೆ ಓಡಾಡುವದೂ ಸರಿಯಲ್ಲ. ಇನ್ನೂ ಕೆಲವು ದಿನ ತಾವು ಹಾಸಿಗೆಯಲ್ಲೇ ಇರಬೇಕು ;" ಎಂದು ಹೇಳಿ ವೈದ್ಯರಾಜ ಹೊರಟುಹೋದ.

ಮೊದಲೇ ನಿಶ್ಚಿತವಾದಂತೆ ಮಾರನೆಯ ದಿನ ದರಬಾರು ನೆರೆಯಿತು. ಮಲ್ಲಸರ್ಜನೊಬ್ಬನನ್ನುಳಿದು ಕಿತ್ತೂರಿನ ಇತರ ಬಂದಿಗಳೆಲ್ಲರನ್ನೂ ಸುಲ್ತಾನ ನೆದುರು ತಂದು ನಿಲ್ಲಿಸಲಾಯಿತು.

"ಈ ಕೈದಿಗಳಲ್ಲಿ ರಾಜನಾದವನು ಯಾರು?" ಇಂದು ಟೀಪು ವಿಚಾರಿಸಿದ.

"ಕಿತ್ತೂರಿನ ರಾಜರು ಕಾಹಿಲೆಯಿಂದ ಮಲಗಿದ್ದಾರೆ ಮಹಾಪ್ರಭು. ಅವರಿಲ್ಲಿ ಹಾಜರಿಲ್ಲ," ಎಂದು ದಿವಾನ ಪೂರ್ಣಯ್ಯ ನಿವೇದಿಸಿಕೊಂಡ.

ಉತ್ತರದೇಶದ ಆ ಯುವಕ ರಾಜನನ್ನು ನೋಡಬೇಕೆಂಬ ಕುತೂಹಲದಿಂದ ಪ್ರೇರಿತನಾಗಿದ್ದ ಟೀಪು, ಆತನ ಅಸ್ವಾಸ್ಥ್ಯದ ವಿಚಾರ ಕೇಳುತ್ತಲೂ ಕೆರಳಿದವನಂತಾಗಿ,

"ಎಷ್ಟು ದಿನ ಆಯಿತು ಆತ ಕಾಹಿಲೆ ಮಲಗಿ? ಔಷಧೋಪಚಾರ ನಡಸಿ ಗುಣಪಡಿಸಲಿಲ್ಲವೇಕೆ?" ಎಂದು ಕೇಳಿದ.

"ಔಷಧೋಪಚಾರ ನಡೆದೇ ಇದೆ ಮಹಾಪ್ರಭು. ಆದರೆ, ಅವರ ಕಾಹಿಲೆ ಬೇಗ ವಾಸಿಯಾಗುವಂಥದಲ್ಲವೆಂದು ವೈದ್ಯರು ಹೇಳುತ್ತಾರೆ."

"ಅಂತೂ ಔಷಧೋಪಚಾರ ನಡೆದಿದೆಯಲ್ಲ! ಅಚ್ಛಾ. ಅವನು ಆದಷ್ಟು ಬೇಗ ಗುಣಹೊಂದಿ ನಮ್ಮ ದರ್ಶನಕ್ಕೆ ಬರುವಂತಾಗಬೇಕು. ಅವನಿಗೆ ಯೋಗ್ಯವಾದ ಚಿಕಿತ್ಸೆ ನಡೆಯುವಂತೆ ನೀವು ಸ್ವತಃ ನೋಡಿಕೊಳ್ಳಿ ದಿವಾನರೆ. ಅವನಿಗಷ್ಟು ಹಣ್ಣು ಹಂಪಲುಗಳನ್ನೂ ಕಳಿಸಿಕೊಡಿ," ಎಂದು ಅಪ್ಪಣೆಯಿತ್ತು, ತನ್ನೆದುರು ನಿಂತುಕೊಂಡಿದ್ದ ಇತರ ಕೈದಿಗಳತ್ತ ದೃಷ್ಟಿ ತಿರುಗಿಸಿ ಸುಲ್ತಾನ ಕೇಳಿದ:

"ರಾಜನನ್ನು ಬಿಟ್ಟು ಉಳಿದ ಕೈದಿಗಳೆಲ್ಲಾ ಇಲ್ಲಿದಾರೆ ತಾನೆ?"

"ಇದ್ದಾರೆ ಖಾವಂದ್, ಇವರ ಹೆಸರುಗಳನ್ನು ಓದಿ ಹೇಳಲು ಅಪ್ಪಣೆಯಾಗಬೇಕು," ಎಂದು ಮಂತ್ರಿಯೊಬ್ಬ ಕೇಳಿಕೊಂಡ. ಸುಲ್ತಾನ ಠೀವಿಯಿಂದ ತಲೆಯಲ್ಲಾಡಿಸಿ ಅನುಮತಿ ಸೂಚಿಸಿದ,

ಕೈದಿಗಳ ಹೆಸರು ಅವರ ಸ್ಥಾನಮಾನಗಳು ಮುಗಿಯುತ್ತಲೂ ಕಿತ್ತೂರಿನ ದಿವಾನ ಗುರುನಾಥಪಂತನನ್ನು ಕುರಿತು ಸುಲ್ತಾನ ಕೇಳಿದ:

"ಏನಯ್ಯಾ, ನೀನೇನೋ ದಿವಾನ?"

"ಹೌದು ಮಹಾಪ್ರಭು," ಎಂದು ಉತ್ತರವಿತ್ತು ಕೈಜೋಡಿಸಿ ನಿಂತುಕೊಂಡ ಗುರುನಾಥಪಂತ.

ಆತನನ್ನೊಂದು ಬಾರಿ ಅಡಿಯಿಂದ ಮುಡಿಯವರೆಗೆ ದಿಟ್ಟಿಸಿ ನೋಡಿ ಸುಲ್ತಾನ ಕೇಳಿದ: "ನಿನ್ನ ಹೆಸರು ಗುರುನಾಥಪಂತ ಎಂದಲ್ಲವೆ? ಪಂತ ಎಂದರೆ ಕೊಂಕಣದ ಕಡೆಯವರು, ಅಲ್ಲವೆ?"

"ಹೌದು ಮಹಾಪ್ರಭು."

"ಪೇಶವೆಯರೂ ಕೊಂಕಣದವರು. ಆ ದ್ರೋಹಿ ಪರಶುರಾಮ ಭಾವೂನೂ ಕೊಂಕಣದವ. ನೀನೂ ಕೊಂಕಣದವನೇ. ಸರಿ. ಸರಿ!" ಮೈಸೂರಿನ ಪರಮವೈರಿಗಳೆನಿಸಿಕೊಂಡಿದ್ದ ಪೇಶವೆಯರ ಬಗೆಗೆ ಸುಲ್ತಾನ ಅಸಹನೆಯಿಂದಿದ್ದುದು ಸಹಜವಾಗಿತ್ತು. ತನ್ನನ್ನು ಸೋಲಿಸಲು ಪರಿಪರಿಯಾಗಿ ಯತ್ನಿಸುತ್ತಿದ್ದ ಆ ಕೊಂಕಣದ ಜನರ ವಿಚಾರ ಹೊರಟರೂ ಕೂಡಾ ಅವನ ರಕ್ತ ಕುದಿಯುತ್ತಿತ್ತು.

ಒಳಗೊಳಗೇ ಸಿಟ್ಟಿನಿಂದ ಹಲ್ಲು ಕಡಿಯುತ್ತ ಸುಲ್ತಾನ ಕೇಳಿದ:

"ಕಿತ್ತೂರಿನ ದಿವಾನಗಿರಿಗೆ ನಿನ್ನನ್ನು ಯಾರು ನೇಮಿಸಿದರು? ಪರಶುರಾಮಭಾವೂನೇ ನೇಮಿಸಿರಬೇಕಲ್ಲ? ಅಥವಾ, ಪೇಶವೆಯವರೇ ನಿನ್ನನ್ನು ಕಳಿಸಿಕೊಟ್ಟರೋ?"

"ನಾನು ಪುಣ್ಯಪಟ್ಟಣದವನಲ್ಲ ಮಹಾಪ್ರಭು. ನಾನೂ ಕಿತ್ತೂರು ನಾಡಿನವನೇ. ನಮ್ಮ ರಾಜ್ಯಕ್ಕೇ ಸೇರಿದ ತಿಗಡಿ ಎಂಬುದು ನಮ್ಮ ಊರು."

"ಸುಳ್ಳಾಡಿದರೆ ನಿನ್ನ ನಾಲಗೆ ಉಳಿಯಲಿಕ್ಕಿಲ್ಲ. ಖಬರ್‌ದಾರ್? ಕಿತ್ತೂರು ರಾಜ್ಯವೆಂದರೆ ಕನ್ನಡ ಮಾತಾಡುವ ಜನರ ರಾಜ್ಯ. ತಮ್ಮ ಹೆಸರಿನ ಮುಂದೆ ಪಂತ ಎಂದು ಬಾಲ ಜೋಡಿಸುವ ಸಂಪ್ರದಾಯ ಕನ್ನಡಿಗರಲಿಲ್ಲವೆಂಬುದು ನಮಗೇನು ತಿಳಿಯದೇ? ಯಾಕೆ ದಿವಾನರೆ, ನೀವೇನನ್ನುವಿರಿ?"

"ಮಹಾಪ್ರಭುಗಳ ಮಾತು ಸರಿಯಾಗಿದೆ. ಕನ್ನಡ ಜನರಲ್ಲಿ ಈ ಪದ್ಧತಿ ಬಳಕೆಯಲ್ಲಿಲ್ಲ."

“ ಪಂತ ಎಂದು ಕರೆದುಕೊಳ್ಳುವ ನೀನು ಕನ್ನಡಿಗನೂ ಅಲ್ಲ, ಕಿತ್ತೂರು ರಾಜ್ಯದ ಪ್ರಜೆಯೂ ಅಲ್ಲ. ನೀನು ಕೊಂಕಣದಿಂದಲೇ ಬಂದವನು. ಪೇಶವೆ ಪಟವರ್ಧನರ ಕಡೆಯವನು. ಅವರೇ ನಿನ್ನನ್ನು ನೇಮಿಸಿರಬೇಕು.”

“ ಕ್ಷಮಿಸಬೇಕು ಹುಜೂರ್. ನನ್ನನ್ನು ದಿವಾನಗಿರಿಗೆ ನೇಮಿಸಿಕೊಂಡವರು ಕಿತ್ತೂರಿನ ದಿವಂಗತ ರಾಜರಾದ ವೀರಪ್ಪರಾಜರು.”

“ ಅವರನ್ನು ಪಟವರ್ಧನರು ಸೆರೆಹಿಡಿದಿದ್ದರು. ಹೌದೋ ಅಲ್ಲವೋ ?”

“ ಹೌದು ಹುಜೂರ್.”

“ ಅದೇ ಸಮಯದಲ್ಲಿ ಪಟವರ್ಧನರು ನಿನ್ನನ್ನು ದಿವಾನನನ್ನಾಗಿ ಮಾಡಿರಬೇಕು.”

“ ಇಲ್ಲ ಹುಜೂರ್. ಅದಕ್ಕೂ ಮೊದಲೇ....” ಎಂದು ಗುರುನಾಥ ಪಂತ ಹೇಳುತ್ತಿದ್ದಂತೆಯೇ ಟೀಪು ನಡುವೆಯೇ ಬಾಯಿಹಾಕಿ ಮಾತನಾಡಿದ.

“ ಒಂದೆರಡು ವರ್ಷ ಮೊದಲೇ ನೀನು ದಿವಾನನಾಗಿದ್ದರೂ ಕೂಡಾ ಏನಾಯಿತು? ಪಂತರು ಎಲ್ಲಾ ಒಂದೇ. ನೀನು ಒಳಗೊಳಗೇ ಪೇಶವೆ—ಪಟವರ್ಧನರಿಗೆ ಅನುಕೂಲವಾಗಿ ಕೆಲಸ ನಡಸಿದ್ದಿ. ಅಲ್ಲವೆ ?”

ಸುಲ್ತಾನ ತನ್ನನ್ನು ಪೇಚಿನಲ್ಲಿ ಸಿಲುಕಿಸಿ, ಅಪರಾಧಿಯನ್ನಾಗಿ ಮಾಡಲು ಯೋಜಿಸಿದ್ದುದು ಗುರುನಾಥಪಂತನಿಗೆ ಗೊತ್ತಾಗಿಹೋಗಿತ್ತು. ಆದರೂ ಆತ ಧೈರ್ಯಗೆಡದೆ, ಸುಲ್ತಾನನ ಮಾತಿನ ಬಲೆಯಲ್ಲಿ ತೊಡಕಿಕೊಳ್ಳದಂತೆ ಜಾಗರೂಕತೆಯಿಂದ ಒಂದೊಂದೇ ಮಾತು ಆಡತೊಡಗಿದ್ದ.

“ ನಾನು ಅವರಿಗೆ ಅನುಕೂಲವಾಗಿರುವ ಪ್ರಶ್ನೆಯೇ ಇರಲಿಲ್ಲ ಹುಜೂರ್. ಕಿತ್ತೂರು ರಾಜ್ಯ ಪೇಶವೆಯರಿಗೆ ಅಧೀನವಾಗಿಯೇ ಇತ್ತು.”

“ ಅದು ಯಾವಾಗಲೂ ಅವರ ಅಂಕಿತದಲ್ಲೇ ಇರುವಂತೆ ನೀನು ನೋಡಿಕೊಳ್ಳುತ್ತಿದ್ದಿರಬೇಕು!”

“ ಮಹಾಪ್ರಭುಗಳ ಈ ಮಾತಿಗೆ ನಾನೇನೂ ಹೇಳಲಾರೆ. ನನ್ನ ನಡತೆಯ ಬಗೆಗೆ ತಾವು ನಮ್ಮ ರಾಜರನ್ನೇ ಕೇಳಿ ತಿಳಿದುಕೊಳ್ಳಬಹುದು. ಇಷ್ಟೇ ನನ್ನ ನಿವೇದನೆ.”

“ ಅದಿರಲಿ. ನಮ್ಮ ಸೇನೆ ಕಿತ್ತೂರ ಮೇಲೆ ಸಾಗಿ ಬಂದಾಗ ಅದನ್ನೆದುರಿಸದೆ ಸುಮ್ಮನಿರುವಂತೆ ನೀನು ನಿಮ್ಮ ರಾಜನಿಗೆ ಸಲಹೆ ಕೊಟ್ಟೆಯಲ್ಲವೆ ?”

"ಹೌದು ಹುಜೂರ್."

"ಅದೇಕೆ? ಕಿತ್ತೂರಿನವರು ಅಷ್ಟು ಹೇಡಿಗಳೋ ಹೇಗೆ? ಸಾಕಷ್ಟು ಸೈನ್ಯವಿರಲಿಲ್ಲವೋ? ಶಸ್ತ್ರಾಸ್ತ್ರಗಳಿರಲಿಲ್ಲವೋ?"

"ಎಲ್ಲಾ ಇತ್ತು ಮಹಾಪ್ರಭು. ಆದರೂ, ಯುದ್ಧ ಮಾಡದೆ ಸ್ನೇಹಿತರಾಗಿಯೇ ಇರೋಣವೆಂದು ತಮ್ಮ ಸೇನಾಪತಿಗಳು ಹೇಳಿ ಕಳಿಸಿದ್ದರಿಂದ ಅವರ ಮಾತಿಗೆ ಮನ್ನಣೆಯಿತ್ತು ನಾನು ಹಾಗೆ ಸಲಹೆ ಕೊಟ್ಟೆ."

"ಸ್ನೇಹಿತರಾಗಿ ಇರುವುದು! ದೇಶವಿದೇಶಗಳ ಚಕ್ರವರ್ತಿಗಳನ್ನೂ ಕೂಡಾ ಗಡಗಡನೆ ನಡುಗಿಸುವ ನಮ್ಮ ಜತೆಗೆ ಸರಿಸಮಾನರಾದ ಸ್ನೇಹಿತರಾಗಿ ಇರಲು ಬಯಸುವುದೆಂದರೆ ಉದ್ಧಟತನವಲ್ಲದೆ ಬೇರೆಯಲ್ಲ. ಪೇಶವೆ—ಪಟವರ್ಧನರಿಗೆ ಮಾತ್ರ ಅಂಕಿತರಾಗಿ ಉಳಿದು ನಮ್ಮ ಜತೆ ಸರಿಸಮಾನರಾಗಿರಲು ಬಯಸಿದ್ದು ನಿಮ್ಮ ಮಹಾಪರಾಧವೇ ಸರಿ."

ಗುರುನಾಥಪಂತ ನಿರುತ್ತರನಾದ. ತನ್ನ ವರ್ತನೆಯನ್ನು ಸಮಂಜಸವಾದ ರೀತಿಯಲ್ಲಿ ಸಮರ್ಥಿಸಿಕೊಳ್ಳುವ ಹಾದಿ ಕಾಣಲಿಲ್ಲ. ಅವನು ಗೊಂದಲದಲ್ಲಿ ಬಿದ್ದುದನ್ನರಿತ ಸುಲ್ತಾನ ಮತ್ತೆ ಮಾತ್ತಿನ ದಾಳಿಗಾರಂಭಿಸಿದ:

"ಸ್ನೇಹಿತರಂತೆ ನಟಿಸಿ ನಮ್ಮ ಸೇನೆಯನ್ನಿತ್ತ ಸಾಗಹಾಕಿ, ಅತ್ತ ಪಟವರ್ಧನರಿಗೆ ಹೇಳಿಕಳಿಸಿ, ಆಮೇಲೆ ಅವರೊಡನೆ ಕೂಡಿಕೊಂಡು ನಮ್ಮ ದಂಡಿನ ಮೇಲೆ ಅನಿರೀಕ್ಷಿತವಾಗಿ ದಾಳಿ ಮಾಡುವುದು ನಿಮ್ಮ ಯೋಜನೆಯಾಗಿದ್ದಿತು. ಹೌದೋ ಅಲ್ಲವೋ?"

ಗುರುನಾಥಪಂತ ವಿಸ್ಮಿತನಾಗಿ ನೆಲ ನೋಡುತ್ತಾ ನಿಂತುಕೊಂಡ. ತಾನು ಹೂಡಿದ್ದ ತಂತ್ರವನ್ನು ಟೀಪು ಪೂರ್ತಿಯಾಗಿ ತಿಳಿದುಕೊಂಡಿರುವನಲ್ಲ! ಈ ವಿಚಾರವಾಗಿ ತಾನು ಯಾರ ಮುಂದೆಯೂ ಬಾಯಿ ಬಿಟ್ಟಿರಲಿಲ್ಲ. ತನ್ನ ಸ್ವಂತ ಸೋದರ ತಿಮ್ಮಾಜಿಗೂ ಇದರ ಸುಳಿವು ತಿಳಿಯಗೊಟ್ಟಿರಲಿಲ್ಲ. ಅತ್ಯಂತ ರಹಸ್ಯವಾದ ರೀತಿಯಲ್ಲಿ ಪಟವರ್ಧನರಿಗೆ ಈ ಬಗೆಗೆ ಹೇಳಿಕಳಿಸಿದುದಾಗಿತ್ತು. ತಾನು ಕಳಿಸಿಕೊಟ್ಟಿದ್ದ ದೂತನನ್ನೇ ಬುರ್ಹಾನುದ್ದೀನ ಸೆರೆ ಹಿಡಿದಿರಲಿಕ್ಕಿಲ್ಲವಷ್ಟೆ? ಇದೆಲ್ಲ ಹೇಗೆ ಗೊತ್ತಾಗಿರಬಹುದು ಟೀಪುವಿಗೆ?

"ಆತ ಮಾತನಾಡದೆ ಮೂಕನಂತೆ ನಿಂತುಕೊಳ್ಳಲು ಟೀಪುವಿಗೆ

ಸಂದೇಹವೇ ಉಳಿಯಲಿಲ್ಲ. ಗೆಲುವಿನ ನಗೆ ನಗುತ್ತಾ ಆತನೆಂದ:

"ಸ್ನೇಹಿತರಂತೆ ನಟಿಸಿ ಹಿಂದಿನಿಂದ ಬೆನ್ನಲ್ಲಿ ಇರಿಯುವದು ಪೇಶವೆ–ಪಟವರ್ಧನರ ವಾಡಿಕೆಯ ರೀತಿಯೇ ಆಗಿದೆ. ಅವರ ಜ್ಞಾತಿಗಳಾದ ನೀವೂ ಅದೇ ವಿಶ್ವಾಸಘಾತದ ಧೋರಣೆಯನ್ನವಲಂಬಿಸುವದು ಸಹಜ. ನಿಮ್ಮಂಥ ದ್ರೋಹಿಗಳನ್ನು ಹೀಗೇ ಬಿಟ್ಟರೆ ಮೈಸೂರು ಸಾಮ್ರಾಜ್ಯಕ್ಕೆ ಗಂಡಾಂತರವೇ."

ಅಷ್ಟು ಹೇಳಿ, ಗುರುನಾಥಪಂತನ ಪಕ್ಕದಲ್ಲಿಯೇ ನಿಂತಿದ್ದ ಆತನ ತಮ್ಮ ತಿಮ್ಮಾಜಿಪಂತನನ್ನು ಕುರಿತು ಸುಲ್ತಾನ ಕೇಳಿದ:

"ಈ ದ್ರೋಹಿಯೂ ನೀನೂ ಅಣ್ಣತಮ್ಮಂದಿರೋ?"

"ಹೌದು ಖಾವಂದ್."

"ಕಿತ್ತೂರಿನ ದರಬಾರಿನಲ್ಲಿ ನೀನೂ ಒಬ್ಬ ಮುತ್ಸದ್ದಿಯೋ?"

"ಇಲ್ಲ ಹುಜೂರ್. ದರಬಾರಕ್ಕೂ ನನಗೂ ಏನೂ ಸಂಬಂಧವಿಲ್ಲ."

"ಹಾಗಾದರೆ ನೀನು ಮಾಡುವ ಉದ್ಯೋಗವೇನು?"

"ನಮ್ಮಣ್ಣನವರ ಹೊಲಮನೆ ವ್ಯವಹಾರ ನೋಡಿಕೊಳ್ಳುತ್ತೇನೆ ಹುಜೂರ್."

"ಸರಿ. ನೀವಿಬ್ಬರೂ ಒಂದೇ ಆದಂತಾಯಿತು." ಒಂದು ಕ್ಷಣ ಸುಮ್ಮನಿದ್ದು ಮತ್ತೆ ಟೀಪುವೆಂದ: "ಮೋಸಗಾರರಾದ ನಿಮಗೆ ಮರಣ ದಂಡನೆಯೇ ಯೋಗ್ಯವಾದ ಶಿಕ್ಷೆ–ಆದರೂ, ನೀವು ಪವಿತ್ರವಾದ ಇಸ್ಲಾಂ ಧರ್ಮ ಸ್ವೀಕರಿಸಲು ಸಿದ್ಧರಿದ್ದರೆ ನಿಮ್ಮ ಜೀವವನ್ನುಳಿಸಬಹುದು. ಏನನ್ನು ವಿರಿ?"

ಟೀಪುವಿನ ದರಬಾರದಲ್ಲಿ ಆ ಪ್ರಶ್ನೆ ಬಂದೇಬರುವುದೆಂದು ಅವರಿಬ್ಬರಿಗೂ ಎಂದೋ ತಿಳಿದು ಹೋಗಿತ್ತು. ದೀರ್ಘವಾಗಿ ಯೋಚಿಸಿದ ತರುವಾಯ ಅದಕ್ಕೆ ಸರಿಯಾದ ಉತ್ತರವನ್ನೂ ಅವರು ಸಿದ್ಧಪಡಿಸಿಟ್ಟುಕೊಂಡಿದ್ದರು.

"ಮಹಾಪ್ರಭುಗಳು ಉದಾರಬುದ್ಧಿಯಿಂದ ಕ್ಷಮಿಸಬೇಕು. ಸ್ವಧರ್ಮೇ ನಿಧನಂ ಶ್ರೇಯಃ ಅಂತ ನಮ್ಮ ಧರ್ಮಶಾಸ್ತ್ರಗಳು ಸ್ಪಷ್ಟವಾಗಿ ಹೇಳಿವೆ."

"ಹಾಗಾದರೆ ನೀವು ಇಸ್ಲಾಂ ಧರ್ಮ ಸ್ವೀಕರಿಸಲು ಸಿದ್ಧರಿಲ್ಲ ಅಂದಂತಾಯಿತು?"

"ಸುಲ್ತಾನರು ದಯೆ ಮಾಡಬೇಕು. ನಾವು ಯಾವ ಅಪರಾಧವನ್ನೂ ಮಾಡಿದವರಲ್ಲ. ನಿರಪರಾಧಿಗಳಿಗೆ ಮರಣದಂಡನೆ ವಿಧಿಸುವದು ನ್ಯಾಯವೇ ಹೇಗೆ, ತಾವೇ ವಿಚಾರ ಮಾಡಬೇಕು."

"ನಾವು ಅನ್ಯಾಯ ಮಾಡುತ್ತಿರುವೆವೆಂದು ಸೂಚಿಸುವಷ್ಟು ಧೈರ್ಯವೇ ನಿಮಗೆ? ಯಾರಲ್ಲಿ? ಈ ಕಾಫರರಿಬ್ಬರನ್ನೂ ಎಳೆದೊಯ್ಯಿರಿ."

ಸುಲ್ತಾನನ ಆಜ್ಞೆಯಾಗುತ್ತಲೂ ಆ ಸೋದರರಿಬ್ಬರನ್ನೂ ದರಬಾರದಿಂದ ಸಾಗಿಸಲಾಯಿತು. ಅನಂತರ ಇನ್ನುಳಿದವರ ವಿಚಾರಣೆಗಾರಂಭವಾಯಿತು. ತಾವು ಕೇವಲ ರಾಜ್ಯದ ಸೇವಕರೆಂದೂ, ದೊರೆಯ ಮತ್ತು ದಿವಾನನ ಅಪ್ಪಣೆಯಂತೆ ಕೆಲಸ ಮಾಡುವುದಷ್ಟೇ ತಮ್ಮ ಕರ್ತವ್ಯವೆಂದೂ ಹೇಳಿ ನಿರಪರಾಧಿಗಳಾದ ತಮ್ಮನ್ನು ಬಿಡುಗಡೆ ಮಾಡಬೇಕೆಂದೂ ಅವರು ಬೇಡಿಕೊಂಡರು.

ಕೋಶಾಧಿಕಾರಿ ಸಣ್ಣ ಚೆನ್ನಪ್ಪನ ವಿರುದ್ಧವಾಗಿ ಟೀಪುವಿನ ಅಧಿಕಾರಿಗಳಿಂದ ಯಾವುದೋ ದೂರು ಬಂದ ಹಾಗಿತ್ತು. ಎಂತಲೇ ಅವನನ್ನು ಕುರಿತು ಸುಲ್ತಾನ ಕೇಳಿದ: "ಕೋಶಾಧಿಕಾರಿಯಾಗಿದ್ದ ನೀನು ನಿನ್ನ ಕರ್ತವ್ಯವನ್ನು ಸರಿಯಾಗಿ ಮಾಡಲಿಲ್ಲವೆಂದು ನಿನ್ನ ಮೇಲೆ ಆರೋಪವಿದೆ. ಲೆಕ್ಕ ಪತ್ರಗಳನ್ನು ಸರಿಯಾಗಿಡದೆ ಎಷ್ಟೋ ಹಣವನ್ನು ನೀನು ನುಂಗಿಬಿಟ್ಟಿರುವಿಯಂತೆ. ದಿವಾನನೂ ನೀನೂ ಕೂಡಿಕೊಂಡು ಬೊಕ್ಕಸವನ್ನೆಲ್ಲಾ ಲೂಟಿ ಮಾಡಿರುವಿರಂತೆ. ಇದರ ಬಗ್ಗೆ ನಿನ್ನ ಹೇಳಿಕೆಯೇನು?"

ಇಂಥದೊಂದು ಆಪಾದನೆಗೆ ತಾನು ಉತ್ತರವಾದಿಯಾಗಬೇಕಾದ ಪ್ರಸಂಗ ಬಂದೀತೆಂದು ಸಣ್ಣ ಚೆನ್ನಪ್ಪ ಭಾವಿಸಿರಲಿಲ್ಲ. ಭಂಡಾರದ ಕೆಲವೊಂದು ಹಣವನ್ನು ಆತ ಅಡಗಸಿಟ್ಟುಕೊಂಡಿದ್ದುದೂ, ಅನೇಕ ವಿಚಾರಗಳಲ್ಲಿ ಆತ ದಿವಾನನೊಡನೆ ಒಂದಾಗಿ ಕೆಲಸ ಮಾಡುತ್ತಿದ್ದುದೂ ನಿಜವಾದ ವಿಷಯವೇ ಆಗಿತ್ತು. ಕಿತ್ತೂರಿನಲ್ಲಿನ ಆಡಳಿತವರ್ಗದಲ್ಲಿ ಬದಲಾವಣೆಯಾಗದಂತೆ ನೋಡಿಕೊಂಡು ತಮ್ಮ ತಮ್ಮ ಸ್ಥಾನಗಳನ್ನು ಕಡೆಯವರೆಗೂ ದಕ್ಕಿಸಿಕೊಳ್ಳಬೇಕೆಂದು ಅವರಿಬ್ಬರೂ ನಿಶ್ಚಯಿಸಿಕೊಂಡಿದ್ದರು. ಎಂತಲೇ, ದಿವಾನನ ಯಾವ ಮಾತನ್ನೂ ಸಣ್ಣ ಚೆನ್ನಪ್ಪ ವಿರೋಧಿಸುತ್ತಿರಲಿಲ್ಲ. ದರಬಾರದ ಇನ್ನುಳಿದ ಮುತ್ಸದ್ದಿಗಳೆಲ್ಲ ವಿರೋಧಾಭಿಪ್ರಾಯ ತಳೆದಾಗಲೂ ಕೂಡಾ

ಸಣ್ಣ ಚೆನ್ನಪ್ಪನೊಬ್ಬ ಮಾತ್ರ ದಿವಾನನ ಪಕ್ಷವನ್ನೇ ವಹಿಸುತ್ತಿದ್ದ.

"ಏನೆನ್ನುವೆ? ಆರೋಪಕ್ಕೆ ನಿನ್ನ ಉತ್ತರವೇನು? ಬೇಗ ಹೇಳು," ಎಂದು ಮಂತ್ರಿಯೊಬ್ಬ ಎಚ್ಚರಿಸಿದ.

"ನಾನೆಂದೂ ಅಂಥಾ ಅಪರಾಧ ಮಾಡಿಲ್ಲ ಮಹಾಪ್ರಭು."

"ಲೆಕ್ಕಪತ್ರದ ಪುಸ್ತಕಗಳಿಗೆ ತಾಳಮೇಳವಿಲ್ಲವೆಂದು ನಮ್ಮ ಪ್ರತಿನಿಧಿಗಳು ತಿಳಿಸಿದ್ದಾರಲ್ಲ? ನೀನು ಪ್ರಾಮಾಣಿಕನಾಗಿದ್ದರೆ ಅದೇಕೆ ಹೀಗಾಗಬೇಕು?"

"ಲೆಕ್ಕ ಬರೆಯುವ ಕರಣಿಕರು ತಪ್ಪು ಮಾಡುವ ಸಂಭವವೂ ಇರುತ್ತದೆ ಮಹಾಪ್ರಭು."

"ತಾನು ಕಳ್ಳ, ಪರರಿಗೆ ಕಳ್ಳರೆನ್ನುತ್ತಾನೆ! ನಿನ್ನಂಥ ಘಾತುಕರನ್ನು ಜೀವದಿಂದುಳಿಸಬಾರದು. ಇವನನ್ನೊಯ್ದು ಆ ಪಂತರ ಜತೆಯಲ್ಲಿ ಕೂಡಿ ಹಾಕಿರಿ," ಎಂದು ಸುಲ್ತಾನ ಆಜ್ಞೆ ವಿಧಿಸಿದ.

ಆತನ ತರುವಾಯ ಮಡಿವಾಳನ ಸರದಿ ಬಂದಿತು.

ಅವನ ಮೇಲಿನ ಆರೋಪವನ್ನೋದಿ ನೋಡಿ ಸುಲ್ತಾನ ಕೇಳಿದ:

"ದರಬಾರದವರೆಲ್ಲಾ ಸುಮ್ಮನೆ ನಿಂತಿದ್ದರೂ ನೀನೊಬ್ಬ ಮಾತ್ರ ಕತ್ತಿ ಹಿರಿದು ನಮ್ಮ ಅಧಿಕಾರಿಗಳ ಮೇಲೇರಿ ಹೋಗಿದ್ದೆಯಂತೆ. ನಿಜವೇ?"

"ನಿಜ, ಮಹಾಪ್ರಭು."

"ನಿನ್ನ ಆ ಉದ್ಧಟತನಕ್ಕೆ ಎಂಥ ಶಿಕ್ಷೆ ಕಾದಿದೆಯೆಂಬುದು ಗೊತ್ತೋ?"

"ಅದು ಉದ್ಧಟತನವೆಂದು ನಾನೇನೂ ಒಪ್ಪುವದಿಲ್ಲ ಮಹಾಪ್ರಭು. ಕಿತ್ತೂರ ರಾಜರ ಸೇವಕನಾಗಿರದೆ ನಾನು ತಮ್ಮ ಸೇವಕನೇ ಆಗಿದ್ದೆನೆಂದು ತಿಳಿಯೋಣ. ಕಿತ್ತೂರ ರಾಜರ ಮೇಲೆ ಬಂದಂಥ ಪ್ರಸಂಗ ತಮ್ಮ ಮೇಲೇ ಬಂದಿದ್ದರೆ ಹತ್ತಿರವಿದ್ದ ಸೇವಕನಾದ ನಾನು ಕತ್ತಿ ಹಿರಿಯದೆ ಸುಮ್ಮನಿದ್ದರೆ ತಮಗೇನು ಅನಿಸಬಹುದಿತ್ತು?"

"ಶಾಬ್ಬಾಸ್? ಕಿತ್ತೂರಿನ ಈ ಮಂದಿಯಲ್ಲೆಲ್ಲ ನೀನೊಬ್ಬನೇ ಒಬ್ಬ ಗಂಡುಗಲಿ. ನಿನ್ನ ಸ್ವಾಮಿನಿಷ್ಠೆಗೆ ಮೆಚ್ಚಿದೆವು. ಏನು ಬೇಡುವಿಯೋ ಬೇಡು. ನಡೆಸಿಕೊಡುತ್ತೇವೆ," ಟೀಪು 'ಖುಷ್'ಆಗಿ ಕೇಳಿದ.

"ನಮ್ಮನ್ನೆಲ್ಲಾ ಬಿಡುಗಡೆ ಮಾಡಬೇಕು ಮಹಾಪ್ರಭು. ನಮ್ಮ

ದೊರೆಗಳಿಗೂ ಸ್ವಾಸ್ಥ್ಯವಿಲ್ಲವೆಂಬುದು ತಮಗೆ ತಿಳಿದೇ ಇದೆ. ತಮ್ಮ ವಿರುದ್ಧವಾಗಿ ಅವರೂ ಏನೂ ಮಾಡಿದವರಲ್ಲ. ಅವರ ವಯಸ್ಸು ಇನ್ನೂ ಚಿಕ್ಕದು. ಸೆರೆಮನೆ ವಾಸದಲ್ಲಿ ಅವರ ಪ್ರಕೃತಿ ಕೆಟ್ಟುಹೋಗುವದು ಖಂಡಿತ. ನಮ್ಮನ್ನೆಲ್ಲಾ ಬಿಡುಗಡೆ ಮಾಡಿದರೆ ನಮ್ಮ ನಾಡಿಗೆ ಹೋಗಿ ಶಾಂತವಾಗಿರುತ್ತೇವೆ."

"ನೀನು ಶೂರನಷ್ಟೇ ಅಲ್ಲ, ಧೂರ್ತನೂ ಇದ್ದೀಯಲ್ಲ? ನಿನ್ನನ್ನೂ ನಿಮ್ಮ ರಾಜನನ್ನೂ ಬಿಡುಗಡೆ ಮಾಡಲು ನಮ್ಮದೇನೂ ಅಡ್ಡಿಯಿಲ್ಲ. ಅವರು ಹತ್ತು ಹಳ್ಳಿಗಳನ್ನಿಟ್ಟುಕೊಂಡು ಉಳಿದ ರಾಜ್ಯವನ್ನೆಲ್ಲಾ ಬಿಟ್ಟುಕೊಟ್ಟು ಗೌಡರಾಗಿ ಉಳಿಯಲು ಒಪ್ಪುವರೇನು ಕೇಳು. ಪೇಶವೆ—ಪಟವರ್ಧನರ ಜತೆಗೆ ಯಾವ ಸಂಬಂಧವನ್ನೂ ಇಟ್ಟುಕೊಳ್ಳಕೂಡದು. ಇದು ಮಹತ್ವದ ಷರತ್ತು."

"ಕೇಳಿನೋಡುತ್ತೇನೆ ಮಹಾಪ್ರಭು."

"ಈ ವಿಚಾರದಲ್ಲಿ ಕೊನೆಯ ನಿರ್ಣಯವಾಗುವವರೆಗೂ ಇವರು ಸೆರೆಯಲ್ಲಿಯೆ ಇರಲಿ," ಎಂದು ಸುಲ್ತಾನ ಅಪ್ಪಣೆ ಮಾಡಿದ.

೧೦

ಕೈಗೆ ಬಿದ್ದ ಕಬ್ಬಿಣದ ಸಂಕೋಲೆಗಳನ್ನೆತ್ತಲಾರದೆ ನರಳುತ್ತ, ಗುರುನಾಥಪಂತ ಮೊಳಕೈಯಿಂದಲೇ ಹಣೆಯ ಮೇಲಿನ ಬೆವರನ್ನೊರೆಸಿಕೊಂಡ. ಚಳಿಗಾಲದ ಆ ದಿನದಲ್ಲೂ ಅವನ ಮೈಯಲ್ಲೆಲ್ಲ ಬೆವರು ಹನಿಯತೊಡಗಿತ್ತು. ಫಾಸಿಯ ಸಮಯವನ್ನೇ ಎದುರು ನೋಡುತ್ತ ನಿಮಿಷಗಳನ್ನೆಣಿಸುತ್ತಿದ್ದ ಆತನಿಗೆ ಹಾಗೆ ಬೆವರು ಬರುವುದೂ ಅಸಹಜವಾಗಿರಲಿಲ್ಲ. ಇನ್ನೊಂದೇ ಒಂದು ದಿನ. ಇಪ್ಪತ್ನಾಲ್ಕು ಗಂಟೆಗಳ ಅವಕಾಶ, ಅಷ್ಟೆ. ಮಾರನೆಯ ದಿನ ಬೆಳಕು ಹರಿಯುತ್ತಲೂ ತನ್ನನ್ನು ವಧಾಸ್ಥಾನಕ್ಕೆ ಕರೆದೊಯ್ಯಲಾಗುವುದು. ಗಲ್ಲುಗಂಬ— ನೇಣು—ಫಾಸೀ.... ತನ್ನ ಜೊತೆಯಲ್ಲಿಯೇ ತನ್ನ ತಮ್ಮನೂ....

ಮೊಳಕಾಲುಗಳಲ್ಲಿ ತಲೆಯಿರಿಸಿ ಮೌನವಾಗಿ ಕುಳಿತಿದ್ದ ತಿಮ್ಮಾಜಿಯತ್ತ ಕನಿಕರದ ದೃಷ್ಟಿ ತಿರುಗಿಸಿ ಗುರುನಾಥಪಂತನೆಂದ:

“ಬಹಳ ಗಾಬರಿಯಾಗ್ತದೇನು ತಿಮ್ಮಣ್ಣಾ ?”

“ಗಾಬರಿಯೇನೂ ಇಲ್ಲ ಅಣ್ಣಾಜಿ. ಜಾತಸ್ಯ ಮರಣಂ ಧ್ರುವಂ. ಹುಟ್ಟಿಬಂದವರಿಗೆ ಮರಣ ತಪ್ಪಿದಲ್ಲ. ಒಂದಲ್ಲೊಂದು ದಿನ ಸಾಯುವವರೇ ನಾಳೆ ಸಾಯುತ್ತೇವೆ, ಅಷ್ಟೆ. ಅದಕ್ಕಾಗಿ ದುಃಖವಿಲ್ಲ. ಆದರೆ, ಸಾಯುವ ಮೊದಲೊಮ್ಮೆ ಮನೆಯವರನ್ನೆಲ್ಲಾ ನೋಡಬೇಕೆಂದು ಆಸೆಯಾಗ್ತಿದೆ.”

“ಶ್ರೀರಂಗಪಟ್ಟಣವೆಲ್ಲಿ, ಕಿತ್ತೂರೆಲ್ಲಿ! ಇನ್ನು ಮುಂದಿನ ಜನ್ಮದಲ್ಲೇ ಅವರ ನಮ್ಮ ಭೆಟ್ಟಿ. ನಿಲುಕದ ಬಯಕೆಯಿಟ್ಟುಕೊಂಡು ಕೊರಗಬಾರದು, ತಿಮ್ಮಣ್ಣಾ. ಮನಸ್ಸಿನಲ್ಲಿನ ಆಸೆಗಳನ್ನೆಲ್ಲಾ ತೆಗೆದುಹಾಕಿ ಶಾಂತವಾಗಿ ಮರಣವನ್ನಪ್ಪಿಕೊಂಡರೇ ಸದ್ಗತಿ. ಆಸೆ ಇಟ್ಟುಕೊಂಡು ಸತ್ತವರೇ ಭೂತ ಗಳಾಗುತ್ತಾರೆ.”

ಆ ವಿಚಾರ ತಿಮ್ಮಾಜಿಗೂ ಗೊತ್ತಿದ್ದುದೇ ಆಗಿತ್ತು. ವಾಸನೆಯಿಟ್ಟು ಕೊಂಡು ಸತ್ತವರು ಪಿಶಾಚಿಗಳಾಗಿ ಸಹಸ್ರ ಸಹಸ್ರ ವರ್ಷಗಳ ವರೆಗೂ ಅಲೆಯುತ್ತಿರುವರೆಂದು ಪುರಾಣಗಳಲ್ಲಿ ಅವನೂ ಓದಿಕೊಂಡಿದ್ದ. ಹಾಗೆಯೇ, ದುರ್ಮರಣಕ್ಕೊಳಗಾದವರೂ ಕೂಡಾ ಭೂತಗಳಾಗಿ ನರಕದಲ್ಲಿ ಕೊಳೆಯುವ ರೆಂಬುದನ್ನೂ ಕೇಳಿ ತಿಳಿದಿದ್ದ. ಕುಲೀನ ಮನೆತನದಲ್ಲಿ ಜನಿಸಿ ಸಚ್ಚರಿತ್ರ ರಾಗಿ ಬಾಳಿದ ತಮ್ಮಂಥವರೂ ದುರ್ಮರಣವನ್ನೆದುರಿಸಬೇಕಾಗಿ ಬಂದುದು ಎಂಥ ದುರ್ದೈವ!

“ಪೂರ್ವಜನ್ಮದಲ್ಲಿ ನಾವು ಯಾವ ಪಾಪ ಮಾಡಿದ್ದೆವೊ ಏನೊ, ಅದರ ಫಲವನ್ನು ಈಗ ಅನುಭವಿಸಬೇಕಾಯಿತು!” ಎಂದ ತಿಮ್ಮಾಜಿ.

“ನಮ್ಮ ನಮ್ಮ ಕರ್ಮ ತಿಮ್ಮಣ್ಣಾ. ಜನ್ಮಜನ್ಮಗಳವರೆಗೂ ಅದು ನಮ್ಮ ಬೆನ್ನು ಬಿಡುವುದಿಲ್ಲ.”

“ಇನ್ನು ಒಂದೇ ಒಂದು ದಿನ ಉಳಿಯಿತಲ್ಲ ಅಣ್ಣಾಜಿ? ಅಷ್ಟರಲ್ಲಿ ನಾವು ಇನ್ನೊಮ್ಮೆ ಯಾಕೆ ಪ್ರಯತ್ನಿಸಬಾರದು ?”

“ಯಾತರ ಪ್ರಯತ್ನ?”

“ಏನಾದರೂ ಮಾಡಿ ಈ ದುರ್ಮರಣದಿಂದ ತಪ್ಪಿಸಿಕೊಳ್ಳಬೇಕು ಅಣ್ಣಾಜಿ.”

“ಯಾಕೆ ತಿಮ್ಮಣ್ಣಾ? ಮನಸ್ಸು ದುರ್ಬಲವಾಯಿತೇನು? ಈಗ

ಇದರಿಂದ ಪಾರಾಗಬೇಕಾದರೆ ಇರುವ ದಾರಿ ಒಂದೇ ಎಂಬುದನ್ನು ಮರೆತಿಯಾ? ಹಿಂದೂ ಧರ್ಮ ತ್ಯಜಿಸಬೇಕು, ಗೋಮಾಂಸ ತಿನ್ನಬೇಕು, ಮುಸಲ್ಮಾನರಾಗಬೇಕು, ನನ್ನ ಮಟ್ಟಿಗಂತೂ ಪ್ರಾಣಕ್ಕಿಂತ ಧರ್ಮವೇ ಹೆಚ್ಚು. ನಿನಗೆ ಪ್ರಾಣವೇ ಪ್ರಿಯವೆನಿಸುತಿದ್ದರೆ ನಾನೇನು ಬೇಡ ಅನ್ನುವದಿಲ್ಲ. ನೀನೊಬ್ಬ ಹೋಗಿ ಜೀವ ಉಳಿಸಿಕೊಳ್ಳಬಹುದು."

"ಹಾಗಲ್ಲ ಅಣ್ಣಾಜಿ. ತಪ್ಪುಕಲ್ಪನೆ ಮಾಡಿಕೊಳ್ಳಬೇಡಿರಿ. ಜೀವದಾಸೆಗಾಗಿ ನಮ್ಮ ಪರಮಪವಿತ್ರ ಧರ್ಮ ತ್ಯಜಿಸುವಂಥ ಪಾಪಿ ನಾನಲ್ಲ. ಬೇರೆ ಏನಾದರೂ ಹಾದಿಯಿಲ್ಲವೇ ಅಂತ ರಾತ್ರಿಯೆಲ್ಲಾ ವಿಚಾರ ಮಾಡಿದೆ. ಕಡೆಯದಾಗಿ ಒಮ್ಮೆ ಪೂರ್ಣಯ್ಯನವರನ್ನು ಬೇಡಿಕೊಂಡರೆ ಏನಾದರೂ ಉಪಯೋಗವಾದೀತೇನೋ ಅಂತನಿಸ್ತದೆ."

"ನಿರಾಸೆಯಿಂದ ತಲೆಯಲ್ಲಾಡಿಸುತ್ತ ಗುರುನಾಥಪಂತ ಹೇಳಿದ :

"ಪೂರ್ಣಯ್ಯನವರೂ ಹಿಂದುಗಳು—ಧರ್ಮಬಾಂಧವರಾದ ನಮ್ಮ ಬಗ್ಗೆ ಅವರಿಗೆ ಕರುಣೆ ಬರಬಹುದು ಅಂತ ಭಾವಿಸಿದ್ದೀಯಾ ತಿಮ್ಮಣ್ಣಾ?"

"ಅವರು ಬಹಳ ದಯಾಳುಗಳು ಅಂತ ಕೀರ್ತಿಯಿದೆಯಲ್ಲ ಅಣ್ಣಾಜಿ?"

"ಕೀರ್ತಿಯೇನೋ ಇರಬಹುದು. ಆದರೆ, ನಿಜವಾಗಿ ಅವರು ಹೇಗಿರುವರೆಂಬುದು ನಮಗೇನು ಗೊತ್ತು? ದರಬಾರದಲ್ಲೇ ನೋಡಿದೆವಲ್ಲ, ನಿರಪರಾಧಿಗಳಾದ ನಮಗೆ ಟೀಪು ಶಿಕ್ಷೆ ವಿಧಿಸುತ್ತಿದ್ದಾಗ ದಿವಾನರಾದ ಅವರು ನಮ್ಮ ಪರವಾಗಿ ಒಂದು ಮಾತನ್ನಾದರೂ ಆಡಿದರೇ? ಇಲ್ಲಿ ಸುಲ್ತಾನನೆದುರು ಯಾರ ಮಾತೂ ನಡೆಯದೆಂಬುದೇ ನಿಜ. ಪೂರ್ಣಯ್ಯನವರು ಸುಮ್ಮನೇ ಹೆಸರಿಗೆ ಮಾತ್ರ ದಿವಾನರು. ಅವರ ಸಲಹೆಗಳಿಗೆ ದರಬಾರದಲ್ಲಿ ಏನೂ ಬೆಲೆಯಿದ್ದ ಹಾಗಿಲ್ಲ. ನಮ್ಮನ್ನುಳಿಸುವ ಶಕ್ತಿ ಅವರಿಗಿದ್ದರೆ ಆಗಲೇ ಉಳಿಸುತ್ತಿದ್ದರು. ಈಗ, ಕಡೆಯ ಗಳಿಗೆಯಲ್ಲಿ ಅವರು ನಮಗಾಗಿ ಟೀಪುವಿನೆದುರು ಬಾಯಿ ತೆಗೆಯುವರೆಂದು ತಿಳಿಯುವುದು ಹುಚ್ಚುತನ."

"ಯಾರಿಗೆ ಗೊತ್ತು ಅಣ್ಣಾಜಿ! ಒಮ್ಮೊಮ್ಮೆ ನಾವು ಅಸಾಧ್ಯವೆಂದು ತಿಳಿದದ್ದೂ ಸಾಧ್ಯವಾಗುತ್ತಿರುತ್ತದೆ. ಪ್ರಯತ್ನವನ್ನಾದರೂ ಯಾಕೆ ಮಾಡಿ ನೋಡಬಾರದು ಅಂತೀನಿ?"

" ಅವರು ನಮ್ಮನ್ನು ನೋಡಲು ಒಪ್ಪಬಹುದೇ ಅಂತ ಅನುಮಾನ."

" ಅಧಿಕಾರಿಯ ಮೂಲಕ ವಿನಂತಿ ಮಾಡಿಕೊಳ್ಳೋಣ ಒಪ್ಪಿದರೂ ಸರಿ, ಒಪ್ಪದಿದ್ದರೂ ಸರಿ. ಆಮೇಲೆ ನಮ್ಮ ಹಣೆಯಲ್ಲಿ ಬರೆದಂತೆ ಆದೀತು."

ಸೆರೆಮನೆಯ ಅಧಿಕಾರಿಯನ್ನು ಕರೆಯಿಸಿ ಅವನೆದುರು ತಮ್ಮ ಇಚ್ಛೆಯನ್ನು ವ್ಯಕ್ತಗೊಳಿಸಿದುದಾಯಿತು. ಮರಣದಂಡನೆಗೆ ಗುರಿಯಾದ ಬಂದಿಗಳ ಅಂತಿಮ ಇಚ್ಛೆಗಳ ಕಡೆಗೆ ತಕ್ಷಣವೇ ಗಮನಕೊಡಬೇಕೆಂಬ ಕಟ್ಟಳೆಯಿದ್ದುದರಿಂದ ಆ ಅಧಿಕಾರಿ ಸ್ವಲ್ಪವೂ ತಡಮಾಡದೆ ಅವರ ಮನವಿಯ ಬಗೆಗೆ ದಿವಾನನಿಗೆ ಅರಿಕೆ ಮಾಡಿಕೊಂಡ.

ಫಾಸೀ ಶಿಕ್ಷೆಗೊಳಗಾದ ಕೈದಿಗಳನ್ನು ಯಾವ ಕಾರಣದಿಂದಲೂ ಸೆರೆಮನೆಯ ಹೊರಗೆ ಸಾಗಿಸುವಂತಿರಲಿಲ್ಲ. ಎಂತಲೇ ಪೂರ್ಣಯ್ಯ ತಾನೇ ಸೆರೆಮನೆಗೆ ಬರಬೇಕಾಯಿತು.

" ಏನು ವಿಚಾರ ಪಂತರೆ? ನಮ್ಮನ್ನು ನೋಡ ಬಯಸಿದಿರಂತೆ?"

" ತಮ್ಮಲ್ಲಿ ಒಂದು ವಿಷಯ ಖಾಸಗಿಯಾಗಿ ಅರಿಕೆಮಾಡಿಕೊಳ್ಳಬೇಕಾಗಿದೆ ದಿವಾನ್ ಸಾಹೇಬ್."

ಜೊತೆಗಿದ್ದ ಪರಿವಾರಕ್ಕೆ ಹೊರಗೆ ಹೋಗಲು ಸೂಚಿಸಿ ಪೂರ್ಣಯ್ಯನೆಂದ: " ನಿಮ್ಮ ಆಸೆಯೇನಿದ್ದರೂ ಸಂಕೋಚವಿಲ್ಲದೆ ಹೇಳಿ. ನನ್ನ ಕೈಲಾಗುವಂತಿದ್ದರೆ ನಡಸಿಕೊಡುತ್ತೇನೆ."

" ನಮಗೆ ಇನ್ನೇನೂ ಬೇಕಾಗಿಲ್ಲ ದಿವಾನ್‌ಸಾಹೇಬ್. ನಿರಪರಾಧಿಗಳಾದ ನಮ್ಮ ಜೀವವುಳಿಸಿ ಪುಣ್ಯಕಟ್ಟಿಕೊಳ್ಳಿರಿ. ಇಷ್ಟೇ ನಮ್ಮ ಪ್ರಾರ್ಥನೆ."

" ಜೀವ ಉಳಿಸುವದು ಮಾತ್ರ ನನ್ನ ಕೈಯಲ್ಲಿನ ವಿಚಾರವಲ್ಲ. ಅದೊಂದು ಬಿಟ್ಟು ಬೇರೆ ಏನಾದರೂ ಕೇಳಬಹುದು."

" ದಿವಾನ್‌ಸಾಹೇಬರೆ. ತಾವೂ ಹಿಂದುಗಳು. ನಾವೂ ಹಿಂದುಗಳು. ನಮ್ಮ ಹಾಗೆ ತಮಗೂ ಧರ್ಮಾಭಿಮಾನ ಇರಲೇಬೇಕು. ಧರ್ಮಾಂತರಕ್ಕಾಗಿ ಸುಲ್ತಾನರು ಒತ್ತಾಯಪಡಿಸುವದು ನ್ಯಾಯವಾದದ್ದೆಂದು ತಮಗನಿಸುವದೇ ?"

" ಸುಲ್ತಾನರ ಆಜ್ಞೆಯ ಬಗೆಗೆ ಚರ್ಚೆ ಮಾಡಲು ನನಗಿಷ್ಟವಿಲ್ಲ. ದಯವಿಟ್ಟು ಕ್ಷಮಿಸಿ."

"ಧರ್ಮಾಂತರದ ಒತ್ತಾಯವನ್ನು ಬಿಟ್ಟುಕೊಟ್ಟು ನಮ್ಮನ್ನು ಬಿಡುಗಡೆ ಮಾಡುವಂತೆ ಸುಲ್ತಾನರಿಗೆ ತಾವು ಹೇಳಿಕೊಂಡರೆ ಅವರ ಮನಸ್ಸು ತಿರುಗಲಿಕ್ಕಿಲ್ಲವೆ?" ಎಂದ ತಿಮ್ಮಾಜಿ.

"ಊಹೂಂ. ಅದೊಂದು ವಿಚಾರದಲ್ಲಿ ಯಾರೂ ಅವರಿಗೆ ಹೇಳುವ ಹಾಗಿಲ್ಲ. ಇಸ್ಲಾಂ ಧರ್ಮದ ಪ್ರಸಾರ ಮಾಡುವದೇ ತಮ್ಮ ಜೀವಿತದ ಮುಖ್ಯ ಗುರಿ ಅಂತ ಅವರು ಬಲವಾಗಿ ನಂಬಿದಾರೆ. ಅವರ ನಂಬಿಕೆ ಅವರಿಗೆ, ನಮ್ಮ ನಂಬಿಕೆ ನಮಗೆ."

"ಅಂದರೆ? ಅವರು ಮಾಡುತ್ತಿರುವ ಧರ್ಮಪ್ರಸಾರಕ್ಕೆ ತಮ್ಮ ಅಡ್ಡಿಯೇನೂ ಇಲ್ಲವೆಂದಂತಾಯಿಲ್ಲ?"

"ಅಡ್ಡಿ ಮಾಡಲು ನಾನು ಯಾರು? ಅವರು ಸುಲ್ತಾನರು, ನಾನು ಅವರ ಸೇವಕ ಎಂಬುದನ್ನು ನೀವು ಮರೆಯಬಾರದು. ನಾನೊಬ್ಬ ಬೇಡವೆಂದರೆ ಅವರು ತಮ್ಮ ಕರ್ತವ್ಯ ತ್ಯಜಿಸುವರೇ? ಅದೆಲ್ಲಾ ಆಗದ ಮಾತು. ನನ್ನಿಂದಾದ ಮಟ್ಟಿಗೂ ಮೈಸೂರಿನ ಹಿತ ಸಾಧಿಸಲೆಂದು ನಾನಿಲ್ಲಿ ದಿವಾನನಾಗಿದ್ದೇನೆ. ಅಷ್ಟು ಸಾಧಿಸಿದರಾಯಿತು."

"ನಮ್ಮ ಧರ್ಮ.... ನಮ್ಮ ದೇವರು.... ನಮ್ಮ ಗೋಮಾತೆ...."

"ನಮ್ಮ ಧರ್ಮದಲ್ಲೂ ನಮ್ಮ ದೇವರಲ್ಲೂ ಸತ್ವವಿದ್ದರೆ ಅವು ಉಳಿಯುತ್ತವೆ. ಇಲ್ಲವಾದರೆ ಅಳಿಯುತ್ತವೆ."

"ಇದೇ ತಮ್ಮ ಕೊನೆಯ ಮಾತೇ ಪೂರ್ಣಯ್ಯನವರೆ?"

"ಮೈಸೂರಿನ ಪರಮವೈರಿಗಳಾದ ಪೇಶವೆಯರ ಹಸ್ತಕರಾದ ನೀವು ಮೈಸೂರಿನ ವೈರಿಗಳೂ ಹೌದು. ನಿಮಗಾದ ಶಿಕ್ಷೆಯ ಬಗ್ಗೆ ನನಗೇನು ಮರುಕವಿಲ್ಲ. ಆಗಲಿ, ನಾನೀಗ ಹೊರಡುತ್ತೇನೆ. ಮತ್ತೇನಾದರೂ ತಿನ್ನುವ ಉಣ್ಣುವ ಇಚ್ಛೆಯಿದ್ದರೆ ಹೇಳಿರಿ. ಅಧಿಕಾರಿಗಳು ನಡಸಿಕೊಡುತ್ತಾರೆ," ಎಂದು ಹೇಳಿದವನೆ ಪೂರ್ಣಯ್ಯ ಹೊರಟುಹೋದ.

೧೧

ಮಲ್ಲಸರ್ಜನ "ಹೊಟ್ಟೆ ನೋವು" ಇನ್ನೂ ತೊಲಗಿರಲಿಲ್ಲ. ವೈದ್ಯರಾಜ ದಿನವೂ ಬಂದು, ರಾಜನನ್ನು ಪರೀಕ್ಷಿಸಿ ಔಷಧಿ ಕೊಟ್ಟು ಹೋಗು

ತ್ತಲೇ ಇದ್ದ. ಆ ಔಷಧಿಯನ್ನು ಮಾತ್ರ ಮಲ್ಲಸರ್ಜ ಒಂದು ಬಾರಿಯೂ ಸೇವಿಸಿರಲಿಲ್ಲ. ಮೂಲೆಯಲ್ಲಿನ ಕಸದ ಗುಂಪಿಗೆ ಅದನ್ನೆಸೆದು ಮಡಿವಾಳ ನಗುತ್ತ ನುಡಿಯುತ್ತಿದ್ದ: "ತಮಗೆ ಹೊಟ್ಟೆ ನೋವು ನಿಜವಾಗಿಯೂ ಇದೆಯೆಂದು ಖಾತ್ರಿಯಾಗಿದೆ ಈ ವೈದ್ಯರಾಜನಿಗೆ! ಇವನ ಪಾಂಡಿತ್ಯ ಎಷ್ಟೆಂಬುದು ಇಷ್ಟರಿಂದಲೇ ತಿಳಿಯುವದಿಲ್ಲವೇ ಪ್ರಭು?"

"ಅವನಿಗೂ ಅನುಮಾನವಿದ್ದೇ ಇರಬೇಕು, ಮಡಿವಾಳಾ. ಇಲ್ಲಿ ಬಂದಾಗಲೆಲ್ಲಾ ಆತ ನಮ್ಮ ಮುಖವನ್ನೇ ಮಿಕಿಮಿಕಿ ನೋಡುತ್ತಿರುತ್ತಾನೆ. ಇಂಥಾ ಭಾರಿ ಹೊಟ್ಟೆನೋವಿನಿಂದ ನರಳುತ್ತಿದ್ದರೂ ನಾವು ಇನ್ನೂ ಕೃಶ ರಾಗದಿರುವದನ್ನು ನೋಡಿ ಅವನಿಗೆ ಆಶ್ಚರ್ಯವಾಗುತ್ತಿರಲು ಸಾಕು."

"ಅವನಿಗಾದರೂ ಅನುಮಾನ ಬಂದಿದ್ದರೆ ಸ್ಪಷ್ಟವಾಗಿ ಕೇಳಬಹು ದಿತ್ತಲ್ಲ ಪ್ರಭು? ವೈದ್ಯರಿಗೆ ಯಾರ ಭಯವೇನು? ರಾಜರಿರಲಿ, ಚಕ್ರವರ್ತಿ ಯಿರಲಿ—ವೈದ್ಯನೆದುರು ಮಾತ್ರ ಅವರೆಲ್ಲಾ ರೋಗಿಗಳೇ. ನನಗೇನೋ ಇಲ್ಲಿಯದೆಲ್ಲಾ ವಿಚಿತ್ರ ಅಂತಲೇ ಕಾಣ್ತದೆ. ಸುಲ್ತಾನನಿಗೆ ಎಲ್ಲರೂ ಹೆದರಿ ಕೊಂಡಿದ್ದಾರೆ. ಪೂರ್ಣಯ್ಯನವರೂ ಸಹಾ ಆತನೆದುರು ಧೈರ್ಯವಾಗಿ ಮಾತಾಡುವದಿಲ್ಲ. ಇನ್ನು ಇಂಥ ಸಣ್ಣಪುಟ್ಟ ವೈದ್ಯರ ಮಾತೇನು?

ಪೂರ್ಣಯ್ಯನವರ ಬಗ್ಗೆ ಹಾಗನ್ನಲು ಬರುವದಿಲ್ಲ ಮಡಿವಾಳಾ. ಹೈದರಸಾಹೇಬನ ಕಾಲದಿಂದಲೂ ದರಬಾರದಲ್ಲಿ ಅವರ ವರ್ಚಸ್ಸು. ಟೀಪು ವಿನ ತಾಯಿಗಂತೂ ಪೂರ್ಣಯ್ಯನವರ ಮಾತೆಂದರೆ ಬಹಳ ವಿಶ್ವಾಸವಂತೆ. ಅವರ ಮಾತು ತೆಗೆದುಹಾಕಬಾರದೆಂದು ಆಕೆ ಮೇಲಿಂದ ಮೇಲೆ ಮಗನಿಗೆ ಹೇಳುತ್ತಲೇ ಇರುತ್ತಾಳಂತೆ. ಟೀಪುವಿಗೂ ಅವರ ಸಲಹೆಯೆಂದರೆ ಬಹಳ ಗೌರವ."

"ಹಾಗಿದ್ದರೆ, ನಮ್ಮ ದಿವಾನರನ್ನು ಅವರು ಸುಲಭವಾಗಿ ಉಳಿಸಬಹು ದಿತ್ತಲ್ಲ ಪ್ರಭು?"

"ಉಳಿಸಬಹುದಿತ್ತು— ಅವರು ಮನಸು ಮಾಡಿದ್ದರೆ. ಅವರು ನಿರಾಕರಿಸಲು ಬಲವಾದ ಕಾರಣಗಳಿರಬಹುದು."

"ಫಾಸಿಯ ಹಿಂದಿನ ದಿನ ನಮ್ಮ ದಿವಾನರಿಗೂ ಪೂರ್ಣಯ್ಯನವರಿಗೂ ನಡೆದ ಮಾತುಗಳನ್ನು ಕಾವಲುಗಾರರು ತಿಳಿಸಿದರಲ್ಲ ಪ್ರಭು? ಅಂತೂ ಈ

ಪೂರ್ಣಯ್ಯ ಮೈಸೂರಿನ ಗಾಢ ಅಭಿಮಾನಿಯೆಂದು ಕಾಣ್ತದೆ."

"ಅವರಂತೆ ತಮ್ಮ ತಮ್ಮ ನಾಡಿನ ಅಭಿಮಾನ ಹಿಡಿದು ಅದಕ್ಕಾಗಿ ಎಂಥಾ ತ್ಯಾಗಕ್ಕೂ ಸಿದ್ಧರಾಗುವ ದಿವಾನರು ಸಿಕ್ಕುವದು ಕಷ್ಟ."

"ಪೂರ್ಣಯ್ಯನವರಂಥ ದಿವಾನರು ಕಿತ್ತೂರಿನಲ್ಲಿದ್ದರೆ ನಾವಿಲ್ಲಿ ಕೊಳೆಯುತ್ತ ಬೀಳುವ ಪ್ರಸಂಗವೇ ಬರ್ತಿರಲಿಲ್ಲವಲ್ಲವೇ ಪ್ರಭು?"

ಮಲ್ಲಸರ್ಜ ಉತ್ತರವೀಯದೆ ಒಂದು ನಿಟ್ಟುಸಿರು ಬಿಟ್ಟು ಮೌನ ತಳೆದ. ಕಿತ್ತೂರಿನ ದಿವಾನರ ಕತೆಯಂತೂ ಮುಗಿದುಹೋಗಿತ್ತು. ಸತ್ತು ಹೋದ ಆ ವ್ಯಕ್ತಿಯ ದೋಷಗಳನ್ನೆಣಿಸುತ್ತ ಹೊರಡುವುದು ಆತನಿಗಿಷ್ಟವಿರ ಲಿಲ್ಲ. ಕಿತ್ತೂರಿನ ಇತಿಹಾಸದಲ್ಲಿ ಒಂದು ಪ್ರಕರಣವಂತೂ ಮುಕ್ತಾಯ ವಾಯಿತು. ಇನ್ನು ಮುಂದಾದರೂ ಇಂಥ ಪ್ರಮಾದಗಳು ಸಂಭವಿಸದಂತೆ ದೊರೆಯಾದ ತಾನು ತುಂಬಾ ಜಾಗರೂಕತೆಯಿಂದ ಮುಂದುವರೆಯಬೇಕು. ದಿವಾನನ ಮಾತೇ ವೇದವಾಕ್ಯವೆಂದು ಬಗೆದು ಸಂಕಟಕ್ಕೊಳಗಾಗ ಬಾರದು. ದೇವರು ಕೊಡಮಾಡಿದ ಬುದ್ಧಿಯನ್ನೂ ಸಾರಾಸಾರಾ ವಿಚಾರ ಶಕ್ತಿಯನ್ನೂ ಉಪಯೋಗಿಸಿ, ಎಲ್ಲಾ ಅಂಶಗಳನ್ನೂ ಸರಿಯಾಗಿ ತೂಗಿ ನೋಡಿ ವಿಮರ್ಶಿಸಿ ಯೋಗ್ಯವೆಂದು ತೋರುವ ನಿರ್ಣಯ ಕೈಗೊಳ್ಳಬೇಕು. ತಾನು ಕೈಗೊಳ್ಳುವ ಕೃತಿಗೆ ತಾನೇ ಉತ್ತರವಾದಿಯಾಗಬೇಕಲ್ಲದೆ ದಿವಾನ ನಾಗಲಿ ಇನ್ನಿತರರಾಗಲಿ ಆಗಕೂಡದು. ಎದ್ದರೂ ಸರಿಯೆ, ಬಿದ್ದರೂ ಸರಿಯೆ, ರಾಜ್ಯದ ಕರ್ಣಧಾರತ್ವ ಯಾವಾಗಲೂ ತನ್ನ ಕೈಯಲ್ಲಿಯೇ ಇರಬೇಕು. ರಾಜಕೀಯ ವಿಚಾರಗಳಲ್ಲಿ ಕೈಹಾಕಲು ಅಂತಃಪುರದ ಮಹಿಳೆಯುವರಿ ಗಂತೂ ಎಂದೂ ಅವಕಾಶ ಕೊಡಬಾರದು. ಯುದ್ಧ ಮಾಡುವ ವಿಚಾರ ವನ್ನೇ ಮೆಲುಕು ಹಾಕುತ್ತಿದ್ದ ತಾನು ಮತ್ತೆ ದಿವಾನನ ಮಾತಿನ ಕಡೆಗೇ ವಾಲುವಂತೆ ಮಾಡಿದಾಕೆ ನೀಲಮ್ಮಾಜಿಯೆ ಅಲ್ಲವೆ? ಹಿರಿಯ ವ್ಯಕ್ತಿಯೆಂದು ಆಕೆಯ ಮಾತನ್ನು ಕಣ್ಣು ಮುಂಚಿಕೊಂಡು ನಡಸಿದುದೇ ದೊಡ್ಡ ತಪ್ಪಾ ಯಿತು....

ನೀಲಮ್ಮಾಜಿಯ ಜೊತೆಯಲ್ಲಿಯೇ ಆತನಿಗೆ ತನ್ನ ಅರಸಿ ರುದ್ರಮ್ಮಾ ಜಿಯ ನೆನಪೂ ಮರುಕಳಿಸಿತು. ಹೇಡಿಗಳಿಗೆ ಮಾತ್ರ ತಕ್ಕುದೆನಿಸುವ ತಮ್ಮ ವರ್ತನೆಯ ವಿಚಾರ ಗೊತ್ತಾಗುತ್ತಲೂ ಅಭಿಮಾನಿನಿಯಾದ ಆಕೆಗೆ ಎಷ್ಟು

ಅಸಹ್ಯವೆನಿಸಿರಬಹುದು? ಹದಿನಾರು ವರ್ಷಗಳ ಎಳೆಯ ಯುವತಿಯಾದರೂ ಆಕೆ ಪ್ರೌಢೆಯನ್ನು ಮೀರಿಸುವ ಅನುಭವಿ. ಸ್ವಾತಂತ್ರ್ಯಪ್ರಿಯನೂ ಶೂರನೂ ಆದ ತಂದೆಯ ಕೈಯಲ್ಲಿ ತರಬೇತು ಪಡೆದು ನುರಿತವಳು. ಕಿತ್ತೂರಿನಂಥ ದೊಡ್ಡ ಸಂಸ್ಥಾನದ ರಾಣಿಯಾಗಲು ಎಲ್ಲಾ ದೃಷ್ಟಿಗಳಿಂದಲೂ ಅರ್ಹಳು. ಅವಳು ರಾಜಕಾರಣದ ಸೂಕ್ಷ್ಮಾತಿಸೂಕ್ಷ್ಮಗಳನ್ನರಿಯದ ಮುಗ್ಧೆಯೆಂದು ವಿವಾಹದ ಮುನ್ನ ತಾನು ಭಾವಿಸಿದ್ದುದು ತಪ್ಪೆಂಬುದು ವಿವಾಹಾನಂತರದ ಕೆಲವೇ ದಿನಗಳಲ್ಲಿ ಕಂಡುಬಂದಿತ್ತು. ಕಿತ್ತೂರಿಗೆ ಮೊದಲನೆಯ ಬಾರಿ ಬಂದಾಗಲೇ ಅರಮನೆಯಲ್ಲಿನ ತನ್ನ ಅಧಿಕಾರವನ್ನರಿತುಕೊಂಡು ಅರಸಿಗೆ ತಕ್ಕ ಗಾಂಭೀರ್ಯದಿಂದ ಅದನ್ನು ನಡೆಯಿಸತೊಡಗಿದ್ದಳು. ತಂದೆಯವರ ಕಾಲದಿಂದಲೂ ಯಜಮಾನಿಕೆ ನಡಸಿಕೊಂಡು ಬಂದ ನೀಲಮ್ಮಾಜಿಗೆ ತನ್ನ ಅರಸಿಯ ವರ್ತನೆ ಸರಿಬಂದಿರಲಿಲ್ಲವೆಂಬುದೂ ವ್ಯಕ್ತವಾಗಿತ್ತು. ಆದರಾಕೆ ಆ ಬಗೆಗೆ ಏನನ್ನೂ ಮಾಡುವಂತಿರಲಿಲ್ಲ. ಅಲ್ಪಾವಧಿಯಲ್ಲಿಯೇ ಅರಮನೆಯಲ್ಲೆಲ್ಲ ತನ್ನ ವರ್ಚಸ್ಸು ನೆಲೆಗೊಳಿಸಿ ರುದ್ರಮ್ಮಾಜಿ ತವರೂರಿಗೆ ಹೊರಟುಹೋಗಿದ್ದಳು. ಅಂಥ ಕೆಚ್ಚೆದೆಯ ಅರಸಿಯನ್ನು ಪಡೆದುದಕ್ಕಾಗಿ ತಾನು ಹೆಮ್ಮೆಯಿಂದ ಹಿಗ್ಗಿದುದಾಗಿತ್ತು.

ಕಿತ್ತೂರಿನ ಕೀರ್ತಿಯನ್ನು ವಿಸ್ತಾರಗೊಳಿಸಿ, ಕೃಷ್ಣಾ ತುಂಗಭದ್ರಾಗಳ ಮಧ್ಯದ ಸೀಮೆಯಲ್ಲೆಲ್ಲ ಅದರ ಆಧಿಪತ್ಯ ನೆಲೆಗೊಳಿಸಬೇಕೆಂಬ ತನ್ನ ಮಹತ್ವಾಕಾಂಕ್ಷೆಯನ್ನು ಹುರುಪಿನಿಂದ ಸಮರ್ಥಿಸಿ ಸ್ಫೂರ್ತಿಯಿತ್ತಿದ್ದ ಆ ವೀರರಮಣಿ, ಮೊನ್ನೆಯ ತನ್ನ ಆಚರಣೆಯ ಬಗೆಗೆ ಎಷ್ಟು ನೊಂದುಕೊಂಡಿರಬಹುದೊ? ಆತ್ಮಗೌರವವನ್ನುಳಿಸಿಕೊಳ್ಳುವುದಕ್ಕಾಗಿ ಪ್ರಾಣವನ್ನರ್ಪಿಸಲೂ ಹಿಂಜರಿಯಬಾರದೆನ್ನುವ ಆಕೆ, ತಾನು ಕೈಲಾಗದವನಂತೆ ವೈರಿಗಳ ಕೈಗೆ ಸಿಲುಕಿರುವುದನ್ನು ಕೇಳಿ ಎಷ್ಟು ಸಂತಾಪಗೊಂಡಿರಬಹುದೊ? ತನ್ನ ಬಗೆಗೆ ಆಕೆಗೆ ತಿರಸ್ಕಾರವೂ ಬಂದಿರಲು ಸಾಕು....ಹಾಗಾಗುವುದು ಸಹಜವೂ ಹೌದು....

ಹಾಗೆ ಯೋಚಿಸುತ್ತ ಮಲ್ಲಸರ್ಜ ಮುಖವೆತ್ತಿ, ಮೌನವನ್ನು ಮುರಿದು ಮಾತನಾಡಿದ: "ಕಿತ್ತೂರಲ್ಲಿ ಈಗ ಏನು ನಡೆದಿರಬಹುದು ಮಡಿವಾಳಾ?"

"ಅಲ್ಲಿಯದೊಂದೂ ಸುದ್ದಿ ತಿಳಿಯದಂತಾಗಿದೆಯಲ್ಲ ಪ್ರಭು?

ನಾವಂತೂ ಇಷ್ಟು ದೂರ ಬಂದು ಬಿದ್ದುಕೊಂಡೆವು."

"ನಮ್ಮ ಜನರಲ್ಲಿ ಯಾರಾದರೂ ಈ ಊರಿನವರೆಗೂ ಬಂದಿರಲಿಕ್ಕಿಲ್ಲವೇ, ನಮ್ಮನ್ನು ಬಿಡಿಸುವ ಯತ್ನ ಮಾಡಲು?"

"ತಿಮ್ಮನಗೌಡರೂ, ಗುರುಸಿದ್ಧಪ್ಪನವರೂ ವೀರಸಂಗಪ್ಪನವರೂ ವೈರಿಗಳ ಕೈಗೆ ಸಿಗದೆ ಪಾರಾಗಿದ್ದರು. ಅವರು ಸುಮ್ಮನೆ ಕೂಡ್ರುವವರಲ್ಲವೆನ್ನುವದೇನೋ ನಿಜವೆ. ಆದರೂ, ನೂರಾರು ಹರದಾರಿ ದೂರದವರೆಗೆ–ಅದೂ ವೈರಿಗಳ ಸೀಮೆಯಲ್ಲಿಯೇ ಬಂದು ಪ್ರಯತ್ನ ಮಾಡುವದು ಬಹಳ ಕಷ್ಟ."

"ಎಷ್ಟೇ ಕಷ್ಟವಾದರೂ ಲೆಕ್ಕಿಸದೆ ಅವರು ಪ್ರಯತ್ನ ನಡಸಿಯೇ ಇರಬೇಕೆಂದು ನಮಗನಿಸ್ತದೆ. ಗುರುಸಿದ್ಧಪ್ಪ–ವೀರಸಂಗಪ್ಪ ಇಬ್ಬರಂತೂ ನಮ್ಮಲ್ಲಿ ಬಹಳ ಭಕ್ತಿಯಿಟ್ಟುಕೊಂಡವರು. ನಮ್ಮನ್ನು ಬಿಡಿಸಲು ಎಂಥಾ ಸಾಹಸಕ್ಕೂ ತೊಡಗಬಲ್ಲವರು."

"ಅದೇನೋ ನಿಜ ಪ್ರಭು. ಆದರೆ, ಸದ್ಯಕ್ಕೆ ಅಂಥಾ ಸಾಹಸವಾದರೂ ನಡೆಯದಿರುವದೇ ಒಳ್ಳೆಯದು. ತಮ್ಮನ್ನು ಬಿಡುಗಡೆ ಮಾಡುವ ಮನಸ್ಸು ಸುಲ್ತಾನನಿಗೂ ಇದ್ದ ಹಾಗಿದೆ. ಈ ವೇಳೆಯಲ್ಲಿ ಅವನ ತಲೆಯನ್ನು ಕೆಡಿಸುವಂತಾದ್ದು ಏನೂ ನಡೆಯಬಾರದು. ನಮ್ಮವರು ಇಲ್ಲಿಗೆ ಬಂದು ನಮ್ಮನ್ನು ಬಿಡಿಸಲು ಏನಾದರೂ ಗದ್ದಲ ಮಾಡಿದರೆ ಟೀಪು ಸಿಟ್ಟಿಗೆದ್ದು ಅನರ್ಥ ಮಾಡಿಬಿಡುವದು ಖಂಡಿತ."

"ಹೌದು. ಹಾಗಾಗುವದು ಸಾಧ್ಯ. ಈ ಅಸ್ವಾಸ್ಥ್ಯದ ಸೋಗು ಇಲ್ಲಿಗೇ ನಿಲ್ಲಿಸಿ ಸುಲ್ತಾನನ್ನು ಬೇಗ ಭೆಟ್ಟಿಯಾಗುವದೇ ಒಳ್ಳೆಯದಲ್ಲವೇ ಮಡಿವಾಳಾ?"

"ತಮಗೆ ಪೂರಾ ನೆಟ್ಟಗಾದ ಮೇಲೆ ಭೆಟ್ಟಿಯ ಮಾತು ಅಂತ ಸುಲ್ತಾನ ಹೇಳಿದ್ದಾನೆ."

"ಇವತ್ತು ಸಾಯಂಕಾಲ ವೈದ್ಯರಾಜರು ಬಂದಾಗ, ನಿನ್ನೆಯಿಂದ ನೋವಿಲ್ಲ ಅಂತ ಹೇಳಿದರಾಯಿತು."

"ಮತ್ತೆ ಅವನಿಗೇನೂ ಸಂಶಯ ಬರಬಾರದು, ಅಷ್ಟೆ."

ಅಂದು ಸಂಜೆ ವೈದ್ಯರಾಜ ಬರುತ್ತಲೂ ಅವನನ್ನು ಮಲ್ಲಸರ್ಜ ಮುಗುಳ್ನಗೆಯೊಡನೆ ಬರಮಾಡಿಕೊಂಡು, "ನಮ್ಮ ಮೇಲೆ ನಿಮ್ಮದು ಬಹಳ

ಉಪಕಾರವಾಯಿತು ವೈದ್ಯರಾಜರೆ. ನಿಮ್ಮ ಔಷಧವಿಲ್ಲದಿದ್ದರೆ ಇಷ್ಟು ಬೇಗ ನಮಗೆ ಗುಣವಾಗುತ್ತಿರಲಿಲ್ಲ" ಎಂದು ಹೇಳಿದ.

ವೈದ್ಯರಾಜನೂ ದೇಶಾವರದ ನಗೆ ಬೀರುತ್ತ ಹೇಳಿದ: "ನನ್ನ ಔಷಧಕ್ಕೆ ತಮ್ಮ ಶಿಫಾರಸ್ಸು ಸಿಕ್ಕಿತು. ತುಂಬಾ ಸಂತೋಷ. ಆದರೆ, ನನ್ನ ಔಷಧವಿಲ್ಲದಿದ್ದರೂ ತಮಗೆ ಗುಣವಾಗಿಯೇ ಆಗುತ್ತಿತ್ತು ಅಂತನ್ನಿಸುತ್ತೆ."

"ಅದೇನ್ರಿ ವೈದ್ಯರಾಜರೆ, ಹೀಗನ್ನುತ್ತೀರಲ್ಲ? ಔಷಧವಿಲ್ಲದಿದ್ದರೆ ದೊರೆಗಳಿಗೆ ಹ್ಯಾಗೆ ಗುಣವಾಗ್ತಿತ್ತು?" ಎಂದ ಮಡಿವಾಳ.

"ಔಷಧದಿಂದ ಗುಣವಾಗಬೇಕಾದದ್ದು ರೋಗಿಗೆ. ನಿರೋಗಿಗಲ್ಲ. ನಿಮ್ಮ ದೊರೆಗಳಿಗೆ ಹೊಟ್ಟೆನೋವೂ ಇರಲಿಲ್ಲ, ಏನೂ ಇರಲಿಲ್ಲ. ಎಲ್ಲಾ ನಟನೆ. ನನಗೆ ಮೊದಲನೆಯ ದಿನವೇ ಎಲ್ಲಾ ತಿಳಿದಿತ್ತು. ಆದರೂ ತಮಾಷೆಗಾಗಿ ಬೇಕೆಂತಲೇ ಔಷಧಿ ಕೊಡುವ ನಾಟಕ ನಡಸಿದೆ. ಆಗಲಿ ನಾನೀಗ ಬರ್ತೀನೆ. ನಮಸ್ಕಾರ ಮಹಾಸ್ವಾಮಿ!" ಎಂದು ವ್ಯಂಗ್ಯವಾಗಿ ನುಡಿದು ಮತ್ತೆ ದೇಶಾವರಿ ನಗು ತುಳುಕಿಸುತ್ತ ಆತ ಎದ್ದು ಹೋದ.

ಸ್ವಲ್ಪ ಹೊತ್ತು ಬಂದಿಗಳಿರ್ವರೂ ಸ್ತಂಭಿತರಾಗಿ ಕುಳಿತಿದ್ದರು. ಅನಂತರ ಮಡಿವಾಳನೇ ಮಾತನಾಡಿದ: "ಈ ಸಂಗತಿಯನ್ನು ಸುಲ್ತಾನನಿಗೂ ತಿಳಿಸಿರಬೇಕಲ್ಲ ಪ್ರಭು?"

"ತಿಳಿಸದೆ ಬಿಡುವುದುಂಟೇ?"

"ಸುಲ್ತಾನ ವಿಪರೀತ ಸಿಟ್ಟಗೆದ್ದಿರಬೇಕು, ಸಿಟ್ಟಿನ ಭರದಲ್ಲಿ ಆತ ಎಂಥಾ ಆಜ್ಞೆ ಹೊರಡಿಸುತ್ತಾನೊ!"

"ಏನು ಬೇಕಾದ್ದು ಮಾಡಲಿ ಬಿಡು. ಎಲ್ಲವನ್ನೂ ಎದುರಿಸೋಣ," ಎಂದು ದೃಢನಿಶ್ಚಯದ ಸ್ವರದಲ್ಲಿ ಹೇಳಿದ ಮಲ್ಲಸರ್ಜ.

ಗುರುನಾಥಪಂತ—ತಿಮ್ಮಾಜಿಪಂತರಿಗೆ ವಿಧಿಸಿದಂತೆ ತಮಗೂ ಗಲ್ಲಿನ ಶಿಕ್ಷೆಯೇ ವಿಧಿಸಲ್ಪಡಬಹುದೆಂದು ಅವರಿರ್ವರೂ ಭಾವಿಸಿದ್ದರು. ಆದರೆ, ಅಂಥದೇನೂ ಆಗದೆ, ಅವರನ್ನೂ ಕಿತ್ತೂರಿನ ಇತರ ಬಂಧಿಗಳನ್ನೂ ಅಲ್ಲಿಂದ ಸ್ಥಳಾಂತರಿಸಿ ಬೇರೆಡೆಗೆ ಸಾಗಿಸುವ ಆಜ್ಞೆ ಹೊರಟದ್ದುದು ತಿಳಿದು ಬಂದಾಗ ಅವರಿಗೆ ಎಷ್ಟೋ ಸಮಾಧಾನವಾಯಿತು.

"ಎಲ್ಲಿಗೆ ಸಾಗಿಸುವರಂತೆ ಮಡಿವಾಳಾ? ನಿನಗೇನಾದರೂ ಗೊತ್ತೇ?"

"ಹ್ಯಾಗೆ ಗೊತ್ತಾಗಬೇಕು ಪ್ರಭು ? ಎಲ್ಲಿಗಾದರೂ ಸಾಗಿಸಲಿ. ಇಲ್ಲಿರುವುದಕ್ಕಿಂತ ಬೇರೆ ಕಡೆ ಇರುವುದೇ ಮೇಲು. ಅಲ್ಲಿ ಬಿಡುಗಡೆಯ ಪ್ರಯತ್ನವೂ ಸುಲಭವಾದೀತು."

ಅದೇ ದಿನ ಸಾಯಂಕಾಲ, ಸೂರ್ಯಾಸ್ತವಾಗಿ ಕತ್ತಲು ಪಸರಿಸುತ್ತಲೂ ಅವರನ್ನು ಕಾರಾಗೃಹದ ಕೊಟಡಿಯಿಂದ ಹೊರಗೆ ತೆಗೆದರು. ಕಪ್ಪು ಪರದೆಯಿಂದಾವೃತವಾದ ಮೇನೆಯಲ್ಲಿ ಮಲ್ಲಸರ್ಜನನ್ನು ಕೂಡ್ರಿಸಲಾಯಿತು. ಮಡಿವಾಳನನ್ನೂ ಮತ್ತಿತರರನ್ನೂ ಆ ಮೇನೆಯ ಹಿಂದೆ ಹಿಂದೆ ನಡಸುತ್ತಾ ಸೈನಿಕರು ಪಯಣ ಬೆಳೆಸಿದರು.

"ನಮ್ಮನ್ನು ಎಲ್ಲಿಗೆ ಒಯ್ಯುತ್ತೀರಿ ಖಾನ್‌ಸಾಹೇಬ್ ?" ಎಂದು ಮಡಿವಾಳ ಕೇಳಿದಾಗ, ಅವರನ್ನು ಸಾಗಿಸುತ್ತಿದ್ದ ಸೈನಿಕರ ತುಕಡಿಯ ಅಧಿಕಾರಿ ಕೆರಳಿ ಉತ್ತರವಿತ್ತ : "ಚುಪ್‌ರಹೋ ಸಾಲಾ ! ಎಲ್ಲಿಗೊಯ್ಯುತ್ತಿದೇವೆಂಬುದನ್ನು ಹೇಳಬೇಕಂತೆ ಇವನಿಗೆ! ನರಕಕ್ಕೊಯ್ಯುತ್ತಿದೇವೆ, ತಿಳಿಯಿತೇ ?"

ಮೂರು ಹಗಲು – ಮೂರು ಇರುಳುಗಳ ಪಯಣ ಕೊನೆಗೊಂಡು ಅವರು ಕೋಟೆಯೊಂದರಲ್ಲಿ ಪ್ರವೇಶಿಸಿ, ಅಲ್ಲಿನ ಕಾರಾಗಾರದಲ್ಲಿ ಅಡಿಯಿರಿಸಿದಾಗ, ಅಲ್ಲಿನ ಅಮಾನುಷ ವಾತಾವರಣವನ್ನೂ, ಅಧಿಕಾರಿಗಳ ನಿರ್ಧಯದ–ನಿಷ್ಠುರದ ವರ್ತನೆಯನ್ನೂ ಕಂಡು ಅವರು ಮನಸ್ಸಿನಲ್ಲಿಯೇ ಅಂದುಕೊಂಡರು : "ನಮ್ಮನ್ನು ನರಕಕ್ಕೊಯ್ಯುತ್ತಿದೇವೆ ಅಂತ ಆ ಸೇನಾಧಿಕಾರಿ ಆಡಿದ್ದು ಅಸತ್ಯವೇನೂ ಅಲ್ಲ ಹಾಗಾದರೆ! ಇದಕ್ಕಿಂತ ಭಯಂಕರವಾದ ನರಕ ಇನ್ನೆಲ್ಲಿ ಇದ್ದೀತು !"

೧೨

ಕಿತ್ತೂರು ವೈರಿಗಳ ವಶವಾಗಿ, ದೊರೆಯೂ ದಿವಾನನೂ ಇನ್ನಿತರ ದರಬಾರಿಗಳೂ ಸೆರೆಯಾಳುಗಳಾದ ಸಮಾಚಾರ ತಿಳಿಯುತ್ತಲೂ ರುದ್ರಮ್ಮಾಜಿ ಕೆರಳಿದ ಸಿಂಹಿಣಿಯಂತಾದಳು. ಮೋಸದಿಂದ ಕಿತ್ತೂರನ್ನು ಹಿಡಿದುಕೊಂಡ ವೈರಿಗಳ ಬಗೆಗೆ ರೋಷವುಕ್ಕಿದರೆ, ಆ ಮೋಸಕ್ಕೆ ಮೂರ್ಖರಂತೆ

ಬಲಿಯಾದ ತನ್ನ ಜನರ ಬಗೆಗೆ ಜುಗುಪ್ಸೆಯೆನಿಸಿತು. ಹೇಡಿಗಳಂತೆ ಶತ್ರುಗಳ ವಶರಾದ ಅವರ ಮುಖವನ್ನು ಮತ್ತೊಮ್ಮೆ ನೋಡಬಾರದೆಂದೂ ಅವಳಿಗನಿಸಿತು. ಆದರೆ ಆ ಭಾವನೆ ಬಹುಕಾಲ ಉಳಿಯಲಿಲ್ಲ. ಪತಿಯ ಬಗೆಗೆ ಎದೆಯಲ್ಲಿದ್ದ ಒಲವೆಲ್ಲಾ ಉಕ್ಕಿಬಂದು ರುದ್ರಮ್ಮಾಜಿ ಪರಿತಪಿಸಿದಳು.

"ದೊರೆಗಳನ್ನು ಬಿಡಿಸಲು ಏನಾದರೂ ಪ್ರಯತ್ನ ನಡೆದಿದೆಯೋ ಇಲ್ಲವೋ?" ಕಿತ್ತೂರಿನ ಪತನದ ಸಮಾಚಾರವನ್ನು ತಂದ ದೂತರನ್ನು ಆಕೆ ವಿಚಾರಿಸಿದಳು.

"ಸೇನಾನಾಯಕರು ಅದೇ ಪ್ರಯತ್ನದಲ್ಲಿದಾರೆ ಅವ್ವನವರೆ." ಅವರು ಅಂಜುತ್ತ ಅಂಜುತ್ತ ಹೇಳಿದರು.

"ಸೇನಾನಾಯಕರು? ಇನ್ನೆಲ್ಲಿಯ ಸೇನಾನಾಯಕರು? ಕಿತ್ತೂರನ್ನು ಬಿಟ್ಟುಕೊಟ್ಟಾಗಲೇ ಅವರು ಅಯೋಗ್ಯರೆಂಬುದು ಗೊತ್ತಾಗಿ ಹೋದಂತಾಯಿತು. ಈಗ ಯಾವ ಮೋರೆಯಿಂದ ಅವರು ಸೇನಾನಾಯಕರೆಂದು ಕರೆದು ಕೊಳ್ತಾರೆ?" ಎಂದು ಕಟುವಾಗಿ ಆಡಿದಳು ರುದ್ರಮ್ಮಾಜಿ.

ಕಿತ್ತೂರಿನಲ್ಲಿ ನಡೆದ ವಿದ್ಯಮಾನಗಳ ಬಗೆಗೆ ಪೂರ್ತಿಯಾಗಿ ಅರಿತುಕೊಂಡಿದ್ದ ಅವಳ ತಂದೆ, ಮಗಳನ್ನು ಸಂತೈಸಲು ಯತ್ನಿಸುತ್ತ ಮಾತನಾಡಿದರು: "ನಡೆದದ್ದರಲ್ಲಿ ಸೇನಾಧಿಪತಿಗಳ ತಪ್ಪೇನೂ ಇಲ್ಲ ರುದ್ರಾಣೀ. ಅವರನ್ನು ದೂರುವದು ಅನ್ಯಾಯವಾದೀತು. ಆ ಒಬ್ಬ ದಿವಾನನ ಮುತ್ಸದ್ದಿತನದಿಂದ ಇಷ್ಟೆಲ್ಲಾ ಅನರ್ಥವಾಯಿತು."

ಆ ವಾದದಿಂದ ರುದ್ರಮ್ಮಾಜಿಗೆ ಸಮಾಧಾನವಾಗಲಿಲ್ಲ. ಅವಳು ಹೇಳಿದಳು: "ದೋಷವನ್ನೆಲ್ಲಾ ದಿವಾನನ ಮೇಲೆ ಹೊರಿಸಲು ನನಗಂತೂ ಒಪ್ಪಿಗೆ ಯಾಗುವದಿಲ್ಲ ಅಪ್ಪಾಜಿ. ಸೇನಾನಾಯಕರಿಗೇನು ಬುದ್ಧಿಯಿಲ್ಲವೆ? ಸ್ವತಂತ್ರವಾಗಿ ವಿಚಾರ ಮಾಡುವ ಶಕ್ತಿಯಿಲ್ಲವೆ? ದಿವಾನ ತಪ್ಪು ಹಾದಿ ತೋರಿಸಿದಾಗ ಅವರೇಕೆ ವಿರೋಧಿಸಲಿಲ್ಲ?"

"ಅವರು ವಿರೋಧಿಸಿದರಂತೆ ರುದ್ರಾಣಿ. ದಿವಾನನ ಮಾತನ್ನೇ ಎತ್ತಿಹಿಡಿದು ದೊರೆಗಳು ಉಳಿದವರ ಮಾತನ್ನು ಕಡೆಗಣಿಸಿಬಿಟ್ಟರಂತೆ. ಪಾಪ, ಸೇನಾಪತಿಗಳಾದರೂ ಏನು ಮಾಡಿಯಾರು? ದೊರೆಯ ಅಪ್ಪಣೆಯನ್ನು ಮೀರಿ ಅವರು ಯುದ್ಧ ಮಾಡುವಂತಿದೆಯೆ?"

ಆಗಮಾತ್ರ ರುದ್ರಮ್ಮಾಜಿ ಶಾಂತಳಾಗಲೇಬೇಕಾಯಿತು.

" ಆ ವೇಳೆಯಲ್ಲಿ ನಾನು ಅಲ್ಲಿರಬೇಕಾಗಿತ್ತು ಅಪ್ಪಾಜಿ. ಈ ನಾಡಿನ ಜನರು ಹೇಡಿಗಳಲ್ಲವೆಂಬುದನ್ನು ವೈರಿಗಳು ಚೆನ್ನಾಗಿ ತಿಳಿದುಕೊಳ್ಳುತ್ತಿದ್ದರು."

" ಅದು ನಿಜ ರುದ್ರಾಣಿ. ಆಗಬಾರದ್ದು ಆಗಿಹೋಗಿದೆ. ಇನ್ನು ಮುಂದೆ ಏನು ಮಾಡಬೇಕೆಂದು ಯೋಚಿಸೋಣ. ಮೊದಲು ದೊರೆಗಳನ್ನು ಬಿಡಿಸಿಕೊಂಡು ಬರಬೇಕು. ಅದೇ ಜರೂರಾಗಿ ಆಗಬೇಕಾದ ಕೆಲಸ."

" ನಾನೇ ಸ್ವತಃ ಕಿತ್ತೂರಿಗೆ ಹೋಗಿ ಸೇನೆಯನ್ನು ಒಟ್ಟುಗೂಡಿಸಿ ಆ ಕೆಲಸಕ್ಕೆ ಕಳಿಸಲೇ ?"

" ಈ ಸಮಯದಲ್ಲಿ ಅಪ್ಪನವರು ಇಲ್ಲೇ ಇರುವದೊಳ್ಳೆಯದು. ಸೇವಕರಾದ ನಾವಿರುವಾಗ ತಾವೇಕೆ ಗಂಡಾಂತರದಲ್ಲಿ ಬೀಳಬೇಕು ?" ಎಂದರು ದೂತರು.

" ಈಗ ನೀನು ಅಲ್ಲಿಗೆ ಹೋಗುವದು ಜಾಣತನವಾಗಲಾರದು ರುದ್ರಾಣಿ. ಮೊನ್ನೆ ಮೊನ್ನೆಯಷ್ಟೇ ಕೋಟೆ ವೈರಿಗಳ ವಶವಾಗಿದೆ. ಇನ್ನೂ ತಿಂಗಳೆರಡು ತಿಂಗಳವರೆಗೂ ಅವರು ಅಲ್ಲೇ ಗಟ್ಟಿಯಾಗಿ ತಳವೂರ ಬಹುದು. ಆಮೇಲೆ ಮುಖ್ಯ ಸೇನೆಯನ್ನೆಲ್ಲಾ ಧಾರವಾಡದ ಕೋಟೆಗೆ ಸಾಗಿಸಬಹುದು. ಆಗ ಬೇಕಾದರೆ ನೀನು ಹೋಗಬಹುದು."

" ದೇಸಾಯಿ ಸಾಹೇಬರು ಹೇಳುವಂತೆ ಮಾಡುವದೇ ಒಳ್ಳೆಯದು ಅಪ್ಪನವರೆ. ಈಗ ಅರಮನೆಯೂ ಕೂಡಾ ವೈರಿಗಳ ವಶದಲ್ಲೇ ಇದೆ. ನೀಲಮ್ಮಾಜಿಯವರು ಮಠದಲ್ಲಿ ಗುಪ್ತವಾಗಿ ಆಶ್ರಯ ಪಡೆದಿದ್ದಾರೆ."

" ತಿಮ್ಮನಗೌಡರು ?"

" ಅವರೂ ಗುಪ್ತವಾಗಿಯೇ ಸಂಚರಿಸಬೇಕಾಗಿದೆ ಅಪ್ಪನವರೆ. ಕಿತ್ತೂರಿನಲ್ಲಿ ವೈರಿಗಳ ಸೈನ್ಯ ಕಡಿಮೆಯಾಗುವವರೆಗೂ ನಾವೆಲ್ಲರೂ ಎಚ್ಚರ ದಿಂದಿರಬೇಕಾದ್ದು ಅಗತ್ಯ."

" ನಮ್ಮ ಸೇನೆಯೆಲ್ಲಾ ಏನಾಯಿತು ?"

" ಅಂದು ನಡೆದ ಗದ್ದಲದಲ್ಲಿ ಎಲ್ಲಾ ಎತ್ತೆತ್ತಲೋ ಚೆದರಿಹೋಯಿತು. ಎಲ್ಲರೂ ಮತ್ತೆ ಒತ್ತಟ್ಟಿಗೆ ಸೇರಬೇಕೆಂದು ಸೂಚನೆ ಹೋಗಿದೆ ಅಪ್ಪನವರೆ."

"ನಮ್ಮ ಸೇನೆಯೆಲ್ಲಾ ಕೂಡಿಕೊಂಡು ಈಗಲೇ ವೈರಿಗಳ ಮೇಲೆ ದಾಳಿ ಮಾಡಿದರೆ ಗೆಲವು ದೊರೆಯುಲಾರದೇ ಅಪ್ಪಾಜಿ ?"

"ಕೋಟೆಯನ್ನು ಹಿಡಿದುಕೊಂಡು ಸುರಕ್ಷಿತವಾಗಿ ಕುಳಿತ ವೈರಿಯನ್ನು ಬೇಗ ಸೋಲಿಸುವದು ಕಷ್ಟವಲ್ಲವೇ ರುದ್ರಾಣಿ ?"

"ನಿಜ ಅಪ್ಪಾಜಿ. ನಮ್ಮ ಯುದ್ಧ ಸಾಮಗ್ರಿಗಳೂ ವೈರಿಗಳ ವಶವಾದುವು. ಮದ್ದುಗುಂಡು, ತೋಫು, ಖಜಾನೆ, ಧಾನ್ಯಸಂಗ್ರಹ....ಎಲ್ಲಾ ಹೋಯಿತು. ಇನ್ನು ಮತ್ತೆ ಅದರ ತಯಾರಿಯೆಲ್ಲಾ ಮಾಡಿಕೊಳ್ಳಬೇಕು. ಅದಕ್ಕೆಲ್ಲ ಲಕ್ಷಾಂತರ ಹಣ ಬೇಕು...."

"ಹಣವೂ ಬೇಕು, ಸಮಯವೂ ಬೇಕು. ಕೋಟೆಯ ಮೇಲೆಲ್ಲ ತೋಫುಗಳನ್ನು ಹೇರಿಕೊಂಡು ಸಜ್ಜಾಗಿ ಕುಳಿತಿರುವ ಶತ್ರುವನ್ನು ತೋಫುಗಳಿಲ್ಲದೆ ಎದುರಿಸುವದಕ್ಕೂ ಆಗುವಂತಿಲ್ಲ.... ತೋಫುಗಳನ್ನು ಕೊಟ್ಟು ನೆರವಾಗುವಂಥ ಸಹಾಯಕರನ್ನೂ ನಾವು ಹುಡುಕಬೇಕು. ಅದಕ್ಕೆಲ್ಲಾ ಕಾಲ ಬೇಕು."

"ನಮಗೀಗ ಸಹಾಯವಾಗಬಹುದಾದದ್ದು ಪೇಶವೆಯರಿಂದ—ಪಟವರ್ಧನರಿಂದ. ಅವರೂ ಕೂಡಾ ಸಹಾಯಕ್ಕೆ ಬರಬಹುದೋ ಇಲ್ಲವೋ ಅಂತ ಸಂಶಯವೆ."

"ಅವರು ಸಕಾಲಕ್ಕೆ ಸಹಾಯಮಾಡಲಿಲ್ಲವೆಂದೇ ನರಗುಂದ ಟೀಪುವಿನ ಕೈಗೆ ಹೋಯಿತು. ಟೀಪುವೂ ಅವರೂ ಬದ್ಧವೈರಿಗಳು. ಆದರೂ, ಈ ವೇಳೆಯಲ್ಲಿ ಅವನ ವಿರುದ್ಧ ಯುದ್ಧಮಾಡಲು ಅವರಿಗೂ ಉತ್ಸಾಹವಿದ್ದಂತೆ ಕಾಣುವದಿಲ್ಲ ರುದ್ರಾಣಿ. ಆದರೂ ಪ್ರಯತ್ನಮಾಡಿ ನೋಡೋಣ. ತಿಮ್ಮನಗೌಡ–ಗುರುಸಿದ್ಧಪ್ಪ–ವೀರಸಂಗಪ್ಪರನ್ನು ಇಲ್ಲಿಗೇ ಕರೆಸುತ್ತೇನೆ. ಎಲ್ಲರೂ ಸೇರಿ ಮಾತಾಡಿ ಮುಂದಿನ ಹೆಜ್ಜೆಯಿಡುವದೇ ಉತ್ತಮ," ಎಂದರು ದೇಸಾಯರು.

ಸಾಧ್ಯವಾದಷ್ಟು ಬೇಗ ಬಿಡುವುಮಾಡಿಕೊಂಡು ತಲ್ಲೂರಿಗೆ ಬಂದು ತಮ್ಮನ್ನು ಕಾಣಬೇಕೆಂದು ಕಿತ್ತೂರಿನ ಸೇನಾಪತಿಗಳಿಗೆ ಹೇಳಿಕಳಿಸಿದುದಾಯಿತು. ನಾಲ್ಕೈದು ದಿನಗಳ ತರುವಾಯ ತಿಮ್ಮನಗೌಡನೊಬ್ಬನೇ ಮಿತ ಪರಿವಾರದೊಂದಿಗೆ ಭೆಟ್ಟಿಗೆ ಬಂದ.

“ಗುರುಸಿದ್ಧಪ್ಪನವರು ಬರಲಿಲ್ಲವಲ್ಲ ನಾಯಕರೆ? ವೀರಸಂಗಪ್ಪನವರು?”

“ಅವರಿಬ್ಬರೂ ಶ್ರೀರಂಗಪಟ್ಟಣದ ಕಡೆ ಹೋಗಿದಾರೆ ಅಪ್ಪನವರೆ.”

“ಅಂತೂ ಪ್ರಯತ್ನ ನಡೆದಿದೆಯೆನ್ನಿರಿ. ಒಳ್ಳೆಯದಾಯಿತು. ಎಷ್ಟು ಜನರು ಹೋಗಿದ್ದಾರೆ ಅವರ ಸಂಗಡ?”

“ವೈರಿಗಳ ಸೀಮೆಯಲ್ಲಿ ನೂರಾರು ಮಂದಿ ಒಟ್ಟಾಗಿ ಹೋಗುವಂತಿಲ್ಲವಲ್ಲ ಅಪ್ಪನವರೆ? ಹತ್ತು ಹನ್ನೆರಡು ಜನರು ಒಂದೊಂದು ಗುಂಪಾಗಿ ಬೇರೆ ಬೇರೆ ವೇಷ ಹಾಕಿಕೊಂಡು ಹೋಗಿದಾರೆ.”

“ಇಷ್ಟು ಹೊತ್ತಿಗೆ ಅವರು ಶ್ರೀರಂಗಪಟ್ಟಣ ಮುಟ್ಟಿರಬಹುದಲ್ಲ?”

“ಮುಟ್ಟಿರಬಹುದು. ಇನ್ನೂ ಅವರಿಂದ ಸುದ್ದಿ ಬಂದಿಲ್ಲ. ಇಂದು ನಾಳೆ ಬರಬಹುದು.”

“ಸ್ವಾಮಿಗಳನ್ನು ಕಂಡಿದ್ದಿರಾ ನಾಯಕರೆ?”

“ಕಂಡಿದ್ದೆ. ಅವರೂ ಅದೇ ಪ್ರಯತ್ನದಲ್ಲಿದ್ದಾರೆ. ದೊರೆಗಳ ಬಗ್ಗೆ ತಾವು ಚಿಂತಿಸಬಾರದೆಂದು ಹೇಳಲು ತಿಳಿಸಿದರು.”

“ಅಮ್ಮಾಜಿಯವರು ಹೇಗಿದಾರೆ?”

“ಅವರಿಗೆ ದೊರೆಗಳದೇ ಚಿಂತೆಯಾಗಿದೆ. ಅದೇ ಚಿಂತೆಯಲ್ಲಿ ಹಾಸಿಗೆ ಹಿಡಿದು ಮಲಗಿದ್ದಾರೆ.”

“ಅಮ್ಮಾಜಿಯವರನ್ನು ಇಲ್ಲಿಗೇ ಕರೆದು ತರಬೇಕು ನಾಯಕರೆ. ಕಿತ್ತೂರು ಮತ್ತೆ ನಮ್ಮ ಕೈಗೆ ಬರುವತನಕ ಅವರೂ ಇಲ್ಲೇ ಇದ್ದರೊಳ್ಳೆಯದು, ಅಲ್ಲವೆ?” ಎಂದರು ದೇಸಾಯರು.

“ನಾನೂ ಹಾಗೇ ವಿಚಾರಮಾಡಿ ಅಮ್ಮಾಜಿಯವರಿಗೆ ಹೇಳಿಕೊಂಡೆ. ಏನೇ ಆದರೂ ಕಿತ್ತೂರನ್ನು ಬಿಟ್ಟು ಹೊರಡುವುದಿಲ್ಲಂತ ಅವರು ಹಟ ಹಿಡಿದಿದಾರೆ.”

“ಇರಲಿರಲಿ. ನಾನೇ ಬಂದು ಅವರನ್ನು ಕರೆದುತರುತ್ತೇನೆ. ಕಿತ್ತೂರಲ್ಲಿ ವೈರಿಗಳ ಉಪದ್ರವಕ್ಕಾರಂಭವಾಗಿರಬೇಕಲ್ಲ?”

“ಮುಖ್ಯ ಮುಖ್ಯ ಜನರನ್ನೆಲ್ಲಾ ಹಿಡಿದು ಕೋಟೆಯಲ್ಲಿ ಪಹರೆಯಲ್ಲಿಟ್ಟದಾರೆ. ಶ್ರೀಮಂತರನ್ನು ಹಿಡಿದು ಪೀಡಿಸಿ ಅವರಿಂದ ದಂಡ ವಸೂಲು

ಮಾಡುತ್ತಿದಾರೆ. ಕಿತ್ತೂರಿನ ಸಂಪತ್ತನ್ನೆಲ್ಲಾ ಲೂಟಿಮಾಡಿಕೊಂಡು ಹೋಗುವದೇ ಅವರ ಉದ್ದೇಶವಿದ್ದಂತೆ ಕಾಣ್ತದೆ."

"ಬುರ್ಹಾನುದ್ದೀನ ಇನ್ನೂ ಎಷ್ಟು ದಿನ ಕಿತ್ತೂರಲ್ಲೇ ಠಾಣ್ಯ ಹಾಕಬಹುದು?"

"ಅದರದೇನೂ ಭರವಸೆಯಿಲ್ಲ. ಸವಣೂರಿನ ಮೇಲೆ ಬೇರೆ ದಾಳಿ ನಡೆಯಲಿದೆಯಂತೆ. ಅದಕ್ಕಾಗಿ ಆತ ಅತ್ತ ಹೋದರೂ ಹೋಗಬಹುದು. ಆ ಕಡೆ, ದಕ್ಷಿಣದಲ್ಲೂ ಫಿರಂಗಿಗಳೊಡನೆ ಚಕಮಕಿ ನಡೆದೇ ಇದೆಯಲ್ಲ? ಟೀಪುವಿನ ಹುಕುಂ ಆದರೆ ಬುರ್ಹಾನುದ್ದೀನ ಅತ್ತಕಡೆಗೇ ಹೊರಡಬಹುದು."

ಎರಡು ಮೂರುದಿನಗಳ ಕಾಲ ತಿಮ್ಮನಗೌಡನನ್ನು ತಲ್ಲೂರಿನಲ್ಲಿಯೇ ಇರಿಸಿಕೊಂಡ ದೇಸಾಯರೂ ರುದ್ರಮ್ಮಾಜಿಯೂ ಆತನೊಡನೆ ಮುಂದಿನ ಕ್ರಮದ ಕುರಿತು ಆಲೋಚನೆ ನಡಸಿದರು. ಅತ್ತ ಮಲ್ಲಸರ್ಜ ದೊರೆಯನ್ನು ಬಿಡಿಸುವ ಪ್ರಯತ್ನ ನಡೆದಿದ್ದಂತೆ ಇತ್ತ ಯುದ್ಧದ ಸಿದ್ಧತೆಯನ್ನೂ ನಡೆಸುವುದೆಂದು ನಿಶ್ಚಯವಾಯಿತು.

"ನಮ್ಮ ಸೈನಿಕರೆಲ್ಲಾ ಕೂಡುತ್ತಿರುವರೇ ನಾಯಕರೆ?" ರುದ್ರಮ್ಮಾಜಿ ವಿಚಾರಿಸಿದಳು.

"ಅವರನ್ನು ಕೂಡಿಸುವದೇನೂ ಕಷ್ಟವಲ್ಲ ಅವ್ವನವರೆ. ಅಗತ್ಯವಿದ್ದಾಗ, ಎರಡು ಮೂರು ದಿನಗಳ ಮೊದಲು ಹೇಳಿಕಳಿಸಿದರೆ ಸಾಕು, ಎಲ್ಲರೂ ಬಂದು ಸೇರುತ್ತಾರೆ. ಮೊದಲು ನಾವು ಮದ್ದುಗುಂಡು ತೋಪು ತುಬಾಕಿಗಳ ತಯಾರಿ ಮಾಡಿಕೊಳ್ಳಬೇಕು."

"ಅದಕ್ಕೆಲ್ಲ ಹಣಬೇಕು...."

"ಅದಂತೂ ಬೇಕೇ ಬೇಕಲ್ಲ ದೇಸಾಯರೆ? ಅದನ್ನೆಲ್ಲಿಂದ ತರುವದು ಕಿತ್ತೂರಿನ ಖಜಾನೆಯನ್ನಂತೂ ವೈರಿಗಳು ಹೊಡೆದುಬಿಟ್ಟರು. ಕೋಟ್ಯಂತರ ಹಣ ಕೈಬಿಟ್ಟಿತು. ಮುತ್ತು ರತ್ನ ವಜ್ರ ವೈಢೂರ್ಯ ಎಲ್ಲಾ ಹೋಯಿತು...." ಎನ್ನುತ್ತಿದ್ದಂತೆ ತಿಮ್ಮನಗೌಡನ ಕೊರಳು ಬಿಗಿಯಿತು. ಮುಂದೆ ಮಾತೇ ಹೊರಡದಂತಾಯಿತು.

"ಹೋದದ್ದು ಹೋಯಿತು ನಾಯಕರೆ. ದೇವರ ಕೃಪೆಯಿದ್ದರೆ ಮತ್ತೆ ಎಲ್ಲಾ ಬಂದೀತು. ಅದಕ್ಕಾಗಿ ಚಿಂತಿಸುವುದು ಬೇಡ. ಈಗ ಹಣ

ಕೂಡಿಸುವ ವಿಚಾರ ಮಾಡೋಣ. ನಮ್ಮಿಂದಾದಷ್ಟು ಸಹಾಯ ಮಾಡಲು ನಾವಂತೂ ಸಿದ್ಧರೇ ಇವೇವೆ. ಕಿತ್ತೂರಿನ ಸೆಟ್ಟಿ ಸಾಹುಕಾರರೂ ಈ ಸಮಯದಲ್ಲಿ ನೆರವು ನೀಡಬಹುದು."

"ಪಾಪ! ಅವರ ಹತ್ತಿರ ಏನಾದರೂ ಉಳಿದಿದ್ದರಲ್ಲವೆ, ಅವರು ನೆರವಾಗುವದು? ಸತ್ತವರನ್ನು ಸುಲಿಯುವಂತೆ ಬುರ್ಹಾನುದ್ದೀನ ಅವರನ್ನು ಸುಲಿದಿದ್ದಾನೆ—ಇನ್ನೂ ನಡೆದೇ ಇದೆ ಸುಲಿಗೆ."

"ಅವರ ಪೆಟ್ಟಿಗೆಗಳಲ್ಲಿದ್ದದ್ದನ್ನು ಮಾತ್ರ ಅವನು ಸುಲಿಯ ಬಹುದು. ಈ ಸೆಟ್ಟಿ ಸಾಹುಕಾರರೆಂದರೆ ಬಹಳ ಧೂರ್ತರಿರ್ತಾರೆ ನಾಯಕರೆ. ಟೀಪುವಿನ ದಂಡು ಬಂದು ಬೀಡುಬಿಟ್ಟಾಗಲೇ ಅವರು ತಮ್ಮ ಸಂಪತ್ತನ್ನೆಲ್ಲಾ ಭದ್ರವಾಗಿ ಅಡಗಿಸಿಟ್ಟಿರಲು ಸಾಕು."

"ಹೌದು. ಹಾಗೂ ಮಾಡಿರಬಹುದು. ನಾನು ಅವರನ್ನು ಕಂಡು ವಿಚಾರಿಸುತ್ತೇನೆ."

"ನನ್ನ ಮುಖ್ಯ ಮುಖ್ಯ ಆಭರಣಗಳೆಲ್ಲಾ ಅಲ್ಲೇ ಉಳಿದಿದ್ದುವು. ಇಲ್ಲಿಗೆ ತೆಗೆದುಕೊಂಡು ಬಂದಿರುವುದನ್ನೆಲ್ಲಾ ಕೊಟ್ಟುಬಿಡುತ್ತೇನೆ. ಅವುಗಳನ್ನು ಮಾರಿ ಹಣ ಒದಗಿಸಿಕೊಳ್ಳಬಹುದು," ಎಂದು ಹೇಳಿ ರುದ್ರಮ್ಮಾಜಿ ತನ್ನ ಆಭರಣಗಳ ಪೆಟ್ಟಿಗೆಯನ್ನೇ ತರಿಸಿ ತಿಮ್ಮನಗೌಡನ ಮುಂದೆ ಒಪ್ಪಿಸಿದಳು.

"ಇದೇನೂ ಬೇಡ ಅವ್ವನವರೆ. ಸೌಭಾಗ್ಯದ ಒಡವೆಗಳನ್ನು ಕೊಡಬಾರದು ತಾಯಿೂ. ಹಣಕ್ಕಾಗಿ ನೀವು ಚಿಂತಿಸಬೇಡಿ. ನಾವು ಏನಾದರೂ ವ್ಯವಸ್ಥೆ ಮಾಡುತ್ತೇವೆ," ಎಂದು ತಿಮ್ಮನಗೌಡ ಹೇಳಿದರೂ ಆಕೆ ಕೇಳಲಿಲ್ಲ.

"ಕಿತ್ತೂರು ಅನ್ಯರ ಕೈಯಲ್ಲಿರುವಾಗ ನಾನು ಈ ಒಡವೆ ಇಟ್ಟುಕೊಂಡೇನು ಮಾಡಲಿ ನಾಯಕರೆ? ನಿರುಪಯೋಗಿಯಾಗಿ ಇವು ಇಲ್ಲಿ ಬಿದ್ದಿರುವ ಬದಲು ಕಿತ್ತೂರಿಗಾಗಿ ವಿನಿಯೋಗವಾಗಲಿ. ನೀವು ಬೇಡ ಅನ್ನಬಾರದು. ಸ್ವೀಕರಿಸಬೇಕು."

"ಕಿತ್ತೂರಿನ ಬಿಡುಗಡೆಗಾಗಿ ನಾವು ಕೂಡಿಸುವ ನಿಧಿಗೆ ಕಿತ್ತೂರ ರಾಣಿಯದೇ ಮೊದಲ ಕಾಣಿಕೆಯಾಗಲಿ. ಅದೂ ನ್ಯಾಯವೇ," ಎಂದು ದೇಸಾಯರೂ ಹೇಳಿದರು.

ತಿಮ್ಮನಗೌಡ ಪುನಃ ಯೋಚನೆಗೊಳಗಾದ. ಕೇವಲ ಸೇನಾನಾಯಕನಾದ ತಾನು ಈ ಆಭರಣಗಳ ಜವಾಬ್ದಾರಿ ವಹಿಸಿಕೊಳ್ಳುವುದು ಸರಿಯಲ್ಲವೆಂದೇ ಅವನಿಗನಿಸಿತು.

"ಇವುಗಳನ್ನು ಸ್ವೀಕರಿಸುವುದು ಕೋಶಾಧಿಕಾರಿಯ ಜವಾಬ್ದಾರಿ ಅಪ್ಪನವರೆ."

"ಕೋಶಾಧಿಕಾರಿಯಂತೂ ಟೇಪುವಿನ ಅತಿಥಿಯಾದ. ಈಗ ನೀವೇ ಅವರ ಕಾರ್ಯಭಾರವನ್ನೂ ವಹಿಸಿಕೊಳ್ಳಬೇಕು. ಅಲ್ಲವೆ?"

"ಹಣ ಇಟ್ಟುಕೊಳ್ಳುವ ಜವಾಬ್ದಾರಿ ಬಹಳ ಕಷ್ಟ ದೇಸಾಯರೆ, ಅಲ್ಲದೆ, ನಾನು ಅಲ್ಲಿ ಇಲ್ಲಿ ಓಡಾಡುತ್ತಿರುವವ. ಇಷ್ಟು ಹಣ ಎಲ್ಲಿಟ್ಟುಕೊಳ್ಳಲಿ? ಸದ್ಯಕ್ಕೆ ನೀವೇ ಕೋಶಾಧಿಕಾರ ವಹಿಸಿಕೊಂಡರೊಳ್ಳೆಯದು."

"ಕಿತ್ತೂರಿನ ಸಮೀಪದಲ್ಲೇ ಇರುವವರೊಬ್ಬರು ಈ ಹೊಣೆಹೊತ್ತುಕೊಂಡರೆ ನಿಮಗೆಲ್ಲ ಅನುಕೂಲ, ನಾಯಕರೆ. ತಲ್ಲೂರು ಅಂದರೆ ಬಹಳ ದೂರವಾಯಿತು."

ವೀರಸಂಗಪ್ಪ ಹಿಂದಿರುಗಿ ಬಂದ ಮೇಲೆ ಆತನಿಗೇ ಆ ಹೊಣೆಯನ್ನು ಕೊಡುವುದೆಂದೂ ಅಲ್ಲಿಯವರೆಗೆ ತಲ್ಲೂರ ದೇಸಾಯರೇ ಆ ಕೆಲಸ ನೋಡಿಕೊಳ್ಳುವುದೆಂದೂ ಗೊತ್ತಾಯಿತು.

ಅನಂತರ, ಪೇಶವೆ—ಪಟವರ್ಧನರಿಂದ ಸಹಾಯ ದೊರಕಿಸುವ ವಿಚಾರವಾಗಿ ಚರ್ಚೆಗಾರಂಭವಾಯಿತು.

"ಕಿತ್ತೂರಿಗೆ ಇಂಥಾ ಸ್ಥಿತಿ ಬಂದಿತೆಂದು ಅವರಿಗೆ ಸಂತೋಷವೇ ಆಗಿರಬೇಕು. ಅವರಿಂದ ನಮಗೇನೂ ಸಹಾಯ ಸಿಕ್ಕಲಾರದೆಂದೇ ನನಗನಿಸ್ತದೆ," ಎಂದು ತಿಮ್ಮನಗೌಡ ಹೇಳಿದ.

"ಕಿತ್ತೂರಿನ ಏಳಿಗೆ ಅವರಿಗೆ ಸಹನವಾಗಿರಲಿಲ್ಲವೆಂಬುದೇನೊ ನಿಜ. ಕಿತ್ತೂರಿಗೆ ಇಂಥ ದೊಡ್ಡ ಏಟು ಬಿದ್ದದ್ದರಿಂದ ಅವರಿಗೆ ಆನಂದವೂ ಆಗಿರಬಹುದು. ಆದರೂ, ಅದು ಅವರ ಪರಮ ವೈರಿಯ ಕೈಗೆ ಹೋಯಿತಲ್ಲಾ ಅಂತ ತಳಮಳವೂ ಆಗಿರಲು ಸಾಕು. ಕಿತ್ತೂರ ರಾಜ್ಯ ಟೇಪುವಿನ ವಶವಾದದ್ದರಿಂದ ಬೆಳಗಾವಿಯ ವರೆಗಿನ ಸೀಮೆಯೆಲ್ಲಾ ಅವನದಾಯಿತು. ಮಹಾರಾಷ್ಟ್ರೀಯರ ದಕ್ಷಿಣದ ಗತಿಗೇ ಇದರಿಂದ ಅಪಾಯವುಂಟು. ಟೇಪು

ವನ್ನು ಹೀಗೇ ಬಿಟ್ಟರೆ ಅವನು ಮಿರಜದವರೆಗೂ ನುಗ್ಗಿ ಹೋಗಿ, ಸಾತಾರಾ ಹಿಡಿದುಕೊಂಡು ಪುಣ್ಯ ನಗರಕ್ಕೇ ದಾಳಿಯಿಡಬಹುದು ಅಂತ ಪೇಶವೆಯರು ಹೆದರಿರಲು ಸಾಕು. ಅವನನ್ನು ತುಂಗಭದ್ರೆಯ ಆಚೆಗೇ ಇಡಲು ಅವರು ಪ್ರಯತ್ನಪಡದಿರಲಾರಿರು. ಅವನ ವಿರುದ್ಧ ಕಿತ್ತೂರಿನವರು ಎದ್ದು ನಿಂತರೆ ಪೇಶವೆಯರು ಸಂತೋಷದಿಂದ ಸಹಾಯ ಮಾಡಬಹುದು. ನನಗಂತೂ ಹೀಗನಿಸ್ತದೆ;" ಎಂದು ದೇಸಾಯರು ಹೇಳಿದರು.

"ಅವರಿಂದ ಸಹಾಯ ಪಡೆಯಲೂ ಕೂಡಾ ಅವರ ಜನರೇ ಬೇಕಲ್ಲ ದೇಸಾಯರೆ? ನಾವು ನೀವು ಹೋಗಿ ಹೇಳಿದರೆ ಲಕ್ಷಿಸುವ ಜನರೇ ಅವರು? ಗುರುನಾಥಪಂತರೋ ಇನ್ನಾವ ಪಂತರೋ ಅಂತು ಪಂತರೇ ಬೇಕು ಅವರಿಗೆ."

"ಅದೇನೋ ನಿಜವೆ. ತಮ್ಮ ಜನರನ್ನು ನಂಬಿದವರಂತೆ ಅವರು ನಮ್ಮನ್ನು ನಂಬುವದಿಲ್ಲ. ನಮ್ಮ ರಾಜ್ಯಗಳಲ್ಲೂ ಕೂಡಾ ತಮ್ಮವರನ್ನೇ ಅಧಿಕಾರದಲ್ಲಿಟ್ಟು ತಮ್ಮ ಹಿಡಿತ ಶಾಶ್ವತವಾಗಿರುವಂತೆ ನೋಡಿಕೊಳ್ಳುವ ತಂತ್ರ ಅವರದು."

"ಚಿಂತೋಪಂತರನ್ನೂ ವಿರುಪಾಕ್ಷಪಂತರನ್ನು ಕಳಿಸಿಕೊಡಬಹುದ್ದಾಗಿತ್ತು. ಆದರೆ ಅವರೂ ಬುರ್ಹಾನುದ್ದೀನನ ಪಹರೆಯಲ್ಲಿದ್ದಾರೆ."

"ಅವರನ್ನು ಕಳಿಸಿದರೆ ಕೆಲಸವಾಗಬಹುದು ಅಂತೀರಾ?"

"ಆಗಬಹುದೆಂದೇ ಕಾಣುತ್ತದೆ. ಮಿರಜದ ಪಟವರ್ಧನರಿಗೂ ಇವರಿಗೂ ಮೊದಲಿಂದಲೂ ಬಹಳ ವಿಶ್ವಾಸ. ಚಿಂತೋಪಂತರ ಕುಟುಂಬವೂ ಆ ಕಡೆಯವರೇ ಅಂತ ಕೇಳಿದೇನೆ. ಪಟವರ್ಧನರಲ್ಲಿ ಇವರ ಮಾತು ನಡೆಯುಬಹುದು."

"ಅದೆಲ್ಲ ಸರಿ. ಅವರಿಂದ ಸಹಾಯವೂ ಸಿಕ್ಕಬಹುದು ಅಂತ ತಿಳಿಯೋಣ. ಟೀಪುವಿನ ಸೇನೆಯನ್ನೋಡಿಸಿ ಕಿತ್ತೂರನ್ನು ಪುನಃ ವಶಪಡಿಸಿಕೊಂಡ ಬಳಿಕ ಯಾವ ಪರಿಸ್ಥಿತಿಯುಂಟಾಗಬಹುದು? ಪಟವರ್ಧನರು ಚಿಂತೋಪಂತರ ಕೈಗೇ ಎಲ್ಲಾ ಅಧಿಕಾರ ಒಪ್ಪಿಸಿದರೆ?" ಎಂದಳು ರುದ್ರಮ್ಮಾಜಿ.

"ಅವರು ತಮ್ಮವರನ್ನೇ ದಿವಾನಗಿರಿಗೇರಿಸದೆ ಬಿಡುವದಿಲ್ಲ ಅವ್ವನವರೆ. ಇದರಲ್ಲೇನೂ ಸಂಶಯವಿಲ್ಲ."

"ಮುಂದೆ ಏನಾದರಾಗಲಿ— ಆಗ ನೋಡಿಕೊಳ್ಳಲು ಬಂದೀತು. ಬೇಡವೆನಿಸಿದಾಗ ದಿವಾನನನ್ನು ತೆಗೆದೊಗೆಯಲು ಬರಲಕ್ಕಿಲ್ಲವೆ? ಮೊದಲು ಹೊರಗಿನ ದೆವ್ವ ಓಡಿಸಬೇಕು. ಮನೆಯ ದೆವ್ವ ಓಡಿಸುವದೇನೂ ಕಷ್ಟ ವಲ್ಲ," ಎಂದು ದೇಸಾಯರು ಆ ಚರ್ಚೆಯನ್ನು ಮುಕ್ತಾಯಗೊಳಿಸಿದರು.

೧೩

ತಿಮ್ಮನಗೌಡ ಬಂದು ಹೋದುದಕ್ಕೆ ಹತ್ತು ಹದಿನೈದು ದಿನ ಆಗಿರ ಬಹುದು. ಶ್ರೀರಂಗಪಟ್ಟಣಕ್ಕೆ ಹೋಗಿದ್ದ ಗುರುಸಿದ್ಧಪ್ಪ—ವೀರಸಂಗಪ್ಪ ನವರಿಂದ ಬರಬಹುದಾದ ವಾರ್ತೆಯನ್ನು ನಿರೀಕ್ಷಿಸುತ್ತ ರುದ್ರಮ್ಮಾಜಿ ಕಾದು ಕುಳಿತಿದ್ದಳು. ಅವರಿಬ್ಬರೂ ಅತ್ಯಂತ ಚತುರರಾದ ಅಧಿಕಾರಿಗಳೆಂಬುದನ್ನು ಆಕೆ ತಿಳಿದಿದ್ದಳು. ವೇಷ ಬದಲಿಸಿಕೊಂಡು ಕೆಲಸ ಸಾಧಿಸುವುದರಲ್ಲಿ ಗುರು ಸಿದ್ಧಪ್ಪನಂತೂ ತುಂಬಾ ನಿಪುಣ. ಅಂತೆಯೇ, ಆತ ಯಾವುದೊಂದು ಚಮತ್ಕಾರದಿಂದ ಮೈಸೂರು ಹುಲಿಯ ಗುಹೆಗೆ ನುಗ್ಗಿ ದೊರೆಗಳನ್ನು ಬಿಡಿಸಿ ಕೊಂಡು ಬರಬಹುದೆಂದೇ ಅವಳು ಭಾವಿಸಿದ್ದಳು.

ಆದರೆ ಆಕೆಯ ನಿರೀಕ್ಷೆಯನ್ನು ವ್ಯರ್ಥಗೊಳಿಸುವಂಥ ಸಮಾಚಾರ ವೊಂದು ಕೆಲದಿನಗಳಲ್ಲಿಯೇ ಬಂದು ಮುಟ್ಟಿತು. ಗುರುಸಿದ್ಧಪ್ಪ ವೀರ ಸಂಗಪ್ಪರ ಪ್ರಯತ್ನಕ್ಕೆ ಯಶಸ್ಸು ಲಭಿಸಿರಲಿಲ್ಲ. ದೊರೆಗಳನ್ನು ಬಿಡಿಸಲು ಸಾಧ್ಯವಾಗದೆ ಅವರಿಬ್ಬರೂ ಹಿಂದಿರುಗಿ ಬಂದಿದ್ದರು.

ಆ ವಿಚಾರವಾಗಿ ಶೋಕಿಸುತ್ತ ಕುಳಿತುಕೊಳ್ಳದೆ ರುದ್ರಮ್ಮಾಜಿ ಮುಂದಿನ ಯೋಚನೆಗೆ ಮೊದಲುಮಾಡಿದಳು. ತಲ್ಲೂರಿಗೆ ಬಂದು ಭೆಟ್ಟಿ ಯಾಗಿ ಹೋಗಬೇಕೆಂದು ಗುರುಸಿದ್ಧಪ್ಪ–ವೀರಸಂಗಪ್ಪರಿಗೆ ಕರೆ ಹೋಯಿತು. ಶ್ರೀರಂಗಪಟ್ಟಣದಿಂದ ವಿಫಲರಾಗಿ ಬಂದಿದ್ದ ಆ ಸರದಾರರು ತಾವಿಬ್ಬರೇ ರಾಣಿಯನ್ನು ನೋಡಲು ನಾಚಿಕೊಂಡು, ತಿಮ್ಮನಗೌಡನನ್ನೂ ಜೊತೆಯಲ್ಲಿ ಕರೆದುತಂದರು.

"ದೊರೆಗಳನ್ನು ಬಿಡಿಸಲು ವಿಶ್ವಪ್ರಯತ್ನ ಮಾಡಿದರೂ ಶಕ್ಯವಾಗ ಲಿಲ್ಲ ಅವ್ವನವರೆ. ತಮಗೆ ಈ ಹಾಳು ಮೋರೆಯನ್ನಾದರೂ ಹ್ಯಾಗೆ ತೋರಿಸು

ವದು ಅಂತ ಇಷ್ಟು ದಿನ ಬರಲಿಲ್ಲ. ಕ್ಷಮಿಸಬೇಕು," ಎಂದ ಗುರುಸಿದ್ಧಪ್ಪ.

"ನಿಮ್ಮ ಕರ್ತವ್ಯ ನೀವು ಮಾಡಿದ್ದೀರಿ. ಈ ಸಲ ಕಾರ್ಯಸಾಧಿಸಲಿಲ್ಲ. ಅದಕ್ಕಾಗಿ ಹಳಹಳಿಸುವದು ಬೇಡ. ಮುಂದಿನ ವಿಚಾರ ಮಾಡೋಣ," ಎಂದರು ದೇಸಾಯರು.

"ದೊರೆಗಳನ್ನು ಬಿಡಿಸಬೇಕಾದದ್ದೇ ಮೊದಲನೆಯ ಕೆಲಸವಲ್ಲವೇ ದೇಸಾಯರೆ? ಆ ರಾಕ್ಷಸನ ಸೆರೆಮನೆಯಲ್ಲಿ ಅವರನ್ನು ಹೆಚ್ಚು ದಿನ ಬಿಡುವಂತಿಲ್ಲ," ಎಂದ ವೀರಸಂಗಪ್ಪ.

"ದೊರೆಗಳಿನ್ನೂ ಶ್ರೀರಂಗಪಟ್ಟಣದಲ್ಲೇ ಇದಾರೆಯೆ?"

"ಇಲ್ಲ ಅಪ್ಪನವರೆ. ಮೊನ್ನೆಮೊನ್ನೆಯೇ ಅವರನ್ನು ಕಪಾಳದುರ್ಗಕ್ಕೆ ರವಾನೆ ಮಾಡಿದರೆಂದು ಕೇಳಿದೆವು."

"ಕಪಾಳದುರ್ಗ ಅಂದರೆ ಎಲ್ಲಿದೆ?"

"ಶ್ರೀರಂಗಪಟ್ಟಣದ ದಕ್ಷಿಣಕ್ಕೆ ಸ್ವಲ್ಪ ದೂರದಲ್ಲಿದೆ. ಬಹಳ ಭದ್ರವಾದ ಕೋಟೆಯಂತೆ. ಅಲ್ಲಿಂದ ಇಲ್ಲಿಂದ ಹಿಡಿದು ತಂದ ಮುಖ್ಯ ಮುಖ್ಯ ಜನರನ್ನು ಬಂಧನದಲ್ಲಿಡಲಿಕ್ಕೆಂದೇ ಟೀಪು ಆ ದುರ್ಗವನ್ನುಪಯೋಗಿಸುತ್ತಿರುವನಂತೆ."

"ದೊರೆಗಳ ಸಂಗಡ ಬೇರೆ ಯಾರ್ಯಾರು ಇದ್ದಾರೆಂಬುದೇನಾದರೂ ಗೊತ್ತಾಯಿತೇ?"

"ಮಡಿವಾಳನೊಬ್ಬ ಇದ್ದಾನೆ ಅನ್ನುವದು ಖಾತ್ರಿ. ಉಳಿದವರ ಗತಿಯೇನಾಯಿತೊ ತಿಳಿಯಲಿಲ್ಲ. ಗುರುನಾಥಪಂತರನ್ನೂ ಅವರ ತಮ್ಮ ತಿಮ್ಮಾಜಿ ಪಂತರನ್ನೂ ನಾವಲ್ಲಿ ಇದ್ದಾಗಲೇ ಗಲ್ಲಿಗೇರಿಸಿದರು."

"ಶಿವ! ಶಿವ! ಶಿವ!" ಎಂದು ಉದ್ಗಾರ ತೆಗೆದು ಕೊಂಚ ಹೊತ್ತು ಮೌನವಾಗಿದ್ದು ದೇಸಾಯರೆಂದರು:

"ಅವರ ಆತ್ಮಕ್ಕೆ ಶಾಂತಿ ಸಿಗಲಿ, ಪಾಪ. ಯಾವದೋ ಆಸೆಯಿಂದ ಏನೋ ಮಾಡಹೋದರು. ತಾನೊಂದು ಬಗೆದರೆ ದೈವವೊಂದು ಬಗೆಯಿತು ಅಂದ ಹಾಗೆ ಅವರಿಗೆ ದುರ್ಮರಣವೇ ಗತಿಯಾಯಿತು. ಅವರ ಕುಟುಂಬದವರಿಗೆ ಈ ಸುದ್ದಿ ತಿಳಿಸಿದಿರಾ ಸರದಾರರೆ?"

"ಅವರಿಗೆಲ್ಲಾ ಆಗಲೇ ಗೊತ್ತಾಗಿದೆ. ಪಾಪ. ಆ ಹೆಂಗಸರು ಮಕ್ಕಳ

ಗೋಳು ನೋಡಲಿಕ್ಕಾಗುವದಿಲ್ಲ. ಆದರೂ ಈಗ ಯಾರೇನೂ ಮಾಡು ವಂತಿಲ್ಲವಲ್ಲ ದೇಸಾಯರೆ?"

"ದಿವಾನರ ಕುಟುಂಬದವರಿಗೆ ಅಷ್ಟು ಹಣ ಕಳಿಸಿಕೊಡಬೇಕು. ಅವರು ನಿರ್ಗತಿಕರಾಗಬಾರದು."

"ಅವರಿಗೆ ಹಣದ ಕೊರತೆಯೇನಿಲ್ಲ ಅಪ್ಪನವರೆ. ಮನೆಯಲ್ಲಿ ಲಕ್ಷ್ಮಿ ಕಾಲು ಮುರಿದುಕೊಂಡು ಬಿದ್ದಿದ್ದಾಳೆ. ಅವರ ಮನೆತನಕ್ಕೆ ಎರಡು ಹಳ್ಳಿ ಗಳೇ ಜಾಗೀರಾಗಿ ಇವೆಯಲ್ಲ?"

ಊಟ ನಡೆದಿದ್ದಾಗ ಗುರುಸಿದ್ಧಪ್ಪ ಶ್ರೀರಂಗಪಟ್ಟಣದ ತಮ್ಮ ಅನು ಭವವನ್ನೆಲ್ಲ ನಿವೇದಿಸಿದ.

"ಕೋಟೆಯಲ್ಲಿ ಅಪರಿಚಿತರಾರನ್ನೂ ಬಿಡದಂತೆ ಸುಲ್ತಾನ ಕಟ್ಟಪ್ಪಣೆ ಮಾಡಿರುವನಂತೆ. ಏಳೆಂಟು ದಿನಗಳ ವರೆಗೂ ನಾವು ಪರಿಪರಿಯಾಗಿ ಯತ್ನಿ ಸಿದರೂ ಕೋಟೆಯಲ್ಲಿ ಪ್ರವೇಶ ದೊರಕಿಸಲಾಗಲಿಲ್ಲ. ಫಕೀರರ ವೇಷದಿಂದ ಹೋದರೆ ಒಳಗೆ ಬಿಡಬಹುದೆಂದು ಯಾರೋ ಹೇಳಿದರು. ಆದರೆ ನನಗೂ ಮುಸಸ್ಮಾನಿ ಭಾಷೆ ಮಾತಾಡಲು ಬರುವದಿಲ್ಲ. ವೀರಸಂಗಪ್ಪನವರಿಗೂ ಬರುವದಿಲ್ಲ. ಕಾವಲುಗಾರರು ಮುಸಲ್ಮಾನಿಯಲ್ಲೇ ಮಾತಾಡುವವರು. ನಮ್ಮ ಗುಟ್ಟು ಸುಲಭವಾಗಿ ಹೊರಬೀಳಬಹುದು ಅಂತನ್ನಿಸುತ್ತಲೂ ಆ ವಿಚಾರವನ್ನೂ ಬಿಟ್ಟುಕೊಟ್ಟೆವು. ಒಳಗೆ ಹೋಗಲು ಉಪಾಯವೇನೆಂತ ಹುಡುಕುತ್ತಿದ್ದಾಗಲೇ ಒಂದು ದಿನ ಸುದ್ದಿ ಗೊತ್ತಾಯಿತು—ದೊರೆಗಳನ್ನು ಕಪಾಳದುರ್ಗಕ್ಕೆ ಸಾಗಿಸಿದರು ಅಂತ. ಅಲ್ಲಿಗೂ ಹೋಗಿ ಪ್ರಯತ್ನಿಸಬೇಕೆಂ ದರೆ ಹತ್ತಿಪ್ಪತ್ತು ಮಂದಿಯಷ್ಟೇ ಹೋಗುವದರಿಂದ ಉಪಯೋಗವಿಲ್ಲವೆಂದು ಗೊತ್ತಾಯಿತು. ದೊರೆಗಳನ್ನು ಬಿಡಿಸಲು ದೊಡ್ಡ ಪ್ರಮಾಣದಲ್ಲೇ ಪ್ರಯತ್ನ ನಡೆಯಬೇಕು. ಸಣ್ಣಪುಟ್ಟ ಪ್ರಯತ್ನಗಳಿಂದ ಫಲವಿಲ್ಲ"

"ಕಪಾಳದುರ್ಗಕ್ಕೆ ಹೋಗಬೇಕಾದರೆ ಟೀಪೂನ ರಾಜ್ಯದಲ್ಲೇ ಹಾದು ಹೋಗ ಬೇಕಾಗ್ತದೆ. ವೈರಿಗಳಿಗೆ ಸಂಶಯ ಬರದಂತೆ ಸಾವಿರಾರು ಸೈನಿಕರು ಅಲ್ಲಿಯತನಕ ಹೋಗುವದೇ ಕಷ್ಟದ ಕೆಲಸ. ಆದರೂ ನಾವು ಪ್ರಯತ್ನ ಮಾಡಲೇಬೇಕು. ದುರ್ಗಾಧಿಕಾರಿ ಎಂಥವನಿರುವನೆಂದು ತಿಳಿದುಕೊಂಡು ಲಂಚದಿಂದ ಕೆಲಸ ಸಾಧಿಸಿದರೆ ನೋಡಬೇಕು. ಆದಕ್ಕೆಲ್ಲ ತಯಾರಿ ಮಾಡಿ ಕೊಂಡೇ ಹೋಗಬೇಕು," ಎಂದ ವೀರಸಂಗಪ್ಪ.

" ಅತ್ತ ಕೆಲವರು ಆ ಪ್ರಯತ್ನವನ್ನೂ ನಡಸಬೇಕು. ಇತ್ತ ಯುದ್ಧದ ತಯಾರಿಯೂ ಆಗಬೇಕು," ಎಂದಳು ರುದ್ರಮ್ಮಾಜಿ. " ಮೊದಲು ಕಿತ್ತೂರ ಕೋಟೆಯನ್ನು ನಾವು ಮತ್ತೆ ವಶಪಡಿಸಿಕೊಳ್ಳಬೇಕು. ಮುಂದೆ ಎಲ್ಲಾ ಸುಲಭವಾಗಬಹುದು."

" ಬುರ್ಹಾನುದ್ದೀನನಂತೂ ಧಾರವಾಡಕ್ಕೆ ಹೋಗಿಬಿಟ್ಟ. ಈಗ ಕಿತ್ತೂರಲ್ಲಿ ಜಮಾನಖಾನನೊಬ್ಬನೇ ಇದಾನೆ. ಆದರೂ ಅಲ್ಲಿ ಮೈಸೂರ ಸೈನ್ಯ ಸಾಕಷ್ಟಿದೆ. ತೋಫುಗಳೂ ಇವೆ—ನಮ್ಮ ಕೈಯಲ್ಲಿ ತೋಫುಗಳಿದ್ದರೆ ದಾಳಿ ಮಾಡುವದು ಸುಲಭ!" ಎಂದ ತಿಮ್ಮನಗೌಡ.

ಯುದ್ಧದ ಸಿದ್ಧತೆಯ ಬಗೆಗೆ ತಲ್ಲೂರಿನಲ್ಲಿ ಆಪ್ತಾಲೋಚನೆ ನಡೆದಿದ್ದಂತೆಯೇ ಒಂದು ದಿನ, ಕಿತ್ತೂರಿನ ಕೋಟೆಯಲ್ಲಿ ಸೆರೆಯಲ್ಲಿದ್ದ ಚಿಂತೋಪಂತ, ವಿರೂಪಾಕ್ಷಪಂತ, ರಾಳಪ್ಪ ಖಾಸನೀಸ ಮೊದಲಾದ ಪ್ರಮುಖರು ತಪ್ಪಿಸಿಕೊಂಡು ಹೋಗಿರುವರೆಂಬ ವರ್ತಮಾನ ಬಂದಿತು. ಕಿತ್ತೂರಿನ ಅರಸಿಯನ್ನು ಭೆಟ್ಟಿಯಾಗಲು ಅವರು ತಲ್ಲೂರಿಗೇ ಬರಬಹುದೆಂದು ಭಾವಿಸಿ ಎಲ್ಲರೂ ಅವರ ಮಾರ್ಗಪ್ರತೀಕ್ಷೆ ಮಾಡತೊಡಗಿದರು. ಆದರೆ ಎಂಟು ಹತ್ತು ದಿನಗಳು ಕಳೆದರೂ ಅವರಾರೂ ಅತ್ತ ಸುಳಿಯಲಿಲ್ಲ.

" ಅವರೆಲ್ಲಾ ಎಲ್ಲಿಗೆ ಹೋಗಿರಬಹುದು ಅಂತೀರಿ ನಾಯಕರೆ?" ಎಂದ ಗುರುಸಿದ್ಧಪ್ಪ.

" ಎಲ್ಲಾದರೂ ಅಡಗಿಕೊಂಡಿರಬಹುದು. ತಲ್ಲೂರಿಗೆ ಬರಲೂ ಅಂಜಿಕೊಂಡಿರಬೇಕು. ರಾಣಿಯವರಿಲ್ಲಿ ಇರುವ ಸಂಗತಿ ವೈರಿಗಳಿಗೂ ಗೊತ್ತಿದೆಯಲ್ಲ? ಇಲ್ಲ ಅವುಗಳು ಸುಳಿದಾಡುತ್ತಿರಬಹುದು, ಇತ್ತ ಬಂದರೆ ಸುಲಭವಾಗಿ ಅವರ ಕೈಗೆ ಸಿಗಬಹುದಲ್ಲಾ ಅಂತ ಹೆದರಿ ಅಲ್ಲೇ ಎಲ್ಲೊ ತಲೆ ಮರೆಸಿಕೊಂಡು ಇರಬಹುದು."

" ಅಥವಾ ಯಾರಿಗೆ ಗೊತ್ತು ! ಈಗಾಗಲೇ ಅವರು ಮಿರಜಿಗೂ ಹೋಗಿರಬಹುದು, ಪಟವರ್ಧನರ ಹತ್ತರ, ಎಂದ ವೀರಸಂಗಪ್ಪ.

" ಚಿಂತೋಪಂತನೂ ಬಹಳ ಮಹತ್ವಾಕಾಂಕ್ಷಿ. ಕಿತ್ತೂರಿನ ದಿವಾನಗಿರಿ ಗುರುನಾಥಪಂತನಿಗೆ ಹೋಗುವದನ್ನ ತಪ್ಪಿಸಿ ತಾನೇ ಅದನ್ನ ಹೊಡೆದುಕೊಳ್ಳಬೇಕಂತ ಅವನೂ ಪ್ರಯತ್ನಿಸಿದ್ದನಲ್ಲ? ಆಗ ಅವನ ಆಸೆ ನಡೆಯ

ಲಿಲ್ಲ. ಈ ಸಲವಾದರೂ ಸಮಯ ಸಾಧಿಸಿ ದಿವಾನಗಿರಿ ಹಿಡಿದುಕೊಂಡೇ ಬಿಡಬೇಕು ಅಂತ ನಿಶ್ಚಯ ಮಾಡಿ ಮಿರಜಿಗೆ ಓಡಿರಬೇಕು ಧೂರ್ತ!" ಎಂದ ಗುರುಸಿದ್ಧಪ್ಪ.

"ಕಿತ್ತೂರಿನ ದೊರೆಗಳಿಗಿಂತ ಇವರಿಗೆ ಮಿರಜಿಯ ಪಟವರ್ಧನರ ಮೇಲೆ ಹೆಚ್ಚು ಭಕ್ತಿ. ಅವರೇ ಇವರ ಮಾಲಕರು! ಇಂಥವರಿಗೆ ನಾವು ಆಸರೆಯನ್ನೇ ಕೊಡಬಾರದಂತ ನನ್ನ ಅಭಿಪ್ರಾಯ. ಆ ಗುರುನಾಥಪಂತ ನಿಂದಲೇ ನಮಗೆಲ್ಲಾ ಇಂಥಾ ಗತಿ ಬಂದದ್ದು. ಇನ್ನು ಈ ಚಿಂತೋ ಪಂತ ದಿವಾನನಾದ ಅಂದರೆ ಮತ್ತೂ ಇಂಥಾದ್ದೇ ಸಂಕಟ ಖಂಡಿತ" ಎಂದ ವೀರಸಂಗಪ್ಪ.

"ಅದೆಲ್ಲಾ ಮುಂದಿನ ಮಾತು ಸರದಾರರೆ. ಈಗ ನಾವು ಆ ವಿಚಾರ ವನ್ನೆಲ್ಲಾ ತಲೆಯಲ್ಲಿ ಹಾಕಿಕೊಂಡು ಕೂಡಬಾರದು. ಪೇಶ್ವೆ ಪಟವರ್ಧ ನರ ಸಹಾಯ ಸಿಗದಿದ್ದರೆ ನಾವು ಕಿತ್ತೂರು ವಶಪಡಿಸಿಕೊಳ್ಳುವದು ಕಠಿಣ ಅನ್ನುವದನ್ನ ಮರೆಯಬಾರದು," ಎಂದರು ದೇಸಾಯರು.

ಮತ್ತೊಂದು ತಿಂಗಳು ಕಳೆದ ಬಳಿಕ ಒಂದು ರಾತ್ರೆ ಚಿಂತೋಪಂತ– ವಿರೂಪಾಕ್ಷ ಇಬ್ಬರೂ ತಲ್ಲೂರಿಗೆ ಬಂದು ದೇಸಾಯರನ್ನು ಕಂಡರು. ಅವರ ಸ್ಥಾನಮಾನಗಳಿಗೆ ಉಚಿತವಾದ ಮರ್ಯಾದೆಯಿಂದಲೇ ಅವರನ್ನು ಬರಮಾಡಿಕೊಂಡು ಸತ್ಕರಿಸಿ ದೇಸಾಯರು ಹೇಳಿದರು: "ನೀವು ಬಿಡುಗಡೆ ಹೊಂದಿದ ಸುದ್ದಿ ನಮಗಾಗಲೇ ತಿಳಿದಿತ್ತು. ಇಂದು ನಾಳೆ ನೀವು ಇಲ್ಲಿಗೆ ಬರಬಹುದೆಂದೂ ಅನ್ನಿಸಿತ್ತು. ಇಷ್ಟು ದಿನ ಎಲ್ಲಿದ್ದಿರಿ? ನಿಮ್ಮ ಮನೆಯವರ ಭೆಟ್ಟಿಯಾಗಿತ್ತೇ? ಅವರೆಲ್ಲಾ ಕ್ಷೇಮವೆ?"

"ದೇವರ ದಯದಿಂದ ಅವರಿಗೇನೂ ಸಂಕಟ ಬರಲಿಲ್ಲ ದೇಸಾಯರೆ. ನಾವು ಬಿಡುಗಡೆ ಹೊಂದಿ ಪಾರಾದ ಬಳಿಕ ಅವರೂ ಕಿತ್ತೂರಿನಿಂದ ಹೊರಟು ಈಗ ಪಟವರ್ಧನರ ಸೀಮೆಯಲ್ಲಿ ಸುರಕ್ಷಿತವಾಗಿದಾರೆ. ಅವರಿಗೆಲ್ಲಾ ವ್ಯವಸ್ಥೆ ಮಾಡಿಕೊಟ್ಟು ಇಲ್ಲಿಗೆ ಬಂದೆವು."

"ನೀವು ಬಂದದ್ದು ಬಹಳ ಒಳ್ಳೆಯದಾಯಿತು. ನಿಮ್ಮಂಥ ಸರ ದಾರರ ಬೆಂಬಲದಿಂದಲೇ ಕಿತ್ತೂರು ಬೆಳೆದು ಬಂದದ್ದು. ಈಗಲೂ ನಿಮ್ಮಿಂ ದಲೇ ಅದರ ಸಂಕಟ ನಿವಾರಣೆಯಾಗಬೇಕು."

"ನಾವು ಸೈನಿಕರೂ ಅಲ್ಲ, ದಳವಾಯಿಗಳೂ ಅಲ್ಲ. ಕತ್ತಿ ಹಿಡಿದು ಯುದ್ಧ ಮಾಡುವದೂ ನಮಗೆ ಸಾಧಿಸುವದಿಲ್ಲ. ಏನಿದ್ದರೂ ನಮ್ಮದು ಬುದ್ಧಿ ಬಲದ ಕೆಲಸ. ಅಂಥಾದ್ದು ಏನುಮಾಡುವದಿದ್ದರೂ ಅಪ್ಪಣೆಯಾದರೆ ನಮ್ಮ ಕೈಲಾದ ಮಟ್ಟಿಗೆ ಮಾಡುತ್ತೇವೆ," ಎಂದು ಚಿಂತೋಪಂತ ವಿನಯದಿಂದಲೇ ಹೇಳಿದ.

ಮಿರಜ ಮತ್ತು ಪುಣ್ಯಪಟ್ಟಣಗಳಿಗೆ ಹೋಗಿ ಪಟವರ್ಧನರನ್ನೂ ಪೇಶವೆಯವರನ್ನೂ ಕಂಡು ಕಿತ್ತೂರಿಗೆ ಸಹಾಯ ದೊರಕಿಸುವ ಕೆಲಸವನ್ನು ಅವರಿಗೊಪ್ಪಿಸಿದುದಾಯಿತು. ಒಂದು ಶುಭಮುಹೂರ್ತದಂದು ಅವರಿಬ್ಬರೂ ಮಿರಜದ ಕಡೆಗೆ ಪಯಣ ಬೆಳೆಸಿದರು. ಇತ್ತ, ಕಿತ್ತೂರು ಸೀಮೆಯ ಬೇರೆ ಬೇರೆ ಹಳ್ಳಿಗಳಲ್ಲಿ ಗುಪ್ತರೀತಿಯಿಂದ ಸಮರಸಿದ್ಧತೆ ನಡೆಯತೊಡಗಿತು.

೧೪

ನೊಗವನ್ನೆಳೆಯುತ್ತ ಎಳೆಯುತ್ತ ಕನಸಿನಲ್ಲಿದ್ದವರ ಹಾಗೆ ಮುಂದೆ ಸಾಗುತ್ತಿದ್ದ ಮಲ್ಲಸರ್ಜ. ಹೆಗಲಮೇಲೆ ಅಷ್ಟು ಭಾರ ಬಿದ್ದಿದ್ದರೂ ಅದರ ಅರಿವು ಅವನಿಗಿದ್ದ ಹಾಗಿರಲಿಲ್ಲ. ತಾನು ಹವೆಯ ತರಂಗಗಳ ಮೇಲೆ ತೇಲುತ್ತ ನಡೆದಿದ್ದಂತೆ ಅವನಿಗೆ ಭಾಸವಾಗುತ್ತಿತ್ತು. ನಡೆಯುತ್ತಿದ್ದು ದೆಲ್ಲವೂ ಸ್ವಪ್ನವೇ ಆಗಿರಲು ಸಾಕು. ವಾಸ್ತವವಾಗಿ ಅಂಥದೆಲ್ಲಾ ನಡೆಯಲು ಸಾಧ್ಯವೆಂಬುದನ್ನು ನಂಬುವುದೇ ಕಷ್ಟವಾಗಿತ್ತು. ಕಪಾಳದುರ್ಗಕ್ಕೆ ಬಂದು ಬಿದ್ದಂದಿನಿಂದ ಅಲ್ಲಿನ ವಿಲಕ್ಷಣ ಭೀಕರ ದೃಶ್ಯಗಳನ್ನು ನೋಡಿ ನೋಡಿ ಅನುಭವಿಸಿ ಅವನ ಸಂವೇದನ ಶಕ್ತಿಯೇ ಕುಂಠಿತವಾಗಿತ್ತು. ರಾಜಕೀಯ ಕೈದಿಗಳನ್ನು ಅಂಥ ಅಮಾನುಷರೀತಿಯಿಂದ ನಡಸಿಕೊಳ್ಳುವುದನ್ನು ಆತ ಹಿಂದೆಂದೂ ಕಂಡಿರಲಿಲ್ಲ, ಕೇಳಿರಲಿಲ್ಲ. ಟೀಪುವಿನ ಬಂದೀಖಾನೆಯಾದ ಆ ದುರ್ಗದಲ್ಲಿ ಮಾತ್ರ ಜೀವನದಲ್ಲಿ ಮೊದಲುಬಾರಿ ಆತ ಅಪೂರ್ವ ದೃಶ್ಯಗಳನ್ನು ನೋಡುತ್ತಿದ್ದ, ಅನುಭವಿಸುತ್ತಿದ್ದ. ಕೈದಿಗಳಿಗೆ ಚಿತ್ರಹಿಂಸೆ ಕೊಡಲು ದುರ್ಗದ ಅಧಿಕಾರಿಗಳು ನವನವೀನ ಉಪಾಯಗಳನ್ನು ಹುಡುಕಿ ತೆಗೆದಿದ್ದರು. ಆ ಹಿಂಸೆಯನ್ನೆಲ್ಲ ಸೆರೆಯಾಳುಗಳು ಮೂಕನಾಗಿ

ಸಹಿಸಬೇಕಾಗುತ್ತಿತ್ತು. ಅವರು ದೂರಿಕೊಳ್ಳುವುದಾದರೂ ಯಾರ ಎದುರು? ಅಲ್ಲಿದ್ದ ಎಲ್ಲಾ ಕೈದಿಗಳ ಮೇಲೂ ದುರ್ಗಾಧಿಕಾರಿಯದೇ ಸರ್ವಾಧಿಕಾರ. ಸೆರೆಮನೆಯ ಮೇಲ್ವಿಚಾರಣೆಗೆಂದು ರಾಜಧಾನಿಯಿಂದ ಹಿರಿಯ ಅಧಿಕಾರಿಗಳು ಬರುತ್ತಿದ್ದುದೂ ಎಂದೋ ಒಂದು ಬಾರಿ. ಹಾಗೆ ಬಂದವರು ಕತ್ತಲ ಕೋಣೆಗಳೆದುರಿನಿಂದ ಒಂದು ಬಾರಿ ಹಾದು ಹೋಗುತ್ತಿದ್ದರು, ಅಷ್ಟೆ. ಕೈದಿಗಳು ಅವರನ್ನು ಮಾತನಾಡಲು ಯತ್ನಿಸಿದರೆಂದರೆ ಅವರಿಗೆ ಕ್ರೂರವಾದ ಶಿಕ್ಷೆ ಕಟ್ಟಿಟ್ಟಂತೆಯೇ. ಎಂತಲೇ ಯಾರೊಬ್ಬರೂ ಅಂಥ ದುಸ್ಸಾಹಸಕ್ಕೆ ಪ್ರವೃತ್ತರಾಗುತ್ತಿರಲಿಲ್ಲ.

ದುರ್ಗದಲ್ಲಿನ ಹೊಲ ಗದ್ದೆ, ತೋಟ ಪಟ್ಟಿಗಳ ಕೆಲಸವೆಲ್ಲವನ್ನೂ ಪೂರ್ತಿಯಾಗಿ ಕೈದಿಗಳಿಂದಲೇ ಮಾಡಿಸಲಾಗುತ್ತಿತ್ತು. ನಾಲ್ಕು ಎತ್ತುಗಳಿಂದಲೂ ಎಳೆಯಲಾಗದಂಥ ಭಾರಿ ನೇಗಿಲನ್ನು ಇಬ್ಬರು ಕೈದಿಗಳೇ ಎಳೆಯಬೇಕಾಗುತ್ತಿತ್ತು. ನೊಗಕ್ಕೆ ಎತ್ತು ಹೂಡುವಂತೆ ಕೈದಿಗಳನ್ನು ಹೂಡಿ, ಅವರ ಕೊರಳಿಗೆ ಪಟ್ಟಿ ಬಿಗಿದು, ಎತ್ತುಗಳನ್ನು ಥಳಿಸುವಂತೆಯೇ ಅವರನ್ನು ಮತ್ತೆ ಮತ್ತೆ ಬಾರಕೋಲಿನಿಂದ ಥಳಿಸುತ್ತ ಕೆಲಸ ಮಾಡಿಸಲಾಗುತ್ತಿತ್ತು. ದೇಶೀಯ ಕಾವಲುಗಾರರಿಂದ ಅಂಥ ಕ್ರೂರ ಕೆಲಸವಾಗಲಾರದೆಂಬುದನ್ನರಿತು ಆದಕ್ಕೆಂದೇ ತಮ್ಮ ತಾಯಿನುಡಿಯಲ್ಲಿ ಕೈದಿಗಳನ್ನು ಬಯ್ಯುತ್ತಾ ಅವರು ಪಶುಗಳನ್ನು ನಡಸಿಕೊಳ್ಳುವಂತೆಯೇ ಈ ಮಾನವ ಕೈದಿಗಳನ್ನು ನಡಸಿಕೊಳ್ಳುತ್ತಿದ್ದರು. ಮಾನವಸಹಜ ಗುಣಗಳಾದ ದಯೆ—ಕನಿಕರ—ಸಹಾನುಭೂತಿ ಯಾವುದಕ್ಕೂ ಆ ದುರ್ಗದಲ್ಲಿ ಎಡೆಯಿರಲಿಲ್ಲ.

ಕಪಾಳದುರ್ಗಕ್ಕೆ ಬಂದ ಮೊದಲ ದಿನವೇ ಮಲ್ಲಸರ್ಜನಿಗೆ ಅಲ್ಲಿನ ಕ್ರೂರ ವಾತಾವರಣದ ಪರಿಚಯವಾಗಿತ್ತು. ದುರ್ಗಾಧಿಕಾರಿಯ ಕೋಣೆಯಲ್ಲಿ ಅವರ ಬಟ್ಟೆಗಳನ್ನೆಲ್ಲ ತೆಗೆಯಿಸಿ ನಗ್ನವಾಗಿಸಿ, ಅವರು ಗುಪ್ತವಾಗಿ ಇಟ್ಟುಕೊಂಡಿರಬಹುದಾದ ವಸ್ತುಗಳಿಗಾಗಿ ಪರೀಕ್ಷೆ ನಡೆದಾಗಲೇ ಹಿಂಸೆಗಾರಂಭವಾಗಿತ್ತು.

ಅಂಗಸಾಧನೆಯಿಂದ ಹುರಿಗೊಂಡು ಪುಷ್ಟವಾಗಿ ಬೆಳೆದಿದ್ದ ಮಲ್ಲಸರ್ಜ ಮತ್ತು ಮಡಿವಾಳರ ಬಲಶಾಲಿ ಮೈಕಟ್ಟನ್ನು ವೀಕ್ಷಿಸುತ್ತಲಿದ್ದ ಕಾವಲುಗಾರರು ಕೈಯಲ್ಲಿದ್ದ ಆಯುಧಗಳಿಂದ ಬೇಕೆಂತಲೇ ಅವರನ್ನು ತಿವಿದಿದ್ದರು.

ಎರಡೂ ಕೈಗಳಿಗೆ ಸಂಕೋಲೆ ಹಾಕಿ ಬಿಗಿದಿದ್ದುದರಿಂದ ಕೈದಿಗಳು ಪ್ರತೀಕಾರ ಮಾಡಲು ಸಾಧ್ಯವಿರಲಿಲ್ಲ. ಆದರೂ, ಉಕ್ಕಿಬಂದ ರೋಷವನ್ನು ತಡೆದುಕೊಳ್ಳಲಾಗದೆ ಮಡಿವಾಳ ಕಾವಲುಗಾರರ ಮುಖದ ಮೇಲೆ ಉಗುಳಿದ್ದ. ರಾಜಮನೆತನದ ಶಿಸ್ತಿನಲ್ಲಿ ಬೆಳೆದು ಬಂದಿದ್ದ ಮಲ್ಲಸರ್ಜ ಮಾತ್ರ ಅಂಥ ಸ್ಥಿತಿಯಲ್ಲೂ ತನ್ನ ಗಾಂಭೀರ್ಯವನ್ನು ತ್ಯಜಿಸದೆ ಸಮಾಧಾನದಿಂದಲೇ ನಿಂತುಕೊಂಡಿದ್ದ. ಮಡಿವಾಳನಲ್ಲಿ ಪ್ರತಿಭಟನೆಯ ಪ್ರವೃತ್ತಿಯಿದ್ದುದನ್ನು ಆಗಲೇ ಕಂಡುಕೊಂಡ ಅಧಿಕಾರಿಗಳು ಅಂದಿನಿಂದ ಅವನಿಗಾಗಿಯೇ ವಿಶೇಷವಾದ ಹಿಂಸೆಯನ್ನು ಮೀಸಲಾಗಿಸಿದ್ದರು. ಅವನು ಸ್ವಲ್ಪ ಕೆಮ್ಮಿದರೂ ಕೂಡಾ ಚಬಕದೇಟು ಬೀಳುತ್ತಿತ್ತು. ಚರ್ಮವನ್ನು ಸುಲಿದು ನೆತ್ತರುಕ್ಕಿಸುವಂಥ ತೀಕ್ಷ್ಣ ಧಾರೆಯ ಚಬಕದಿಂದ ಹೊಡೆತ ತಿಂದು ತಿಂದು ಮಡಿವಾಳನ ಮೈಯೆಲ್ಲವೂ ಗಾಸಿಯಾಗಿತ್ತು.

" ಪ್ರತಿಭಟನೆಯಿಂದ ಉಪಯೋಗವೇನೂ ಆಗುವಂತಿಲ್ಲ ಮಡಿವಾಳಾ. ಈ ಕಾವಲುಗಾರರಿಗೆ ಮನುಷ್ಯತ್ವವೆಂಬುದೇ ಇಲ್ಲವೆಂಬುದಂತೂ ಎಂದೋ ಗೊತ್ತಾಗಿದೆ. ಪಶುಗಳನ್ನು ನಡಸಿಕೊಳ್ಳುವ ಹಾಗೇ ಇವರು ನಮ್ಮನ್ನೂ ನಡಸಿಕೊಳ್ಳುತ್ತಾರೆ. ಇರಿಯಲು ಬರುವ ಹೋರಿಯನ್ನು ಭಯಂಕರವಾಗಿ ಹೊಡೆದು ಅದರ ಶಕ್ತಿಯನ್ನು ತಗ್ಗಿಸುವದಿಲ್ಲವೇ? ಇಲ್ಲಿ ನಡೆಯುುವದೂ ಹಾಗೇ. ಮನುಷ್ಯನ ಚಬಕದೆದುರು ಎಂಥ ಹೋರಿಯಾದರೂ ಏನು ಮಾಡಬಲ್ಲದು? ಒಂದೆರಡು ಸಲ ಪ್ರತಿಭಟಿಸುತ್ತದೆ, ಆದರಿಂದ ಉಪಯೋಗವಿಲ್ಲವೆಂದು ಗೊತ್ತಾದ ಮೇಲೆ ಸುಮ್ಮನಾಗುತ್ತದೆ. ನಾವೂ ಹಾಗೇ ಇರಬೇಕು," ಎಂದು ಮಲ್ಲಸರ್ಜ ಮತ್ತೆ ಮತ್ತೆ ಬೋಧಿಸುತ್ತಿದ್ದ. ಅವರಿಬ್ಬರನ್ನೂ ಒಂದೇ ಕೋಣೆಯಲ್ಲಿಟ್ಟಿದ್ದುದೂ ಒಂದು ಸಮಾಧಾನದ ಸಂಗತಿಯೇ ಆಗಿತ್ತು. ಬೆಳಗಿನಿಂದ ರಾತ್ರಿಯವರೆಗೆ ಜೀವ ಹಣ್ಣಾಗುವಂತೆ ದುಡಿದು ಕತ್ತಲಾದ ಮೇಲೆ ಕೋಣೆಗೆ ಬಂದ ಬಳಿಕ ಪರಸ್ಪರ ಸಹವಾಸದಲ್ಲಿ ಧೈರ್ಯ ತಂದುಕೊಳ್ಳಲು ಯತ್ನಿಸುತ್ತಿದ್ದರು.

" ಇಂಥಾ ಸೆರೆಮನೆ ಈ ಜಗತ್ತಿನಲ್ಲಿ ಇನ್ನೆಲ್ಲೂ ಇರಲಿಕ್ಕಿಲ್ಲವೆಂದೇ ನನಗನಿಸ್ತದೆ. ಶ್ರೀರಂಗಪಟ್ಟಣದಲ್ಲೂ ಇಂಥಾದ್ದೇನೂ ಇರಲಿಲ್ಲ. ಇಲ್ಲಿ ಈ ಕಾವಲುಗಾರರು ನಡಸುವ ಕ್ರೂರತನ ಸುಲ್ತಾನನಿಗಾದರೂ ಗೊತ್ತಿದೆಯೊ ಇಲ್ಲೋ ಅಂತ ಅನುಮಾನ."

"ಅವನಿಗೆ ಗೊತ್ತಾದರೂ ಅಷ್ಟೆ, ಆಗದಿದ್ದರೂ ಅಷ್ಟೆ. ಕೈದಿಗಳನ್ನಿತ್ತ ಕಳಿಸಿದ ಬಳಿಕ ಅವರ ಬಗ್ಗೆ ಆತ ವಿಚಾರವನ್ನೇ ಇಟ್ಟುಕೊಳ್ಳುತ್ತಿರಲಿಕ್ಕಿಲ್ಲ."

"ಇಲ್ಲಿ ಇಂಥಾ ಹಿಂಸೆ ಅನುಭವಿಸುವದಕ್ಕಿಂತ ಒಂದೇ ಬಾರಿಗೆ ದೇಹಾಂತಶಿಕ್ಷೆ ಅನುಭವಿಸುವದೇ ಮೇಲಲ್ಲವೇ ಪ್ರಭು?"

"ದೇಹಾಂತಶಿಕ್ಷೆಗಿಂತಲೂ ಭಯಂಕರವಾದ ಶಿಕ್ಷೆಯನ್ನು ನಾವು ಅನುಭವಿಸಬೇಕೆಂದೇ ನಮ್ಮನ್ನಿಲ್ಲಿಗೆ ಕಳಿಸಿರಬೇಕು. ಬಂದದ್ದೆಲ್ಲಾ ಬರಲಿ ಅಂತ ಸಮಾಧಾನದಿಂದಿರಬೇಕು ಮಡಿವಾಳಾ. ಅವರಿಗೆ ಎದುರುಬಿದ್ದರೆ ಮತ್ತಷ್ಟು ಪೀಡಿಸುತ್ತಾರೆ. ಅವರಿಗೆ ಆ ಅವಕಾಶವನ್ನಾದರೂ ಯಾಕೆ ಕೊಡಬೇಕು?"

"ನಮ್ಮಲ್ಲಿ ಸ್ವಾಭಿಮಾನ ಸ್ವಲ್ಪವೂ ಇಲ್ಲವೆಂದೇ ಅವರು ತಿಳಿದಿದ್ದಾರೆ. ಅವರ ಹಿಂಸೆಯನ್ನೆಲ್ಲಾ ಸಹಿಸಿಕೊಂಡು ಹೇಗಾದರೂ ಸುಮ್ಮನಿರುವುದು ಪ್ರಭು? ಈ ಸಂಕೋಲೆಗಳನ್ನು ಮುರಿದುಹಾಕಿ ಒಂದು ಬಾರಿ ಅವರಿಗೆ ಚೆನ್ನಾಗಿ ಕೈತೋರಿಸಬೇಕೆಂದಿದ್ದೇನೆ."

"ಹಾಗೇನಾದರೂ ಮಾಡಿದರೆ ಅವರು ನಿನ್ನನ್ನು ಕೊಂದೇ ಹಾಕಿಯಾರು ಮಡಿವಾಳಾ. ಏನೋ ನಮಗೊಂದು ಕಾಡುವ ಕಾಲ ಬಂದಿದೆ. ಇದೇ ಕಾಲ ಕಡೆಯವರೆಗೂ ಇರಲಿಕ್ಕಿಲ್ಲ–ಗುರುಸಿದ್ಧೇಶನ ದಯದಿಂದ ಒಳ್ಳೆಯ ದಿನವೂ ಬರಬಹುದು. ಅದಕ್ಕಾಗಿ ಕಾಯುತ್ತಾ ಸುಮ್ಮನಿರಬೇಕು, ದುಡುಕಿದರೆ ಕೆಲಸ ಕೆಡುತ್ತದೆ."

ಹಾಗೆ ಉಪದೇಶಿಸಿ ಮಡಿವಾಳನನ್ನು ತಡೆಹಿಡಿದಿದ್ದ ಮಲ್ಲಸರ್ಜ— ಆದರೂ ಸಹ ಮಡಿವಾಳನಿಗೂ ಕಾವಲುಗಾರರಿಗೂ ಮತ್ತೆ ಮತ್ತೆ ಘರ್ಷಣೆಯಾಗುವುದು ತಪ್ಪಿರಲಿಲ್ಲ. ಹೊಡೆತ ತಿಂದು ತಿಂದು ರಕ್ತಮಯವಾದ ಶರೀರ ಹೊತ್ತು ಕೋಣೆಗೆ ಬಂದ ಮಡಿವಾಳನನ್ನು ಹಿತವಚನಗಳಿಂದ ಸಂತೈಸಿ ಅವನಿಗೆ ನಿದ್ದೆ ಬರುವಂತೆ ಮಾಡುತ್ತಿದ್ದ ಮಲ್ಲಸರ್ಜ.

ಬೆಳಗಿನಿಂದ ಸಂಜೆಯವರೆಗೂ ಅವರನ್ನು ದನಗಳಂತೆ ದುಡಿಸಿಕೊಳ್ಳಲಾಗುತ್ತಿದ್ದಿತಾದರೂ ಅವರಿಗೆ ಕೊಡುತ್ತಿದ್ದ ಆಹಾರ ಮಾತ್ರ ಅತ್ಯಂತ ನಿಕೃಷ್ಟವಾದುದಾಗಿತ್ತು. ಅರ್ಧ ಸೇರು ರಾಗಿಯ ಮುದ್ದೆಗೆ ಅರ್ಧಸೇರು ಬೂದಿ ಕೂಡಿಸಿ ಅದನ್ನೇ ಆಹಾರವಾಗಿ ಕೊಡುತ್ತಿದ್ದರು. ಬೂದಿಯನ್ನು

ಮುದ್ದೆಯಿಂದ ಬೇರ್ಪಡಿಸಲೂ ಬರುವ ಹಾಗಿರಲಿಲ್ಲ. ಬೇರೆ ಉಪಾಯವೇ ಇರಲಿಲ್ಲವಾದುದರಿಂದ ಬೂದಿ ಸೇರಿಸಿದ ಮುದ್ದೆಯನ್ನೇ ನುಂಗಿ ನೀರು ಕುಡಿಯಬೇಕಾಗುತ್ತಿತ್ತು. ಆ ಆಹಾರದಿಂದ ದೇಹಕ್ಕೆ ಲಭಿಸುವ ಚೇತನ ವಾದರೂ ಎಷ್ಟು? ಸೆರೆಮನೆಗೆ ಬಂದಾಗ ಕುಸ್ತಿಯ ಜಟ್ಟಿಗಳಂತಿದ್ದ ಅವ ರಿಬ್ಬರೂ ಹದಿನೈದು ದಿನಗಳ ಅವಧಿಯಲ್ಲಿಯೇ ದೇಹದಾರ್ಢ್ಯ ಕಳೆದು ಕೊಂಡು ಕ್ಷಯರೋಗಿಗಳಂತೆ ಬಡಕಲಾಗಿಹೋಗಿದ್ದರು. ಅಂಥ ಅವಸ್ಥೆ ಯಲ್ಲೂ ಭಾರಿ ಭಾರಿ ನೇಗಿಲು ಎಳೆಯಬೇಕು, ದೊಡ್ಡ ದೊಡ್ಡ ಬೀಸುವ ಕಲ್ಲು ತಿರುವಬೇಕು, ಮೊಟ್ಟೆಯಿಂದ ನೀರು ಹೊತ್ತು ಹಾಕಬೇಕು. ಎಷ್ಟೋ ಬಾರಿ ಉಸಿರುಕಟ್ಟಿ ಬೀಳುವಂತಾಗುತ್ತಿತ್ತು. ಸ್ವಲ್ಪ ಹೊತ್ತು ಕುಳಿತು ಆಯಾಸ ಪರಿಹರಿಸಿಕೊಳ್ಳಲೂ ಆಸ್ಪದವಿರಲಿಲ್ಲ. ಕೆಲಸದಲ್ಲಿ ಸ್ವಲ್ಪ ತಡ ವಾದರಾಯಿತು, ಬಾರಕೋಲು ಚಿಣಗಿಯ ಹಾವಿನಂತೆ ಬಂದೆರಗುತ್ತಿತ್ತು. ಉಸಿರೇ ನಿಂತುಹೋಗುವಂಥ ಸ್ಥಿತಿಯಲ್ಲೂ ಹೇಗೋ ಭಾರ ಹೊತ್ತು ಮುನ್ನಡೆಯಬೇಕು. ಬೂದಿ ಮಿಶ್ರಿತ ಮುದ್ದೆ ಗಂಟಲಲ್ಲಿಳಿಯಲು ಶಕ್ಯ ವಾಗುತ್ತಿರಲಿಲ್ಲ. ಹೇಗೋ ಅದನ್ನು ನುಂಗಿ, ಹೊಲಸು ನಾರುವ ನೀರನ್ನೇ ಕುಡಿದು ನೆಲದ ಮೇಲೆ ದೇಹ ಚೆಲ್ಲುತ್ತಿದ್ದರು. ಚಳಿಗಾಲಕ್ಕಾರಂಭವಾಗಿದ್ದು ದರಿಂದ ನೆಲವೆಲ್ಲ ತಣ್ಣಗೆ ಹಿಮದಂತಾಗಿರುತ್ತಿತ್ತು. ಆ ಶೀತದಿಂದ ತಪ್ಪಿಸಿ ಕೊಳ್ಳಲು ಅಗತ್ಯವಿದ್ದ ಹಾಸಿಗೆ ಹೊದ್ದಿಕೆಗಳೂ ಇರಲಿಲ್ಲ. ರಾತ್ರಿಯಿಡೀ ನಡು ಗುತ್ತಾ ಬಿದ್ದುಕೊಂಡಿರುತ್ತಿದ್ದರು. ನಿದ್ದೆ ಬಂದರೆ ಬಂದಿತು, ಇಲ್ಲದಿದ್ದರಿಲ್ಲ. ಬೆಳಕಿನ ಕಿರಣಗಳು ಕೋಣೆಯಲ್ಲಿ ಪ್ರವೇಶಿಸಿ, ಹೊರಗಡೆ ಕಾವಲುಗಾರರ ಕರ್ಕಶ ಧ್ವನಿ ಕೇಳತೊಡಗಿದಾಗ ನೆಲ ಬಿಟ್ಟು ಏಳುವುದಕ್ಕೂ ತ್ರಾಣ ವಿರುತ್ತಿರಲಿಲ್ಲ. ಅಂಥ ಸ್ಥಿತಿಯಲ್ಲಿ ಹೇಗೋ ಎದ್ದು ಮತ್ತೆ ಕೆಲಸಕ್ಕೆ ಹೊರಡಬೇಕು. ಒಂದು ತಿಂಗಳು ಕಳೆಯುವುದರೊಳಗಾಗಿ ಇಬ್ಬರೂ ಕಡ್ಡಿ ಯಂತಾಗಿದ್ದರು. ಮುಖದ ಮೇಲೆಲ್ಲಾ ಕೂದಲು ಬೆಳೆದು ವಿಕಾರವಾಗಿ ಹರಡಿತ್ತು. ಸ್ನಾನದ ಅಭಾವದಿಂದಲೂ ಏಟುಗಳ ಗಾಯದಿಂದಲೂ ಮೈ ನಾರುತ್ತಿತ್ತು, ತಲೆಯಲ್ಲಿ ಹೇನುಗಳೂ ಬಟ್ಟೆಯಲ್ಲಿ ಕೂರಿಗಳೂ ಹುಟ್ಟಿ ರಕ್ತ ಹೀರುತ್ತಿದ್ದುವು. ಯಾವುದರ ಬಗೆಗೂ ಯಾರೆದುರಿಗೂ ಏನನ್ನೂ ದೂರು ವಂತಿರಲಿಲ್ಲ. ಎಲ್ಲವೂ ಒಂದು ದುಸ್ವಪ್ನದಲ್ಲಿ ನಡೆದಂತೆ ನಡೆಯುತ್ತಿತ್ತು.

ದಿನಗಳುರುಳಿದಂತೆಲ್ಲಾ ಅದೊಂದು ಸ್ವಪ್ನವಾಗಿದ್ದುದೇ ನಿಜವಿರಬೇಕೆಂದು ಮಲ್ಲಸರ್ಜನಿಗನಿಸುತ್ತಿತ್ತು.

೧೫

ಮತ್ತೊಂದು ಮಾಸ ಕಳೆಯಿತು. ಅಷ್ಟರೊಳಗಾಗಿ ಮಲ್ಲಸರ್ಜ ಅರ್ಧಕರ್ಧ ಇಳಿದುಹೋಗಿದ್ದ. ಏನಾದರೂ ಉಪಾಯ ಯೋಚಿಸಿ ಆ ನರಕವಾಸದಿಂದ ತಪ್ಪಿಕೊಳ್ಳಲೇಬೇಕಾಗಿತ್ತು. ಬಿಡುಗಡೆಯ ದಾರಿ ಯಾವುದೂ ಕಾಣುತ್ತಿರಲಿಲ್ಲ.

ಕಾವಲುಗಾರರಿಂದ ತುಂಬಿಕೊಂಡಿದ್ದ ಆ ಸೆರೆಮನೆಯಿಂದ ತಪ್ಪಿಸಿಕೊಂಡು ಹೋಗುವುದೂ ಸುಲಭವಾದ ವಿಚಾರವಾಗಿರಲಿಲ್ಲ. ಇಪ್ಪತ್ನಾಲ್ಕು ಗಂಟೆಗಳ ಕಾಲವೂ ಅತ್ಯಂತ ಎಚ್ಚರದಿಂದ ಕಾವಲು ನಡಸುತ್ತಿದ್ದ ನುರಿತ ಪಹರೆಯವರ ಕಣ್ಣು ತಪ್ಪಿಸಿ ಪಾರಾಗುವುದು ದುಸ್ಸಾಹಸದ ಮಾತಾಗಿತ್ತು.

ಆದರೂ ಮಲ್ಲಸರ್ಜ ಪ್ರಯತ್ನವನ್ನು ನಿಲ್ಲಿಸದೆ ಯೋಗ್ಯವಾದ ಸಂದರ್ಭಕ್ಕಾಗಿ ಕಾದು ಕುಳಿತಿದ್ದ.

ಕೆಲ ದಿನಗಳಲ್ಲಿಯೇ ಅಂಥದೊಂದು ಸಂದರ್ಭವೂ ಒದಗಿ ಬಂದಿತು.

ಅಂದು ಯಾವುದೋ ಒಂದು ಹಬ್ಬವಿದ್ದಿತೇನೊ—ಅದೊಂದು ಹಬ್ಬದ ದಿನವೆಂಬುದು ಕೈದಿಗಳಿಗೂ ಸಹಜವಾಗಿ ತಿಳಿಯುವಂತಿರಲಿಲ್ಲ. ನಿತ್ಯದಂತೆಯೇ ಆ ದಿನವೂ ಮಧ್ಯಾಹ್ನದವರೆಗೆ ಅವರನ್ನು ದುಡಿಸಲಾಗಿತ್ತು. ನಡುಹಗಲಿನ ಊಟದಲ್ಲೂ ವಿಶೇಷವೇನೂ ಇರಲಿಲ್ಲ. ಎಂದಿನಂತೆಯೇ ಬೂದಿ ಬೆರೆತ ಮುದ್ದೆ—ಅಷ್ಟು ನೀರು ಅದನ್ನೇ ನುಂಗಿ ಸೆರೆಯಾಳುಗಳು ಕೊಟಡಿಗಳಲ್ಲಿ ಬಿದ್ದುಕೊಂಡಿದ್ದರು. ಕಾವಲುಗಾರರ ಊಟ ತಿಂಡಿಗಳ ಕಡೆಗೆ ಯಾರ ಲಕ್ಷ್ಯವೂ ಇರಲಿಲ್ಲ. ದುಡಿದು ದುಡಿದು ಹೆಣದಂತೆ ಬಿದ್ದು ಕೊಂಡಿರುವ ಸೆರೆಯಾಳುಗಳು ಇತರ ವಿಚಾರಗಳ ಕಡೆಗೆ ಲಕ್ಷ್ಯ ಕೊಡದಿರುವುದೂ ಸಹಜವೇ ಆಗಿತ್ತು.

ಬಿಡುಗಡೆಯ ದಾರಿ ಹುಡುಕುತ್ತಲಿದ್ದ ಮಲ್ಲಸರ್ಜ—ಮುಡಿವಾಳರು ಮಾತ್ರ ಮೈಯೆಲ್ಲ ಕಣ್ಣುಳ್ಳವರಾಗಿ ಹೊರಗೆ ನಡೆಯುವ ಪ್ರತಿಯೊಂದು

ಚಟುವಟಿಕೆಯನ್ನೂ ಎಚ್ಚರದಿಂದ ವೀಕ್ಷಿಸುತ್ತಿದ್ದರು. ಅವರ ಕೊಟಡಿಯ ಎದುರಿನಲ್ಲೇ ಕಾವಲುಗಾರರು ಊಟಮಾಡಿ ವಿರಮಿಸುವ ಮನೆಯಿತ್ತು. ಅಲ್ಲಿ ನಡೆದಿದ್ದ ಗದ್ದಲವನ್ನು ನಿರೀಕ್ಷಿಸಿದಾಗ ಈ ದಿನ ವಿಶೇಷವೇನೋ ಇರಲೇಬೇಕೆಂದು ಅವರಿಗನ್ನಿಸಿತು.

"ಇಂದು ಕಾವಲುಗಾರರು ಸ್ವಲ್ಪ ವಿಚಿತ್ರವಾಗಿ ವರ್ತಿಸುತ್ತಿದಾರೆ. ಅಲ್ಲವೇ ಮಡಿವಾಳಾ ?" ಎಂದ ಮಲ್ಲಸರ್ಜ.

"ದಿನದಕ್ಕಿಂತ ಇಂದು ಹೆಚ್ಚು ಖುಷಿಯಲ್ಲಿದ್ದಂತೆ ಕಾಣ್ತದೆ."

"ಮುಸಲ್ಮಾನರ ಹಬ್ಬಗಿಬ್ಬ ಇರಬಹುದೊ ಏನೊ ಇವೊತ್ತು."

"ಇದ್ದರೂ ಇರಬಹುದು ಪ್ರಭೂ. ಇಲ್ಲಿಗೆ ಬಂದು ಬಿದ್ದಂದಿನಿಂದ ನಮಗಂತೂ ದಿನ–ವಾರ–ತಿಥಿಗಳ ಲೆಕ್ಕವೂ ಗೊತ್ತಾಗಲಿಲ್ಲ."

"ದಿನದಕ್ಕಿಂತ ಇಂದು ಹೆಚ್ಚಾಗಿಯೇ ಮದ್ಯಪಾನ ನಡೆದಂತೆ ಕಾಣುತ್ತದೆ. ಎಷ್ಟೋ ಮಂದಿ ಕುಡಿದು ಅತ್ತಿತ್ತ ಹೊರಳಾಡುವದು ನೋಡಿದಿಯಾ ?"

ಅವರು ನೋಡುನೋಡುತ್ತಿದ್ದಂತೆಯೇ ಕಾವಲುಗಾರರ ನಿಲಯದಲ್ಲಿನ ಗದ್ದಲವಿನ್ನೂ ಅಧಿಕವಾಯಿತು. ಮದ್ಯಪಾನದಿಂದ ಮತ್ತೇರಿ ಮೈಮರೆತ ಸೈನಿಕರು ಕೆಲವರು ಎದ್ದು ತೂಗಾಡುತ್ತ ವಿಲಕ್ಷಣ ರಾಗಗಳಲ್ಲಿ ಹಾಡತೊಡಗಿದರು. ನೆಲದ ಮೇಲೆ ಬಿದ್ದುಕೊಂಡಿದ್ದ ಕಾವಲುಗಾರನೊಬ್ಬನ ಬೆನ್ನನ್ನೇ ತಬಲಾದಂತೆ ಉಪಯೋಗಿಸಿಕೊಂಡು ಇನ್ನೊಬ್ಬ ಬಾರಿಸತೊಡಗಿದ. ಉಳಿದವರು ಚಪ್ಪಾಳೆ ತಟ್ಟುತ್ತಾ ಆಗಾಗ ಗಟ್ಟಿಯಾಗಿ ನಗುತ್ತಾ ಕೇಕೆ ಹಾಕತೊಡಗಿದರು. ಅದರಿಂದ ಉತ್ಸಾಹಿತನಾದ ರಸಿಕ ಕಾವಲುಗಾರನೊಬ್ಬ ಇನ್ನೊಬ್ಬನನ್ನು ಅಪ್ಪಿಕೊಂಡು ಹುಚ್ಚುಹುಚ್ಚಾಗಿ ಹೆಜ್ಜೆ ಹಾಕುತ್ತ ನರ್ತಿಸತೊಡಗಿದ. ಆ ನರ್ತನವನ್ನು ನೋಡಿದ ತರುವಾಯವಂತೂ ಕಾವಲುಗಾರರ ಗದ್ದಲಕ್ಕೆ ಸೀಮೆಯೆ ಉಳಿಯಲಿಲ್ಲ—ಅವರು ಮತ್ತೆ ಮತ್ತೆ ಕುಡಿದರು, ಕೂಗಿದರು, ಆಡಿದರು, ನರ್ತಿಸಿದರು. ಒಂದು ಗಂಟೆಯವರೆಗೂ ಈ ಮೋಜು ಎಡೆಬಿಡದೆ ನಡೆಯುತ್ತಿತ್ತು—ಅನಂತರ ಒಬ್ಬೊಬ್ಬರಾಗಿ ಆಯಾಸಗೊಂಡು, 'ಯಾ ಖುದಾ! ಯಾ ಅಲ್ಲಾ! ಪರವರದಿಗಾರ್!' ಎಂದು ಉದ್ಗಾರ ತೆಗೆಯುತ್ತ ಅನಂತರ ನೆಲದ ಮೇಲೆ ಬಿದ್ದುಕೊಂಡರು.

ದೇಹದ ಅರಿವನ್ನೇ ಮರೆತವರಿಗೆ ಶಸ್ತ್ರಾಸ್ತ್ರಗಳ ಅರಿವಾದರೂ ಹೇಗೆ ಉಳಿಯ ಬೇಕು? ಅವರ ಕತ್ತಿ–ಕಠಾರಿ–ಈಟಿ ಮೊದಲಾದ ಆಯುಧಗಳೆಲ್ಲವೂ ಅವ ರಂತೆಯೇ ಅಸ್ತವ್ಯಸ್ತವಾಗಿ ಅಲ್ಲಿ ಇಲ್ಲಿ ಬಿದ್ದುಕೊಂಡಿದ್ದುವು.

ಇಂಥದೊಂದು ಸಂದರ್ಭಕ್ಕಾಗಿಯೇ ಅಷ್ಟು ದಿನಗಳಿಂದಲೂ ಕಾಯು ತ್ತಿದ್ದ ಮಲ್ಲಸರ್ಜ, ಮನಸ್ಸಿನಲ್ಲಿಯೇ ತನ್ನ ಗುರುಗಳಾದ ಅರಭಾವಿಯ ಶಿವಯೋಗಿಗಳನ್ನು ನೆನೆಯುತ್ತ ಮುಂದಿನ ಕಾರ್ಯಕ್ಕಾಗಿ ಅವರ ಆಶೀ ರ್ವಾದ ಬೇಡಿಕೊಂಡು, ಮಡಿವಾಳನತ್ತ ತಿರುಗಿ ಮೆಲುದನಿಯಲ್ಲಿ ಹೇಳಿದ:

"ಕೋಟೆಯೊಳಗಿರುವ ಕಾವಲುಗಾರರೆಲ್ಲಾ ಇಲ್ಲೇ ಬಿದ್ದುಕೊಂಡಂ ತಿದೆ, ಅಲ್ಲವೇ, ಮಡಿವಾಳಾ?"

"ಹಾಗೇ ಕಾಣ್ತದ ಪ್ರಭು."

"ಹೆಬ್ಬಾಗಿಲ ಪಹರೆಯವರೂ ಇಲ್ಲೇ ಇರುವರೊ ಏನೋ."

"ಅವರೂ ಇರಬಹುದು, ಏನೋ ಒಬ್ಬಿಬ್ಬರನ್ನು ಮಾತ್ರ ಅಲ್ಲಿ ಬಿಟ್ಟು ಬಂದಿರಬಹುದಂತ ಕಾಣ್ತದೆ."

"ನಮ್ಮನ್ನು ಬಿಡುಗಡೆ ಮಾಡಲೆಂದು ಶಿವಯೋಗಿಗಳೇ ಇಂಥಾ ಸಂಧಿ ಒದಗಿಸಿಕೊಟ್ಟಂತೆ ಕಾಣುತ್ತಿದೆ. ಏಳು ಮಡಿವಾಳಾ, ಹೊರಗಿನ ಕೀಲಿಯನ್ನು ಮುರಿಯಲು ಶಕ್ಯವಾಗುತ್ತದೋ ಇಲ್ಲವೋ ನೋಡೋಣ."

ಕಬ್ಬಿಣದ ಸಲಾಕೆಗಳಲ್ಲಿ ಕೈ ಹಾಕಿ ಹೊರಗಿನ ಕೀಲಿಯನ್ನೆಳೆದು ನೋಡಿದುದಾಯಿತು. ಒಂದೆರಡು ನಿಮಿಷಗಳ ಕಾಲ ಶಕ್ತಿ ಪ್ರಯೋಗಿಸಿ ಪ್ರಯತ್ನಿಸಿದಾಗ ಅದರ ಕೊಂಡಿಯೂ ಕಳಚಿಕೊಂಡಿತು. ಸದ್ದಾಗದಂತೆ ಮೆಲ್ಲಗೆ ಕೀಲಿ ತೆಗೆದು, ಚಿಲಕವನ್ನು ಬಿಚ್ಚಿ, ಹರ್ಷದಿಂದ ಎದೆ ಹಿಗ್ಗುತ್ತಿರಲು ಬಾಗಿಲು ತೆರೆದು ಹೊರಗಡೆ ಅಡಿಯಿರಿಸಿದರು. ಕೈದಿಗಳ ಕೊಟಡಿಗಳ ಕಾವಲಿಗೆಂದು ದಿನವೂ ಸಜ್ಜಾಗಿರುತ್ತಿದ್ದ ಸಶಸ್ತ್ರ ಸೈನಿಕರ ಸುಳಿವೂ ಅಂದು ಇರಲಿಲ್ಲ. ಕೊಟಡಿಯ ಬಾಗಿಲನ್ನು ಮೊದಲಿನಂತೆಯೇ ಮುಚ್ಚಿ, ಬೀಗ ವನ್ನೂ ಅದರ ಸ್ಥಾನದಲ್ಲಿರಿಸಿ ಕೊಂಡಿ ಸೇರಿಸಿ ಅವರು ನಿಧಾನವಾಗಿ ಮುನ್ನಡೆದರು. ಕಾವಲುಗಾರರ ನಿಲಯದಲ್ಲಿ ಎಲ್ಲವೂ ಶಾಂತವಾಗಿತ್ತು. ಒಬ್ಬರಿಗೂ ಎಚ್ಚರವಿದ್ದಂತಿರಲಿಲ್ಲ. ಅಲ್ಲಿಂದ ಸನಿಯದಲ್ಲಿಯೇ ಇದ್ದ ಪಾಕ ಶಾಲೆಯಲ್ಲೂ ಜನರ ಸುಳುವಿರಲಿಲ್ಲ. "ಅವರಿಗೂ ಹಬ್ಬ! ನಮಗೂ ಹಬ್ಬ!"

ಎಂದುಕೊಳ್ಳುತ್ತ ಅವರು ನಿಧಾನವಾಗಿ ಕಾವಲುಗಾರರ ನಿಲಯಕ್ಕೆ ಬಂದು ಅಲ್ಲಿ ಬಿದ್ದಿದ್ದ ಕತ್ತಿ, ಕಠಾರಿ, ಕೋವಿ ಮೊದಲಾದ ಶಸ್ತ್ರಾಸ್ತ್ರಗಳೆಲ್ಲವನ್ನೂ ಎತ್ತಿಕೊಂಡು, ತಮಗೆ ಅಗತ್ಯವಿದ್ದಷ್ಟು ಶಸ್ತ್ರಗಳನ್ನು ಮಾತ್ರ ಇಟ್ಟುಕೊಂಡು ಉಳಿದುವುಗಳೆಲ್ಲವನ್ನೂ ಹತ್ತಿರದಲ್ಲಿಯೇ ಇದ್ದ ಯಾತದ ಭಾವಿಗೆಸೆದರು.

ಬಾವಿಯಲ್ಲಾದ ಸಪ್ಪಳದಿಂದ ಸನಿಯದಲ್ಲಿಯೇ ಎಲ್ಲಿಯೋ ಇದ್ದ ಕಾವಲುಗಾರನೊಬ್ಬನಿಗೆ ಎಚ್ಚರವಾಯಿತು. ಇತರ ಕಾವಲುಗಾರರಂತೆ ಆತ ಹೆಚ್ಚಾಗಿ ಕುಡಿದ ಹಾಗಿರಲಿಲ್ಲ, ಎಂತಲೇ ಆತ ಭಾವಿಯ ಕಡೆಗೆ ಓಡುತ್ತ ಬಂದ. ಬಾವಿಯ ಮೇಲಿನ ಗಿಡದ ಮರೆಯಲ್ಲಿ ಅವನನ್ನೇ ಪ್ರತೀಕ್ಷಿಸುತ್ತಲಿದ್ದ ಮಡಿವಾಳ ಕ್ಷಣಾರ್ಧದಲ್ಲಿಯೇ ಅವನನ್ನು ಕಡಿದುರುಳಿಸಿದ. ಕತ್ತಿಯ ಮೊದಲ ಏಟು ಬೀಳುತ್ತಲೂ ಆ ಕಾವಲುಗಾರ ದೊಡ್ಡದಾಗಿ ದನಿದೆಗೆದು 'ಯಾ ಅಲ್ಲಾ !' ಎಂದು ಆಕ್ರೋಶ ಮಾಡುತ್ತಲೂ ಹೆಬ್ಬಾಗಿಲಲ್ಲಿ ಪಹರೆ ಮಾಡುತ್ತಿದ್ದ ಇನ್ನಿಬ್ಬರು ಸೈನಿಕರು ಓಡಿ ಬಂದರು. ಕೈದಿಗಳನ್ನು ಕಂಡು ಅವರು ಎಚ್ಚರಿಕೆಯ ಕೂಗು ಹಾಕುವ ಮುನ್ನವೇ ಅವರನ್ನೂ ಇರಿದು ನೆಲಕ್ಕುರುಳಿಸಲಾಯಿತು. ಅನಂತರ ಆ ಮೂವರು ಕಾವಲುಗಾರರ ಶಸ್ತ್ರಗಳನ್ನೂ ಕಿತ್ತುಕೊಂಡು ಬಾವಿಗೆಸೆದರು.

ಅವರು ಮಹಾದ್ವಾರದ ಬಳಿ ಬರುವವರೆಗೂ ಬೇರಾವ ಸೈನಿಕರೂ ಅವರನ್ನು ತಡೆಯಲಿಲ್ಲ. ಕಬ್ಬಿಣದ ಹೆಬ್ಬಾಗಿಲ ಬಳಿಯಲ್ಲಿ ಮಾತ್ರ ಇಬ್ಬರು ಪಹರೆಯವರು ಎದುರುಬದುರಾಗಿ ಅಡಿಯಿಡುತ್ತಲಿದ್ದುದು ಕಾಣಿಸಿತು. ಅವರ ಗಮನ ಹೊರಳುವುದರೊಳಗಾಗಿಯೇ ಮಿಂಚಿನಂತೆ ಮೇಲೆ ಬಿದ್ದು ಅವರಿಬ್ಬರನ್ನೂ ಯಮಸದನಕ್ಕೆ ಕಳಿಸುವುದೇನೂ ಕಠಿಣವಾಗಲಿಲ್ಲ. ದಿಡ್ಡಿಯ ಬಾಗಿಲಿನ ಬೀಗ ಮುರಿದು ಹೊರಗೆ ಬಂದು, ಹೊರಗಿನಿಂದ ಅಗುಳಿ ಹಾಕಿ ಬಾಗಿಲು ಮುಚ್ಚಿ, ಕೊನೆಗೂ ಮುಕ್ತರಾದೆವೆಂಬ ಹಿಗ್ಗಿನಿಂದ ಉತ್ಸಾಹಿತರಾಗಿ, ಹೊರಗಿನ ಸ್ವಚ್ಛಂದ ಹವೆಯನ್ನು ಮನಸೋಕ್ತವಾಗಿ ಸೇವಿಸುತ್ತ, ರಸ್ತೆಯನ್ನು ಬಿಟ್ಟು, ಅಡ್ಡಹಾದಿ ಹಿಡಿದು ಹೊರಟು, ಗಿಡಗಳ ಗುಂಪಿನಲ್ಲಿ ಮರೆಯಾಗಿ ಮುನ್ನಡೆದರು.

ದುರ್ಗದ ಸುತ್ತಲೂ ಬೆಳೆದಿದ್ದ ದಟ್ಟವಾದ ಅರಣ್ಯದಲ್ಲಿ ಹಣ್ಣಿನ ಗಿಡ ಮರಗಳಿಗೇನೂ ಕೊರತೆಯಿರಲಿಲ್ಲ. ಸ್ವಚ್ಛವಾದ ನೀರು ತುಂಬಿಕೊಂಡು

ಹರಿಯುತ್ತಿದ್ದ ಝರಿಗಳೂ ಲೆಕ್ಕವಿಲ್ಲದಷ್ಟು ಇದ್ದುವು. ದಟ್ಟವಾಗಿ ಬೆಳೆದಿದ್ದ ಬಿದಿರುಮೆಳೆಯೊಂದರ ನೆರಳಲ್ಲಿ ಕುಳಿತು ಅಲ್ಲಿಯೇ ಹರಿಯುತ್ತಿದ್ದ ಝರಿಯ ನೀರಲ್ಲಿ ಕೈಕಾಲು ಮುಖ ತೊಳೆದುಕೊಂಡರು.

"ಸೆರೆಮನೆಯ ಆ ಹೊಲಸು ನೀರು ಕುಡಿದು ಕುಡಿದು ನಾಲಗೆಯೇ ಕೆಟ್ಟುಹೋಗಿತ್ತು ಮಡಿವಾಳಾ. ಈ ಅಮೃತದಂಥಾ ನೀರು ಕುಡಿದು ಹೊಟ್ಟೆ ತಂಪಾಯಿತು," ಎಂದ ಮಲ್ಲಸರ್ಜ.

"ನೀವು ಸ್ವಲ್ಪ ಹಾಗೆ ಅಡ್ಡವಾಗಿರ್ರಿ ಪ್ರಭು. ನಾನು ಅಷ್ಟು ಹಣ್ಣು ಹಂಪಲು ಹಿರಿದುಕೊಂಡು ಬರ್ತೀನಿ," ಎಂದು ಹೇಳಿ ಮಡಿವಾಳ ಹಣ್ಣಿನ ಗಿಡ ಹುಡುಕಿಕೊಂಡು ಹೋದ.

ಬಹಳ ದೂರ ಹೋಗಬೇಕಾದ ಆಗತ್ಯವೂ ಇರಲಿಲ್ಲ. ನೆಲದ ಮೇಲೆ ನಿಂತುಕೊಂಡರೆ ಕೈಗೆ ನಿಲುಕುವಷ್ಟು ಕೆಳಭಾಗದಲ್ಲಿಯೇ ಫಲಗಳು ಸಮೃದ್ಧವಾಗಿ ಬೆಳೆದಿದ್ದುವು.

ಹೊಟ್ಟೆ ತುಂಬಿ ತೃಪ್ತಿಯೆನಿಸುವವರೆಗೂ ಹಣ್ಣು ತಿಂದು, ಮತ್ತೆ ನೀರು ಕುಡಿದು ಅವರು ಮುಂದೆ ಹೊರಟರು. ದುರ್ಗದ ಸಮೀಪದ ಸ್ಥಳದಲ್ಲಿ ಹೆಚ್ಚು ಹೊತ್ತು ಕುಳಿತಿರುವುದು ಜಾಣತನದ ವಿಚಾರವಾಗಿರಲಿಲ್ಲ. ಆದಷ್ಟು ಶೀಘ್ರವಾಗಿ ಕೋಟೆಯಿಂದ ದೂರ–ಬಹುದೂರ ಹೊರಟುಹೋಗಿ ವೈರಿಗಳ ಸೀಮೆಯಿಂದ ಪಾರಾಗುವ ದಾರಿ ಹುಡುಕಬೇಕಾದುದು ಆಗತ್ಯವಾಗಿತ್ತು.

"ಈ ಅರಣ್ಯ ಎಷ್ಟು ದೊಡ್ಡದಿದೆಯೊ ಏನೊ. ಸಂಜೆಯಾಗುವದರೊಳಗಾಗಿ ನಾವು ಇದರಿಂದ ಹೊರಬೀಳಲು ಶಕ್ಯವಾಗುವದೊ ಇಲ್ಲವೊ," ಎಂದ ಮಲ್ಲಸರ್ಜ.

"ದಟ್ಟವಾಗಿ ಬೆಳೆದ ಈ ಗಿಡಗಳನ್ನ ನೋಡಿದರೆ ಅಡವಿ ಬಹಳ ದೊಡ್ಡದಾಗಿರಬೇಕೆಂದೇ ಅನಿಸ್ತದ ಪ್ರಭೂ."

"ಸರಿ. ಕತ್ತಲಾದರೂ ಏನಂತೆ? ಒಂದು ದೃಷ್ಟಿಯಿಂದ ಒಳ್ಳೆಯದೇ. ಇನ್ನು ಹಿಂಸ್ರ ಪಶುಗಳು. ಅವುಗಳ ಅಂಜಿಕೆ ನನಗಂತೂ ಇಲ್ಲ. ನಿನಗೇನಾದರೂ ಅಂಜಿಕೆಯೇ ಮಡಿವಾಳ?"

ಮಡಿವಾಳ ನಗು ನಗುತ್ತ ಉತ್ತರವಿತ್ತ; "ಕೈಯಲ್ಲಿ ಕತ್ತಿಯಿರು

ವಾಗ ಪಶುಗಳಿಗೆ ಅಂಜುವಂಥ ಪುಕ್ಕ ನಾನಲ್ಲ ಅನ್ನುವದು ಪ್ರಭುಗಳಿಗೇನು ಅರಿಯದ ಮಾತಲ್ಲ."

"ನೀನೆಂಥ ಬಂಟ ಅನ್ನುವದು ನಮಗೆ ತಿಳಿಯದೇ ಮಡಿವಾಳಾ? ಈ ವೇಳೆಯಲ್ಲಿ ನಿನ್ನಂಥ ಶೂರ ನಮ್ಮ ಸಂಗಡ ಇರುವದೂ ನಮ್ಮ ಸುದೈವವೇ. ಒತ್ತರದಿಂದ ಹೆಜ್ಜೆ ಹಾಕು. ಆದಷ್ಟು ಬೇಗ ಟೇಪುವಿನ ಗಡಿ ದಾಟಬೇಕು."

೧೬

ಅವರು ತಪ್ಪಿಸಿಕೊಂಡು ಹೋದ ಕೆಲ ಹೊತ್ತಿನಲ್ಲಿಯೇ ಕಾವಲುಗಾರರ ಮುಖ್ಯಾಧಿಕಾರಿಗೆ ಎಚ್ಚರವಾಯಿತು. ಆತ ಕಣ್ಣು ಬಿಟ್ಟು ನೋಡಿದಾಗ ತನ್ನ ಸೈನಿಕರು ಮೈಮರೆತು ಬಿದ್ದಿರುವುದೂ ಅವರ ಎಲ್ಲ ಆಯುಧಗಳೂ ಮಾಯವಾಗಿರುವುದೂ ಕಂಡು ಬಂದಿತು. ಅವನ ಸ್ವಂತ ಕಿರುಗತ್ತಿಯೂ ಕಾಣೆಯಾಗಿತ್ತು. 'ಇದೇನು ಕನಸಲ್ಲವಷ್ಟೆ?' ಎಂದುಕೊಳ್ಳುತ್ತಾ ಆತ ಕಣ್ಣುಜ್ಜಿಕೊಂಡು ಮತ್ತೆ ಮತ್ತೆ ನೋಡಿದ. ನಡೆದಿದ್ದುದು ವಾಸ್ತವ ದೃಶ್ಯವೆಂಬುದರ ಅರಿವಾಗುತ್ತಲೂ ಆತ ತನ್ನನ್ನೂ ತನ್ನ ಕೈಕೆಳಗಿನ ಕಾವಲುಪಡೆಯವರನ್ನೂ ಒಟ್ಟಿಗೇ ಶಪಿಸುತ್ತ ಚಟುವಟಿಕೆಯಿಂದ ಮೇಲೆದ್ದು, ಮದ್ಯದ ಅಮಲಿನಲ್ಲಿ ಶವಗಳಂತೆ ಬಿದ್ದುಕೊಂಡಿದ್ದ ಸೈನಿಕರೆಲ್ಲರನ್ನೂ ಎಡಗಾಲಿನಿಂದೊದೆದು ಎಬ್ಬಿಸಿದ.

"ಕುಡಿದು ಮೈಮರೆತು ದನಗಳಂತೆ ಬಿದ್ದಾರೆ ಮೂರ್ಖರು. ಆಯುಧಗಳೆಲ್ಲಾ ಎಲ್ಲಿ ಹೋದುವು? ಕೈದಿಗಳಾರಾದರೂ ತಪ್ಪಿಸಿಕೊಂಡಿರಲಿಕ್ಕೆಬೇಕು. ಘಾತವಾಯಿತು. ಸುಲ್ತಾನರಿಗೆ ಸಮಾಚಾರ ಗೊತ್ತಾದರೆ ನಮ್ಮೆಲ್ಲರ ತಲೆಗಳೂ ಉಳಿಯಲಿಕ್ಕಿಲ್ಲ," ಎಂದವನೇ ಮುಖ್ಯಾಧಿಕಾರಿ ಅವರೆಲ್ಲರನ್ನೂ ಹೊರಡಿಸಿ ತಾನೂ ಓಟ ಬಿಟ್ಟ.

ಹತ್ತು ಜನರ ತುಕಡಿಯೊಂದು ಬಾವಿಯ ಹತ್ತಿರ ಬಂದಾಗ ಅಲ್ಲಿ ಸತ್ತು ಬಿದ್ದ ಕಾವಲುಗಾರರು ಕಾಣಿಸಿದರು. ಮಹಾದ್ವಾರದತ್ತ ಹೋಗಿದ್ದ ತುಕಡಿ ಅಲ್ಲಿನ ಪಹರೆಯವರ ಹತ್ಯೆಯ ಸಮಾಚಾರ ತೆಗೆದುಕೊಂಡು ಬಂದಿತು.

“ನಮ್ಮ ಮೂರ್ಖತನವೇ ಇದಕ್ಕೆಲ್ಲ ಕಾರಣ. ನೋಡಿರಿ, ಯಾವ ಕೈದಿಗಳು ಓಡಿಹೋಗಿದಾರೆ? ಇದೆಲ್ಲಾ ಯಾರ ಕೆಲಸ?”

ಕೈದಿಗಳ ಕೊಟಡಿಗಳನ್ನು ಪರೀಕ್ಷಿಸಲೆಂದು ಅತ್ತ ಹೋಗಿದ್ದ ಕಾವಲು ಗಾರರು ಅಷ್ಟರೊಳಗಾಗಿಯೇ ವರ್ತಮಾನ ತಂದರು.

“ಕಿತ್ತೂರ ರಾಜಾ ಮತ್ತು ಅವನ ಆಳು ತಪ್ಪಿಸಿಕೊಂಡಾರೆ ಖಾನ್ ಸಾಹೇಬ್.”

ಮುಖ್ಯಾಧಿಕಾರಿ ಹಣೆ ಚಿಚ್ಚಿಕೊಳ್ಳುತ್ತ, ಹತ್ತಿರ ನಿಂತಿದ್ದ ಕಾವಲು ಗಾರರನ್ನು ಕೈಯಲ್ಲಿದ್ದ ಚಾಟಿಯಿಂದ ಥಳಿಸುತ್ತ ಗಾಬರಿಯಿಂದ ಮಾತ ನಾಡಿದ: “ದುರ್ಗದಲ್ಲಿದ್ದ ಕೈದಿಗಳಲ್ಲೆಲ್ಲಾ ಅವರೇ ಮಹತ್ವದ ಬಂದಿಗಳು —ಸುಲ್ತಾನರು ನಮ್ಮ ಚರ್ಮ ಸುಲೀದೆ ಬಿಡಲಿಕ್ಕಿಲ್ಲ. ಓಡಿ, ಓಡಿ. ಇಲ್ಲಿ ಇಪ್ಪತ್ತು ಮಂದಿ ಮಾತ್ರ ಇದ್ದರೆ ಸಾಕು. ಉಳಿದವರೆಲ್ಲಾ ತಕ್ಷಣ ಹೊರಟು ನಾಲ್ಕು ದಿಕ್ಕುಗಳಲ್ಲಿ ಅವರನ್ನ ಶೋಧಿಸಬೇಕು.”

ಸೆರೆಯಾಳುಗಳು ಪಲಾಯನ ಹೇಳಿಸಿ ಹೆಚ್ಚು ಸಮಯವಾಗಿರಲಿಲ್ಲ ವಾದುದರಿಂದ ಚಟುವಟಿಕೆಯಿಂದಲೂ ಜಾಣ್ಮೆಯಿಂದಲೂ ಹುಡುಕಿದರೆ ಅವ ರನ್ನು ಕಂಡುಹಿಡಿಯುವುದು ಕಷ್ಟದ ವಿಚಾರವೇನೂ ಆಗಲಾರದೆಂದೇ ಮುಖ್ಯಾಧಿಕಾರಿಗನ್ನಿಸಿತು. ಸುತ್ತಲೂ ಗಹನವಾದ ಅರಣ್ಯ. ಈ ದೇಶಕ್ಕೆ ಅಪರಿಚಿತರಾಗಿರುವ ಆ ಕೈದಿಗಳು ಅರಣ್ಯದಿಂದ ಪಾರಾಗುವ ಹಾದಿಗಳನ್ನೂ ಅರಿಯರು. ಇಲ್ಲಿಯೇ ಸಮೀಪದಲ್ಲಿಯೇ ಎಲ್ಲಾದರೂ ತಲೆಮರೆಸಿಕೊಂಡಿ ರಲು ಸಾಕು. ಹಾದಿ ಹುಡುಕಿಕೊಳ್ಳುತ್ತ ದೂರ ಹೋಗಿರಬಹುದೆಂದು ಭಾವಿಸಿದರೂ ಒಂದು ಗಂಟೆಯ ಅಲ್ಪಾವಧಿಯಲ್ಲಿ ಬಹಳವಾದರೆ ಒಂದು ಹರದಾರಿಯಷ್ಟು ಮಾರ್ಗ ಕ್ರಮಿಸಿರಬಹುದು, ಅಷ್ಟೆ.

ಹೀಗೆ ಯೋಚಿಸುತ್ತಲಿದ್ದಂತೆಯೆ ಮುಖ್ಯಾಧಿಕಾರಿಯ ಗಾಬರಿ ಎಷ್ಟೋ ಪಾಲು ಕಡಿಮೆಯಾಯಿತು. ದುರ್ಗದ ರಕ್ಷಣೆಗೆ ಅಗತ್ಯವಿದ್ದ ಸಿಬ್ಬಂದಿ ಯನ್ನು ಅಲ್ಲಿ ಬಿಟ್ಟು, ಉಳಿದವರನ್ನು ಇಪ್ಪತ್ತು ಮಂದಿಯ ತಂಡಗಳನ್ನಾಗಿ ವಿಂಗಡಿಸಿ, ಮೇಲ್ವಿಚಾರಣೆಗೆಂದು ತಾನೂ ಅವರೊಡನೆಯೇ ಹೊರಟು ಅಡವಿಯಲ್ಲಿ ಹೊಕ್ಕು ಕೈದಿಗಳ ಬೇಟೆಗಾರಂಭಿಸಿದ.

ಆದರೆ, ಅಷ್ಟರೊಳಗಾಗಿಯೇ ದುರ್ಗದಿಂದ ಬಲುದೂರ ಹೋಗಿ

ನಿಬಿಡವಾದ ಅರಣ್ಯದಲ್ಲಿ ಸೇರಿಕೊಂಡಿದ್ದ ಮಲ್ಲಸರ್ಜ–ಮಡಿವಾಳರು ಈ ಪಡೆಗೆ ಸುಲಭವಾಗಿ ಸಿಕ್ಕುವುದು ಸಾಧ್ಯವಿರಲಿಲ್ಲ. ಸೂರ್ಯಾಸ್ತಮವಾಗುವ ವರೆಗೂ ಅಡವಿಯಲ್ಲಿ ಅಲೆದು ನಿರಾಶರಾಗಿ ಸೈನಿಕರು ಕ್ರೋಧದಿಂದ ತುಟಿ ಕಚ್ಚಿಕೊಳ್ಳುತ್ತ ದುರ್ಗಕ್ಕೆ ಹಿಂದಿರುಗಿದರು.

ತಕ್ಷಣವೇ ಶ್ರೀರಂಗಪಟ್ಟಣಕ್ಕೆ ಈ ಸಮಾಚಾರ ತಿಳಿಸುವುದು ಅಗತ್ಯ ವಾಗಿತ್ತು. ದುರ್ಗದಲ್ಲಿನ ಅಲ್ಪಸಂಖ್ಯೆಯ ಸೈನಿಕರಿಂದಲೇ ಈ ಶೋಧದ ಕಾರ್ಯ ಯಶಸ್ವಿಯಾಗಲಾರದೆಂಬುದು ಸ್ಪಷ್ಟವಾಗಿತ್ತು. ಅಲ್ಲದೆ, ಮಹ ತ್ವದ ಸೆರೆಯಾಳುಗಳಿಬ್ಬರು ತಪ್ಪಿಸಿಕೊಂಡು ಹೋದ ವಿಷಯವನ್ನು ರಾಜ ಧಾನಿಗೆ ತಿಳಿಸದೆ ಸುಮ್ಮನಿರುವುದೂ ಒಂದು ದೊಡ್ಡ ಅಪರಾಧವೇ ಆಗು ವಂತಿತ್ತು.

ಪಟ್ಟಣಕ್ಕೆ ಸಮಾಚಾರ ತಿಳಿಸಿದುದೂ ಆಯಿತು–ಅಲ್ಲಿಂದ ನೆರವು ಬರಬೇಕಾದರೆ ಇನ್ನೂ ಒಂದು ದಿನವಾದರೂ ಬೇಕು. ಅಷ್ಟರೊಳಗಾಗಿ ಬಂದಿಗಳು ಗಡಿ ದಾಟಿ ಇಂಗ್ಲಿಷರ ಸೀಮೆಯಲ್ಲಿ ಆಶ್ರಯ ಪಡೆಯುವ ಸಂಭ ವವೂ ಇತ್ತು. ಒಮ್ಮೆ ಸಾಧ್ಯವೇ ಇಲ್ಲ....ಆಮೇಲೆ ತಮ್ಮ ತಲೆಗಳೂ ಉಳಿ ಯುವಂತಿಲ್ಲ.

ಸಾವಿರ ಜನ ಸೈನಿಕರೊಡನೆ ರಾಜಧಾನಿಯಿಂದ ಬಂದ ಸೈನ್ಯಾಧಿ ಕಾರಿ ತನಗೆ ದೊರೆತ ಆಜ್ಞೆಯಂತೆ ಮೊತ್ತಮೊದಲು ದುರ್ಗದ ಕಾವಲು ಪಡೆಯವರೆಲ್ಲರನ್ನೂ ಬಂಧಿಸಿ ಕತ್ತಲು ಕೋಟೆಗಳಿಗೆ ದೂಡಿದ. ಅವರ ಮುಖ್ಯಾಧಿಕಾರಿಯ ಕೈಕಾಲುಗಳಿಗೆ ಕೋಳ ತೊಡಿಸಿ ಪಟ್ಟಣಕ್ಕೆ ಕಳಿಸಿ ಕೊಟ್ಟ–ಮೂರುನೂರು ಸೈನಿಕರನ್ನು ದುರ್ಗದ ರಕ್ಷಣೆಗೆ ನಿಯಮಿಸಿ ಉಳಿ ದವರೆಲ್ಲರನ್ನೂ ಕಿತ್ತೂರ ಬಂದಿಗಳ ಶೋಧಕ್ಕಾಗಿ ಅಡವಿಗೆ ಬಿಟ್ಟ–

ಆರೇಳು ನೂರು ಜನ ಸೈನಿಕರು ಮೂರು ಹಗಲು ಮೂರು ಇರುಳು ಅರಣ್ಯವನ್ನೆಲ್ಲ ಸುತ್ತಿದರೂ ಕೈದಿಗಳು ಕಣ್ಣಿಗೆ ಬೀಳಲಿಲ್ಲ. ಬೇಟೆಯ ನಾಯಿಗಳನ್ನು ತರಿಸಿ ಅವುಗಳನ್ನು ಬಿಡಲಾಯಿತು. ಅಡವಿಯ ನಡುವೆ ಅಲ್ಲಿ ಇಲ್ಲಿ ವಾಸಿಸಿದ್ದ ಕಾಡು ಜನರನ್ನು ಹಿಡಿದು ಹೆದರಿಸಿ ಬೆದರಿಸಿ ವಿಚಾ ರಿಸಿದುದಾಯಿತು. ಯಾವುದರಿಂದಲೂ ಉಪಯೋಗವಾಗಲಿಲ್ಲ.

ಟೀಪುವಿನ ಸೈನಿಕರು ತಮ್ಮನ್ನು ಹುಡುಕುತ್ತ ಅಡವಿಯಲ್ಲಿ ಅಲೆಯುತ್ತಿ

ದ್ದುದು ಮಲ್ಲಸರ್ಜ—ಮಡಿವಾಳರಿಗೆ ಯಾವಾಗಲೋ ಗೊತ್ತಾಗಿಹೋಗಿತ್ತು. ನಾಲ್ಕು ಕಡೆಗಳಿಂದಲೂ ಸುತ್ತುವರಿದು ಬರುತ್ತಿದ್ದ ವೈರಿಗಳಿಂದ ತಲೆಮರೆಸಿ ಸುರಕ್ಷಿತವಾಗಿರುವುದು ಸುಲಭವೇನೂ ಆಗಿರಲಿಲ್ಲ. ಒಂದೆರಡು ದಿನಗಳ ಕಾಲ ಒಂದು ಪಾಳು ಗುಹೆಯಲ್ಲಿಯೂ ಅವರು ಆಶ್ರಯ ಪಡೆಯಬೇಕಾಯಿತು. ಆ ಗುಹೆಯ ಸನಿಯದಲ್ಲಿ ಹಣ್ಣು ಹಂಪಲುಗಳೂ ಸಿಕ್ಕುತ್ತಿರಲಿಲ್ಲ, ಕುಡಿಯುವ ನೀರೂ ಲಭ್ಯವಿರಲಿಲ್ಲ. ಅಷ್ಟು ಕಾಲ ಗಿಡದ ಎಲೆಗಳನ್ನೇ ತಿಂದು ಹಸಿವು ಹಿಂಗಿಸಿಕೊಳ್ಳಬೇಕಾಯಿತು. ಹಸಿವಿನ ಬಗೆಹರಿಯಿತ್ತಾದರೂ ದಾಹದ ಪ್ರಶ್ನೆ ಹಾಗೆಯೇ ಉಳಿಯಿತು. ವೈರಿಗಳಿಂದ ತಪ್ಪಿಸಿಕೊಳ್ಳಲು ಅದು ಸುರಕ್ಷಿತವಾದ ಸ್ಥಳವಾಗಿದ್ದಿತಾದರೂ ಅವರು ಅಲ್ಲಿ ಹೆಚ್ಚು ಹೊತ್ತು ಇರುವಂತಿರಲಿಲ್ಲ. ಎಂತಲೇ ಒಂದು ರಾತ್ರಿ ಅಲ್ಲಿಂದ ಹೊರಟು, ತಿಂಗಳ ಬೆಳಕಿನಲ್ಲಿ ಹಾದಿ ಹುಡುಕಿಕೊಂಡು ದಕ್ಷಿಣದತ್ತ ನಡೆದರು. ಸ್ವಲ್ಪ ದೂರ ಬಂದ ಬಳಿಕ ಹಳ್ಳವೊಂದು ಕಾಣಿಸಿತು. ತೃಪ್ತಿಯಾಗುವವರೆಗೂ ನೀರು ಕುಡಿದು ಹಳ್ಳ ದಾಟಿ ಮುಂದೆ ನಡೆದರು. ರಾತ್ರಿಯಿಡೀ ನಡೆದು ಬಂದೂ ಅಡವಿಯಿಂದ ಹೊರಬೀಳಲು ಸಾಧ್ಯವಾಗಲಿಲ್ಲ. ಅರುಣೋದಯವಾಗುತ್ತಲೂ ನಡೆಯುವುದನ್ನು ನಿಲ್ಲಿಸಿ ಮತ್ತೊಂದು ಸುರಕ್ಷಿತ ತಾಣ ಹುಡುಕಿ ಮತ್ತೆ ಕತ್ತಲಾಗುವವರೆಗೂ ಅಲ್ಲಿಯೇ ಅವಿತುಕೊಳ್ಳಬೇಕಾದುದು ಅಗತ್ಯವಾಗಿತ್ತು.

ದಟ್ಟವಾಗಿ ಬೆಳೆದ ಮೆಳೆಯೊಂದರಲ್ಲಿ ಅವರು ಅಡಗಿಕೊಂಡರು. ಸೂರ್ಯೋದಯವಾಗುವುದರೊಳಗಾಗಿಯೇ ದೂರದಿಂದ ಸೈನಿಕರ ಕೂಗು ಕೇಳಿಬರತೊಡಗಿತು. ಅವರ ಜೊತೆಯಲ್ಲಿದ್ದ ಬೇಟೆನಾಯಿಗಳು ಬಗುಳುವ ಧ್ವನಿಯೂ ಕಿವಿಗೆ ಬೀಳತೊಡಗಿತು.

"ಶತ್ರುಗಳು ಸಮೀಪದಲ್ಲೇ ಬಂದಂತೆ ಕಾಣುತ್ತಲ್ಲ ಮಡಿವಾಳಾ? ನಾಯಿಗಳಿಗೆ ನಮ್ಮ ವಾಸನೆ ತಿಳಿಯಬಹುದೋ ಏನೋ."

"ಹೌದು ಪ್ರಭೂ. ನಾಯಿಗಳು ನಮ್ಮನ್ನ ಹುಡುಕಿದವೆಂದರೆ ಮುಗಿದೇ ಹೋಯಿತು. ವೈರಿಗಳ ಕೈಗೆ ಸುಲಭವಾಗಿ ಸಿಕ್ಕಿಬೀಳುವೆವು."

"ಹಾಗಾದರೆ ಇಲ್ಲಿ ಅಡಗಿಕೊಳ್ಳುವದು ಜಾಣತನವಲ್ಲ ಏಳು. ಹಾದೀ ಹಿಡಿಯೋಣ."

ರಾತ್ರಿಯೆಲ್ಲ ನಡೆದು ನಡೆದು ತುಂಬಾ ಆಯಾಸವಾಗಿದ್ದಿತಾದರೂ, ಕಣ್ಣುಗಳಲ್ಲಿ ನಿದ್ದೆ ಕವಿಯುತ್ತಿದ್ದಿತಾದರೂ ಆಗ ಎಲ್ಲವನ್ನೂ ಮರೆತು ಮತ್ತೆ ಮಾರ್ಗಕ್ರಮಣ ಮಾಡದೆ ವಿಧಿಯಿರಲಿಲ್ಲ. ಪುನಃ ದಕ್ಷಿಣ ದಿಕ್ಕನ್ನೇ ಹಿಡಿದು ಅವರು ಭರದಿಂದ ನಡೆಯತೊಡಗಿದರು. ಸೈನಿಕರ ಮತ್ತು ನಾಯಿಗಳ ಕೂಗು ಆಗಲೂ ಅಸ್ಪಷ್ಟವಾಗಿ ಕೇಳುತ್ತಲೇ ಇತ್ತು. ಅವರು ಮತ್ತಷ್ಟು ಒತ್ತರದಿಂದ ಹೆಜ್ಜೆ ಹಾಕತೊಡಗಿದರು–ಅವರನ್ನು ಹುಡುಕುತ್ತಿದ್ದ ಸೈನಿಕರು ಬೇರೆ ದಿಕ್ಕು ಹಿಡಿದು ಹೋದ ಹಾಗೆ ಕಾಣಿಸಿತು. ಕೊಂಚ ಕಾಲ ಅವರ ಸದ್ದು ಕೇಳಿಸಲಿಲ್ಲ. ಮಡಿವಾಳ ಹರ್ಷಿತನಾಗಿ ತ್ವರೆಯಿಂದ ನಡೆಯತೊಡಗಿದ. ಮಲ್ಲಸರ್ಜನಿಗೆ ಮಾತ್ರ ಅಂಥ ಸಮಾಧಾನವೇನೂ ಆಗಿರಲಿಲ್ಲ. ತಮ್ಮನ್ನು ಶೋಧಿಸುತ್ತಿದ್ದುದು ಅದೊಂದೇ ಒಂದು ತಂಡವಲ್ಲವಲ್ಲ? ಯಾರು ಬಲ್ಲರು? ತಮ್ಮ ಎಡಬಲದಲ್ಲಿಯೇ ಸೈನಿಕರ ತಂಡಗಳು ಸಾಗಿಬರುತ್ತಿರಬಹುದು. ತಮ್ಮ ಮುಂಭಾಗದಲ್ಲೂ ವೈರಿಗಳಿರುವುದು ಸಾಧ್ಯವಿತ್ತು.

ಆದರೆ, ಸೂರ್ಯ ನೆತ್ತಿಯ ಮೇಲೆ ಬರುವವರೆಗೂ ಮತ್ತೆ ವೈರಿಗಳ ಸುಳಿವು ತಿಳಿಯಲಿಲ್ಲ.

"ಅವರು ಹಿಂದೆಯೇ ತಿರುಗುತ್ತಿರಬೇಕು ಪ್ರಭೂ. ಈ ದಿನವಂತೂ ನಾವು ಅವರಿಗೆ ಕೈಕೊಟ್ಟೆವು," ಎಂದ ಮಡಿವಾಳ.

ಕೈಗೆ ಸಿಕ್ಕಿದ ಫಲಗಳನ್ನು ತಿಂದು ಅವರು ಮತ್ತೆ ನಡೆಯತೊಡಗಿದರು. ಕ್ರಮೇಣವಾಗಿ ಅಡವಿಯಲ್ಲಿ ಬೆಳಕು ಕಡಮೆಯಾಗುತ್ತ ಬಂತು. ಬೆಟ್ಟಗಳ ಆಚೆ ಸೂರ್ಯ ಮಾಯವಾದ. ಕಾಡಿನಲ್ಲಿ ನಿಧಾನವಾಗಿ ಕತ್ತಲು ಕವಿಯತೊಡಗಿತು.

"ಇನ್ನೇನು ಭಯವಿಲ್ಲ ಪ್ರಭು. ಇಲ್ಲೇ ಎಲ್ಲಾದರೂ ಒಂದು ಒಳ್ಳೆಯ ಜಾಗ ನೋಡಿ ರಾತ್ರಿ ಕಳೆಯೋಣ" ಎಂದ ಮಡಿವಾಳಾ.

ಸುರಕ್ಷಿತವಾದ ತಾಣವೊಂದನ್ನು ಅವರು ಹುಡುಕುತ್ತಿದ್ದಂತೆಯೇ ಅವರ ಹಿಂಭಾಗದಿಂದ ಹೆಜ್ಜೆಗಳ ಸದ್ದು ಕೇಳಿಬಂದಂತಾಯಿತು. ಗಿಡಗಂಟೆಗಳ ಮರ್ಮರರವವೂ ಕೇಳಿಸಿತು. ವೈರಿಗಳು ಯಾವಾಗಲೋ ಅವರ ಸುಳಿವು ಕಂಡುಹಿಡಿದು ಹಿಂಬಾಲಿಸಿಕೊಂಡು ಬರುತ್ತಿದ್ದುದು ಸ್ಪಷ್ಟವಾಗಿತ್ತು.

ಅವರು ಮಾತನಾಡದೆ ಮತ್ತೆ ಮುಂದೆ ಹೊರಟರು. ಸನಿಯದಲ್ಲಿಯೆ

ಇದ್ದ ಕೊಳ್ಳವೊಂದರಲ್ಲಿಳಿದು ಮುಂದೆ ಮಾರ್ಗಕ್ರಮಣ ಮಾಡಬೇಕಾಗಿತ್ತು. ಅವರು ಕೆಳಗಡೆ ಇಳಿಯುತ್ತಿದ್ದಂತೆ, ಗುಡ್ಡದ ಮೇಲ್ಭಾಗದಲ್ಲಿದ್ದ ವೈರಿಗಳು ಅವರನ್ನು ಕಂಡುಹಿಡಿಯುವುದು ಸಾಧ್ಯವಿತ್ತು. ಎಂತಲೇ, ತುಂಬಾ ಎಚ್ಚರಿಕೆಯಿಂದ, ಕೊಂಚವೂ ಸದ್ದಾಗದಂತೆ, ಗಿಡಗಳಲ್ಲಿ ಮರೆಯಾಗಿ ಇಳಿಯತೊಡಗಿದರು.

ಆದರೂ ಇಳುವಿನಲ್ಲಿದ್ದ ಅವರು ಹಾಗೆಯೇ ಹೆಚ್ಚು ಹೊತ್ತು ಮೇಲಿನವರಿಂದ ತಪ್ಪಿಸಿಕೊಂಡಿರಲು ಸಾಧ್ಯವಾಗಲಿಲ್ಲ. ಇಳಿಯುತ್ತಿದ್ದ ಕೈದಿಗಳು ಕಣ್ಣಿಗೆ ಬಿದ್ದೊಡನೆಯೇ ಸೈನಿಕರು ನಾಯಿಗಳನ್ನು ಛೂ ಬಿಟ್ಟು ತಾವೂ ರಭಸದಿಂದ ಇಳಿಯಬರತೊಡಗಿದರು.

ಇನ್ನು ವೈರಿಗಳ ಕೈಯಿಂದ ತಪ್ಪಿಸಿಕೊಳ್ಳುವುದು ಕಷ್ಟಸಾಧ್ಯವಾದ ಕೆಲಸವೆಂಬುದು ಮನವರಿಕೆಯಾಗುತ್ತಲೂ ಮಲ್ಲಸರ್ಜ ಮನಸ್ಸಿನಲ್ಲಿಯೇ ಪರಮಾತ್ಮನನ್ನು ಪ್ರಾರ್ಥಿಸತೊಡಗಿದ, ಅರಬಾವಿಯ ಶಿವಯೋಗಿಯನ್ನು ಬೇಡಿಕೊಳ್ಳತೊಡಗಿದ. ತಾವಿನ್ನು ಪಾರಾಗುವುದಾದರೆ ದೇವರ ದಯೆಯಿಂದಲೇ ಪಾರಾಗಬೇಕು.

ನಾಯಿಗಳು ಧಾವಿಸಿ ಬರುತ್ತಿದ್ದುವು. ಅವುಗಳ ಹಿಂದೆ ಹಿಂದೆಯೇ ಸೈನಿಕರೂ ಓಡಿಬರುತ್ತಿದ್ದರು. ಇಳಿಜಾರು ಪ್ರದೇಶದಲ್ಲಿ ಎಡವಿ ಬೀಳುವುದರ ಪರವೆಯೂ ಇಲ್ಲದೆ ಮಲ್ಲಸರ್ಜ–ಮಡಿವಾಳರೂ ಓಡುತ್ತಿದ್ದರು. ಕತ್ತಲು ಬೇರೆ ಕ್ಷಣಕ್ಷಣಕ್ಕೂ ದಟ್ಟವಾಗಿ ಕವಿಯತೊಡಗಿತ್ತು. ಮುಳ್ಳುಕಂಬೆಗಳು ಮೈಯನ್ನು ಕೊರೆದು ನೆತ್ತರು ಸುರಿಸುತ್ತಿದ್ದವು. ಕಾಲುಗಳಿಂದಲೂ ರಕ್ತ ಸುರಿಯತೊಡಗಿತ್ತು.

"ಪಕಡೊ! ಪಕಡೊ!"

ಹಿಂದಿನಿಂದ ಕೂಗು ಕೇಳಬಂದಿತು.

ಮತ್ತೆ ಅವರು ವೇಗವಾಗಿ ಧಾವಿಸಿದರು. ಕೊಳ್ಳದ ಇಳಿಜಾರು ಮುಗಿಯುತ್ತ ಬಂದಿತ್ತು. ಅದರೊಡನೆಯೇ, ಸನಿಯದಿಂದ ಪ್ರವಾಹದ ಸದ್ದೂ ಕೇಳಿಸತೊಡಗಿತ್ತು.

"ಇಲ್ಲಿ ಯಾವುದೋ ಹೊಳೆಯಿದ್ದಂತೆ ಕಾಣುತ್ತಲ್ಲ ಮಡಿವಾಳಾ?"

"ಹೌದು ಪ್ರಭೂ. ಇದು ಹೊಳೆಯ ನೀರಿನ ಸದ್ದೇ. ದೇವರು

ದೊಡ್ಡವ. ನಾವು ಹೊಳೆಯ ಬಳಿ ಬಂದದ್ದೂ ಒಳ್ಳೇದೇ ಆಯ್ತು."

ಅವರು ಬಾಣಗಳಂತೆ ಧಾವಿಸಿ ನದಿಯ ನೀರಿಗೆ ದುಮುಕಿದರು. ಇಳುಕಲಿನಲ್ಲಿ ಪ್ರವಹಿಸುತ್ತಿದ್ದ ನದಿಯ ನೀರಿಗೆ ಸ್ವಾಭಾವಿಕವಾಗಿಯೇ ತುಂಬ ರಭಸವಿತ್ತು. ವೈರಿಗಳಿಂದ ತಪ್ಪಿಸಿಕೊಳ್ಳಬೇಕಾದ ಆ ಸಮಯದಲ್ಲಿ ಅದೂ ಒಂದು ಅನುಕೂಲವೇ ಆಯಿತು. ಅವರು ನೀರಿನಲ್ಲಿ ಬಿದ್ದುದೇ ತಡ ಪ್ರವಾಹ ಅವರನ್ನು ಎಳೆದುಕೊಂಡು ವೇಗವಾಗಿ ಮುಂದುವರೆಯಿತು.

ಅಷ್ಟರೊಳಗಾಗಿ ವೈರಿಗಳು ನದಿಯ ದಂಡೆಗೆ ಬಂದು ತಲಪಿದ್ದರು. ಕೈದಿಗಳು ಪ್ರವಾಹಕ್ಕೆ ಜಿಗಿದು ತೇಲುತ್ತ ನಡೆದಿದ್ದುದು ಗೊತ್ತಾಗುತ್ತಲೂ ಸೈನಿಕರು ಕ್ರೋಧದಿಂದ ಹಲ್ಲುಕಡಿಯುತ್ತ ಗುಂಡು ಹಾರಿಸತೊಡಗಿದರು. ಗುಂಡಗಳ ಸದ್ದು ಕೇಳಿಸುತ್ತಲೂ ಮಲ್ಲಸರ್ಜ–ಮಡಿವಾಳರು ತಲೆಗಳನ್ನು ನೀರಲ್ಲಿ ಮುಳುಗಿಸಿ, ಉಸಿರು ಬಿಗಿಹಿಡಿದು ತೇಲುತ್ತ ಹೊರಟರು. ಮತ್ತೆ ಐದಾರು ನಿಮಿಷ ಕಳೆಯುವುದರೊಳಗಾಗಿ ಕತ್ತಲು ಗಾಢವಾಗಿ ಕವಿದು ಅವರನ್ನು ಪ್ರವಾಹದೊಡನೆ ಏಕರೂಪವಾಗಿಸಿತು. ನದಿಯ ತೀರದ ಮೇಲೆ ಓಡಿಬರುತ್ತಿದ್ದ ವೈರಿಗಳಿಗೆ ಅವರಿನ್ನು ಕಾಣಿಸುವುದೂ ಸಾಧ್ಯವಿರಲಿಲ್ಲ.

ಗುಂಡು ಹಾಕುವುದು ನಿಂತುಹೋಯಿತು. ವೈರಿಗಳು ಹತಾಶರಾಗಿ ಹಿಂದಿರುಗಿ ಹೋದುದು ಸ್ಪಷ್ಟವಾಗಿತ್ತು. ಇತ್ತ ಇವರು ಹಾಗೆಯೇ ತೇಲುತ್ತ ನಡೆದಿದ್ದರು. ಎಷ್ಟು ಹೊತ್ತು ನೀರಿನ ಒಳಗೇ ಮುಖ ಇರಿಸಲು ಶಕ್ಯವಿತ್ತೋ ಅಷ್ಟು ಹೊತ್ತೂ ಇರಿಸಿದ್ದರು. ಮತ್ತೊಂದು ಕ್ಷಣವೂ ತಡೆಯಲು ಸಾಧ್ಯವಾಗದೆಂದು ಅನಿಸಿದಾಗಲೇ ಮುಖ ಮೇಲೆ ತೆಗೆದು ಹಾಯಾಗಿ ಉಸಿರೆಳೆದರು.

ಪ್ರವಾಹವಿನ್ನೂ ರಭಸದಿಂದಲೇ ಸಾಗುತ್ತಿತ್ತು. ಅದರ ಎಳೆತದಿಂದ ಗಾಸಿಗೊಂಡು ಮಲ್ಲಸರ್ಜ ಅತ್ತಿತ್ತ ನೋಡುತ್ತಿದ್ದಾಗ ಸಮೀಪದಲ್ಲಿಯೇ ಮರದ ತುಂಡೊಂದು ತೇಲುತ್ತ ನಡೆದಿದ್ದುದು ಕಾಣಿಸಿತು.

"ಆ ತುಂಡು ಹಿಡಿದುಕೋ ಮಡಿವಾಳಾ."

ಹತ್ತಿರದಲ್ಲಿಯೇ ತೇಲುತ್ತ ಬರುತ್ತಿದ್ದ ಮಡಿವಾಳ ತುಸುದೂರ ಈಸುತ್ತ ಹೋಗಿ ಮರದ ತುಂಡನ್ನು ಹಿಡಿದುಕೊಂಡು ಬಂದ. ತುಂಡು ಸಾಕಷ್ಟು ದೊಡ್ಡದಾಗಿತ್ತು, ಭಾರವಾಗಿತ್ತು. ಇಬ್ಬರೂ ಆ ತುಂಡಿನ ಮೇಲೆ

ಕೈ ಹಾಕಿ ಆಸೆರೆ ಪಡೆದಾಗ ಎಷ್ಟೋ ಹಿತವೆನಿಸಿತು. ಅವರು ಮತ್ತೆ ಹೊರಳಿ ನೋಡಲಿಲ್ಲ. ಗುಂಡುಗಳು ಬರುವುದು ನಿಂತುಹೋಗಿ ಬಹಳ ಸಮಯವಾಗಿತ್ತು. ನದಿಯ ನೀರಿನಲ್ಲಿ ಅತ್ತಿತ್ತ ಹೊರಳುತ್ತ ಮರದ ತುಂಡು ಮುಂದುವರಿಯಿತು. ಮುಂದೆ ಹೋದ ಹಾಗೆಲ್ಲ ನದಿಯ ದಂಡೆಯೇ ಕಾಣ ದಂತಾಯಿತು. ಕೊಳ್ಳವನ್ನು ಹಿಂದೆ ಹಾಕಿ ನದಿ ಬಯಲು ಸೀಮೆಯಲ್ಲಿ ಪ್ರವೇಶಿಸಿದ ಹಾಗೆ ತೋರಿತು. ಸಹಜವಾಗಿಯೇ ಅಲ್ಲಿ ನದಿಯ ಪಾತ್ರ ತುಂಬ ಅಗಲವಾಗಿತ್ತು.

ಅವರು ದಂಡೆಗೆ ಹೋಗಲು ಪ್ರಯತ್ನಿಸಿದರು. ಆದರೆ ಹೊಳೆಯ ಸೆಳೆತ ಅವರನ್ನು ದಂಡೆಯತ್ತ ಬಿಡಲಿಲ್ಲ. ಹಾಗೆಯೇ ಮತ್ತಷ್ಟು ದೂರ ಹೋದ ಬಳಿಕ ಪ್ರವಾಹದ ದಿಕ್ಕು ಬದಲಿಸಿತು. ಮರದ ತುಂಡಿನೊಡನೆಯೇ ಅವರು ದಂಡೆಯ ಕಡೆಗೆ ದೂಡಲ್ಪಟ್ಟರು. ಇನ್ನೇನು ದಂಡೆ ಸಮೀಪಿಸಿತು— ಎಂದು ಅವರು ಹಿಗ್ಗುವುದರೊಳಗಾಗಿಯೇ ಹಿಂದಿನಿಂದ ಬಂದ ನೀರು ಅವರನ್ನು ಪುನಃ ನದಿಯ ಮಧ್ಯಭಾಗಕ್ಕೆ ತಳ್ಳಿತು.

ಅವರು ಚಕಿತರಾದರು, ಅವರ ಬೆನ್ನು ದಂಡೆಯ ಕಡೆಗೆ ತಿರುಗಿತ್ತು. ಅಷ್ಟರಲ್ಲಿಯೇ ಮತ್ತೊಂದು ವಿಪತ್ತು ಅವರಿಗಾಗಿ ಬಾಯ್ದೆರೆದು ಮುಂದೆ ಬಂದಿತು. ನದಿಯ ನಡುವಿನ ತಿರುಗಣಿಯೊಂದರಲ್ಲಿ ಅವರು ಸಿಲುಕಿ ಕೊಂಡರು. ನೀರಿನ ಸುಳಿ ಅವರನ್ನು ಹಿಡಿದು ಸುತ್ತಿ, ಆಳಕ್ಕೆಸೆದು, ಮತ್ತೆ ಮೇಲೆಳೆದು, ಮತ್ತೆ ಗಿರಗಿರನೆ ತಿರುಗಿಸಿ, ಉಸಿರೆಳೆಯುವುದಕ್ಕೂ ಅವಕಾಶ ಕೊಡದೆ ಪುನಃ ಪುನಃ ಮುಳುಗಿಸಿತು. ಇನ್ನೇನು, ತಮ್ಮ ಅವತಾರ ಸಮಾಪ್ತಿ ಯಾದಂತೆಯೇ— ಎಂದು ಅವರಿಗನಿಸುತ್ತಿದ್ದಂತೆಯೇ ಯಾವುದೋ ಮಾಯೆಯಿಂದ ಅವರು ಆ ಭೀಕರ ತಿರುಗಣಿಯಿಂದ ಮುಕ್ತರಾಗಿ ಮತ್ತೆ ದಂಡೆಯತ್ತ ದೂಡಲ್ಪಟ್ಟರು. ದಂಡೆಯ ಮೇಲೆ ಬೆಳೆದಿದ್ದ ಗಿಡಗಂಟೆ ಗಳನ್ನು ಹಿಡಿದುಕೊಂಡು ನೀರಿನಿಂದ ಮೇಲೆ ಬಂದು ಮಳಲರಾಶಿಯ ಮೇಲೆ ಸೋತು ಒರಗಿದರು.

ಅವರು ಎಷ್ಟು ಹೊತ್ತಿನವರೆಗೆ ಹಾಗೆ ಮಲಗಿದ್ದರೊ ಗೊತ್ತಾಗಲಿಲ್ಲ. ಮತ್ತೆ ಅವರು ಕಣ್ದೆರೆದಾಗ ಆಕಾಶದಲ್ಲಿ ಚಂದ್ರಬಿಂಬ ನಗುತ್ತಲಿತ್ತು. ಅವರ ಸುತ್ತಲೂ ನಾಲ್ಕೈದುಮಂದಿ ನೆರೆದು ಅವರನ್ನು ಎಚ್ಚರುಗೊಳಿಸುವ ಪ್ರಯತ್ನದಲ್ಲಿ ನಿರತರಾಗಿದ್ದರು.

ಅವರು ಕಣ್ದೆರೆದು ಎದ್ದು ಕೂಡ್ರುತ್ತಲೂ, ಅವರನ್ನು ಎಬ್ಬಿಸಲು ಪ್ರಯತ್ನಿಸುತ್ತಿದ್ದವರಲ್ಲೊಬ್ಬ ಕೇಳಿದ:

"ಯಾರು ನೀವು? ಅದ್ಯಾಕೆ ಇಲ್ಲಿ ಬಿದ್ದಿದೀರಿ? ನಿಮ್ಮ ಬಟ್ಟೆಗಳು ಬೇರೆ ತೋಯ್ದು ಹೋಗಿವೆ. ಮೈಸೂರಿನ ಗಡಿಯಿಂದ ತಪ್ಪಿಸಿಕೊಂಡು ಬಂದಿರೋ ಹ್ಯಾಗೆ?"

"ಇದಾರ ಸೀಮೆ?" ಎಂದು ಮಲ್ಲಸರ್ಜ ಮರು ಪ್ರಶ್ನೆ ಮಾಡಿದ.

"ಇಂಗ್ಲೀಷರ ಸೀಮೆ ಮೊದಲು ಹೇಳಿರಿ. ನೀವೇನು ನಮ್ಮ ವೈರಿಗಳೋ? ಸ್ನೇಹಿತರೋ?"

"ಸ್ನೇಹಿತರು. ಅದರಲ್ಲೇನೂ ಸಂಶಯ ಬೇಡ. ನಾವು ಈ ಭಾಗದವರೂ ಅಲ್ಲ. ಉತ್ತರದ ಕಿತ್ತೂರಿನವರು. ಟೀಪುವಿನ ಕಾರಾಗೃಹದಿಂದ ಪಾರಾಗಿ ಬಂದಿದ್ದೇವೆ."

"ಹಾಗಾದರೆ ಪರವಿಲ್ಲ. ಬನ್ನಿ ನಮ್ಮ ಜತೆಯಲ್ಲಿ, ಮೊದಲು ಬೇರೆ ಬಟ್ಟೆ ಹಾಕಿಕೊಂಡು ಊಟ ಮಾಡುವಿರಂತೆ. ಆಮೇಲೆ ನಮ್ಮ ಸರದಾರರ ಭೆಟ್ಟಿ ಮಾಡಿಸ್ತೇನೆ"

ನದಿಯಲ್ಲಿ ಈಸಿ ಆಯಾಸಗೊಂಡು ಬಂದವರೆಂದು ಅವರಿಗಾಗಿ ವಿಶೇಷ ಅಡುಗೆ ಸಿದ್ಧಗೊಳಿಸಿ ಬಡಿಸಲಾಯಿತು. ಹಾಲು–ತುಪ್ಪ–ಸಕ್ಕರೆ ಎಲ್ಲವೂ ಸಮೃದ್ಧವಾಗಿತ್ತು. ಅನೇಕ ದಿನಗಳ ತರುವಾಯ ಅಂಥ ಸುಗ್ರಾಸ ಭೋಜನದ ಯೋಗವೊದಗಿಬಂದಿತ್ತು. ಮನಸ್ಸಿನಲ್ಲಿಯೇ ದೇವರಿಗೆ ಧನ್ಯವಾದಗಳನ್ನರ್ಪಿಸುತ್ತ ತೃಪ್ತಿಯಾಗುವವರೆಗೂ ಊಟಮಾಡಿದರು.

ಊಟ ಮುಗಿಸಿ ಸ್ವಲ್ಪ ಸಮಯ ವಿರಮಿಸಿಕೊಂಡ ತರುವಾಯ ಸರದಾರನಿಂದ ಕರೆ ಬಂದಿತು. ಗಡಿಯ ರಕ್ಷಣೆಗಾಗಿ ಅಲ್ಲಿ ಇಡಲ್ಪಟ್ಟಿದ್ದ ದೇಶೀಯ ಸೈನಿಕರ ತುಕಡಿಯ ಮೇಲಧಿಕಾರಿಯಾಗಿದ್ದ ಆ ಸರದಾರನೂ ಭಾರತೀಯನೇ ಆಗಿದ್ದ. ಅವನಿಗೆ ಕನ್ನಡ ಭಾಷೆಯೂ ತಿಳಿಯುತ್ತಿತ್ತು.

ಟೀಪುವಿನ ಕಾರಾಗೃಹದಿಂದ ತಪ್ಪಿಸಿಕೊಂಡು ಬಂದಿದ್ದ ಇಬ್ಬರಲ್ಲೊಬ್ಬ ಕಿತ್ತೂರು ಸಂಸ್ಥಾನದ ಅರಸನೆಂಬ ವಿಚಾರ ಆ ವೇಳೆಗಾಗಲೆ ಸರದಾರನಿಗೂ ಗೊತ್ತಾಗಿಹೋಗಿತ್ತು. ತುಂಗಭದ್ರೆಯ ಉತ್ತರದಲ್ಲಿದ್ದ ಕಿತ್ತೂರು ರಾಜ್ಯದ ಕೀರ್ತಿಯನ್ನು ಅವನೂ ಕೇಳಿ ತಿಳಿದುಕೊಂಡಿದ್ದ. ಸ್ವಾತಂತ್ರ್ಯಪ್ರಿಯರೂ

ಶೂರರೂ ಆಗಿದ್ದ ಕಿತ್ತೂರಿನ ದೊರೆಗಳ ವಿಚಾರವಾಗಿ ಅವನಿಗೆ ಆದರವೂ ಇದ್ದಿತು. ಎಂತಲೇ, ಆ ವೀರ ರಾಜ್ಯದ ಯುವಕ ದೊರೆಯನ್ನು ಆತ ಅರಸರಿಗೆ ತಕ್ಕ ಮರ್ಯಾದೆಯಿಂದಲೇ ಬರಮಾಡಿಕೊಂಡ, ಉಚಿತವಾದ ಆಸನವಿತ್ತು ಗೌರವಿಸಿದ.

ಔಪಚಾರಿಕ ಕುಶಲಪ್ರಶ್ನೆಗಳ ತರುವಾಯ ಮಾತು ಅವರ ಬಂಧನದ ವೃತ್ತಾಂತದತ್ತ ತಿರುಗಿತು. ಆದುವರೆಗೆ ನಡೆದುದೆಲ್ಲವನ್ನೂ ಮಡಿವಾಳ ಸ್ವಲ್ಪದರದಲ್ಲಿಯೇ ಹೇಳಿ ಮುಗಿಸಿದ ಬಳಿಕ ಸರದಾರ ಪ್ರಶ್ನಿಸಿದ:

"ಸದ್ಯ ಕಿತ್ತೂರು ಯಾರ ವಶದಲ್ಲಿದೆ? ಬುರ್ಹಾನುದ್ದೀನ್ ಇನ್ನೂ ಅಲ್ಲೇ ಇರುವನೋ ಹೇಗೆ?"

"ನಮಗಂತೂ ಅತ್ತ ಕಡೆಯ ಸುದ್ದಿ ಏನೇನೂ ಗೊತ್ತಿಲ್ಲ. ಇನ್ನು ಮೇಲೆ ಚಾರರನ್ನು ಕಳಿಸಿ ಎಲ್ಲಾ ತಿಳಿದುಕೊಳ್ಳಬೇಕು."

"ಸರಿ, ಸರಿ, ಸೆರೆಮನೆಯಲ್ಲಿರುವವರಿಗೆ ಹೊರಗಿನ ಸಮಾಚಾರ ತಿಳಿಯೋದೂ ಕಷ್ಟವೆ," ಎಂದು ನುಡಿದು ಸರದಾರ ತನ್ನ ಕೈಕೆಳಗಿನ ಅಧಿಕಾರಿಯನ್ನುದ್ದೇಶಿಸಿ ಮಾತನಾಡಿದ: "ಉತ್ತರದ ಸೈನಿಕ ಚಲನವಲನಗಳ ಬಗ್ಗೆ ನಿನಗೇನಾದರೂ ಗೊತ್ತಿದೆಯೇ ತಿಮ್ಮಯ್ಯ?"

"ಟೀಪುವಿನ ಸೈನ್ಯ ತುಂಗಭದ್ರೆಯ ದಕ್ಷಿಣದವರೆಗೆ ಹಿಂದೆಗೆದಿದೆ ಅಂತ ಮೊನ್ನೆ ಕೊಯಮತ್ತೂರಲ್ಲಿ ವಾರ್ತೆಯಿತ್ತು," ಎಂದ ತಿಮ್ಮಯ್ಯ.

"ದೇವರ ದಯದಿಂದ ಈ ಸುದ್ದಿ ನಿಜವಾಗಲಿ, ಸರದಾರಸಾಹೇಬರೆ."

ಆ ರಾತ್ರೆ ಅಲ್ಲಿಯೇ ವಿರಮಿಸಿಕೊಂಡು, ಬೆಳಗಾಗುತ್ತಲೂ, ಅಷ್ಟು ಕಾಲ ಬೆಳೆದಿದ್ದ ತಲೆಗೂದಲನ್ನೂ ಗಡ್ಡವನ್ನೂ ತೆಗೆಯಿಸಿ, ಸರದಾರ ಒದಗಿಸಿದ ಹೊಸ ಬಟ್ಟೆಗಳನ್ನು ಧರಿಸಿಕೊಂಡು, ಕುದುರೆಗಳನ್ನೇರಿ, ಕೊಂಚ ದೂರದಲ್ಲಿದ್ದ ಕೊಯಿಮತ್ತೂರು ಠಾಣ್ಯದಲ್ಲಿನ ಆಂಗ್ಲ ಸುಭೇದಾರನನ್ನು ನೋಡಲೆಂದು ಹೊರಟರು.

೧೭

ಪೇಶ್ವೆ ಮತ್ತು ಪಟವರ್ಧನರನ್ನು ಕಂಡು ಕಿತ್ತೂರಿನ ನೆರವಿಗಾಗಿ ಸೈನ್ಯವನ್ನು ತೆಗೆದುಕೊಂಡು ಬರುವುದಾಗಿ ಹೇಳಿ ಹೋಗಿದ್ದ ಚಿಂತೋ

ಪಂತನೂ ವಿರೂಪಾಕ್ಷಪಂತನೂ ನೇರವಾಗಿ ಮಿರಜಕ್ಕೆ ಹೋಗಿ ಮೊತ್ತ ಮೊದಲು ಪರಶುರಾಮಭಾವು ಪಟವರ್ಧನನನ್ನು ಭೆಟ್ಟಿಯಾದರು.

ಪೇಶ್ವೆಯರ ಸರದಾರ ಮಂಡಲಿಯಲ್ಲಿ ಅತ್ಯಂತ ಪ್ರಬಲನೂ ಪ್ರಭಾವಿಯೂ ಆಗಿದ್ದ, ಸರದಾರನೆಂದರೆ ಪರಶುರಾಮಭಾವು ಒಬ್ಬನೇ. ಆತ ರಣದುರಂಧರನೂ ಆಗಿದ್ದ, ರಾಜಕಾರಣಿಯೂ ಆಗಿದ್ದ, ಮುತ್ಸದ್ದಿಯೂ ಆಗಿದ್ದ. ತನ್ನ ಪರಾಕ್ರಮ ಮತ್ತು ಸಮರಕೌಶಲ ಬಲದಿಂದ ಆತ ಅನೇಕ ಯುದ್ಧಗಳಲ್ಲಿ ಪೇಶ್ವೆಯರಿಗೆ ಜಯ ದೊರಕಿಸಿಕೊಟ್ಟು ಪುಣ್ಯಪಟ್ಟಣದ ದರಬಾರದಲ್ಲಿ ಆದರದ ಸ್ಥಾನ ಗಳಿಸಿದ್ದ. ಅವನ ವಿಚಾರವಾಗಿ ಪೇಶ್ವೆಯರಿಗೆ ಗೌರವವೂ ಇತ್ತು, ಅಷ್ಟು ಭಯವೂ ಇತ್ತು. ಆತ ತಮಗಿಂತಲೂ ಹೆಚ್ಚು ಪ್ರಬಲನಾಗಿ, ಜನಪ್ರಿಯನಾಗಿ ಬೆಳೆದರೆ ತಮ್ಮ ಪಟ್ಟಕ್ಕೇ ಅಪಾಯವಾಗಬಹುದೆಂಬ ಅಂಜಿಕೆಯು ಅವರಿಗಿತ್ತು. ಎಂತಲೇ ಅವನನ್ನು ಹೆಚ್ಚಾಗಿ ಬೆಳೆಯಗೊಡದೆ ಒಂದು ಮಿತಿಯಲ್ಲಿಯೇ ಇರಿಸಲು ಅವರು ಉಪಾಯವಾಗಿ ಪ್ರಯತ್ನಿಸುತ್ತಿದ್ದರು.

ತನ್ನ ಏಳಿಗೆಯ ವಿಚಾರವಾಗಿ ಪೇಶ್ವೆಯರಲ್ಲಿದ್ದ ಮತ್ಸರವನ್ನು ಎಂದೋ ಗುರುತಿಸಿಕೊಂಡಿದ್ದ ಪರಶುರಾಮಪಂತ ಆ ಮತ್ಸರ ಮತ್ತೆ ಮತ್ತೆ ಕೆರಳದಂತೆ ಎಚ್ಚರದಿಂದ ವರ್ತಿಸುತ್ತ ಬಂದಿದ್ದ. ದಕ್ಷಿಣದಲ್ಲಿ ಸಮರ ಹೂಡುವ ಅಥವ ಸಂಧಾನ ಮಾಡಿಕೊಳ್ಳುವ ಅಗತ್ಯವಿದ್ದಾಗಲೆಲ್ಲ ಆತ ತಾನೊಬ್ಬನೇ ಅವುಗಳ ಬಗೆಗೆ ನಿರ್ಣಯಕ್ಕೆ ಬರದೆ ಪೇಶ್ವೆಯರ ಸಲಹೆ ಪಡೆದುಕೊಂಡೇ ಮುಂದುವರೆಯುತ್ತಿದ್ದ. ಅವರು ಬೇಡವೆಂದ ಕೆಲಸಗಳಿಗೆ ಸರ್ವಥಾ ಕೈಹಾಕುತ್ತಿರಲಿಲ್ಲ.

ಕಿತ್ತೂರಿನ ಸಹಾಯಕ್ಕಾಗಿ ದಂಡು ಕಳುಹಿಸಬೇಕೆಂದು ಬೇಡಿಕೆ ಬಂದಾಗಲೂ ಪರಶುರಾಮಪಂತ ಒಡನೆಯೇ ನಿರ್ಧಾರಕ್ಕೆ ಬರಲಿಲ್ಲ. ಕಿತ್ತೂರಿನ ಪರವಾಗಿ ರಾಯಭಾರಿಗಳಾಗಿ ಬಂದಿದ್ದ ಚಿಂತೋಪಂತ–ವಿರೂಪಾಕ್ಷಪಂತರನ್ನು ಉಚಿತವಾದ ಮರ್ಯಾದೆಯಿಂದ ಬರಮಾಡಿಕೊಂಡು ಅತಿಥಿಗೃಹದಲ್ಲಿ ಅವರ ವಸತಿಗೆ ಏರ್ಪಡಿಸಿ ಪ್ರತಿದಿನವೂ ಮೃಷ್ಟಾನ್ನಭೋಜನದ ವ್ಯವಸ್ಥೆ ಮಾಡಿದ. ಶ್ರೀಮಂತರ ಅತಿಥಿಗಳಾಗಿ ಪಂತರೀರ್ವರೂ ಸುಖವಾಗಿ ಕಾಲ ಕಳೆಯತೊಡಗಿದರು. ಅವರು ಮಿರಜಕ್ಕೆ ಬಂದ ದಿನ ಭೇಟಿ

ಯಿತ್ತಿದ್ದ ಪರಶುರಾಮಭಾವು ಆಮೇಲೆ ಒಂದೆರಡು ವಾರ ಕಳೆದುಹೋದರೂ ಮತ್ತೆ ಅವರನ್ನು ಕಾಣಲಿಲ್ಲ.

ಪಂಚ ಪಕ್ವಾನ್ನಗಳ ಮೇಲೆ ಕೈಯೆಳೆಯುತ್ತ ಕೆಲಕಾಲ ಎಲ್ಲವನ್ನೂ ಮರೆತುಬಿಟ್ಟಿದ್ದ ಪಂತರು ಒಂದು ದಿನ ತಾವು ಬಂದ ಕಾರ್ಯವನ್ನು ಜ್ಞಾಪಿಸಿಕೊಂಡು ಶ್ರೀಮಂತರ ಭೆಟ್ಟಿಗಾಗಿ ಹಾತೊರೆಯತೊಡಗಿದರು.

"ಎಲ ಎಲಾ! ಎಂಥ ಅನ್ಯಾಯವಾಯ್ತಲ್ಲ ವಿರೂಪಾಕ್ಷಪಂತರೆ, ನಾವು ಇಲ್ಲಿಗೆ ಬಂದದ್ದು ಯಾಕೆ, ಇಲ್ಲಿ ನಡಸಿರುವದೇನು! ಆದಷ್ಟು ಬೇಗ ಸೈನ್ಯಸಹಾಯ ತಗೊಂಡು ಬರುತ್ತೇವೆ ಅಂತ ತಲ್ಲೂರ ದೇಸಾಯರೆದುರು ಜಂಬಕೊಚ್ಚಿ ಬಂದು ಇಲ್ಲಿ ಅದನ್ನೆಲ್ಲಾ ಮರೆತು ಕುಳಿತೆವಲ್ಲ! ನಮ್ಮ ಬಗ್ಗೆ ಅವರು ಏನೆಂತ ತಿಳುಕೊಂಡಿರಬಹುದೊ!" ಎಂದ ಚಿಂತೋಪಂತ.

ಕಿತ್ತೂರಿನ ವಿನೋಚನೆಯ ಬಗೆಗೆ ಚಿಂತೋಪಂತನಿಗಿದ್ದಷ್ಟು ಆಸೆ ವಿರೂಪಾಕ್ಷಪಂತನಿಗೇನೂ ಇರಲಿಲ್ಲ. ಕುಳಿತಲ್ಲಿಯೇ ಸೊಗಸಾದ ಭೋಜನ ದೊರೆಯುತ್ತಿದ್ದಷ್ಟು ದಿನ ಆತನಿಗೆ ಬೇರಾವುದರ ಯೋಚನೆಯೂ ಬರುವಂತಿರಲಿಲ್ಲ. ಕಿತ್ತೂರಿಗಿಂತ ಮಿರಜವೇ ಮೇಲೆಂದು ಅವನಿಗನಿಸುತ್ತಿತ್ತು. ಪರಶುರಾಮಪಂತರಂಥ ಶ್ರೀಮಂತ ಸರದಾರರ ಆಶ್ರಯದಲ್ಲಿ ಸುಖವಾಗಿ ಬದುಕುವಂಥ ಸುಯೋಗ ಲಭಿಸಿದರೆ ಅದೊಂದು ಭಾಗ್ಯವೇ ಸರಿ. ಕಿತ್ತೂರಿನಲ್ಲಾದರೋ ಮೇಲಿಂದ ಮೇಲೆ ಯುದ್ಧದ ಪ್ರಸಂಗಗಳು....ದಾಳಿಗಳು ....ಮಹಮ್ಮದೀಯರ ಕಾಟ....ದಾಳಿ ನಡೆಯುತ್ತಲೂ ಊರು ಬಿಟ್ಟು ಓಡಬೇಕು, ಶತ್ರುಗಳು ಹೋಗುತ್ತಲೂ ಮತ್ತೆ ಹಿಂದಿರುಗಬೇಕು. ಯಾರಿಗೆ ಬೇಕು ಇಂಥ ತಾಪತ್ರಯ! ಕಿತ್ತೂರಿನ ಸಹವಾಸವೇ ಸಾಕು—ಎನ್ನಿಸಿತ್ತು ವಿರೂಪಾಕ್ಷಪಂತನಿಗೆ. ಅವನ ಮನೆಯವರಂತೂ ಮಿರಜದ ಸೀಮೆಯಲ್ಲಿಯೇ ಸುರಕ್ಷಿತವಾಗಿ ನೆಲೆಸಿದುದಾಗಿತ್ತು. ಶ್ರೀಮಂತರ ಕೃಪಾಕಟಾಕ್ಷಕ್ಕೊಳಗಾಗಿ ಅಷ್ಟು ಭೂಮಿಯನ್ನು ಪಡೆದುಕೊಂಡು ತಾನೂ ಅವರ ಸೀಮೆಯಲ್ಲಿಯೇ ನೆಲೆಸುವುದೊಳ್ಳೆಯದೆಂದು ಆತ ಯೋಚಿಸುತ್ತಿದ್ದ.

ಚಿಂತೋಪಂತನ ವಿಚಾರ ಮಾತ್ರ ಬೇರೆ ರೀತಿಯದಾಗಿತ್ತು. ಕಿತ್ತೂರಿನ ಬಗೆಗೆ ಆತನಿಗೂ ಬೇಸರ ಬಂದಿದ್ದಿತಾದರೂ ವಿರೂಪಾಕ್ಷಪಂತನಷ್ಟು ಸುಲಭವಾಗಿ ಅದಕ್ಕೆ ಶರಣು ಹೊಡೆಯುವ ಮನಸ್ಸು ಆತನಿಗಿರಲಿಲ್ಲ.

ಪರಶುರಾಮುಪಂತನ ಕೃಪೆಯನ್ನೂ ಸಂಪಾದಿಸಿ, ಅತ್ತ ತಲ್ಲೂರ ದೇಸಾಯರು ಮತ್ತು ರುದ್ರಮ್ಮಾಜಿಯವರ ವಿಶ್ವಾಸವನ್ನೂ ಗಳಿಸಿ, ಕಿತ್ತೂರಿಗೆ ಬಂದೊದಗಿರುವ ಈ ಸಂಕಟ ಸಂದರ್ಭದಲ್ಲಿ ಅದನ್ನಾಳಿಸಲು ಪ್ರಯತ್ನಪಟ್ಟ ಹಾಗೆ ಮಾಡಿ, ದಿವಾನಗಿರಿಯನ್ನು ಗಿಟ್ಟಿಸಿಕೊಳ್ಳಬೇಕೆಂಬುದೇ ಅವನ ಆಶಯವಾಗಿತ್ತು. ಒಮ್ಮೆ ಅಧಿಕಾರ ಕೈಗೆ ಬಂದರಾಯಿತು, ಆಮೇಲೆ ತನಗೆ ಯಾವುದರ ಕೊರತೆಯೂ ಆಗಲಾರದು. ಫಲವತ್ತಾದ ಭೂಮಿಯನ್ನುಳ್ಳ ನಾಲ್ಕೈದು ಹಳ್ಳಿಗಳನ್ನು ತಾನು ಸುಲಭವಾಗಿ ಜಹಗೀರು ಪಡೆಯಬಹುದು. ಅಷ್ಟಾದರೆ ಸರಿ. ಮುಂದೆ ತನ್ನ ವಂಶದವರಿಗೆ ಯಾವ ತೊಂದರೆಯೂ ಬರಲಾರದು. ಅನೇಕ ಪೀಳಿಗೆಗಳ ವರೆಗೂ ಏನೂ ಕೆಲಸ ಮಾಡದೆ ಸುಖವಾಗಿ ಕುಳಿತು ಉಣ್ಣಬಹುದು !

ಅಂಥದೊಂದು ದೂರದೃಷ್ಟಿಯಿಟ್ಟುಕೊಂಡೇ ಮಿರಜಕ್ಕೆ ಬಂದಿದ್ದ ಚಿಂತೋಪಂತ ತನ್ನ ಕೆಲಸವನ್ನು ಮರೆತು ಹೆಚ್ಚು ಕಾಲ ಸೋಮಾರಿಯಾಗಿ ಬಿದ್ದುಕೊಳ್ಳುವಂತಿರಲಿಲ್ಲ. ಆತ ಮತ್ತೆ ಮತ್ತೆ ಕಾರಭಾರಿಗಳನ್ನು ಕಂಡು ಶ್ರೀಮಂತರ ಭೆಟ್ಟಿಗಾಗಿ ಪ್ರಯತ್ನಿಸತೊಡಗಿದ.

"ಯೋಗ್ಯ ಸಮಯ ಬಂದಾಗ ಶ್ರೀಮಂತರು ತಾವಾಗಿಯೇ ನಿಮ್ಮನ್ನು ಕರೆಸುತ್ತಾರೆ ಪಂತಜಿ. ಅದುವರೆಗೆ ಸುಖವಾಗಿ ಉಂಡುಟ್ಟು ಆರಾಮಾಗಿರಿ," ಎಂದ ಕಾರಭಾರಿ. "ನಿಮಗೇನಾದರೂ ಕೊರತೆಯಾಗಿಲ್ಲವಷ್ಟೆ ? ಹಾಗಿದ್ದರೆ ಸಂಕೋಚವಿಟ್ಟುಕೊಳ್ಳದೆ ಹೇಳಿರಿ. ಎಲ್ಲಾ ಸರಿಪಡಿಸುತ್ತೇನೆ."

"ಛೆ. ಛೆ. ಶ್ರೀಮಂತರ ಆತಿಥ್ಯದಲ್ಲಿ ಕೊರತೆಯಾಗುವದೆಂದರೇನು ಕಾರಭಾರೀ ಸಾಹೇಬರೆ ? ಅಂಥಾದ್ದೇನೂ ಇಲ್ಲ. ಎಲ್ಲಾ ಸಮೃದ್ಧವಾಗಿದೆ."

"ಮತ್ತೆ ? ನಿಮಗೇಕೆ ಅವಸರ ? ಸುಖವಾಗಿದ್ದರಾಯಿತಲ್ಲ ?"

"ಇರಬಹುದಿತ್ತು ಕಾರಭಾರೀಸಾಹೇಬರೆ. ಆದರೆ, ನಮ್ಮ ಕಿತ್ತೂರಿನ ಮೇಲೆ ದೊಡ್ಡ ಸಂಕಟ ಬಂದು ಬಿದ್ದಿದೆ. ಅದನ್ನು ದೂರಗೊಳಿಸಲು ಶ್ರೀಮಂತರ ಸಹಾಯ ಪಡೆಯಲೆಂದೇ ನಾವು ಬಂದದ್ದು. ಆದಷ್ಟು ಬೇಗ...."

ಚಿಂತೋಪಂತನ ಮಾತನ್ನು ನಡುವೆಯೇ ತಡೆದು ಕಾರಭಾರಿ ಹೇಳಿದ : "ಗೊತ್ತು. ಗೊತ್ತು. ಶ್ರೀಮಂತರು ಆ ವಿಚಾರ ಮರೆತಿಲ್ಲ. ನೀವು ಬಂದಂದಿನಿಂದ ಅದರ ಬಗೆಗೇ ವಿಚಾರ ನಡೆದಿದೆ. ಇನ್ನೂ ನಡೆಯುತ್ತಿದೆ.

ಸೈನ್ಯ ಸಹಾಯ ಅಂದರೆ ಸಾಧಾರಣವಾದ ಮಾತೇ? ಪ್ರಬಲವಾದ ವೈರಿಯೊಬ್ಬನ ವಿರುದ್ಧ ಯುದ್ಧವನ್ನೇ ಸಾರಬೇಕಾಗುತ್ತದೆ. ಅದಕ್ಕೆ ಮೊದಲು ಸಾರಾಸಾರ ವಿಚಾರ ಮಾಡಲೇಬೇಕಲ್ಲವೆ?"

"ಹೌದು, ಹೌದು. ಅದೂ ನಿಜ."

"ನೀವು ಏನೂ ಚಿಂತೆ ಮಾಡದೆ ಆರಾಮಾಗಿ ಇರಿ, ಶ್ರೀಮಂತರು ಈ ಬಗ್ಗೆ ಒಂದು ನಿರ್ಣಯಕ್ಕೆ ಬಂದ ತಕ್ಷಣವೇ ನಿಮಗೆ ಭೆಟ್ಟಿ ಕೊಡುತ್ತಾರೆ."

ಕಾರಭಾರಿ ಅಷ್ಟು ಸ್ಪಷ್ಟವಾಗಿ ಹೇಳಿದ ಬಳಿಕ ಚಿಂತೋಪಂತ ಸುಮ್ಮನಾಗಲೇಬೇಕಾಯಿತು. ಹೋಳಿಗೆ–ತುಪ್ಪ–ಹಾಲಿನ ಮೇಲೆ ಕೈಯೆಳೆಯುವುದರಲ್ಲಿ ಮತ್ತೊಂದು ವಾರ ಕಳೆದುಹೋಯಿತು. ಅದನ್ನೆಲ್ಲ ಜೀರ್ಣಿಸಿಕೊಳ್ಳಲಾರದೆ ವಿರೂಪಾಕ್ಷಪಂತ ಹೊಟ್ಟೆ ನೋವಿನಿಂದ ನರಳತೊಡಗಿದ. ಚಿಂತೋಪಂತನಿಗೂ ಕೂಡ ನೆಗಡಿ–ತಲೆಶೂಲೆಗಳ ಬಾಧೆಗಾರಂಭವಾಯಿತು. ಶ್ರೀಮಂತರ ಸನ್ನಿಧಿಯಲ್ಲಿ ವೈದ್ಯರುಗಳಿಗೇನು ಕೊರತೆ? ಅವರು ಕೊಟ್ಟ ಜೀರ್ಣ ಚೂರ್ಣವನ್ನು ನುಂಗುತ್ತ, ಅದರೊಡನೆ ಊಟವನ್ನೂ ಹೊಡೆಯುತ್ತ ಪಂತರಿಬ್ಬರೂ ಕೊಂಚ ಕಷ್ಟದಿಂದಲೇ ದಿನಗಳೆಯತೊಡಗಿದರು.

ಚಿಂತೋಪಂತನ ತಾಳ್ಮೆಯೆಲ್ಲವೂ ತೀರುತ್ತ ಬಂದಾಗ ಕೊನೆಗೊಂದು ದಿನ ಶ್ರೀಮಂತರಿಂದ ಭೆಟ್ಟಿಯ ನಿರೂಪ ಬಂದಿತು.

ಪಂತರಿಬ್ಬರೂ ಹೋಗಿ ಶ್ರೀಮಂತನಿಗೆ ತಲೆಬಾಗಿ ವಂದಿಸಿದರು. ಪರಶುರಾಮಭಾವು ಅವರಿಗೆ ಹಸ್ತಲಾಘವನ್ನಿತ್ತು, ಕುಳಿತುಕೊಳ್ಳಲು ಆಸನಗಳನ್ನು ತೋರಿಸಿ, ಮುಗುಳ್ನಗುತ್ತ ಕೇಳಿದ: "ಎಲ್ಲಾ ಆರಾಮ ಇದೆಯಲ್ಲವೆ ಪಂತರೆ?"

"ತಮ್ಮ ದಯದಿಂದ ಏನೂ ಕಮ್ಮಿಯಾಗಿಲ್ಲ ಶ್ರೀಮಂತರೆ. ಇಂಥಾ ರಾಜಾತಿಥ್ಯ ನಮಗೆ ಇನ್ನೆಲ್ಲೂ ದೊರೆತಿರಲಿಲ್ಲ."

"ನಮ್ಮನ್ನು ನೋಡಲು ಆತುರರಾಗಿದ್ದಿರಂತಲ್ಲ? ಏನು ಸಮಾಚಾರ?"

"ಸನ್ನಿಧಿಯಲ್ಲಿ ಮೊದಲೇ ಅರಿಕೆ ಮಾಡಿಕೊಂಡಿದ್ದೇವೆ."

ಪರಶುರಾಮಭಾವು ನಸುನಕ್ಕು, ಒಂದು ನಿಮಿಷ ಸುಮ್ಮನಿದ್ದು, ಅನಂತರ ನಿಧಾನವಾಗಿ ಮಾತನಾಡಿದ:

"ನೀವು ಅರಿಕೆ ಮಾಡಿಕೊಂಡ ವಿಷಯ ಸಾಮಾನ್ಯವಾದದ್ದಲ್ಲ. ನಿಮ್ಮ ವಿನಂತಿಯನ್ನು ಮಾನ್ಯಮಾಡಿ ಆ ಪ್ರಕಾರ ನಾವು ಕ್ರಮ ಕೈಗೊಳ್ಳುವುದೇ ಆದರೆ ಅನೇಕ ಪ್ರತಿಕ್ರಿಯೆಗಳುಂಟಾಗುತ್ತವೆ. ಅವುಗಳ ಬಗ್ಗೆ ಸಾಧಕ ಬಾಧಕ ವಿಚಾರ ಮಾಡಿದ ತರುವಾಯವೇ ಒಂದು ನಿರ್ಧಾರಕ್ಕೆ ಬರಬೇಕಾಗುತ್ತದೆ. ಹೌದೋ ಅಲ್ಲವೋ?"

"ಹೌದು ಸರಕಾರ್."

"ಕಿತ್ತೂರು ಅರಸರು ನಮ್ಮ ಸ್ನೇಹಿತರು. ಅವರಿಗೀಗ ವಿಪತ್ತು ಪ್ರಾಪ್ತವಾಗಿದೆ. ಆ ವಿಪತ್ತಿನಿಂದ ಅವರನ್ನುಳಿಸಲು ನೆರವಾಗಬೇಕಾದದ್ದು ನಮ್ಮ ಧರ್ಮ. ಅದೆಲ್ಲಾ ಸರಿಯೆ. ಆದರೆ, ಈಗ ನಾವು ದಂಡು ತೆಗೆದುಕೊಂಡು ಕಿತ್ತೂರನ್ನು ಬಿಡುಗಡೆ ಮಾಡಲು ಹೊರಟರೆ ಟೇಪುವಿನ ವಿರುದ್ಧವಾಗಿ ಯುದ್ಧವನ್ನೇ ಹೂಡಿದಂತಾಗುತ್ತದೆ. ಅಲ್ಲವೆ?"

"ಹೌದು ಸರಕಾರ್."

"ಸದ್ಯಕ್ಕಂತೂ ಟೇಪುವಿಗೂ ನಮಗೂ ಏನೂ ವ್ಯಾಜ್ಯವಿಲ್ಲ. ಅವನಿಂದ ನಮಗೆ ಉಪದ್ರವವೂ ಆಗಿಲ್ಲ. ಹೀಗಿರುವಾಗ ಈಗ ನಾವಾಗಿಯೇ ಅವನ ಮೇಲೇರಿ ಹೋಗುವದೆಂದರೆ ನಾವೇ ಯುದ್ಧಕ್ಕಾರಂಭಿಸಿದ ಹಾಗಾಗುತ್ತದೆ."

"ಅದೂ ನಿಜ ಸರಕಾರ್."

"ತುಂಗಭದ್ರೆಯ ದಕ್ಷಿಣದಲ್ಲೆಲ್ಲ ಸಾಕಷ್ಟು ಬಲಾಢ್ಯನಾದವನೆಂದರೆ ಸದ್ಯಕ್ಕಂತೂ ಟೇಪುವೊಬ್ಬನೇ. ನಮಗೆ ಸಂಬಂಧವಿಲ್ಲದ ವಿಷಯದಲ್ಲಿ ಪ್ರವೇಶಿಸಿ ಅಂಥ ಪ್ರಬಲನೊಡನೆ ವೈರ ಕಟ್ಟಿಕೊಳ್ಳುವುದೆಂದರೆ ವಿಚಾರ ಮಾಡತಕ್ಕ ಮಾತೇ. ಏನೆನ್ನುತ್ತೀರಿ?"

"ಒಪ್ಪಿದೆವು ಬುದ್ಧೀ."

"ಅಲ್ಲದೆ, ಶ್ರೀಮಂತ ಪೇಶ್ವೆ ಸರಕಾರದ ಅನುಮತಿಯಿಲ್ಲದೆ ನಾವು ಇಂಥ ದುಸ್ಸಾಹಸಕ್ಕೆ ಪ್ರವೃತ್ತರಾಗುವುದೂ ಸಾಧ್ಯವಿಲ್ಲ."

"ಅದೂ ಸಹಜವೆ. ಶ್ರೀಮಂತ ಪೇಶ್ವೆ ಸರಕಾರದವರು ಕಿತ್ತೂರಿಗೆ ಸಹಾಯ ಮಾಡಲು ಒಪ್ಪಬಹುದೆಂದೇ ನಾವು ಭಾವಿಸಿದ್ದೇವೆ. ತಮ್ಮ ಅಪ್ಪಣೆಯಾದರೆ ಅವರ ಸನ್ನಿಧಿಗೂ ಹೋಗಿಬರಬೇಕೆಂಬ ವಿಚಾರ ನಮಗಿದೆ."

ಆ ಮಾತಿಗೆ ಪಟವರ್ಧನನಿಂದ ಕೂಡಲೆ ಪ್ರತಿಕ್ರಿಯೆ ಹೊರಡಲಿಲ್ಲ. ಪೇಶವೆಯರ ಮನಸ್ಸಿನಲ್ಲಿದ್ದುದೇನೆಂಬುದು ಆ ವೇಳೆಗಾಗಲೆ ಅವನಿಗೆ ಗೊತ್ತಾಗಿ ಹೋಗಿತ್ತು. ಪುಣೆಯ ದರಬಾರದ ಆಂತರಿಕ ಪರಿಸ್ಥಿತಿ ಆ ಸಮಯಕ್ಕೆ ಸಮರ್ಪಕವಾಗಿರಲಿಲ್ಲವಾದುದರಿಂದ ಅವರಿಗೆ ಅನಾವಶ್ಯಕವಾದ ಹೊರಗಿನ ಗದ್ದಲವಾವುದೂ ಬೇಡವಾಗಿತ್ತು. ತಮ್ಮ ಗಡಿಯವರೆಗೆ ಆಕ್ರಮಣ ಮಾಡಿಬಂದ ಟೀಪುವಿನ ಬಗೆಗೆ ಅವರಿಗೆ ವಿಮಂಚನೆಯೆನಿಸಿದ್ದುದೇನೊ ನಿಜವಾಗಿದ್ದಿತಾದರೂ ಆತ ಪ್ರತ್ಯಕ್ಷವಾಗಿ ತಮ್ಮ ಸೀಮೆಯಲ್ಲಿ ನುಗ್ಗಿಬರುವವರೆಗೂ ಅವನನ್ನು ಕೆಣಕುವುದು ಅವರಿಗೆ ಇಷ್ಟವಿರಲಿಲ್ಲ. ಅನಗತ್ಯವಾದ ಹೋರಾಟಗಳಿಂದ ದೂರವಿರುವುದೇ ಕ್ಷೇಮಕರವೆಂದು ಅವರು ಪರಶುರಾಮಭಾವುವಿಗೆ ಸ್ಪಷ್ಟವಾಗಿ ಸೂಚಿಸಿದ್ದರು. ಕಿತ್ತೂರಿನ ರಾಯಭಾರಿಗಳ ಬಿನ್ನಹದ ವಿಚಾರವಾಗಿ ಆತ ಕಳಿಸಿದ್ದ ಓಲೆಗೆ ಪುಣ್ಯಪಟ್ಟಣದಿಂದ ಮುನ್ನಾ ದಿನವೇ ಉತ್ತರ ಬಂದಿದ್ದಿತು.

ಪೇಶವೆಯರ ಅಂತರಂಗದ ಅಭಿಪ್ರಾಯಗಳನ್ನು ಕುರಿತು ಪರಶುರಾಮಭಾವು ಬಾಯಿ ಬಿಡಲಿಲ್ಲ. ಚಿಂತೋಪಂತನ ಮಾತಿಗೆ ಪ್ರತಿಯಾಗಿ ಆತ ಹೇಳಿದುದಿಷ್ಟು:

"ಶ್ರೀಮಂತರ ಸನ್ನಿಧಿಗೆ ಹೋಗುವ ವಿಚಾರ ನಿಮಗಿದ್ದರೆ ನಾವು ಬೇಡ ಅನ್ನುವದಿಲ್ಲ. ಹೋಗಿ ಬರಬಹುದು. ಆದರೆ, ಅಲ್ಲಿ ಹೋದರೂ ನಿಮಗೆ ಹೆಚ್ಚಿನದೇನೂ ತಿಳಿಯಲಾರದು."

"ತಮ್ಮನ್ನು ವಿಚಾರಿಸದೆ ಶ್ರೀಮಂತರು ಈ ಬಗ್ಗೆ ಏನೂ ಹೇಳುವದಿಲ್ಲವೆನ್ನುವದು ನಮಗೂ ಗೊತ್ತು ಸರಕಾರ್."

"ದಕ್ಷಿಣದ ವಿಚಾರವೇನಿದ್ದರೂ ಅವರು ನಮ್ಮನ್ನು ಕೇಳಲೇಬೇಕಾದದ್ದು ಸಹಜವೇ."

"ಆದಕ್ಕಾಗಿಯೇ ನಾವು ಮೊದಲು ಸರಕಾರದ ಸನ್ನಿಧಿಗೇ ಬಂದದ್ದು."

"ಒಳ್ಳೆಯದು. ಯೋಚಿಸಿ ನೋಡೋಣ. ಒಂದೆರಡು ದಿನ ಬಿಟ್ಟು ಮತ್ತೆ ನಿಮ್ಮನ್ನು ಕರೆಸುತ್ತೇವೆ." ಎಂದು ಹೇಳಿ ಪರಶುರಾಮಪಂತ ಅಂದಿನ ಮಾತು ಮುಗಿಸಿ ಮೇಲಕ್ಕೆದ್ದ.

ಎರಡು ದಿನಗಳ ತರುವಾಯ ಕರೆಯಿಸುವುದಾಗಿ ಆತ ಹೇಳಿದ್ದ

ನಾದರೂ ವಾಸ್ತವವಾಗಿ ಅವನಿಂದ ಕರೆ ಬರಲು ಮತ್ತೊಂದು ವಾರವೇ ಆಯಿತು. ಅವರು ಬಂದು ಮುಜುರೆ ಸಲ್ಲಿಸಿ ಕುಳಿತುಕೊಳ್ಳುತ್ತಲೂ ಆತ ಹೇಳಿದ: "ಶ್ರೀಮಂತರಿಂದ ನಿರೂಪ ಬಂದಿದೆ. ಅದನ್ನು ಕೇಳಿ ನಿಮಗೆ ಆನಂದವಾಗದಿರದು."

"ನಮ್ಮ ಕೋರಿಕೆ ಮಾನ್ಯವಾಯಿತೇ ಬುದ್ಧೀ?"

"ಮಾನ್ಯವಾದಂತೆಯೇ ಸರಿ."

"ಶ್ರೀಮಂತರು ಉದಾರಹೃದಯಿಗಳು. ಅವರ ಕೃಪೆ ನಮ್ಮ ಮೇಲಿರುವುದು ನಮ್ಮ ಭಾಗ್ಯ."

"ನಿಮ್ಮ ವಿನಂತಿಯ ಪ್ರಕಾರ ಸೈನ್ಯವನ್ನೇನೋ ಕಳಿಸಲು ಅವರು ಒಪ್ಪಿದ್ದಾರೆ. ಆದರೆ ಸದ್ಯದ ಪರಿಸ್ಥಿತಿಯಲ್ಲಿ ಯುದ್ಧದ ಖರ್ಚುವೆಚ್ಚ ವಹಿಸುವದು ಸರಕಾರಕ್ಕೆ ಸಾಧ್ಯವಿಲ್ಲವಾದ್ದರಿಂದ ಅದನ್ನೆಲ್ಲಾ ಕಿತ್ತೂರಿನವರೇ ನೋಡಿಕೊಳ್ಳಬೇಕೆಂದು ಶ್ರೀಮಂತರ ಅಪ್ಪಣೆಯಾಗಿದೆ. ಇದಕ್ಕೆ ನೀವು ತಯಾರಾಗಿದ್ದರೆ ಸೈನ್ಯವನ್ನು ಸಜ್ಜುಗೊಳಿಸುತ್ತೇವೆ."

ಸೈನ್ಯದ ಖರ್ಚುವೆಚ್ಚಗಳ ಬಗೆಗೆ ಚಿಂತೋಪಂತ ಹೆಚ್ಚು ಯೋಚನೆಯನ್ನೇ ಮಾಡಲಿಲ್ಲ. ಅದೆಲ್ಲವೂ ತನಗೆ ಸಂಬಂಧಪಡದ ವಿಷಯವೆಂದೇ ಅವನು ಭಾವಿಸಿದ. ಪೇಶವೆ–ಪಟವರ್ಧನರಿಂದ ಸೈನ್ಯ ಸಹಾಯ ತೆಗೆದುಕೊಂಡು ಬರಲೆಂದು ತನ್ನನ್ನು ಕಳಿಸಲಾಗಿದೆ. ಅಷ್ಟನ್ನು ತಾನು ಸಾಧಿಸಿದರಾಯಿತು. ಖರ್ಚುವೆಚ್ಚಗಳ ಜವಾಬುದಾರಿಯೆಲ್ಲವೂ ತಲ್ಲೂರ ದೇಸಾಯರಿಗೆ ಸೇರಿದ ವಿಚಾರ. ಕಿತ್ತೂರಿನ ಬಿಡುಗಡೆಗಾಗಿ ಬರುವ ಸೈನ್ಯದ ವೆಚ್ಚವನ್ನು ಕಿತ್ತೂರಿನವರೇ ವಹಿಸಿಕೊಳ್ಳಬೇಕಾದುದೂ ನ್ಯಾಯವೇ ಸರಿ. ದಂಡನ್ನೂ ಕಳಿಸುವುದಲ್ಲದೆ ಅದರ ವೆಚ್ಚವನ್ನೂ ತಾವೇ ವಹಿಸಿಕೊಳ್ಳಲು ಪೇಶವೆಯವರಾದರೂ ಏಕೆ ಸಿದ್ಧರಾಗಬೇಕು? ಕಿತ್ತೂರಿನವರಿಂದ ಪೇಶವೆ—ಪಟವರ್ಧನರಿಗಾದ ಉಪಕಾರವಾದರೂ ಏನು?

"ಏನೂ ಅಡ್ಡಿಯಿಲ್ಲ ಸರಕಾರ್. ಶ್ರೀಮಂತರ ಅಪ್ಪಣೆ ನಮಗೆ ಮಾನ್ಯವಿದೆ. ನಮಗೆ ಕಾಲಾಳುಗಳಲ್ಲದೆ ಕೆಲವು ತೋಫುಗಳನ್ನೂ ಕೊಡಬೇಕು."

"ತೋಫುಗಳನ್ನೂ ಕೊಡುತ್ತೇವೆ. ಗೋಲಂದಾಜರನ್ನೂ ಕಳಿಸು

ತ್ತೇವೆ. ಸವಾರರದೊಂದು ಪಡೆಯೂ ಬರುತ್ತದೆ, ಬಂದೂಕಿನವರದೊಂದು ದಳವೂ ಬರುತ್ತದೆ. ಅವರಿಗೆ ಬೇಕಾದ ಸಾಮುಗ್ರಿಗಳನ್ನೆಲ್ಲಾ ನೀವೇ ಸರಬರಾಜು ಮಾಡಬೇಕಾಗುತ್ತದೆ."

"ಆಗಬಹುದು ಸರಕಾರ್."

"ಇದರ ಬಗ್ಗೆ ಒಂದು ಕರಾರುಪತ್ರ ಆಗಬೇಕಾಗುತ್ತದೆ–ಅದಕ್ಕೆ ಕಿತ್ತೂರಿನ ಜವಾಬ್ದಾರಿ ಜನರು ಸಹಿಮಾಡಬೇಕಾಗುತ್ತದೆ. ಲಕ್ಷಾಂತರ ಹಣದ ಪ್ರಶ್ನೆ–ನೀವು ಅದರ ಹೊಣೆ ವಹಿಸಬಲ್ಲಿರಾ?"

ಲಕ್ಷಾಂತರ ಹಣವೆಂಬ ಮಾತು ಹೊರಡುತ್ತಲೂ ಚಿಂತೋಪಂತನ ಎದೆ ಕಂಪಿಸಿತು. ಅಂಥ ಭಾರಿ ಹೊಣೆಯನ್ನು ವಹಿಸಿಕೊಳ್ಳುವುದು ಜಾಣತನವಾಗಲಾರದೆಂದೇ ಆತ ಹೇಳಿದ: "ನಮ್ಮದು ಏನಿದ್ದರೂ ರಾಯಭಾರದ ಕಾರ್ಯ. ಕಾಗದ ಪತ್ರಗಳಿಗೆ ಸಹಿ ಹಾಕುವ ಅಧಿಕಾರ ನಮಗಿಲ್ಲ ಸರಕಾರ್. ಅದೆಲ್ಲಾ ನಮ್ಮ ರಾಣೀಸಾಹೇಬರಿಗೇ ಸೇರಿದ್ದು."

"ಹಾಗಾದರೆ ನೀವೀಗ ಹೋಗಿ ಕರಾರುಪತ್ರದ ಸಮಾಚಾರವನ್ನು ಅವರಿಗೆ ತಿಳಿಸಿರಿ. ಕರಾರುಪತ್ರವನ್ನು ಬರೆಯಿಸಿಕೊಟ್ಟಿರುತ್ತೇವೆ. ಅವರ ಇಷ್ಟವಿದ್ದರೆ ಸಹಿ ಹಾಕಲಿ, ಅದು ನಮಗೆ ಮುಟ್ಟಿದ ಕೂಡಲೇ ಮುಂದಿನ ಏರ್ಪಾಡು ಮಾಡುತ್ತೇವೆ."

ಕರಾರುಪತ್ರವನ್ನು ಸಂಗಡ ತೆಗೆದುಕೊಂಡು ಚಿಂತೋಪಂತ ಆ ದಿನವೇ ಹೊರಡಲು ಅಣಿಯಾದ. ವಿರೂಪಾಕ್ಷಪಂತನಿಗೆ ಮಾತ್ರ ಅಲ್ಲಿಂದ ಹೊರಡುವ ಮನಸ್ಸೇ ಇರಲಿಲ್ಲ. ಪಟವರ್ಧನವರ ಅತಿಥಿಗೃಹದಲ್ಲಿನ ಸುಖ ಸೌಕರ್ಯಗಳನ್ನು ಬಿಟ್ಟುಕೊಟ್ಟು ಅಷ್ಟು ದೂರದವರೆಗೆ ಒಣ ಆಹಾರ ಮುಕ್ಕುತ್ತ ಪ್ರವಾಸ ಮಾಡಬೇಕಲ್ಲಾ–ಎಂದು ಆತ ಚಿಂತಿಸತೊಡಗಿದ್ದ.

"ನೀವೊಬ್ಬರೇ ಹೋಗಿ ಬರಬಾರದೇಕೆ ಚಿಂತೋಪಂತರೆ? ಹೇಗೂ ನೀವು ಮತ್ತೆ ಇಲ್ಲಿಗೆ ಬರಲೇಬೇಕಲ್ಲವೆ? ಅಲ್ಲಿಗೆ ಇಬ್ಬರೂ ಹೋಗುವ ಅಗತ್ಯವೇನಿದೆ? ನೀವೊಬ್ಬರಾದರೆ ಸಾಕು."

"ಇಬ್ಬರೂ ಒಟ್ಟಿಗೆ ಬಂದೀವಿ. ಈಗ ಇಬ್ಬರೂ ಹೋದರೇ ಶೋಭೆ. ಮತ್ತೆ ಬಂದೇಬರುವೆವಲ್ಲ?" ಎಂದ ಚಿಂತೋಪಂತ. ವಿರೂಪಾಕ್ಷಪಂತನ ಆಸೆಬುರುಕುತನವನ್ನು ಕಂಡು ಅವನಿಗೂ ಅಸಹ್ಯವೆನಿಸತೊಡಗಿತ್ತು.

"ಒಬ್ಬರಿಂದಾಗುವ ಕೆಲಸಕ್ಕೆ ಇಬ್ಬರು ಹೋಗುವದೆಂದರೆ ಮೂಢತನ ವಲ್ಲವೇ ಪಂತರೆ?" ಎಂದು ಮತ್ತೆ ವಾದಿಸಿದ ವಿರೂಪಾಕ್ಷಪಂತ.

"ನನ್ನೊಬ್ಬನಿಂದಲೇ ಆಗುತ್ತಿದ್ದ ಈ ಕೆಲಸಕ್ಕೆ ನಿಮ್ಮೊಬ್ಬರನ್ನೂ ಕರೆದುತಂದದ್ದು ಮೂಢತನವೆಂದೇ ಒಪ್ಪಿಕೊಳ್ತೇನೆ," ಎಂದು ಸ್ವಲ್ಪ ಕಟು ವಾಗಿಯೇ ನುಡಿದ ಚಿಂತೋಪಂತ.

"ಹೀಗ್ಯಾಕೆ ಸಿಟ್ಟಾಗ್ತೀರಿ ಪಂತರೆ? ನಾನೇನು ಮಾಡಿದೆ ನಿಮಗೆ?"

"ನೀವು ಇನ್ನೇನು ಮಾಡುವದೂ ಬೇಡ. ಸುಮ್ಮನೆ ಇಲ್ಲಿಂದ ಎದ್ದು ನನ್ನ ಸಂಗಡ ಹೊರಟರೆ ದೊಡ್ಡ ಉಪಕಾರ ಮಾಡಿದಂತಾಗ್ತದೆ. ತಲ್ಲೂರಿಗೆ ಹೋದ ಮೇಲೆ ನಿಮ್ಮನ್ನು ಹಾಲು–ತುಪ್ಪ–ಸಕ್ಕರೆಗಳ ಹಂಡೆಗಳಲ್ಲೇ ಮುಳು ಗಿಸುವೆನಂತೆ–ಮೊದಲು ಏಳಿರಿ."

ಆಗ ಮಾತ್ರ ವಿರೂಪಾಕ್ಷಪಂತ ಉಪಾಯವಿಲ್ಲದೆ ಅಲ್ಲಿಂದ ಹೊರಡಲೇ ಬೇಕಾಯಿತು.

ಇತ್ತ ತಲ್ಲೂರಿನಲ್ಲಿ ದೇಸಾಯರೂ ರುದ್ರಮ್ಮಾಜಿಯೂ ಅವರ ಬರು ವನ್ನೇ ಕಾದು ಕುಳಿತಿದ್ದರು. ತಿಮ್ಮನಗೌಡನೂ ಎರಡು ಬಾರಿ ಬಂದು ಹೋಗಿದ್ದ. ಪೇಶವೆ–ಪಟವರ್ದನರಿಂದ ದೊರೆಯುವ ಸಹಾಯದ ಬಗೆಗೆ ಅವನಿಗೇನೂ ಅಂಥ ಭರವಸೆಯಿರಲಿಲ್ಲ. ಎಂತಲೇ ಆತ ಅವರನ್ನು ನೆಚ್ಚಿ ಕುಳಿತುಕೊಳ್ಳದೆ, ಸೈನ್ಯವನ್ನು ಸಿದ್ಧಗೊಳಿಸುವುದಕ್ಕಾಗಿ ತಾನೂ ಪ್ರಯತ್ನ ನಡೆಸಿಯೇ ಇದ್ದ. ಕಿತ್ತೂರಿನ ಹಳ್ಳಿಪಳ್ಳಿಗಳಿಂದ ಹಳಬರೂ ನಾಯಕರೂ ಬಂದು ಸೈನ್ಯಕ್ಕೆ ಸೇರತೊಡಗಿದ್ದರು. ಸೆಟ್ಟಿಗಳನ್ನೂ ಸಾಹುಕಾರರನ್ನೂ ಹುರಿದುಂಬಿಸಿ ಸೈನ್ಯದ ನಿಧಿಗಾಗಿ ಅವರಿಂದ ಹಣ ಶೇಖರಿಸುವ ಕಾರ್ಯವೂ ಭರದಿಂದ ಸಾಗಿತ್ತು.

ಪಂತರೀರ್ವರೂ ತಲ್ಲೂರಿಗೆ ಬಂದು ಪಟವರ್ಧನರ ಕರಾರುಗಳನ್ನು ಕುರಿತು ವರದಿಯೊಪ್ಪಿಸಿದಾಗ ದೇಸಾಯರಿಗಾಗಲಿ ರುದ್ರಮ್ಮಾಜಿಗಾಗಲಿ ಅದರಿಂದ ಆಶ್ಚರ್ಯವೇನೂ ಆಗಲಿಲ್ಲ. ಪೇಶವೆ–ಪಟವರ್ಧನರು ಅಂಥ ದೊಂದು ಷರತ್ತನ್ನು ಮುಂದೆ ಮಾಡಬಹುದೆಂದು ಅವರು ನಿರೀಕ್ಷಿಸಿಕೊಂಡೇ ಇದ್ದರು.

"ಸೈನ್ಯದ ಖರ್ಚನ್ನೇನೊ ನಾವೇ ವಹಿಸಿಕೊಳ್ಳಬಹುದು. ಅಂತೂ

ಅವರು ಸೈನ್ಯ ಕಳಿಸಲು ಒಪ್ಪಿದರಲ್ಲಾ – ಅಷ್ಟು ಸಾಕು," ಎಂದರು ದೇಸಾಯರು.

"ಮೊದ ಮೊದಲು ಅದಕ್ಕೂ ಹಿಂದು ಮುಂದು ನೋಡುತ್ತಿದ್ದರು ಸರಕಾರ್. ಅನಾವಶ್ಯಕವಾಗಿ ಟೀಪುವನ್ನು ಕೆಣಕುವ ಇರಾದೆ ಅವರಿಗಿದ್ದಂತಿರಲಿಲ್ಲ. ಆದರೆ, ಮತ್ತೆ ಏನಾಯಿತೋ ಏನೋ. ಈ ಕರಾರಿನ ಮೇಲೆ ದಂಡು ಕಳಿಸಲು ಒಪ್ಪಿದರು."

"ಅದೇ ಮುತ್ಸದ್ದಿತನ ಪಂತಜಿ. ಪುಣ್ಯಪಟ್ಟಣದವರು ಇಂಥಾದ್ದರಲ್ಲೆಲ್ಲ ಪಳಗಿದವರು. ನನ್ನಂತೆ ಒಂದು ಕಡಿತ–ಎರಡು ತುಂಡು ಅನ್ನುವಂಥ ಜನರಲ್ಲ."

"ಒಂದು ವಾರದೊಳಗಾಗಿ ಅವರ ಧೋರಣೆ ಹ್ಯಾಗೆ ಬದಲಾಯಿತೋ ಅಂತ ನನಗೆ ಆಶ್ಚರ್ಯ?" ಎಂದ ಚಿಂತೋಪಂತ.

"ರಾಜಕಾರಣಿಗಳು ಯಾವಾಗ ಯಾವ ಧೋರಣೆ ತಳೆಯುವರೆಂಬುದನ್ನು ಅವರ ಆಪ್ತಮಿತ್ರರೂ ಹೇಳುವದಕ್ಕಾಗುವದಿಲ್ಲ." ಎಂದರು ದೇಸಾಯರು. "ಅದೇನೇ ಇರಲಿ. ಅಂತೂ ಒಪ್ಪಿದರಲ್ಲ. ಸಂತೋಷ. ಈ ಕೆಲಸ ಸಾಧಿಸಲು ನೀವೂ ಬಹಳ ಕಷ್ಟಪಟ್ಟಿರಿ. ನಿಮ್ಮ ಉಪಕಾರವನ್ನು ನಾವೆಂದೂ ಮರೆಯುವಂತಿಲ್ಲ."

"ಅಯ್ಯೊ ಅಯ್ಯೊ! ಕಿತ್ತೂರಿನ ಉಪ್ಪು ಉಂಡ ನಾವು ಅದಕ್ಕಾಗಿ ಸೇವೆ ಸಲ್ಲಿಸುವದು ನಮ್ಮ ಕರ್ತವ್ಯವೇ ಆಗಿದೆ. ಅದರಲ್ಲಿ ಉಪಕಾರದ ಪ್ರಶ್ನೆಯೇ ಇಲ್ಲ. ತಾವು ಇಂಥ ಮಾತು ಆಡಿದರೆ ನನಗೆ ನಾಚಿಕೆಯಾಗ್ತದೆ ಸರಕಾರ್."

"ಇರಲಿರಲಿ. ನಿಮ್ಮ ಸೇವೆಗೆ ತಕ್ಕ ಪ್ರತಿಫಲ ಇಂದಿಲ್ಲ ನಾಳೆ ಸಿಕ್ಕೇ ಸಿಗುತ್ತದೆ. ಮೊದಲು ಎಲ್ಲರೂ ಸೇರಿ ಕಿತ್ತೂರನ್ನು ಯವನರ ದಾಸ್ಯದಿಂದ ಮುಕ್ತಗೊಳಿಸೋಣ."

ಕರಾರು ಪತ್ರಕ್ಕೆ ಸಹಿ ಹಾಕಿ ಪುನಃ ಅದನ್ನು ಮಿರಜಕ್ಕೆ ಕಳುಹಿಸಿದುದಾಯಿತು. ಇತ್ತ ತಲ್ಲೂರಿನಲ್ಲಿ ಯುದ್ಧದ ಸಿದ್ಧತೆ ಭರದಿಂದ ನಡೆಯತೊಡಗಿತು. ಕಿತ್ತೂರಿನ ಸಮೀಪದಲ್ಲಿಯೇ ಇದ್ದ ಹಳ್ಳಿಗಳಲ್ಲಿ ಅನ್ನಧಾನ್ಯಗಳನ್ನೂ ಶಸ್ತ್ರಾಸ್ತ್ರಗಳನ್ನೂ ಗುಪ್ತವಾಗಿ ಸಂಗ್ರಹಿಸುತ್ತಿದ್ದ ತಿಮ್ಮನಗೌಡ.

ಸಮಯ ಸಾಧಿಸಿ ಕೋಟೆಯ ಮೇಲೆ ಮಿಂಚಿನ ದಾಳಿ ನಡೆಸಿ ಅಲ್ಲಿ ಬೀಡು ಬಿಟ್ಟಿದ್ದ ಟೀಪುವಿನ ಅಧಿಕಾರಿಯನ್ನು ಹೊಡೆದೋಡಿಸಲು ಸರ್ವಸನ್ನಾಹ ನಡೆಯುತ್ತಿತ್ತು. ಸೇನಾಪತಿ ಬುರ್ಹಾನುದ್ದೀನ್ ಆಗ ಕಿತ್ತೂರಿನಲ್ಲಿರಲಿಲ್ಲ–ಸುಲ್ತಾನನ ಅಪ್ಪಣೆಯಂತೆ ಆತ ಬಿದನೂರಿನ ಕಡೆಗೆ ಹೊರಟುಹೋಗಿದ್ದ. ಅವನ ಬದಲು ಬುದ್ರುಲ್‌ಜಮಾನಖಾನ ಎಂಬ ಸರದಾರನೊಬ್ಬ ಕೋಟೆಯ ಅಧಿಕಾರಿಯಾಗಿದ್ದ. ಬುರ್ಹಾನುದ್ದೀನನಂತೆ ಅವನು ಸೇನಾಪತಿಯೂ ಆಗಿರಲಿಲ್ಲ, ಪರಾಕ್ರಮಿಯೂ ಆಗಿರಲಿಲ್ಲ. ಕೋಟೆಯನ್ನು ವಶಪಡಿಸಿಕೊಳ್ಳಲು ಹೊಂಚು ಹಾಕುತ್ತಿದ್ದ ಕಿತ್ತೂರಿನ ಜನರಿಗೆ ಅದೊಂದು ಅನುಕೂಲವೇ ಆಗಿತ್ತು.

೧೮

ಕಿತ್ತೂರು ಅರಮನೆಯ ದರಬಾರಗೃಹವನ್ನು ವಿಲಾಸ ಗೃಹವನ್ನಾಗಿ ಪರಿವರ್ತಿಸಿಕೊಂಡು ಸರದಾರ ಬುದ್ರುಲ್‌ಜಮಾನಖಾನ ಸುಖವಾಗಿ ಕಾಲ ಕಳೆಯುತ್ತಿದ್ದ. ಬಿಜಾಪುರದ ಸುಲ್ತಾನನ ದರಬಾರದಲ್ಲಿ ಎಂಟು ಹತ್ತು ವರ್ಷಗಳ ವರೆಗೆ ಇದ್ದವನಾದುದರಿಂದ ಆತನ ಸುಖೋಪಭೋಗಗಳ ಪರಂಪರೆ ಅವನಿಗೂ ಅಂಟಿಕೊಂಡಿತ್ತು. ಯಾವುದೋ ಒಂದು ನಿಮಿತ್ತದಿಂದ ಬಿಜಾಪುರದ ಸುಲ್ತಾನನ ಕೃಪೆಯನ್ನು ಕಳೆದುಕೊಂಡು ಆತ ಶ್ರೀರಂಗಪಟ್ಟಣಕ್ಕೆ ಹೋಗಿ ಟೀಪುವಿನ ಆಶ್ರಯದಲ್ಲಿ ನಿಂತುಕೊಂಡಿದ್ದ. ಬಿಜಾಪುರದಂಥ ಸಂಪತ್ಸಮೃದ್ಧ ರಾಜ್ಯದಿಂದ ಬಂದ ಸರದಾರನಿಗೆ ಆಶ್ರಯವನ್ನು ನಿರಾಕರಿಸುವಂತಿರಲಿಲ್ಲ. ತನ್ನ ದರಬಾರದಲ್ಲಿಯೂ ಇಂಥ ಸರದಾರರಿದ್ದರೆ ಅದಕ್ಕೊಂದು ಶೋಭೆ ಬರುವುದೆಂದೇ ಟೀಪು ಭಾವಿಸಿಕೊಂಡಿದ್ದ. ಬುದ್ರುಲ್‌ಜಮಾನಖಾನನ ಅರ್ಹತೆಯನ್ನಾಗಲಿ, ಯೋಗ್ಯತೆಯನ್ನಾಗಲಿ ಒರೆಗೆ ಹಚ್ಚಿ ಪರೀಕ್ಷಿಸುವಗೊಡವೆಗೇ ಹೋಗದೆ ಅವನನ್ನು ಸರದಾರನನ್ನಾಗಿ ಮಾಡಿ ಅಧಿಕಾರಕ್ಕೇರಿಸಿದುದಾಗಿತ್ತು. ಪ್ರಶಂಸಾಪ್ರಿಯನಾದ ಸುಲ್ತಾನನ್ನು ಹೊಗಳಿ ಹೊಗಳಿ ಆತನ ವಿಶ್ವಾಸ ಗಳಿಸಿಕೊಂಡಿದ್ದ ಜಮಾನಖಾನ. ಎಂತಲೇ ದೂರದ ಕಿತ್ತೂರಿಗೊಬ್ಬ ನಂಬುಗೆಯ ಅಧಿಕಾರಿಯನ್ನು ಕಳಿಸಬೇಕಾದ ಪ್ರಸಂಗ ಬಂದಾಗ ಟೀಪು ಜಮಾನಖಾನನನ್ನೇ ಕಳಿಸಿಕೊಟ್ಟಿದ್ದ.

ಜನರನ್ನು ಪರೀಕ್ಷಿಸಿ ಅವರ ಯೋಗ್ಯತೆಯನ್ನರಿತುಕೊಳ್ಳುವುದರಲ್ಲಿ ಪರಿಣತನಾಗಿದ್ದ ಬುರ್ಹಾನುದ್ದೀನನಿಗೆ ಮಾತ್ರ ಈ ಬಿಜಾಪುರದ ಹೊಗಳು ಭಟನ ನಿಜವಾದ ಸ್ವರೂಪವೇನೆಂಬುದು ಎಂದೋ ಗೊತ್ತಾಗಿಹೋಗಿತ್ತು. ಕಿತ್ತೂರಿನ ರಕ್ಷಣೆಯ ಜವಾಬ್ದಾರಿಯನ್ನು ಇಂಥ ಅಸಮರ್ಥ ವ್ಯಕ್ತಿಗೊಪ್ಪಿಸಿದ ಸುಲ್ತಾನನ ರೀತಿ ಬುರ್ಹಾನುದ್ದೀನನಿಗೆ ಎಷ್ಟು ಮಾತ್ರಕ್ಕೂ ಸರಿಬಂದಿರಲಿಲ್ಲ. ಕಿತ್ತೂರಿನಂಥ ಗಂಡುಮೆಟ್ಟಿನ ಭೂಮಿಯನ್ನು ಕೈಯಲ್ಲಿಟ್ಟುಕೊಳ್ಳಲು ಗಂಡುಗಲಿಗಳೇ ಬೇಕು; ಜಮಾನಖಾನನಂಥ ವಿಲಾಸಪ್ರಿಯನೂ ದುರ್ಬಲನೂ ಆದ ಸರದಾರನ ಕೈಯಲ್ಲಿ ಇಂಥ ನಾಡು ಬಹುಕಾಲ ಉಳಿಯುವುದು ಶಕ್ಯವೇ ಇಲ್ಲ; ತಾವು ಗಳಿಸಿದುದನ್ನು ಆತ ಕಳೆದುಕೊಳ್ಳುವುದು ಖಂಡಿತ—ಎಂದೇ ಬುರ್ಹಾನುದ್ದೀನ ಭಾವಿಸಿದ್ದ. ಅವನ ನೇಮಕವನ್ನು ವಿರೋಧಿಸುವ ಪ್ರಶ್ನೆಯೇ ಇರಲಿಲ್ಲ. ಸುಲ್ತಾನನ ಆಜ್ಞೆಯನ್ನು ವಿರೋಧಿಸಿ ಅವನ ರೋಷವನ್ನು ಕೆಣಕುವ ಉಪದ್ವ್ಯಾಪಕ್ಕೆ ಬುರ್ಹಾನುದ್ದೀನನೆಂದೂ ಕೈಹಾಕಿದವನಲ್ಲ.

"ಖುದಾನ ಮರ್ಜಿಯಿದ್ದಂತೆ ಆಗುತ್ತದೆ," ಎಂದು ತನ್ನಷ್ಟಕ್ಕೆ ತಾನೆ ಹೇಳಿಕೊಂಡು, ಕಿತ್ತೂರನ್ನು ಜಮಾನಖಾನನಿಗೊಪ್ಪಿಸಿ ಬುರ್ಹಾನುದ್ದೀನ ಹೊರಟುಹೋಗಿದ್ದ. ರಾಜಕೀಯ ವಿಚಾರಗಳಲ್ಲಿ ಆತನಿಗೆ ಸಲಹೆಯಿಯಾಯುತ್ತಿದ್ದ ಮುತ್ಸದ್ದಿ ವೆಂಕಟರಂಗಯ್ಯನೂ ಕೆಲದಿನಗಳ ಹಿಂದೆಯೇ ರಾಜಧಾನಿಗೆ ಹಿಂದಿರುಗಿದ್ದ.

ಬುದ್ರುಲ್ ಜಮಾನಖಾನನಿಗೆ, ಕಿತ್ತೂರು, ಅದರ ಸುತ್ತಲಿನ ಸೀಮೆ, ಅಲ್ಲಿನ ಜನರ ಸ್ವಭಾವ ವೈಶಿಷ್ಟ್ಯ ಯಾವುದರ ಬಗೆಗೂ ಕೊಂಚವೂ ತಿಳಿವಳಿಕೆಯಿರಲಿಲ್ಲ. ಇಂಥ ಪುಟ್ಟ ರಾಜ್ಯವೊಂದನ್ನು ಅಂಕೆಯಲ್ಲಿಟ್ಟುಕೊಳ್ಳುವುದು ಅತ್ಯಂತ ಸುಲಭವೆಂದೇ ಆತ ಭಾವಿಸಿದ್ದ. ಕೋಟೆಯ ರಕ್ಷಣೆಗಾಗಿ ಅಲ್ಲಿ ಕಾದಿಡಲಾಗಿದ್ದ ಹತ್ತು ತೋಫುಗಳ ಬಲದ ಮೇಲೆಯೇ ತಾನು ನಿಶ್ಚಿಂತೆಯಿಂದ ಕಾಲ ಕಳೆಯಬಹುದೆಂದು ಆತ ನಂಬಿಕೊಂಡಿದ್ದ. ತೋಫುಗಳ ಜೊತೆಯಲ್ಲಿಯೇ ಎರಡು ಸಾವಿರದಷ್ಟು ಕಾಲ್ದಳವೂ ಇತ್ತು. ಇನ್ನೆರಡು ಸಾವಿರದಷ್ಟು ಅಶ್ವದಳವೂ ಇತ್ತು. "ಇಂಥ ದೊಡ್ಡ ಸೈನ್ಯವನ್ನು ಕೆಣಕುವ ಸಾಹಸ ಈ ಕಿತ್ತೂರಿನ ಇಲಿಗಳಿಗೆಲ್ಲಿಂದ ಬಂದೀತು!" ಎಂದುಕೊಂಡು, ತನ್ನ ಮೇಲೆ ದಾಳಿ ನಡೆಯಬಹುದೆಂಬ ವಿಚಾರವನ್ನೇ ಇಟ್ಟುಕೊಳ್ಳದೆ

'ಖಾನಾ— ಪೀನಾ— ಗಾನಾ'ಗಳಲ್ಲಿ ಮಗ್ನನಾಗಿದ್ದ ಜಮಾನಖಾನ. ಕಿತ್ತೂರ ನಾಡಿನ ಮೂಲೆ ಮೂಲೆಗಳಿಂದ ಗಾಯಕ—ಗಾಯಕಿಯರನ್ನೂ ನರ್ತಕ-ನರ್ತಕಿಯರನ್ನೂ ಬರಮಾಡಿಕೊಂಡು ಆತ ಚಕ್ಕಂದದಿಂದ ಕಾಲ ಕಳೆಯುತ್ತಿದ್ದ. ರಾತ್ರಿಯಾಗುತ್ತಲೂ ದರಬಾರ ಗೃಹದಲ್ಲಿ ಆರಂಭವಾಗುತ್ತಿದ್ದ ಗಾಯನ—ವಾದನ—ನರ್ತನಗಳ ಗದ್ದಲ ಬೆಳಗಿನ ಜಾವದ ವರೆಗೂ ನಡೆದೇ ಇರುತ್ತಿತ್ತು.

ಮುಖ್ಯಾಧಿಕಾರಿಯೇ ಈ ರೀತಿ ನಿಶ್ಚಿಂತನಾಗಿರುವಾಗ ಅವನ ಕೈಕೆಳಗಿನ ಜನರೂ ಅವನ ವರ್ತನೆಯನ್ನೇ ಅನುಸರಿಸುವುದು ಸಹಜವಾಗಿತ್ತು. ಸೈನಿಕರ ಶಸ್ತ್ರಾಸ್ತ್ರಗಳು ಮೂಲೆ ಹಿಡಿದು ಬಿದ್ದುಕೊಂಡಿದ್ದುವು. ಅನೇಕ ದಿನಗಳಿಂದ ಅವರಿಗೆ ಕವಾಯಿತನ ತರಬೇತಿಯೂ ದೊರಕಿರಲಿಲ್ಲ. ಸೈನ್ಯಾಧಿಕಾರಿಗಳು, ಸೈನಿಕರು ಎಲ್ಲರೂ ಮೋಜು ಮಾಡುವುದರಲ್ಲಿಯೇ ಮಗ್ನರಾಗಿದ್ದರು. ತಮ್ಮನ್ನು ಓಡಿಸುವುದಕ್ಕಾಗಿ ಕಿತ್ತೂರಿನ ಜನರು ಗುಪ್ತರೀತಿಯಿಂದ ನಡಸಿದ್ದ ಚಟುವಟಿಕೆಗಳಾವುವೂ ಅವರಿಗೆ ಗೊತ್ತಾಗಿರಲಿಲ್ಲ. ಗೂಢಚಾರ ಪಡೆ ಕೆಲಸ ಮಾಡುತ್ತಿದ್ದರೆ ತಾನೆ ಇಂಥ ರಹಸ್ಯ ಸಂಗತಿಗಳು ತಿಳಿದುಬರುವುದು? ಆ ಪಡೆಯೂ ಇನ್ನಿತರರಂತೆಯೇ ನಿಷ್ಕ್ರಿಯವಾಗಿದ್ದುಕೊಂಡು ಕೇವಲ ಮನೋರಂಜನೆಯಲ್ಲಿಯೆ ತಲ್ಲೀನವಾಗಿತ್ತು.

ತಿಮ್ಮನಗೌಡನ ಗೂಢಚಾರರು ಮಾತ್ರ ಕೋಟೆಯಲ್ಲಿನ ಆಯಕಟ್ಟಿನ ಸ್ಥಳಗಳಲ್ಲೆಲ್ಲ ಪ್ರವೇಶಿಸಿ, ಅಲ್ಲಿ ನಡೆಯುತ್ತಿದ್ದ ಕಾರ್ಯಕಲಾಪಗಳ ವರದಿಯನ್ನು ನಿತ್ಯವೂ ತಮ್ಮ ಒಡೆಯನಿಗೆ ಮುಟ್ಟಿಸುತ್ತಿದ್ದರು. ಖಾನನ ವಿಲಾಸಕೂಟಗಳಲ್ಲಿ ಭಾಗಿಗಳಾಗುತ್ತಿದ್ದ ಕಲಾವಿದ ಕಲಾವಿದೆಯರಲ್ಲೂ ಅನೇಕರು ತಿಮ್ಮನಗೌಡನ ಹಸ್ತಕರಾಗಿದ್ದರು. ಅಡುಗೆಮನೆ, ಉಗ್ರಾಣ, ಸರಬರಾಜು ಖಾತೆ ಮೊದಲಾದ ಹಲವು ಮಹತ್ತ್ವದ ಸ್ಥಾನಗಳನ್ನೂ ಕಿತ್ತೂರಿನ ದೇಶಪ್ರೇಮಿಗಳು ಉಪಾಯದಿಂದ ವಶಪಡಿಸಿಕೊಂಡಿದ್ದರು. ಪಹರೆಯ ಕೆಲಸವೊಂದನ್ನುಳಿದ ಇನ್ನಿತರ ಎಲ್ಲ ಕೆಲಸಗಳಲ್ಲೂ ಅವರು ಪ್ರವೇಶಿಸಿದ್ದರೆಂದರೂ ಸರಿಯೆ.

ಈ ರೀತಿಯಾಗಿ, ತಿಮ್ಮನಗೌಡ ಕೋಟೆಯನ್ನು ವಶಪಡಿಸಿಕೊಳ್ಳಲು ಒಳಗೂ ಸಿದ್ಧತೆ ನಡಸಿದ್ದ, ಹೊರಗೂ ನಡಸಿದ್ದ. ಸರದಾರ ಬುದ್ರುಲ್

ಜಮಾನಖಾನನಿಗೆ ಮಾತ್ರ ಅದರ ಸುಳುವೂ ತಿಳಿದಿರಲಿಲ್ಲ.

ಇಂಥ ಎಚ್ಚರುಗೇಡಿಯೊಬ್ಬನ ಕೈಯಲ್ಲಿ ಕೋಟೆಯಿರುವಾಗ ಅದನ್ನು ಸ್ವಾಧೀನಪಡಿಸಿಕೊಳ್ಳುವುದು ಅಂಥ ಪ್ರಯಾಸದ ವಿಚಾರವೇನೂ ಅಲ್ಲ ವೆಂಬುದು ಮನವರಿಕೆಯಾಗುತ್ತಲೂ, ಅದಕ್ಕಾಗಿ ಪಟವರ್ಧನರ ಸಹಾಯ ಆಗತ್ಯವೂ ಇಲ್ಲವೆಂದು ತಿಮ್ಮನಗೌಡನಿಗನ್ನಿಸಿತು. ಕವಾಯತು ಕಲಿತು, ತರಬೇತಿ ಪಡೆದು ಸಿದ್ಧವಾದ ಕಿತ್ತೂರಿನ ಮೂರು ಸಾವಿರ ಸೈನಿಕರಿಂದಲೇ ಈ ಕಾರ್ಯ ಸಾಧಿಸಬಹುದೆಂದು ಅವನಿಗೆ ತೋರಿತು.

ವೀರಸಂಗಪ್ಪನೊಡನೆ ಈ ವಿಚಾರ ಪ್ರಸ್ತಾಪಿಸುತ್ತ ಆತ ಹೇಳಿದ:

"ಆ ಪೇಶವೆಯರಿಗೂ ಪಟವರ್ಧನರಿಗೂ ನಿಜವಾಗಿ ನಮಗೆ ನೆರವು ನೀಡಲು ಇಚ್ಛೆಯಿಲ್ಲ. ಚಿಂತೋಪಂತ–ವಿರುಪಾಕ್ಷಪಂತರಂಥ ಅವರ ಜನರೇ ಹೋಗಿ ದುಂಬಾಲುಬಿದ್ದು ಕೇಳಿಕೊಂಡದ್ದರಿಂದ ನಮ್ಮ ಮೇಲೆ ದೊಡ್ಡ ಉಪಕಾರ ಮಾಡುವವರಂತೆ ಸ್ವಲ್ಪ ದಂಡು ಕಳಿಸಲು ಒಪ್ಪಿದಾರೆ. ಅದೂ ಬಾಡಿಗೆಯ ದಂಡು. ಆದರ ಖರ್ಚೆಲ್ಲಾ ನಮ್ಮ ತಲೆಯ ಮೇಲೇ. ಬಾಡಿಗೆಗೆ ಬಂದ ಆ ದಂಡು ನಮ್ಮಂತೆ ಅಭಿಮಾನದಿಂದ ಯುದ್ಧಮಾಡುವುದೂ ಶಕ್ಯವಿಲ್ಲ. ಅಲ್ಲವೇ ಸರ್ದಾರರೆ?"

"ಅದಂತೂ ಸ್ಪಷ್ಟವೇ ಇದೆ."

"ಜಮಾನಖಾನನಂಥ ಹೇಡಿಯನ್ನೋಡಿಸಲು ಇಂಥಾ ಬಾಡಿಗೆಯ ದಂಡಿನ ಅಗತ್ಯವೇನೂ ಇಲ್ಲವೆಂದೇ ನನಗನಿಸ್ತದೆ. ಈಗ ನಾವು ಕಲೆ ಹಾಕಿದ ನಮ್ಮ ಸೈನಿಕರೇ ಈ ಕೆಲಸವನ್ನು ಸುಲಭವಾಗಿ ಸಾಧಿಸಿಯಾರು."

"ನನಗೂ ಹಾಗೇ ಅನಿಸ್ತದೆ ನಾಯಕರೆ."

"ರಾಣೀ ಸಾಹೇಬರಿಗೂ ದೇಸಾಯಿಸಾಹೇಬರಿಗೂ ಈ ಸಂಗತಿ ತಿಳಿಸಿ ಅವರ ಅಭಿಪ್ರಾಯ ತಿಳುಕೊಂಡು ಬರ್ತೀರಾ ಸರದಾರರೆ?"

"ಆದರೊಂದು ಮಾತು. ಈಗ ನಾವು ಈ ವಿಷಯ ಎತ್ತುವದು ಸರಿಯಾಗುವುದೋ ಇಲ್ಲವೊ. ಪಟವರ್ಧನರ ಕರಾರುಗಳಿಗೊಪ್ಪಿ ಸಹಿ ಹಾಕಿ ಕಳಿಸಿದ್ದೂ ಆಗಿದೆ. ಅದಕ್ಕೆ ಮೊದಲೇ ನಾವು ಈ ಸಂಗತಿ ಎತ್ತಿದರೆ ಒಳ್ಳೆಯದಾಗಬಹುದಿತ್ತು. ಕರಾರು ಪತ್ರ ಕಳಿಸಿದ ಮೇಲೆ ಆದರಂತೆ ನಡೆದುಕೊಳ್ಳಲೇಬೇಕಾಗ್ತದೆ. ಪಟವರ್ಧನರ ದಂಡು ಈಗಾಗಲೇ ಮಿರಜಿ ಯಿಂದ ಹೊರಟೂ ಇರಬಹುದು."

"ಹೌದು ಹಾಗಾಗುವುದೂ ಸಾಧ್ಯ. ಹೊರಟ ಸೈನ್ಯಕ್ಕೆ ಬೇಡ ಅಂತ ಹೇಳಿ ಹಿಂದೆ ಕಳಿಸಲು ಬರುವದಿಲ್ಲ. ಹಾಗೆ ಮಾಡಿದರೆ ಅವರ ಅಭಿಮಾನ ಭಂಗವಾಗಿ ದ್ವೇಷವೂ ಬೆಳೆಯಬಹುದು, ನಿಜ. ನಿಜ."

ವೀರಸಂಗಪ್ಪ ಒಂದು ಕ್ಷಣ ಯೋಚಿಸುತ್ತಿದ್ದು ಅನಂತರ ಹೇಳಿದ:

"ಅವರು ಬಂದರೆ ಬರಲಿ. ಬೇಡ ಅನ್ನುವದು ಬೇಡ. ಆದರೆ ಅವರು ಬಂದು ಮುಟ್ಟುವದರೊಳಗಾಗಿ ನಾವೇ ದಾಳಿಮಾಡಿ ಕೋಟೆ ಗೆದ್ದು ಕೊಂಡರೆ ಹ್ಯಾಗೆ?"

"ಆಗಬಹುದಲ್ಲ? ಹಾಗೆ ಮಾಡಲು ಯಾರ ಅಡ್ಡಿಯೂ ಇರಲಾರದು."

"ಈ ಸಂಗತಿಯನ್ನೂ ನಾವು ದೇಸಾಯಿ ಸಾಹೇಬರ ಕಿವಿಯಮೇಲೆ ಹಾಕಿದರೊಳ್ಳೆಯದು, ಅಲ್ಲವೆ?"

"ಅವರನ್ನು ಕೇಳಿಯೇ ಮುಂದಿನ ಕಾರ್ಯ ಕೈಗೊಳ್ಳೋಣವಂತೆ. ಅವರೇನು ಬೇಡ ಅನ್ನಲಿಕ್ಕಿಲ್ಲ."

ಆ ರಾತ್ರಿಯೇ ಅವರಿಬ್ಬರೂ ತಲ್ಲೂರಿಗೆ ಹೋಗಿ ದೇಸಾಯರೆದುರು ಈ ವಿಚಾರ ಪ್ರಸ್ತಾಪಿಸಿದಾಗ ದೇಸಾಯರು ಒಡನೆಯೇ ಏನನ್ನೂ ಹೇಳಲಿಲ್ಲ.

"ಹೀಗೆ ಆತುರದಿಂದ ಏನೂ ಮಾಡುವದು ಬೇಡ. ಸಾವಕಾಶವಾಗಿ ವಿಚಾರಮಾಡಿ ಏನೆಂಬುದನ್ನು ನಿರ್ಧರಿಸೋಣ. ನೀವೀಗ ವಿಶ್ರಾಂತಿ ಪಡೆಯಿರಿ," ಎಂದು ಹೇಳಿ ಅವರನ್ನು ಅತಿಥಿಗೃಹಕ್ಕೆ ಕಳಿಸಿಕೊಟ್ಟರು.

ದೇಸಾಯರು ಮಾತ್ರ ಮತ್ತೆ ಮಲಗಿಕೊಳ್ಳಲಿಲ್ಲ. ಈ ವಿಚಾರದಲ್ಲಿ ಮಗಳ ಅಭಿಪ್ರಾಯವೇನೆಂಬುದನ್ನು ತಿಳಿದುಕೊಂಡೇ ಮುಂದುವರೆಯು ವುದು ಸೂಕ್ತವೆಂದು ಬಗೆದು ಆಕೆಯನ್ನು ಕರೆಕಳುಹಿಸಿದರು.

ವಿಷಯವೇನೆಂಬುದು ಗೊತ್ತಾಗುತ್ತಲೂ, ತಿಮ್ಮನಗೌಡನ ಆಲೋಚನೆಯಂತೆ ಕಾರ್ಯಸಾಧಿಸುವುದೇ ಒಳ್ಳೆಯದೆಂದು ರುದ್ರಮ್ಮಾಜಿಗನ್ನಿಸಿತು. ಅದು ಸ್ವಾಭಿಮಾನಿಗಳ ದಾರಿ; ಸ್ವಾತಂತ್ರ್ಯ ಪ್ರೇಮಿಗಳ ದಾರಿ. ತಮ್ಮ ರಾಜ್ಯವನ್ನು ವೈರಿಗಳ ಹಿಡಿತದಿಂದ ಬಿಡಿಸಿಕೊಳ್ಳುವುದಕ್ಕಾಗಿ ಅವರಿವರ ನೆರವು ಬೇಡುತ್ತ ತಿರುಗುವುದು ಆತ್ಮಗೌರವದ ದೃಷ್ಟಿಯಿಂದ ಸರಿಯಾದುದಲ್ಲ. ವಿಶ್ವಾಸದಿಂದ ಸಹಾಯ ನೀಡುವ ಬಂಧುಗಳಿದ್ದರೆ ಅದೊಂದು ರೀತಿ. ಆದರೆ, ಪೇಶವೆ-ಪಟವರ್ಧನರೊಡನೆ ಅಂಥ ಬಂಧುತ್ವವೇನೂ ಇರಲಿಲ್ಲ.

ಅನಿವಾರ್ಯ ಪ್ರಸಂಗವೆಂದು ಅಂಥವರ ನೆರವು ಪಡೆಯಬೇಕಾಗಿದ್ದಿತಷ್ಟೆ. ವೈರಿಯನ್ನು ಸೇರಿಸಿ ಓಡಿಸಲು ತಮ್ಮ ಸೇನೆಯೇ ಸಮರ್ಥವಾಗಿದ್ದ ವಿಚಾರವನ್ನು ತಿಮ್ಮನಗೌಡ ಮೊದಲೇ ತಿಳಿಸಿದ್ದಲ್ಲಿ ಪರರಿಂದ ಸಹಾಯ ದೊರಕಿಸುವ ಪ್ರಯತ್ನಕ್ಕೂ ತಾನು ಅನುಮತಿ ಕೊಡುತ್ತಿರಲಿಲ್ಲ.

ಹಾಗೆ ಯೋಚಿಸಿ ರುದ್ರಮ್ಮಾಜಿ ಹೇಳಿದಳು :

"ಸೇನಾನಾಯಕರ ವಿಚಾರದಂತೆ ಮುಂದುವರಿಯುವದೇ ಸರಿಯೆಂದು ನನಗೂ ಅನಿಸುತ್ತದೆ ಅಪ್ಪಾಜಿ. ನಿಮ್ಮ ಅಭಿಪ್ರಾಯ ಏನಿದೆಯೊ?"

"ಅದೇ ಸರಿಯೆಂದು ನನಗೂ ಅನಿಸುತ್ತದೆ ರುದ್ರಾಣೀ. ಆದರೆ, ಈ ಪ್ರಸಂಗದಲ್ಲಿ ನಾವು ದುಡುಕುವದು ತರವಲ್ಲ. ಪಟವರ್ಧನರಿಗೆ ಹೇಳಿ ಕಳಿಸಿದ್ದಂತೂ ಆಗಿದೆ. ಅವರು ಬರುವವರೆಗೂ ಕಾಯಲೇಬೇಕಾದ್ದು ನಮ್ಮ ಧರ್ಮ."

"ಅದೇಕೆ ಕಾಯಬೇಕು ಅಪ್ಪಾಜಿ? ನನಗೆ ಅರ್ಥವಾಗುವದಿಲ್ಲ. ಅವರು ಅಂಥ ಕರಾರನ್ನೇನೂ ಹಾಕಿಲ್ಲವಲ್ಲ?"

"ಕರಾರೇನೂ ಇಲ್ಲ ರುದ್ರಾಣೀ. ಆದರೂ, ಸಜ್ಜನಿಕೆ ಶಿಷ್ಟಾಚಾರಗಳ ದೃಷ್ಟಿಯಿಂದ ನಾವೇ ಹೀಗೆ ನಿರ್ಬಂಧ ಹಾಕಿಕೊಳ್ಳಬೇಕಾಗುತ್ತದೆ."

ಆಗಲೂ ಅರ್ಥವಾಗಲಿಲ್ಲ ರುದ್ರಮ್ಮಾಜಿಗೆ. ತಂದೆಯ ವಾದ ಒಪ್ಪಿಗೆಯಾಗುವಂತಿರಲಿಲ್ಲ.

"ಇದರಲ್ಲಿ ಶಿಷ್ಟಾಚಾರದ ಸಂಬಂಧವೇನು ಬಂತು ಅಪ್ಪಾಜಿ?"

"ಶತ್ರುವನ್ನು ಹೊಡೆದೋಡಿಸಲು ಒಬ್ಬರಿಂದ ಸಹಾಯ ಕೇಳಿದ ಮೇಲೆ ಅವರಿಂದ ಸಹಾಯ ಬರುವ ಮೊದಲು ನಾವೇ ಆ ಕಾರ್ಯ ಮುಗಿಸುವದು ಸಭ್ಯತನವಾಗದು. ನಮ್ಮ ಮಾತು ನಂಬಿ ಅವರು ದಂಡು ತೆಗೆದುಕೊಂಡು ಬರುವವರಿದ್ದಾರೆ. ಆ ದಂಡು ಬಂದು ಮುಟ್ಟುವ ಮೊದಲೇ ನಾವು ಆ ಕಾರ್ಯ ತೀರಿಸಿಬಿಟ್ಟರೆ ಬಂದವರಿಗೇನೂ ಕೆಲಸವುಳಿಯದಂತಾಗಿ ಅವರಿಗೆ ಅಸಮಾಧಾನವಾಗುತ್ತದೆ. ಅದು ತಮ್ಮ ಅಪಮಾನ ಅಂತಲೂ ಅವರು ತಿಳಿದುಕೊಳ್ಳಬಹುದು."

"ಅವರು ಹಾಗೆ ತಿಳಿದುಕೊಂಡರೆ ಅದಕ್ಕೆ ಯಾರೇನು ಮಾಡಬೇಕು ಅಪ್ಪಾಜಿ? ನಾವೇನೂ ಅವರಿಗೆ ಅಪಮಾನ ಮಾಡ ಬಯಸುವದಿಲ್ಲವಲ್ಲ?"

"ನಾವು ಬಯಸದಿದ್ದರೂ ಅವರಿಗೆ ಹಾಗೆ ಭಾವನೆಯಾಗದಿರದೇ ರುದ್ರಾಣೀ. ಆಮೇಲೆ ಅವರು ನಮ್ಮ ಕೂಡ ಹಗೆಗಳಾಗುವದೂ ಖಂಡಿತ. ಸುತ್ತೂ ಕಡೆಗೆ ವೈರಿಗಳನ್ನು ಮಾಡಿಕೊಳ್ಳುವದು ರಾಜಕಾರಣವಲ್ಲ. ಕೆಲವ ರಾದರೂ ಸ್ನೇಹಿತರಿರುವದು ಉತ್ತಮ."

ಅನುಭವಿಕನಾದ ತಂದೆಯಾಡಿದ ಮಾತುಗಳಿಗೆ ರುದ್ರಮ್ಮಾಜಿ ಮನ್ನಣೆ ಕೊಡಲೇಬೇಕಾಗಿ ಬಂದಿತು. ದೇಸಾಯರ ಸಲಹೆಯ ವಿರುದ್ಧವಾಗಿ ತಿಮ್ಮನಗೌಡನೂ ವರ್ತಿಸುವ ಹಾಗಿರಲಿಲ್ಲ. ಅವರ ಉತ್ಸಾಹಕ್ಕೆ ತಣ್ಣೀರೆರಚಿ ದಂತಾಯಿತಾದರೂ ಅವರು ಆ ವಿಚಾರವಾಗಿ ಅಸಮಾಧಾನಪಟ್ಟುಕೊಳ್ಳ ಲಿಲ್ಲ. ಮಲ್ಲಸರ್ಜ ದೊರೆ ಹಿಂದಿರುಗಿ ಬರುವವರೆಗೆ ದೇಸಾಯರೇ ಅವರ ಹಿರಿಯರು, ಮಾರ್ಗದರ್ಶಕರು. ಅವರ ಅಪ್ಪಣೆಯೇನಿದ್ದರೂ ಅದನ್ನು ಚಾಚೂ ತಪ್ಪದಂತೆ ಪಾಲಿಸುವುದು ಅವರ ಕರ್ತವ್ಯವಾಗಿತ್ತು.

"ಸರಿ. ಇದೂ ಒಂದು ದೃಷ್ಟಿಯಿಂದ ಒಳ್ಳೆಯದೇ ಆಯ್ತು. ನಾವು ಇನ್ನೂ ಚೆನ್ನಾಗಿ ತಯಾರಿಮಾಡಿಕೊಳ್ಳಲು ಮತ್ತಷ್ಟು ಸಮಯ ಸಿಕ್ಕಿತು," ಎಂದ ತಿಮ್ಮನಗೌಡ.

"ಆ ಪಟವರ್ಧನರ ದಂಡು ಬರಲು ಇನ್ನೂ ಎಷ್ಟು ದಿನ ಆಗ್ತದೊ ಏನೊ. ಅಷ್ಟರೊಳಗಾಗಿ ಬಿದನೂರಿಂದ ಬುರ್ಹಾನುದೀನನೇ ಬಂದು ಬಿಟ್ಟರೆ ಕೆಲಸವೆಲ್ಲಾ ಕೆಟ್ಟು ಹೋಗಿಲಿಕ್ಕಿಲ್ಲವೇನು ನಾಯಕರೆ?"

"ಬುರ್ಹಾನುದ್ದೀನ ಈಗ ಬರಲಿಕ್ಕಿಲ್ಲ. ಒಂದು ವೇಳೆ ಬಂದರೆ, ಪಟವರ್ಧನರಿಗೂ ಅವನಿಗೂ ಕುಸ್ತಿ ಆಗೇ ಅಗ್ತದಲ್ಲ? ಇಲ್ಲಿಯ ತನಕ ಬಂದವರು ಹಾಗೇ ಹೊರಟು ಹೋಗುವಂತೆಯೂ ಇಲ್ಲ. ಮನಸ್ಸುಗೊಟ್ಟು ಯುದ್ಧ ಮಾಡಲೇ ಬೇಕಾಗ್ತದ. ಸೋತರೆ ಮಾನ ಹೋಗ್ತದೆ. ಗೆಲ್ಲುವ ಪ್ರಯತ್ನ ಮಾಡಲೇಬೇಕಾಗ್ತದೆ. ಆಗ ಅವರಿಗೆ ನಾವು ಹಣ ಕೊಟ್ಟದ್ದೂ ಸಾರ್ಥಕವಾದೀತು."

ನಾಲ್ಕೈದು ದಿನ ಕಳೆದ ಮೇಲೆ ಒಂದು ಸಾಯಂಕಾಲ, ಚಿಂತೋ ಪಂತ ಕಳಿಸಿಕೊಟ್ಟ ಚಾರರೀರ್ವರು ಬಂದು ಅವನ ಸಂದೇಶ ತಲಪಿಸಿದರು. ಪಟವರ್ಧನರ ಸೈನ್ಯ ಸಿದ್ಧವಾಗಲು ಇನ್ನೂ ಎರಡು ತಿಂಗಳು ಬೇಕಾಗುವು ದೆಂದೂ ಸೈನ್ಯದ ಖರ್ಚಿಗಾಗಿ ಸ್ವಲ್ಪ ಹಣವನ್ನು ಮುಂಗಡವಾಗಿ ಕಳುಹಿಸಿ ಕೊಡಬೇಕಾಗುವುದೆಂದೂ ಆತ ತಿಳಿಸಿದ್ದ.

ತಲ್ಲೂರಿನಲ್ಲಿ ಮತ್ತೆ ಆಪ್ತಾಲೋಚನೆ ನಡೆಯಿತು. ತಿಮ್ಮನಗೌಡ, ವೀರಸಂಗಪ್ಪ, ಗುರುಸಿದ್ಧಪ್ಪ ಮೂವರೂ ಆಮಂತ್ರಿತರಾಗಿ ಬಂದು ಭಾಗ ವಹಿಸಿದರು.

"ಪಟವರ್ಧನರು ಹೀಗೇಕೆ ಹೇಳಿ ಕಳಿಸಿದರೋ ತಿಳಿಯದು. ಹಣ ಮುಂಗಡವಾಗಿ ಬೇಕಂತೆ. ಇದರರ್ಥವೇನಿರಬಹುದು?" ಎಂದರು ದೇಸಾಯರು.

"ಅವರಿಗೀಗ ಹಣದ ಕೊರತೆಯಿದೆಯೊ ಏನೊ, ಪಾಪ!" ಎಂದ ಗುರುಸಿದ್ಧಪ್ಪ.

"ಕೊರತೆಯಾಗಲು ಅವರಿಗೇನು ಧಾಡಿ! ಅವರ ವಾಡೆಯಲ್ಲಿ ಲಕ್ಷ್ಮಿ ಕಾಲು ಮುರಿದುಕೊಂಡು ಮಲಗಿದಾಳೆ. ಸುತ್ತಲಿನ ಸೀಮೆಯಿಂದ ಸುಲಿದು ತಂದ ಸಂಪತ್ತೆಲ್ಲಾ ಕೊಳೆಯುತ್ತ ಬಿದ್ದಿದೆ ಅವರ ಭಂಡಾರದಲ್ಲಿ."

"ಹಾಗಾದರೆ...."

"ಮುಂಗಡವಾಗಿ ಹಣ ಕೇಳುವರೆಂದರೆ ನಮ್ಮ ಬಗ್ಗೆ ಅವರು ಅವಿಶ್ವಾಸವನ್ನೇ ಪ್ರದರ್ಶಿಸಿದ ಹಾಗೆ. ಯುದ್ಧ ಮುಗಿದ ಮೇಲೆ ನಾವು ಹಣ ಕೊಡದೆ ತಪ್ಪಿಸಬಹುದು ಅಂತ ಅವರಿಗೆ ಅನುಮಾನವಾಗಿರಬಹುದು."

"ಹೌದು. ಹಾಗಾಗುವದೂ ಸಾಧ್ಯ."

"ಅಥವಾ....ಅಥವಾ...." ಎಂದು ಆರಂಭಿಸಿ, ಸ್ವಲ್ಪ ತಡೆದು, ತಿಮ್ಮನಗೌಡ ಹೇಳಿದ: "ನಮಗೆ ಸಹಾಯ ಮಾಡಲು ಅವರಿಗೆ ನಿಜವಾಗಿ ಇಚ್ಛೆಯೇ ಇಲ್ಲವೊ ಏನೊ. ಇಲ್ಲವೆಂದು ಸ್ಪಷ್ಟವಾಗಿ ಹೇಳಲಾರದೆ ಏನೇನೊ ನೆಪ ಹೇಳಿ ಕಾಲ ತಳ್ಳುತ್ತಿರುವರೋ ಹೇಗೆ?"

"ಕರಾರುಪತ್ರಕ್ಕೆ ಸಹಿ ಹಾಕಿಕೊಂಡದ್ದಾಗಿದೆ. ಅದೆಲ್ಲಾ ಹುಡುಗಾಟ ವಾದೀತಲ್ಲ ನಾಯಕರೆ? ಹಾಗೇನೂ ಇರಲಿಕ್ಕಿಲ್ಲ," ಎಂದರು ದೇಸಾಯರು.

"ಹಾಗಿದ್ದರೆ ದಂಡು ಕಳಿಸಲು ತಡವೇಕೆ? ಸೈನಿಕರಂತೂ ಇದ್ದೇ ಇರ್ತಾರೆ. ಮದ್ದುಗುಂಡಿಗೂ ಕೊರತೆಯಿಲ್ಲ. ಈಗಲೇ ಹೊರಟುಬರಬಹುದಾಗಿತ್ತಲ್ಲ?"

"ಮತ್ತೇನಾದರೂ ರಾಜಕಾರಣ ಅಡ್ಡ ಬಂದಿರಬಹುದು. ಪುಣ್ಯ ಪಟ್ಟಣದ ದರಬಾರದ ಮುತ್ಸದ್ದಿಗಳು ಬಹಳ ಲಹರಿಯವರು. ಅವರದು

ಇಂದೊಂದು ವಿಚಾರ, ನಾಳೆಯೊಂದು ವಿಚಾರ."

"ಟೀಪುವನ್ನು ಈಗ ಕೆಣಕಬಾರದೆಂದೇ ಅವರು ನಿಶ್ಚಯಿಸಿರುವರೊ ಏನೊ."

ಅವರ ದೃಷ್ಟಿಯಿಂದ ಅನುಕೂಲವಾದ ಸಮಯ ನೋಡಿಕೊಂಡು ಇತ್ತ ಹೊರಡುವ ವಿಚಾರವಿದ್ದರೂ ಇದ್ದೀತು."

"ಅವರ ವಿಚಾರ ಏನೇ ಇರಲೊಲ್ಲದೇಕೆ? ಅವರಿಗಾಗಿ ಇಷ್ಟು ದಿನ ಕಾದದ್ದೂ ಆಯಿತು. ಇನ್ನು ವೃಥಾ ಕಾಲಹರಣ ಮಾಡದೆ ನಾವೇ ಧೈರ್ಯ ಮಾಡಿ ದಾಳಿ ಮಾಡಬೇಕೆಂದು ನನಗನಿಸ್ತದೆ," ಎಂದಳು ರುದ್ರಾಮ್ಮಾಜಿ.

"ಅಪ್ಪನವರ ಅಭಿಪ್ರಾಯವೇ ನನ್ನ ಅಭಿಪ್ರಾಯ." ಎಂದ ವೀರ ಸಂಗಪ್ಪ.

ಆಗ ಮಾತ್ರ ದೇಸಾಯರು ಅದೇ ಅಭಿಪ್ರಾಯವನ್ನೇ ಅನುಮೋದಿಸ ಬೇಕಾಯಿತು.

ಮುಂಗಡ ಹಣ ಕಳುಹಿಸಲು ಸಾಧ್ಯವಾಗದೆಂದು ತಿಳಿಸಿ, ತಕ್ಷಣ ತಲ್ಲೂರಿಗೆ ಹಿಂದಿರುಗಿ ಬರುವಂತೆ ಚಿಂತೋಪಂತನಿಗೆ ಹೇಳಿಕಳಿಸಲಾಯಿತು.

ಪಟವರ್ಧನನಿಗೆ ಆ ಸಂದೇಶ ಮುಟ್ಟುತ್ತಲೂ ಆತ ಚಕಿತನಾದ. ತನ್ನ ಸೂಚನೆಯ ಪ್ರಕಾರ ತಲ್ಲೂರಿನಿಂದ ಹಣ ಬರಬಹುದೆಂದೇ ಆತ ಭಾವಿಸಿದ್ದ. ಆ ಹಣವನ್ನು ತೆಗೆದುಕೊಂಡು, ಅನುಕೂಲ ಸಮಯ ಪ್ರಾಪ್ತ ವಾದಾಗ ಸ್ವಲ್ಪ ಸೈನ್ಯ ಕಳಿಸಿದರಾಯಿತೆಂದು ಆತ ಎಣಿಕೆ ಹಾಕಿಕೊಂಡಿದ್ದ. ತಲ್ಲೂರಿನಿಂದ ಹಣ ಬರದೆ ಆವನ ಎಣಿಕೆಯೆಲ್ಲ ಬುಡಮೇಲಾಯಿತು.

ಅಪಮಾನಿತನಾದವನಂತೆ ಹುಸಿಕೋಪ ನಟಸುತ್ತ ಆತ ಚಿಂತೋ ಪಂತನನ್ನು ಕರಿತು ಹೇಳಿದ:

"ನಿಮ್ಮ ಜನರು ಹೀಗೇಕೆ ಮಾಡಿದರು ಪಂತಜಿ? ಅವರಿಗೆ ನಮ್ಮ ಸಹಾಯವೇ ಬೇಡವಾಗಿದೆಯೇನು?"

ಪಟವರ್ಧನನ ಹುಸಿಕೋಪ ನೈಜವಾದುದೆಂದೇ ಭಾವಿಸಿ ನಡುಗುತ್ತ ನಿಂತಿದ್ದ ಚಿಂತೋಪಂತ ಉತ್ತರ ಕೊಡುವುದಕ್ಕೂ ಸಮರ್ಥನಾಗಲಿಲ್ಲ. ಅಪಮಾನದ ಭಾವನೆಯಿಂದ ಕೆರಳಿದ ಶ್ರೀಮಂತ ತನ್ನನ್ನು ಬಂಧಿಸಿ ಕಾರಾ ಗಾರದಲ್ಲಿ ಕೊಳೆ ಹಾಕಬಹುದೆಂದು ಆತ ಅಂಜಿದ.

"ಕ್ಷ....ಕ್ಷ....ಕ್ಷಮಾ ಮಾಡಬೇಕು....ಸ....ಸ....ಸರಕಾರ..." ಎಂದು ಆತ ತೊದಲಿದ.

ಚಿಂತೋಪಂತನ ಸ್ಥಿತಿಯನ್ನು ಕಂಡು ಪಟವರ್ಧನನಿಗೆ ಕನಿಕರವೆನ್ನಿಸಿತು. ಧ್ವನಿಯನ್ನು ಆದಷ್ಟು ಮಟ್ಟಿಗೆ ಸೌಮ್ಯವಾಗಿಸುತ್ತ ಆತನೆಂದ:

"ನೀವೇಕೆ ಅಂಜಿಕೊಂಡಿರಿ ಪತಂಜಿ? ನಡೆದದ್ದರಲ್ಲಿ ನಿಮ್ಮ ತಪ್ಪೇನೂ ಇಲ್ಲವೆಂಬುದು ನಮಗೇನು ತಿಳಿಯದೇ? ನೀವೇ ಸ್ವತಃ ಅಲ್ಲಿಗೆ ಹೋಗಿದ್ದರೆ ಹಣ ತೆಗೆದುಕೊಂಡೇ ಬರುತ್ತಿದ್ದಿರಿ. ನೀವು ಇಲ್ಲೇ ಉಳಿದದ್ದರಿಂದ ಆ ಉದ್ಧಟರು ಹೀಗೆ ಹೊಣೆಗೇಡಿ ಮಾತು ಹೇಳಿ ಕಳಿಸಿದಾರೆ."

"ಹೌದು ಸರಕಾರ್. ನಾನೇ ಹೋಗಿದ್ದರೆ ಖಂಡಿತವಾಗಿ ಹಣ ತರುತ್ತಿದ್ದೆ."

"ಈಗಲಾದರೂ ಏನಾಯಿತು? ಹೋಗಿ ಬನ್ನಿ. ಸಿದ್ಧತೆಗಾಗಿ ನಮಗೂ ವೇಳೆ ಬೇಕೇ ಬೇಕು. ನಿಮ್ಮಿಂದ ಹಣ ಬಂದ ಮೇಲೆ ಸೈನ್ಯ ಕಳಿಸುತ್ತೇವೆ."

"ಹಾಗೇ ಮಾಡಿ ಸರಕಾರ್. ನಮ್ಮ ಬಗ್ಗೆ ಸಿಟ್ಟು ಮಾಡಿಕೊಳ್ಳಬೇಡಿ. ಈ ಬಡವನ ಮೇಲಂತೂ ತಮ್ಮ ಪ್ರೇಮ ಯಾವಾಗಲೂ ಇರಬೇಕು."

"ಅದರ ಬಗ್ಗೆ ಚಿಂತೆಯನ್ನೇ ಇಟ್ಟುಕೊಳ್ಳಬೇಡಿ ಪಂತಜಿ. ನಾವು ನೀವು ಎಲ್ಲಾ ಒಂದೇ ಜನ. ನಮ್ಮನಮ್ಮವರ ಬಗ್ಗೆ ಆತ್ಮೀಯತೆಯಿರಬೇಕು, ಅಭಿಮಾನವಿರಬೇಕು."

"ನಾನು ಬಿನ್ನವಿಸಿಕೊಳ್ಳುವದೂ ಅದನ್ನೇ?"

"ಯೋಗ್ಯ ಸಮಯ ಬಂದಾಗ ನಾವು ನಿಮ್ಮ ಸೇವೆಯನ್ನು ಮರೆಯುವುದಿಲ್ಲ. ಒಳ್ಳೆಯದು. ಹೋಗಿಬನ್ನಿ. ಕೆಲಸ ಸಾಧಿಸಿಕೊಂಡು ಬನ್ನಿ."

ತಾನು ಕೆಲಸ ಸಾಧಿಸಲು ಶಕ್ತನಾಗಬಹುದೆಂಬುದರ ಬಗೆಗೆ ಚಿಂತೋಪಂತನಿಗೆ ಕೊಂಚವೂ ಭರವಸೆಯಿರಲಿಲ್ಲ. ಮುಂಗಡವಾಗಿ ಹಣ ಕಳಿಸುವುದು ಸಾಧ್ಯವಿಲ್ಲವೆಂದು ಒಮ್ಮೆ ತಿಳಿಸಿಬಿಟ್ಟಮೇಲೆ ಕಿತ್ತೂರಿನ ಜನರು ಮತ್ತೆ ಆ ಮಾತನ್ನು ಹಿಂದೆಗೆದುಕೊಳ್ಳುವವರಲ್ಲ. ಅವರ ಸ್ವಭಾವ ತನಗೇನು ಅಪರಿಚಿತವಾದುದೇ? ಒಂದು ಬಾರಿ ಒಂದು ನಿಶ್ಚಯಕ್ಕೆ ಬಂದರೆ ಮುಗಿಯಿತು. ಆಮೇಲೆ ಆ ನಿಶ್ಚಯದಂತೆ ಎಲ್ಲವೂ ನಡೆಯಬೇಕು. ಸಾಕ್ಷಾತ್

ಪರಮೇಶ್ವರನೇ ಬಂದು ಬೇಡವೆಂದರೂ ಕೇಳುವವರಲ್ಲ ಈ ಜನ. ತಲ್ಲೂರು ದೇಸಾಯರು, ಅವರ ಮಗಳು ರುದ್ರಮ್ಮಾಜಿ, ತಿಮ್ಮನಗೌಡ ಎಲ್ಲರೂ ಇಂಥ ಸ್ವಭಾವದವರೇ. ಅವರೆದುರು ತನ್ನ ಆಟವೇನೂ ನಡೆಯಲಾರದು. ಈ ವಿಚಾರವಾಗಿ ತಾನು ವಿಶೇಷವಾಗಿ ಒತ್ತಾಯ ಮಾಡುವುದೂ ಒಳ್ಳೆಯದಲ್ಲ. ಗುರುನಾಥಪಂತನಿಗೆ ಕೆಟ್ಟ ಹೆಸರು ಬಂದಂತೆ ತನಗೂ ಬರಬಹುದು. ತಾನೂ ಪೇಶ್ವೆ—ಪಟವರ್ಧನರ ಕಡೆಯವನೇ ಎಂಬ ಭಾವನೆ ಈ ಜನಗಳಲ್ಲಿ ಒಮ್ಮೆ ತಲೆದೋರಿತೆಂದರೆ ಮುಂದೆ ಅದನ್ನು ತೊಡೆದು ಹಾಕುವುದೇ ಅಶಕ್ಯವಾದೀತು. ಕಿತ್ತೂರಿನವರ ಸಹವಾಸವೆಂದರೆ ಬೆಂಕಿಯ ಸಹವಾಸ. ಸ್ವಲ್ಪ ಎಚ್ಚರದಪ್ಪಿ ವರ್ತಿಸಿದರೂ ಕೈ ಸುಟ್ಟುಕೊಳ್ಳುವ ಪ್ರಸಂಗ ಬರದಿರದು....

ಹಾಗೆ ಯೋಚಿಸಿ, ಉಪಾಯವಾಗಿ ಕೆಲಸ ಸಾಧಿಸಲು ಯತ್ನಿಸುವುದೆಂದು ನಿರ್ಧರಿಸಿ ಚಿಂತೋಪಂತ ತಲ್ಲೂರಿಗೆ ಬಂದ. ಒಂದೆರಡು ದಿವಸ ಸುಮ್ಮನಿದ್ದು ಅನಂತರ ದೇಸಾಯರೆದುರು ನಿಧಾನವಾಗಿ ಮಾತು ತೆಗೆಯುವುದೆಂದು ಆತ ಎಣಿಕೆ ಹಾಕಿಕೊಂಡಿದ್ದ.

“ ಏನು ಪಂತರೆ, ಬಂದುಬಿಟ್ಟಿರಾ? ಪ್ರವಾಸದಲ್ಲೇನಾದರೂ ತೊಂದರೆಯಾಗಲಿಲ್ಲವಷ್ಟೆ ?” ದೇಸಾಯರು ವಿಚಾರಿಸಿದರು.

“ ಇಲ್ಲ ಸರಕಾರ್. ತಮ್ಮ ದಯದಿಂದ ಏನೂ ಅಗಲಿಲ್ಲ.”

“ ಸರಿ. ಶ್ರೀಮಂತರು ಮತ್ತೇನಾದರೂ ಅಂದರೇ ?”

“ ಹಣ ಕಳಿಸಿಕೊಟ್ಟಿದ್ದರೆ ಸಂತೋಷವಾಗ್ತಿತ್ತು ಅಂತ ಅಂದರು.”

“ ಕಳಿಸಲಿಲ್ಲ ಅಂತ ಅಸಂತೋಷವಾಗಿದೆಯೋ ಹ್ಯಾಗೆ ?”

“ ಆಗಿರಬಹುದು. ನನ್ನ ಮುಂದೆ ಮಾತ್ರ ಅವರು ಅದನ್ನು ಆಡಿ ತೋರಿಸಲಿಲ್ಲ.”

“ ಸರಿ ! ” ಎಂದಿಷ್ಟೆ ನುಡಿದು ದೇಸಾಯರು ಎದ್ದು ಹೋದರು. ಮುಂದಿನ ಮಾತುಗಳನ್ನಾಡಲು ಚಿಂತೋಪಂತನಿಗೆ ಅವಕಾಶವೇ ಲಭಿಸಲಿಲ್ಲ.

ಮತ್ತೆರಡು ದಿನ ಕಳೆದಮೇಲೆ, ದೇಸಾಯರು ವಿರಾಮವಾಗಿದ್ದಾಗ ಮತ್ತೆ ಮಾತನಾಡಿದರಾಯಿತೆಂದು ಪಂತ ಸುಮ್ಮನಾದ.

ಆದರೆ, ಯುದ್ಧದ ಗಡಿಬಿಡಿಯಲ್ಲಿ ತೊಡಗಿಕೊಂಡಿದ್ದ ದೇಸಾಯರು ಮತ್ತೆ ಅವನಿಗೆ ಭೆಟ್ಟಿಯನ್ನೇ ಕೊಡಲಿಲ್ಲ.

ರುದ್ರಸ್ವಾಮಿಯನ್ನಾದರೂ ನೋಡುವುದೆಂದು ಆತ ಪ್ರಯತ್ನಪಟ್ಟಾಗ ಕಿತ್ತೂರ ರಾಣಿ ಊರಿನಲ್ಲಿಯೇ ಇಲ್ಲವೆಂದು ತಿಳಿದುಬಂದಿತು.

ಆತ ದಿಗಿಲುಗೊಂಡು ವಿಚಾರಿಸಿದ :

“ ಇಲ್ಲವೇ? ಎಲ್ಲಿಗೆ ಹೋದರು ರಾಣೀಸಾಹೇಬರು ?”

“ ನಮಗೂ ಗೊತ್ತಿಲ್ಲ.”

ಕರಿಗಡುಬು—ತುಪ್ಪ ಹೊಡೆಯುತ್ತ ಸುಖವಾಗ ದಿನಗಳೆಯುತ್ತಿದ್ದ ವಿರೂಪಾಕ್ಷಪಂತನನ್ನು ಹುಡುಕಿಕೊಂಡು ಹೋಗಿ ಚಿಂತೋಪಂತ ಕೇಳಿದ :

“ ರಾಣಿಯವರು ಊರಲ್ಲಿಲ್ಲವಂತಲ್ಲ ಪಂತರೆ? ಎಲ್ಲಿಗೆ ಹೋಗಿರ ಬಹುದು ? ನಿಮಗೇನಾದರೂ ಗೊತ್ತೇ?”

“ ಇಲ್ಲ ಮಾರಾಯರೆ. ದೊಡ್ಡವರ ಸಮಾಚಾರ ನಮ್ಮಂಥಾ ಬಡವ ರಿಗೆ ಗೊತ್ತಾಗುವುದಾದರೂ ಹ್ಯಾಗೆ?”

“ ಅಲ್ಲ ಪಂತರೆ, ಏನೋ ಭಾರಿ ಚಟುವಟಿಕೆ ನಡೆದಂತೆ ಕಾಣ್ತದಲ್ಲ? ಎಲ್ಲಾ ಗುಪ್ತ....ಎಲ್ಲಾ ರಹಸ್ಯ....ನನಗೂ ಕೂಡಾ ತಿಳಿಸಲೊಲ್ಲಸು. ಏನಿರ ಬಹುದು ಅಂತೀನಿ !”

ಥರ್‍ರನೆಂದು ಒಮ್ಮೆ ತೇಗಿ ವಿರೂಪಾಕ್ಷಪಂತನೆಂದ :

“ ಅದೆಲ್ಲಾ ಯಾರಿಗೆ ಬೇಕು ಬಿಡಿರಿ—ನನಗಂತೂ ಯಾವದೂ ಬೇಡವಾಗಿದೆ.”

“ ಹೀಗಂದರೆ ಹ್ಯಾಗೆ ಪಂತರೆ? ಈ ತಿಮ್ಮನಗೌಡ ವೀರಸಂಗಪ್ಪ ಇವರೆಲ್ಲ ನಮ್ಮನ್ನು ಏನೂ ಕೇಳದೆ ಏನೇನೊ ಮಾಡುತ್ತಿದಾರೆ. ಈಗ ನಾವು ಸುಮ್ಮನೇ ಕೂತರೆ ಮುಂದೆಯೂ ನಮ್ಮನ್ನಾದರೂ ಕೇಳುವದಿಲ್ಲ—ಅಧಿಕಾರ ವೆಲ್ಲಾ ಅವರ ಕೈಯಲ್ಲೇ ಉಳೀತದೆ.”

“ ಹೂಂ! ನೀವು ಕಿತ್ತೂರಿನ ದಿವಾನರಾಗುವವರು ! ನೀವೇ ಏನಾ ದರೂ ಮಾಡಿಕೊಳ್ಳಿರಪ್ಪ—ನನಗಂತೂ ಯಾವ ಅಧಿಕಾರದಲ್ಲಿದ್ದರೂ ಅಷ್ಟೆ.”

“ ನಿಮಗೆ ಸ್ವಲ್ಪವೂ ಬುದ್ಧಿಯಿಲ್ಲ. ನಿಮ್ಮಂಥವರು ಹುಟ್ಟಿಯೇ ನಮ್ಮ ಮುಖಂಡತ್ವ ಹೋಗ ಹತ್ತಿತು !” ಎಂದು ತಾತ್ಸಾರದಿಂದ ನುಡಿದು ಚಿಂತೋಪಂತ ಕೈ ಹಿಸುಕಿಕೊಳ್ಳುತ್ತ ತನ್ನ ಬಿಡಾರಕ್ಕೆ ಹಿಂದಿರುಗಿದ.

ಅವನ ಕಣ್ಣೆದುರಿನಲ್ಲಿಯೇ ಬಿರುಸಿನ ಚಟುವಟಿಕೆಗಳು ನಡೆಯು

ತ್ತಿದ್ದುವು. ಗಾಡಿಗಳು ಬರುತ್ತಿದ್ದುವು, ಸಾಮಾನು ತುಂಬಿಕೊಂಡು ಹೋಗುತ್ತಿದ್ದುವು. ರಭಸದಿಂದ ಕುದುರೆಗಳನ್ನೋಡಿಸುತ್ತ ಸವಾರರು ಬರುತ್ತಿದ್ದರು, ಬಂದಂತೆಯೇ ತ್ವರೆಯಿಂದ ಹೊರಟುಹೋಗುತ್ತಿದ್ದರು. ದೇಸಾಯರ ಮಹಾಮನೆಯಲ್ಲಿ ಗದ್ದಲವೋ ಗದ್ದಲ. ನಾಲ್ಕು ಮದುವೆಗಳು ಏಕ ಕಾಲಕ್ಕೇ ನಡೆದಂತೆ ತೋರುತ್ತಿತ್ತು. ಬೀದಿಯಲ್ಲೆಲ್ಲ ಅಪರಿಚಿತ ಮುಖಗಳೇ ಕಾಣುತ್ತಿದ್ದುವು. ಆ ಗಲಾಟೆಯನ್ನೆಲ್ಲ ನೋಡಿಯೂ ನೋಡದವರಂತೆ ತಲ್ಲೂರಿನ ಜನರು ತಮ್ಮ ನಿತ್ಯದ ಕೆಲಸಗಳಲ್ಲಿ ಮಗ್ನರಾಗಿದ್ದರು.

"ಕಿತ್ತೂರಿನ ಮೇಲೆ ದಾಳಿಯೇ ಸುರುವಾಗಿರಲಿಕ್ಕಿಲ್ಲವಷ್ಟೆ?" ಎಂದು ತನ್ನನ್ನು ತಾನೆ ಕೇಳಿಕೊಂಡ ಚಿಂತೋಪಂತ. "ಅಥವಾ....ಅಥವಾ.... ಮಲ್ಲಸರ್ಜ ದೊರೆಗಳೇ ಮೈಸೂರಿನಿಂದ ಹಿಂದಿರುಗಿ ಬಂದಿರಬಹುದೇ?"

ದೇಸಾಯರ ಮಹಾಮನೆಗೆ ಮತ್ತೆ ಧಾವಿಸಿ ಹೋಗಿ, ಪರಿಚಯದ ಸೇವಕನೊಬ್ಬನನ್ನು ಆತ ಕೇಳಿದ:

"ಏನು ನಡೆದಿದೆ ಸಂಗಯ್ಯ? ಕಿತ್ತೂರ ರಾಜರು ಬಂದಿರುವರೇ?"

"ಅವರ್‍ಯಾಕೆ ಬಂದಾರು ಇಲ್ಲಿಗೆ?"

"ಮತ್ತೆ? ಇದೇನು ಗದ್ದಲ?"

"ನಮ್ಮಂಥ ಆಳುಗಳಿಗೆ ಹ್ಯಾಗೆ ಗೊತ್ತಾಗಬೇಕು ರಾಯರೆ? ನೀವೇ ಒಡೆಯರನ್ನು ಕೇಳಿ ನೋಡಿರಲ್ಲ?"

"ಒಡೆಯರು ಮನೆಯಲ್ಲಿದ್ದಾರೆಯೆ ಸಂಗಯ್ಯ?"

"ಬೆಳಗ್ಗೆ ಇದ್ದರಲ್ಲ...."

"ಈಗ?"

"ಇದೇ ಈಗ ಕುದುರೆ ಹತ್ತಿಕೊಂಡು ಎಲ್ಲಿಗೋ ಹೋದರು."

"ರುದ್ರಮ್ಮರಾಣಿಯವರು?"

"ಅವರೂ ಮನೆಯಲ್ಲಿಲ್ಲ."

ಚಿಂತೋಪಂತ ಹಿಂದಿರುಗಿ ಮಹಾಮನೆಯ ಹೆಬ್ಬಾಗಿಲು ದಾಟಿ ಹೊರಟಿದ್ದಂತೆಯೇ ಹೊರಗಿನಿಂದ ಬಂದ ಕರಣಿಕನೊಬ್ಬ ಪಂತನನ್ನು ಕಂಡು ಕೇಳಿದ:

"ಯಾಕೆ ಪಂತರೆ, ನೀವಿನ್ನೂ ಇಲ್ಲೇ ಇದೀರಲ್ಲ?"

“ ಮತ್ತೆಲ್ಲಿಗೆ ಹೋಗು ಅಂತೀಯಪಾ ?”

“ ಅರೆ ! ನಿಮಗೆ ಗೊತ್ತೇ ಇಲ್ಲವೆ ? ಕಿತ್ತೂರಿನಲ್ಲಿ ಘನಘೋರ ಕಾಳಗ ಸುರು ಆಗಿದೆಯಲ್ಲ !”

“ ಹೌದೇ ? ಎಷ್ಟು ದಿನ ಆಯ್ತು ?”

“ ಅದೆಲ್ಲಾ ನನಗ್ಗೊತ್ತಿಲ್ಲ. ಅಂತೂ ಯುದ್ಧ ನಡೆದಿದೆ. ಅಷ್ಟ ಬಲ್ಲೆ. ಕಿತ್ತೂರಿನ ಮುತ್ಸದ್ದಿಗಳು ನೀವು ಇಲ್ಲೇನು ನೊಣ ಹೊಡೀತಾ ಕೂತೀರಾ ? ವೈರಿಗಳನ್ನು ಹೊಡೆಯೋದ ಬಿಟ್ಟು ?”

೧೯

ಮಧ್ಯರಾತ್ರಿಯ ಸಮಯ ಮೀರಿಹೋಗಿತ್ತು. ಜಮಾನಖಾನನ ಪಾನ–ಗಾನ-ನರ್ತನಕೂಟಕ್ಕೆ ಆಗತಾನೆ ನವೀನಕಳೆಯೊಂದು ಪ್ರಾಪ್ತವಾಗಿತ್ತು. ಖಾನನೂ ಅವನ ದರಬಾರಿಗಳೂ ಮತ್ತೆಯ ಲೋಡುಗಳಿಗೊರಗಿ ಕುಳಿತು ಪಾನೀಯವನ್ನು ಸೇವಿಸುತ್ತಿದ್ದರು. ಮುನ್ನಾದಿನವಷ್ಟೆ ಬೆಳಗಾವಿಯಿಂದ ಬಂದಿದ್ದ ನರ್ತಕಿಯೊಬ್ಬಳು ಅವರೆದುರು ಕುಣಿಯುತ್ತಿದ್ದಳು. ನೃತ್ಯ ನೂತನ ಮಾದರಿಯದಾಗಿದ್ದುದರಿಂದ ವಿಲಾಸಗೃಹದಲ್ಲಿ ಹೊಸ ಉತ್ಸಾಹವೊಂದು ಪ್ರಾಪ್ತವಾಗಿತ್ತು.

“ ಇಂಥಾ ನಾಚು ನಾವಂತೂ ಇದುವರೆಗೆ ನೋಡಿರಲೇ ಇಲ್ಲ, ಸೊಗಸಾಗಿದೆ ! ಬಹಳ ಸೊಗಸಾಗಿದೆ !” ಎಂದು ಖಾನ ಮತ್ತೆ ಮತ್ತೆ ಪ್ರಶಂಸೋದ್ಗಾರ ತೆಗೆಯುತ್ತಿದ್ದ. “ ವಾ ! ವಾ ! ಬಹೋತ ಅಚ್ಛಾ ! ಬಹೋತ ಅಚ್ಛಾ !” ಎಂದು ದರಬಾರಿಗಳೂ ಮರುನುಡಿಯುತ್ತಿದ್ದರು.

ಈ ರೀತಿ ಅವರೆಲ್ಲರೂ ನರ್ತನದಲ್ಲಿ ಮೈಮರೆತು ಒರಗಿದ್ದ ಹಾಗೆಯೇ ಅತ್ತ ಕೋಟೆಯ ಹೊರಗಡೆ ಕತ್ತಿಗಳ ತಾಕಲಾಟಕ್ಕಾರಂಭವಾಗಿತ್ತು. ರಾತ್ರಿಯ ಅಂಧಕಾರದಲ್ಲಿ ತಿಮ್ಮನಗೌಡನ ಸೈನಿಕರು ಕೆಲವರು ಕೋಟೆಯ ಗೋಡೆಗಳನ್ನೇರಿ ಬಂದು, ಪಶ್ಚಿಮದ ಅಗಸೆಯ ಬಾಗಿಲಲ್ಲಿ ಪಹರೆ ಮಾಡುತ್ತಿದ್ದ ಕಾವಲುಗಾರರನ್ನು ತುಂಡರಿಸಿ ಬಾಗಿಲು ತೆರೆಯಲು ಯತ್ನಿಸಿದಾಗ ಸದ್ದು ಕೇಳಿ ಕೋಟೆಯೊಳಗಿನಿಂದ ನೂರಿನ್ನೂರು ಮಂದಿ ಸೈನಿಕರು ಧಾವಿಸಿ

ಬಂದಿದ್ದರು. ಮಹಾದ್ವಾರವನ್ನು ರಕ್ಷಿಸಲು ಅವರು ಮಾಡಿದ ಪ್ರಯತ್ನವೆಲ್ಲ ವ್ಯರ್ಥವಾಗಿ ಬಾಗಿಲು ಕೊನೆಗೂ ತೆರೆಯಲ್ಪಟ್ಟಿತ್ತು. ಹೊರಗಡೆ ಕಾದು ನಿಂತ ಕಿತ್ತೂರಿನ ವೀರಭಟರು ಕೂಡಲೇ ಹಿಂಡು ಹಿಂಡಾಗಿ ನುಗ್ಗಿ ಬಂದಿದ್ದರು. ಅಷ್ಟರಲ್ಲಿಯೇ ಅಪಾಯದ ತುತ್ತೂರಿಯೂ ದನಿದೆಗೆದಿತ್ತು. ತಿಂದು ಕುಡಿದು ಮಲಗಿದ್ದ ಸಿಪಾಯಿಗಳು ಗಡಬಡಿಸಿ ಎದ್ದು ಕೈಗೆ ಸಿಕ್ಕಿದ ಆಯುಧ ಎತ್ತಿಕೊಂಡು ಅಗಸೆಯ ಕಡೆ ಓಡಿಬರುತ್ತಿದ್ದರು. ದಾಳಿಗಾಗಿಯೇ ಪೂರ್ತಿ ಸನ್ನದ್ಧರಾಗಿ ಬಂದಿದ್ದ ಕಿತ್ತೂರು ಸೈನಿಕರೆದುರು ಅರೆನಿದ್ರೆಯಲ್ಲೂ ಅರೆ ಎಚ್ಚರದ ಅವಸ್ಥೆಯಲ್ಲೂ ಇದ್ದ ಖಾನನ ಸಿಪಾಯಿಗಳ ಕೈ ನಡೆಯುದಂತಾಗಿತ್ತು. ಕ್ಷಣಕ್ಷಣಕ್ಕೂ ಕಿತ್ತೂರಿನವರ ಆವೇಶ ಹೆಚ್ಚುತ್ತಿತ್ತು. ಎಡಗೈಯಲ್ಲಿ ಕೈದೀವಟಿಗೆಯನ್ನೂ ಬಲಗೈಯಲ್ಲಿ ಕತ್ತಿಯನ್ನೂ ಹಿಡಿದು ಅವರು ವೈರಿಗಳ ಮೇಲೆ ಬಿದ್ದು ಅವರನ್ನು ತುಂಡರಿಸುತ್ತಿದ್ದರು.

ಕಾದಾಟಕ್ಕಾರಂಭವಾದ ಹತ್ತು ಹದಿನೈದು ನಿಮಿಷಗಳಲ್ಲಿಯೇ ಖಾನನಿಗೆ ಅದರ ಬಗೆಗೆ ವರದಿಯಾಯಿತು. ಗಾಬರಿಗೊಂಡ ಸಿಪಾಯಿಯೊಬ್ಬ ಓಡುತ್ತೋಡುತ್ತ ಬಂದು ಆ ವಿಚಾರ ತಿಳಿಸುತ್ತಲೂ, ನರ್ತನದ ಸ್ವಪ್ನಲೋಕದಲ್ಲಿ ವಿಹರಿಸುತ್ತಿದ್ದ ಖಾನನಿಗೂ ಅವನ ದರಬಾರಿಗಳಿಗೂ ಕೆಲ ಹೊತ್ತು ಯಾವುದೂ ಅರ್ಥವಾಗಲಿಲ್ಲ.

ಒಂದು ಕ್ಷಣ ದಿಙ್ಮೂಢನಂತೆ ಕುಳಿತಿದ್ದು ಅನಂತರ ನಿಧಾನವಾಗಿ ತಲೆಯೆತ್ತಿ ಖಾನ ವಿಚಾರಿಸಿದ: "ಕ್ಯಾರೇ, ಕ್ಯಾ ಹುವಾ ?"

"ಶತ್ರುಗಳು ಕಿಲ್ಲೆಯೊಳಗೇ ನುಗ್ಗಿ ಬಂದಾರೆ ಹುಜೂರ್."

ಮದ್ಯದ ಅಮಲಿನಲ್ಲಿ ಮೈಮರೆತಿದ್ದ ಖಾನನಿಗೆ ವಿಷಯವೇನೆಂಬುದು ಆಗಲೂ ಸರಿಯಾಗಿ ಅರ್ಥವಾಗಲಿಲ್ಲ. ಶತ್ರುಗಳು—ಎಂಬ ಪದವೇನೋ ಅವನ ಕಿವಿಗೆ ಬಿದ್ದಿತ್ತು, ಕಡೆಗೂ ಪ್ರವೇಶಿಸಿತ್ತು. ಆದರೆ ಅದಕ್ಕೂ ಕಿಲ್ಲೆಗೂ ಸಂಬಂಧವೇನು ? ಇಂಥ ಸ್ವರ್ಗೀಯ ನೃತ್ಯ ನಡೆದಿರುವಾಗ ಶತ್ರುಗಳೆಲ್ಲಾ ಸ್ನೇಹಿತರಾಗಬಹುದು. ಮತ್ತೆ....

"ನೆಟ್ಟಗೆ ಹೇಳೋ. ಆದದ್ದಾದರೂ ಏನು?"

"ಯುದ್ಧ ನಡೆದಿದೆ ಹುಜೂರ್. ಅಗಸೆಬಾಗಿಲು ವೈರಿಗಳ ವಶವಾಗಿದೆ." ಎಂದು ಅಂಜುತ್ತ ಅಂಜುತ್ತ ಹೇಳಿದ ಸಿಪಾಯಿ.

ಜಮಾನಖಾನ ತೂರಾಡುತ್ತ ಮೇಲಕ್ಕೇಳಲು ಪ್ರಯತ್ನಿಸಿದ. ಎದ್ದು ಸರಿಯಾಗಿ ನಿಂತುಕೊಳ್ಳುವ ತ್ರಾಣವೂ ಉಳಿದಿರಲಿಲ್ಲ-ಮತ್ತೆ ಗಾದಿಯ ಮೇಲೆ ಮತ್ತೆ ಕುಕ್ಕರಿಸಿ, ಸಿಪಾಯಿಗಳನ್ನು ಕ್ರೂರವಾಗಿ ದಿಟ್ಟಿಸುತ್ತ ಆತ ನೆಂದ: "ಜಾವ್! ಯಹಾಂಸೆ ಚಲೇಜಾವ್! ಸೇನಾಪತಿಗಳೆಲ್ಲ ಸತ್ತ ರೇನು? ಅವರನ್ನೆಬ್ಬಿಸು ಹೋಗು!"

ಮತ್ತೊಂದು ಮಾತನಾಡದೆ ಸಿಪಾಯಿ ಹೊರಟುಹೋದ. ವಿಲಾಸ ಗೃಹದಲ್ಲಿ ಸೇರಿದ್ದ ಇತರ ಅಧಿಕಾರಿಗಳೆಲ್ಲರೂ ಗಾಬರಿಗೊಂಡು ಒಬ್ಬೊಬ್ಬ ರಾಗಿ ಅಲ್ಲಿಂದ ಕಾಲ್ದೆಗೆದರು. ಮಹಾದ್ವಾರದ ದಿಕ್ಕಿನಿಂದ ಗುಂಡು ಹಾರುವ ಸದ್ದು ಕೇಳಿಸತೊಡಗಿತ್ತು.

ಐದಾರು ನಿಮಿಷಗಳ ಕಾಲ ಸುಮ್ಮನೆ ಬಿದ್ದುಕೊಂಡಿದ್ದ ಖಾನ ಮತ್ತೆ ಕಣ್ದೆರೆದು, ಗುಂಡುಗಳ ಸಪ್ಪಳವನ್ನಾಲಿಸಿ ಹರ್ಷಿತನಾಗಿ, ವಿಲಾಸ ಗೃಹದ ಸೇವಕರಲ್ಲೊಬ್ಬನನ್ನು ಕರೆದು ಕೇಳಿದ:

"ನಮ್ಮ ತೋಫುಗಳು ಹಾರುತ್ತಿವೆಯಲ್ಲವೇ ದಿಲಾವರ್?"

"ಅವು ತೋಫುಗಳಲ್ಲ ಖಾವಂದ್, ಬಂದೂಕಿನ ಗುಂಡು."

"ಹೀಗೇನು? ನಮ್ಮ ತೋಫು ನಿದ್ದೆ ಮಾಡುತ್ತಿವೆಯೇನು ಹಾಗಾದರೆ? ಗೋಲಂದಾಜರೆಲ್ಲ ಎಲ್ಲಿ ಹಾಳಾದರೋ ನೋಡು."

"ಸೇವಕ ಹೊರಗೆ ಹೋಗಿ ಒಂದು ನಿಮಿಷದ ತರುವಾಯ ಹಿಂದಿರುಗಿ ಬಂದು ಹೇಳಿದ: "ಗೋಲಂದಾಜರ ಪತ್ತೆಯೇ ಇಲ್ಲವಂತೆ ಸರಕಾರ್."

"ಇಲ್ಲವೆ? ಏನಾದರು? ಏನಾಯಿತು? ತೋಫುಗಳಲ್ಲೇ ಸುಖವಾಗಿ ನಿದ್ರಿಸುತ್ತಿರಬಹುದೋ ಏನೋ. ಬೇಕೂಫ್ ಮಂದಿ, ಒಬ್ಬನಿಗೂ ತಲೆಯಿಲ್ಲ. ಎಲ್ಲಾ ನಾನೇ ನೋಡಿಕೊಳ್ಳಬೇಕು......ಸಾಕಪ್ಪಾ ಸಾಕು.... ಯಾಕಾದರೂ ಬಂದೆನೋ ಈ ಹಾಳು ಕೊಂಪೆಗೆ...." ಎನ್ನುತ್ತಾ ಖಾನ ಮತ್ತೆ ಎದ್ದು ನಿಲ್ಲಲು ಪ್ರಯತ್ನಿಸಿದ.

"ದಿಲಾವರ್, ಏನು ನೋಡುತ್ತ ನಿಂತಿದ್ದೀಯಾ? ಬಾ, ಸ್ವಲ್ಪ ಕೈ ಕೊಡು."

ದಿಲಾವರನ ಭುಜದ ಮೇಲೆ ಭಾರ ಹಾಕಿ ನಡೆಯುತ್ತ ಖಾನ ಬಾಗಿ

ಲಿನ ಹೊರಗೆ ಬಂದ. ಸುತ್ತ ಕವಿದ ಕತ್ತಲಲ್ಲಿ ಕ್ಷಣಕಾಲ ಯಾವುದೂ ಕಾಣಿಸಲಿಲ್ಲ. ದೂರ ಆಗಸೆ ಬಾಗಿಲ ಬಳಿಯಲ್ಲಿ ಉರಿಯುತ್ತಿದ್ದ ಕೊಳ್ಳಿಗಳ ಬೆಳಕು ಖಾನನ ದೃಷ್ಟಿಯಲ್ಲಿ ಅಗ್ನಿನೃತ್ಯದಂತೆಯೇ ಕಾಣಿಸಿತು.

"ನಮ್ಮವರೆಲ್ಲಾ ಎಲ್ಲಿದಾರೆ ದಿಲಾವರ್?"

"ಬಾಗಿಲಲ್ಲಿ ಚಕಮಕಿ ನಡೆದಿದೆಯಲ್ಲ ಸರಕಾರ್. ಅಲ್ಲೇ ಇದಾರೆ ಎಲ್ಲರೂ."

"ನನಗೂ ಒಂದು ಕತ್ತಿ ತಂದುಕೊಡು ದಿಲಾವರ್. ಕಾಫರರನ್ನು ನರಕಕ್ಕೆ ಕಳಿಸಿ ಬರ್ತೀನಿ."

ಖಾನನ ಮಾತಿನಿಂದಾಗಿ ದಿಲಾವರನಿಗೆ ಅಂಥ ವಿಷಮ ಸನ್ನಿವೇಶದಲ್ಲೂ ನಗುವುಕ್ಕಿ ಬಂತು. ಸಾಹೇಬನಿಗೆ ಸರಿಯಾಗಿ ನಿಂತುಕೊಳ್ಳುವುದಕ್ಕೂ ಸಾಧ್ಯವಾಗುತ್ತಿಲ್ಲ–ತಾನೇ ಆಧಾರ ಕೊಟ್ಟು ಇಲ್ಲಿಯ ವರೆಗೆ ಕರೆದುಕೊಂಡು ಬಂದುದಾಗಿದೆ. ಈಗ ಇವನಿಗೆ ಕತ್ತಿ ಬೇಕಾಯಿತು!

"ಯಾಕೋ ಕತ್ತಿ! ನಗ್ತೀಯಾ!" ಎಂದ ಖಾನ.

ಆತ ಮಾತನಾಡುತ್ತಿದ್ದಂತೆಯೇ ನಾಲ್ಕು ಜನರು ಹಠಾತ್ತನೆ ನುಗ್ಗಿ ಬಂದು ಖಾನನನ್ನೂ ದಿಲಾವರನನ್ನೂ ಹಿಡಿದುಕೊಂಡರು.

"ಕತ್ತಿ! ಕತ್ತಿ! ಮೇರಾ ತಲವಾರ್!" ಎಂದು ಬಡಬಡಿಸುತ್ತಿದ್ದ ಖಾನನನ್ನು ದರದರನೆ ಎಳೆಯುತ್ತ ಒಳಗೆ ಸಾಗಿಸಿ ವಿಲಾಸಗೃಹದಲ್ಲಿಯೇ ನೂಕಿ ಬಾಗಿಲು ಹಾಕಿಕೊಂಡರು. ದಿಲಾವರನನ್ನು ಇನ್ನೊಂದು ಕೊಟಡಿಯಲ್ಲಿ ಚೆಲ್ಲಿದರು. ಅರಮನೆಯಲ್ಲಿದ್ದ ಇತರ ಸೇವಕರೂ ದಾಸದಾಸಿಯರೂ ಸಂಗೀತಗಾರರೂ ನರ್ತಕಿಯರೂ ಆವೇಳೆಗಾಗಲೇ ಅಲ್ಲಿಂದ ಕಾಲ್ದೆಗೆದಿದ್ದರು.

ಅರಮನೆಯನ್ನು ವಶಪಡಿಸಿಕೊಂಡು, ಐವತ್ತು ಜನರ ದಳವೊಂದನ್ನು ಅಲ್ಲಿ ಕಾವಲಿಗಿಟ್ಟು, ತಿಮ್ಮನಗೌಡನ ದಂಡಾಳುಗಳು ಮದ್ದಿನಾಗರದತ್ತ ತಿರುಗಿದರು. ಅರ್ಧಗಂಟೆಯ ಭೀಕರ ಹೋರಾಟದ ಬಳಿಕ ಆ ಸ್ಥಳವೂ ಕೈವಶವಾಯಿತು. ಅಷ್ಟು ಹೊತ್ತಿಗೆ ಕೋಟೆಯಲ್ಲಿದ್ದ ಯವನರ ಶಕ್ತಿ ಮುಕ್ಕಾಲು ಪಾಲು ತಗ್ಗಿಹೋಗಿ ಕಿತ್ತೂರಿನವರ ಕೈ ಮೇಲಾಗಿತ್ತು. ಶಸ್ತ್ರಾಗಾರ, ಅಶ್ವಾಲಯ, ಧಾನ್ಯಸಂಗ್ರಹಾಲಯ, ಖಜಾನೆ ಇತ್ಯಾದಿ ಮಹತ್ವದ ಸ್ಥಳಗಳೆಲ್ಲವೂ ಯವನರ ಕೈ ಬಿಟ್ಟದ್ದುವು. ಕುಡಿದು ಬಿದ್ದಿದ್ದ ಗೋಲಂದಾಜ

ರನ್ನು ಕತ್ತರಿಸಿ ಚೆಲ್ಲಿ ತೋಫುಗಳನ್ನೂ ಸುಲಭವಾಗಿ ಕೈವಶಪಡಿಸಿಕೊಳ್ಳಲಾಗಿತ್ತು. ಸ್ವತಃ ರುದ್ರಮ್ಮಾಜಿಯೇ ಕುದುರೆಯೇರಿ ಕೋಟೆಯಲ್ಲೆಲ್ಲ ಮಿಂಚಿನಂತೆ ಸಂಚರಿಸುತ್ತ ತನ್ನ ಸೈನಿಕರನ್ನು ಹುರಿದುಂಬಿಸುತ್ತಿದ್ದಳು. ತಿಮ್ಮನಗೌಡ, ವೀರಸಂಗಪ್ಪ, ಗುರುಸಿದ್ಧಪ್ಪ ಮೊದಲಾದವರು ಬೇರೆ ಬೇರೆ ದಳಗಳ ನಾಯಕತ್ವ ವಹಿಸಿ ಬೇರೆ ಬೇರೆ ಭಾಗಗಳನ್ನು ವಶಪಡಿಸಿಕೊಳ್ಳುವುದರಲ್ಲಿ ನಿರತರಾಗಿದ್ದರು. ಹೋರಾಟದಲ್ಲಿ ಗಾಯಗೊಂಡವರನ್ನೂ ಮಡಿದವರನ್ನೂ ದೂರ ಸಾಗಿಸಿ ಗಾಯಾಳುಗಳನ್ನು ಉಪಚರಿಸುವ ಹೊಣೆಯನ್ನು ದೇಸಾಯರು ವಹಿಸಿಕೊಂಡಿದ್ದರು.

ಯುದ್ಧಕ್ಕಾರಂಭವಾದ ಎರಡು ಗಂಟೆಗಳಲ್ಲಿಯೇ ಪ್ರತಿಭಟನೆ ನಿಂತುಹೋಯಿತು. ಸಾವಿರಾರು ಜನ ಯವನ ಸೈನಿಕರು ಸತ್ತು ಬಿದ್ದಿದ್ದರು, ಅನೇಕರು ಗಾಯಗೊಂಡು ನರಳುತ್ತಿದ್ದರು. ನೂರಾರು ಜನರು ಸಂಧಿಸಾಧಿಸಿ ಕೋಟೆಯಿಂದ ತಪ್ಪಿಸಿಕೊಂಡು ಪರಾರಿ ಹೋದರು. ತಿಮ್ಮನಗೌಡನ ಕಡೆಗೆ ಮಾತ್ರ ವಿಶೇಷ ಪ್ರಾಣಹಾನಿಯೇನೂ ಆಗಿರಲಿಲ್ಲ.

ಬೆಳಗಾಗುವುದರೊಳಗಾಗಿಯೇ ದುರ್ಗದ ಮೇಲಿನ ಟೀಪುವಿನ ಬಾವುಟ ಕೆಳಗಿಳಿದು ಅದರ ಬದಲು ಕಿತ್ತೂರಿನ ಧ್ವಜ ಗೆಲುವಿನಿಂದ ಹಾರಾಡತೊಡಗಿತು. ವಿಜಯದ ವಾರ್ತೆಯನ್ನು ಸುತ್ತಲೂ ಬೀರಲು ಕೊಂಬು–ಕಹಳೆ—ನಗಾರಿಗಳು ಭೋರ್ಗರೆಯತೊಡಗಿದುವು. ಕಿತ್ತೂರು ಯವನರ ಕೈಯಲ್ಲಿದ್ದಷ್ಟು ಕಾಲವೂ ಬಗೆಬಗೆಯ ಸಂಕಟಗಳಿಗೆ ಸಿಲುಕಿ ನರಳಿದ್ದ ನಾಗರಿಕರೆಲ್ಲರೂ ಹರ್ಷದಿಂದ ಹಿಗ್ಗಿ ವಿಜಯೋತ್ಸವಕ್ಕಾರಂಭಿಸಿದರು. ಊರಿನ ದೇವಾಲಯಗಳಲ್ಲೆಲ್ಲ ವಿಶೇಷ ಪೂಜಾದಿಗಳು ನಡೆಯತೊಡಗಿದ್ದುವು. ಕೋಟೆಯನ್ನು ಗೆದ್ದುಕೊಂಡು ಪರಕೀಯ ಶತ್ರುವನ್ನೋಡಿಸಿದ ಸೈನಿಕರನ್ನೂ ಸೇನಾಧಿಕಾರಿಗಳನ್ನೂ ನಗರದ ಬೀದಿಗಳಲ್ಲೆಲ್ಲ ವಿಜೃಂಭಣೆಯಿಂದ ಮೆರೆಸಲಾಯಿತು. ಪಟ್ಟಣದ ಧನಿಕರೆಲ್ಲರೂ ಕಾಣಿಕೆಗಳನ್ನು ತೆಗೆದುಕೊಂಡು ಬಂದು ತಮ್ಮ ಅರಸಿಗೊಪ್ಪಿಸಿ ಆಕೆಯ ದರ್ಶನ ಪಡೆದರು.

ಸೀರೆಯನ್ನು ತಿರುವಿ ಕಟ್ಟಿದ ಗಂಡುಗಾಸೆಯನ್ನು ಬಿಚ್ಚದೆ, ಅದೇ ರಣವೇಷದಲ್ಲಿಯೇ ಕಲ್ಲುಮಠಕ್ಕೆ ಹೋಗಿ ಗುರುಗಳ ಅಡಿಗೆರಗಿದಳು ರುದ್ರಮ್ಮಾಜಿ. ಕಿತ್ತೂರ ಅರಸಿಯನ್ನು ಅಂಥ ವೇಷದಲ್ಲಿ ಕಂಡು ಪ್ರಭುಸ್ವಾಮಿ

ಗಳಿಗೆ ಆಶ್ಚರ್ಯವೇನೂ ಆಗಲಿಲ್ಲ—ಪ್ರಸಂಗ ಬಂದಾಗ ರಾಜಮನೆತನದ ಸ್ತ್ರೀಯರೂ ಸಹ ಪುರುಷರಂತೆಯೇ ಕತ್ತಿ ಹಿಡಿದು ವೈರಿಗಳ ರುಂಡ ಚೆಂಡಾಡುವುದು ಕಿತ್ತೂರಿನ ಪರಂಪರೆಯೇ ಆಗಿತ್ತು. ತವರೂರಿನಲ್ಲಿ ಬಾಲ್ಯದಿಂದಲೂ ಸೈನಿಕ ಶಿಕ್ಷಣ ಪಡೆದ ವಧುಗಳನ್ನೇ ಆಯ್ದು ತಂದು ಕಿತ್ತೂರಿನ ಅರಸರಿಗೆ ವಿವಾಹಮಾಡಲಾಗುತ್ತಿತ್ತು. ರುದ್ರಮ್ಮಾಜಿಯನ್ನು ಮಲ್ಲಸರ್ಜನಿಗೆ ವಧುವಾಗಿ ಗೊತ್ತುಮಾಡುವಾಗಲೂ ಸ್ವಾಮಿಗಳೇ ಮುಂದಾಳತ್ವ ವಹಿಸಿ, ತಲ್ಲೂರಿಗೆ ಹೋಗಿ, ವಧುವಿನ ಗುಣ–ಶೀಲ–ಸ್ವಭಾವಗಳ ಪರೀಕ್ಷೆ ಮಾಡಿ, ಕಿತ್ತೂರಿನಂಥ ವೀರರಾಜ್ಯದ ರಾಣಿಯಾಗಲೂ ಆಕೆ ಎಲ್ಲ ದೃಷ್ಟಿಗಳಿಂದಲೂ ಅರ್ಹಳೆಂದು ಮನವರಿಕೆಯಾದಾಗಲೇ ಆ ಸಂಬಂಧಕ್ಕೆ ತಮ್ಮ ಅನುಮತಿ ನೀಡಿದ್ದರು.

ತಲ್ಲೂರಿನ ಆ ವಧು ತಮ್ಮ ನಿರೀಕ್ಷೆಯನ್ನು ವ್ಯರ್ಥಗೊಳಿಸಿರಲಿಲ್ಲ. ಕಿತ್ತೂರಿನ ಬಿಡುಗಡೆಗಾಗಿ ಅವಳೂ ಪುರುಷರಂತೆಯೇ ಕಾದಿದ್ದಳು!

ಪಾದಕ್ಕೆರಗಿದ ತರುಣರಾಣಿಗೆ ಹೃತ್ಪೂರ್ವಕವಾಗಿ ಹರಕೆ ನೀಡುತ್ತ ಪ್ರಭುಸ್ವಾಮಿಗಳೆಂದರು: "ಎದ್ದೇಳು ರುದ್ರಾಣೀ. ನೂರು ವರ್ಷ ಬಾಳಿ ಈ ರಾಜ್ಯವನ್ನು ಸುಖದಿಂದ ಆಳು."

ಸ್ವಾಮಿಗಳ ಸಮೀಪದಲ್ಲಿಯೇ ಇದ್ದ ನೀಲಮ್ಮಾಜಿಯ ಅಡಿಗೆರಗಿ ಆಕೆಯನ್ನು ಬಿಗಿದಪ್ಪಿಕೊಂಡಳು ರುದ್ರಮ್ಮಾಜಿ. ಕಣ್ಣುಗಳಿಂದ ಹರ್ಷಾಶ್ರುಗಳುದುರುತ್ತಿರಲು ನೀಲಮ್ಮಾಜಿ ಮಲ್ಲಸರ್ಜನನ್ನು ಜ್ಞಾಪಿಸಿಕೊಂಡು,

"ಕಿತ್ತೂರಂತೂ ಮುಕ್ತವಾಯ್ತು. ಆದರೆ ನನ್ನ ಮಲ್ಲಸರ್ಜ ಮಾತ್ರ ಇನ್ನೂ ಬರಲಿಲ್ಲ. ಆ ದುಷ್ಟ ಟೀಪುವಿನ ಸೆರೆಮನೆಯಲ್ಲಿ ನನ್ನ ಕಂದ ಎಷ್ಟು ಕಷ್ಟಪಡುತ್ತಿದಾನೊ!" ಎನ್ನುತ್ತ ಸೆರಗನ್ನು ಕಣ್ಣಿಗೊತ್ತಿಕೊಂಡಳು.

ಆನಂದದಿಂದ ಕಾವೇರಿದ್ದ ವಾತಾವರಣ ಹಠಾತ್ತನೆ ವಿಷಾದದಿಂದ ಕೂಡಿ ಗಂಭೀರವಾಯಿತು. ದೊರೆಯ ನೆನಪು ಹೊರಡುತ್ತಲೂ ರುದ್ರಮ್ಮಾಜಿಯ ಕಣ್ಣುಗಳಲ್ಲೂ ಸ್ವಾಭಾವಿಕವಾಗಿಯೇ ನೀರು ತುಂಬಿತು. ಮರುಕ್ಷಣವೇ ಅವಳು ತನ್ನ ದುಃಖವನ್ನು ಹತ್ತಿಕ್ಕಿಕೊಂಡು, ಕತ್ತಿಯ ಒರೆಯ ಮೇಲೆ ಕೈಯಾಡಿಸುತ್ತ ನಿಶ್ಚಯದ ಸ್ವರದಲ್ಲಿ ಹೇಳಿದಳು.

"ಕೋಟೆಯನ್ನಂತೂ ಬಿಡಿಸಿಕೊಂಡಾಯಿತು. ಇನ್ನು ಗುರುಗಳ

ದಯೆಯಿಂದ ದೊರೆಗಳನ್ನು ಬಿಡಿಸಿಕೊಂಡು ಬರುವುದುಳಿಯಿತು. ಅದನ್ನೂ ಸಾಧಿಸೋಣ."

"ಗುರುಸಿದ್ಧೇಶ್ವರನ ಕೃಪೆಯಿಂದ ದೊರೆಗಳ ಬಿಡುಗಡೆಯೂ ಆಗಿ ಹೋಗಿದೆ ಆಗಲೇ!" ಎಂದ ತಿಮ್ಮನಗೌಡ.

ಎಲ್ಲರೂ ಚಕಿತರಾಗಿ ಸೇನಾಪತಿಯತ್ತ ತಿರುಗಿದರು. ಮುಗುಳು ನಕ್ಕು ಆತ ಮುಂದುವರಿಸಿದ: "ಕಪಾಳದುರ್ಗದಿಂದ ದೊರೆಗಳು ಪಾರಾಗಿ ಹೋಗಿ ಇಂಗ್ಲಿಷರ ಸೀಮೆಯಲ್ಲಿರುವರೆಂದು ನಿನ್ನೆಯೇ ಸುದ್ದಿ ಬಂತು. ಕೋಟೆಯನ್ನು ಗೆದ್ದುಕೊಂಡ ಮೇಲೆಯೇ ಆ ಆನಂದದವಾರ್ತೆಯನ್ನು ತಿಳಿಸುವದೊಳ್ಳೆಯದೆಂದು ಸುಮ್ಮನಿದ್ದೆ. ಅವ್ವನವರು ಕ್ಷಮಿಸಬೇಕು."

ಕ್ಷಣಾರ್ಧದಲ್ಲಿಯೇ ದುಃಖಾಶ್ರುಗಳು ಹರ್ಷಾಶ್ರುಗಳಾಗಿ ಪರಿಣಮಿಸಿದುವು. ರುದ್ರಾಣಿಯನ್ನು ಮತ್ತೆ ಬರಸೆಳೆದು ಅಪ್ಪಿಕೊಂಡು ಕಂಬನಿಗರೆದಳು ನೀಲಮ್ಮಾಜಿ.

"ಎಲ್ಲಾ ಗುರುದೇವರ ಕೃಪೆ. ಅವರ ಆಶೀರ್ವಾದವಿರುವದರಿಂದಲೇ ಕಿತ್ತೂರು ಮತ್ತೆ ಒಳ್ಳೆಯ ದಿನಗಳನ್ನು ಕಾಣುತ್ತಿದೆ," ಎಂದರು ದೇಸಾಯರು.

"ದೇವರು ದೊಡ್ಡವನು ದೇಸಾಯರೆ. ಋಜುಮಾರ್ಗದಲ್ಲಿ ನಡೆಯುವವರನ್ನ ಅವನೆಂದೂ ಕೈಬಿಡುವದಿಲ್ಲ. ಕಿತ್ತೂರಿನ ದೊರೆಗಳು ಒಳ್ಳೆಯವರು. ಪ್ರಜೆಗಳನ್ನು ಮಕ್ಕಳಂತೆ ನೋಡಿಕೊಳ್ಳುವವರು. ಯಾರ ಮೇಲೂ ಅನ್ಯಾಯವಾಗಿ ಕತ್ತಿಯೆತ್ತುವವರಲ್ಲ. ದುರಾಸೆಗೊಳಗಾಗಿ ರಕ್ತಪಾತ ಮಾಡುವವರಲ್ಲ. ಅಂತೆಯೇ ಪರಮಾತ್ಮನ ಕೃಪೆಯಿದೆ ಅವರ ಮೇಲೆ."

"ಹಾಗಾದರೆ, ಮತ್ತೆ ಮತ್ತೆ ಪರಕೀಯರ ದಾಳಿಗಳೇಕಾಗುತ್ತಿವೆ ಬುದ್ಧೀ?" ಎಂದ ತಿಮ್ಮನಗೌಡ.

"ನಿಮ್ಮ ಸತ್ವಪರೀಕ್ಷೆಗಾಗಿಯೇ ಆಗಾಗ ಇಂಥ ಸಂಕಟಗಳು ಬರುತ್ತವೆ ನಾಯಕರೆ. ಒಂದು ರೀತಿಯಲ್ಲಿ ಇವು ನಿಮ್ಮ ಪೌರುಷ ಪರೀಕ್ಷೆಗಳೇ ಸರಿ," ಎಂದರು ಪ್ರಭುಸ್ವಾಮಿಗಳು. "ಈ ಬಾರಿಯಂತೂ ನೀವು ಪರೀಕ್ಷೆಯಿಂದ ಸುಲಭವಾಗಿ ಉತ್ತೀರ್ಣರಾಗಿದ್ದೀರಿ. ಆದರೆ ಇಷ್ಟಕ್ಕೇ ಮುಗಿಯಲಿಲ್ಲ. ವೈರಿಯನ್ನು ಸೋಲಿಸಿದೆವೆಂದು ಮೈಮರೆತು ಕೂತಿರುವ ಕಾಲವಿದಲ್ಲ. ಅಲ್ಲವೆ ದೇಸಾಯರೆ?"

" ಸರಿಯಾಗಿ ಹೇಳಿದಿರಿ ಬುದ್ಧೀ. ಜಮಾನಖಾನನನ್ನು ಸೋಲಿಸಿ ಸೆರೆ ಹಿಡಿದ ಮಾತ್ರಕ್ಕೆ ಟೀಪುಸುಲ್ತಾನನನ್ನೇ ಸೋಲಿಸಿದ ಹಾಗಾಗಲಿಲ್ಲ. ಧಾರವಾಡದಲ್ಲಿ ಹತ್ತಿಪ್ಪತ್ತು ಸಹಸ್ರ ಸೇನೆಯಿದೆ. ಕಿತ್ತೂರಿನ ಪತನದ ಸುದ್ದಿ ಮುಟ್ಟುತ್ತಲೂ ಆ ಸೇನೆ ರೋಷದಿಂದ ಇತ್ತ ಸಾಗಿಬರದಿರದು."

" ಅದರಲ್ಲೇನೂ ಸಂಶಯವಿಲ್ಲ. ಈಗ ನಡೆದಿರುವದು ಬರೀ ಕದನದ ಆರಂಭ ಅಷ್ಟೆ. ನಿಜವಾದ ಹೋರಾಟ ಇನ್ನು ಮುಂದಿದೆ. ಅದಕ್ಕಾಗಿ ಈಗಿನಿಂದಲೇ ಸಿದ್ಧತೆ ಮಾಡಿಕೊಳ್ಳಬೇಕು"

ಬುದ್ರುಲ್ ಜಮಾನಖಾನನನ್ನು ಸೆರೆಮನೆಗೆ ಸಾಗಿಸಿ, ಅರಮನೆಯಲ್ಲಿ ಆತ ಹರಡಿದ್ದ ವಿಲಾಸದ ಸಾಮುಗ್ರಿಗಳೆಲ್ಲವನ್ನೂ ತೆಗೆದೆಸೆದು, ಎಲ್ಲ ಕೋಣೆಗಳನ್ನು ಶುಚಿಗೊಳಿಸಿ, ಸುಣ್ಣಬಣ್ಣ ಬಳಿದು ಪ್ರಭುಸ್ವಾಮಿಗಳನ್ನು ಬಿಜಯಮಾಡಿಸಿಕೊಂಡು ಅವರ ಪಾದೋದಕವನ್ನು ಎಲ್ಲ ಕಡೆಗೂ ಸಿಂಪಡಿಸಿ ಅರಮನೆಯನ್ನು ಶುದ್ಧಗೊಳಿಸಲಾಯಿತು. ಹಲವು ಮಾಸಗಳ ಹಿಂದೆ ಆ ರಾಜಗೃಹವನ್ನು ತ್ಯಜಿಸಿಹೋಗಿದ್ದ ನೀಲಮ್ಮಾಜಿ ಪುನಃ ಬಂದು ಅಂತಃಪುರದ ಯಾಜಮಾನ್ಯ ವಹಿಸಿಕೊಂಡಳು ; ಮಲ್ಲಸರ್ಜ ದೊರೆಗಳಿಗೆ ಕಿತ್ತೂರಿನ ಬಿಡುಗಡೆಯ ಸಮಾಚಾರ ತಿಳಿಸಿ ಅವರನ್ನು ಮರ್ಯಾದೆಯಿಂದ ಕರೆದುಕೊಂಡು ಬರುವ ಕೆಲಸಕ್ಕೆ ವೀರಸಂಗಪ್ಪನನ್ನು ಕಳಿಸಲಾಯಿತು. ಟೀಪುವಿನ ಸೀಮೆಯಲ್ಲಿಯೇ ಹಾಯ್ದು ಹೋಗಬೇಕಿದ್ದುದರಿಂದ ಆತ ತನ್ನ ಸಂಗಡ ದೊಡ್ಡ ಪರಿವಾರವನ್ನು ಕರೆದೊಯ್ಯುವಂತಿರಲಿಲ್ಲ. ಮಿತವಾದ ಪರಿವಾರವನ್ನು ಮಾತ್ರ ತೆಗೆದುಕೊಂಡು, ಎಲ್ಲರೂ ವೇಷ ಬದಲಿಸಿ ಕೊಯಿಮತ್ತೂರಿನತ್ತ ಪಯಣ ಬೆಳೆಸಿದರು.

ದೊರೆಗಳು ಬಂದು ರಾಜ್ಯಾಧಿಕಾರ ವಹಿಸಿಕೊಳ್ಳುವವರೆಗೆ ಆಡಳಿತ ಸೂತ್ರ ಯಾರ ಕೈಯಲ್ಲಿರಬೇಕೆಂಬುದರ ವಿಚಾರವಾಗಿ ಕೂಡಲೇ ಒಂದು ನಿರ್ಣಯಕ್ಕೆ ಬರುವುದು ಅಗತ್ಯವಾಗಿತ್ತು. ಎಂತಲೇ, ಆ ಬಗೆಗೆ ಚರ್ಚಿಸುವುದಕ್ಕಾಗಿ ಕಿತ್ತೂರಿನ ಸರದಾರರು ಮತ್ತು ಪ್ರಮುಖರ ಆಲೋಚನಾ ಸಭೆಯೊಂದು ಸೇರಿತು. ಅಗ್ರಾಸನದಲ್ಲಿ ಪ್ರಭುಸ್ವಾಮಿಗಳು ಮಂಡಿಸಿದ್ದರು. ಅವರ ಅಕ್ಕಪಕ್ಕದಲ್ಲಿ ತಲ್ಲೂರ ದೇಸಾಯರೂ ತಿಮ್ಮನಗೌಡ, ಗುರುಸಿದ್ಧಪ್ಪ ಮೊದಲಾದವರೂ ಕುಳಿತುಕೊಂಡಿದ್ದರು. ಹಿಂಭಾಗದಲ್ಲಿದ್ದ ಪರದೆಯ ಆಚೆ

ರುದ್ರಮ್ಮಾಜಿಯೂ ನೀಲಮ್ಮಾಜಿಯೂ ಕುಳಿತಿದ್ದರು.

ಸಭೆಯ ಉದ್ದೇಶವನ್ನು ತಿಳಿಸುತ್ತ ಪ್ರಭುಸ್ವಾಮಿಗಳು ಮಾತನಾಡಿದರು: "ಕಿತ್ತೂರಿನ ದೇಶಪ್ರೇಮಿ ನಾಗರಿಕರೆ, ನಿಮ್ಮೆಲ್ಲರ ಪರಾಕ್ರಮದಿಂದಲೂ ಗುರುಸಿದ್ಧೇಶ್ವರನ ಕೃಪೆಯಿಂದಲೂ ನಮ್ಮ ನಾಡು ಮತ್ತೆ ಸ್ವತಂತ್ರವಾಯಿತು. ಆದರೂ ಪರಿಸ್ಥಿತಿ ಗಂಭೀರವಾಗಿಯೇ ಇದೆ. ಸೋತು ಹಿಮ್ಮೆಟ್ಟಿದ್ದ ವೈರಿಗಳು ಇನ್ನು ಕೆಲವೇ ದಿನಗಳಲ್ಲಿಯೇ ದೊಡ್ಡ ದಂಡಿನೊಡನೆ ಬಂದು ದಾಳಿ ಮಾಡಬಹುದು. ಅವರ ಏಟಿಗೆ ಮರು ಏಟು ಕೊಟ್ಟು ನಮ್ಮ ಸ್ವಸಾಮರ್ಥ್ಯದ ಬಲದಿಂದಲೇ ನಮ್ಮ ಸ್ವಾತಂತ್ರ್ಯವನ್ನು ರಕ್ಷಿಸಿಕೊಳ್ಳಬೇಕಾಗುವದು. ಮಲ್ಲಸರ್ಜ ದೊರೆಗಳೂ ಒಂದೆರಡು ವಾರಗಳಲ್ಲಿಯೇ ಆಗ ರಾಜ್ಯದ ಸಕಲ ಸೂತ್ರ ವಹಿಸಿಕೊಳ್ಳುವರು. ಅವರು ಬರುವವರೆಗೆ ಈ ಮಿಸಿ ಈ ಜವಾಬುದಾರಿಯನ್ನು ಯಾರು ವಹಿಸಿಕೊಳ್ಳಬೇಕೆಂಬುದೇ ಇಂದಿನ ಆಲೋಚನೆಯ ವಿಷಯವಾಗಿದೆ. ನೀವೆಲ್ಲರೂ ನಿಮ್ಮ ನಿಮ್ಮ ಅಭಿಪ್ರಾಯಗಳನ್ನು ಸ್ಪಷ್ಟವಾಗಿ ತಿಳಿಸಬೇಕು."

ಸ್ವಾಮಿಗಳ ಅಪ್ಪಣೆ ಪಡೆದು, ತಲ್ಲೂರು ದೇಸಾಯರು ಎದ್ದು ನಿಂತು ಮಾತನಾಡಿದರು: "ನಿಜವಾಗಿ ಇದು ಅಂಥ ದೊಡ್ಡ ವಿಷಯವೇನೂ ಅಲ್ಲ. ದೊರೆಗಳು ಬರುವವರೆಗಿನ ಕೆಲವೇ ದಿನಗಳ ಅವಧಿಯಲ್ಲಿ ನೇತೃತ್ವ ಯಾರು ವಹಿಸಿಕೊಳ್ಳಬೇಕು ಎಂಬುದಷ್ಟೇ ಪ್ರಶ್ನೆ. ಇಲ್ಲಿ ನಮ್ಮ ನಿಮ್ಮೆಲ್ಲರಿಗೂ ಹಿರಿಯರಾಗಿರುವವರು, ಪೂಜ್ಯರಾಗಿರುವವರು, ಯಾವಾಗಲೂ ಈ ರಾಜ್ಯದ ಕಲ್ಯಾಣಕ್ಕಾಗಿಯೇ ಚಿಂತಿಸುತ್ತಿರುವವರು ಪ್ರಭುಸ್ವಾಮಿಗಳಿದ್ದಾರೆ. ಈ ಜವಾಬುದಾರಿಯನ್ನು ವಹಿಸಲು ಅವರೇ ತಕ್ಕವರೆಂದು ತಾವೆಲ್ಲ ಒಪ್ಪಬಹುದು."

"ದೇಸಾಯಿಸಾಹೇಬರು ಸರಿಯಾಗಿಯೇ ಹೇಳಿದ್ದಾರೆ. ನನ್ನದೂ ಅದೇ ಅಭಿಪ್ರಾಯ. ಸ್ವಾಮಿಗಳು ದೊಡ್ಡ ಮನಸ್ಸು ಮಾಡಿ ಜವಾಬುದಾರಿ ಸ್ವೀಕರಿಸಬೇಕು," ಎಂದು ತಿಮ್ಮನಗೌಡ ಕೇಳಿಕೊಂಡ. ಗುರುಸಿದ್ಧಪ್ಪನೂ ಅದಕ್ಕೆ ಅನುಮೋದನೆಯಿತ್ತ. ಸಭಿಕರೆಲ್ಲರೂ ಚಪ್ಪಾಳೆ ಹಾಕಿ ಆ ಸೂಚನೆಗೆ ಬೆಂಬಲವಿತ್ತರು.

ಶಾಂತವಾಗಿದ್ದ ಸ್ವಾಮಿಗಳ ಮುಖ ಚಲವಿಚಲವಾಯಿತು, ಚಿಂತಾಗ್ರಸ್ತವಾಯಿತು.

“ನಮ್ಮ ಬಗ್ಗೆ ಇರುವ ವಿಶ್ವಾಸದಿಂದ ನೀವೆಲ್ಲರೂ ಈ ಹೊಣೆಯನ್ನು ನಮ್ಮ ತಲೆಗೇ ಕಟ್ಟಲು ಸಿದ್ಧರಾಗಿದ್ದೀರಿ. ಆದರೆ, ನಾವು ಧಾರ್ಮಿಕ ರಂಗದವರು–ಆ ರಂಗದಲ್ಲಿದ್ದುಕೊಂಡೇ ಈ ರಾಜ್ಯದ ಅಭಿವೃದ್ಧಿಗಾಗಿ ಸಾಧ್ಯವಾದಷ್ಟು ಕೆಲಸ ಮಾಡಬಲ್ಲೆವು. ಪ್ರತ್ಯಕ್ಷವಾಗಿ ರಾಜಕೀಯರಂಗಕ್ಕೆ ಮಾತ್ರ ನಾವು ಇಳಿಯಲಾರೆವು. ನೀವೂ ನಮಗೆ ಅದಕ್ಕಾಗಿ ಒತ್ತಾಯ ಮಾಡಬೇಡಿರಿ. ನಿಮ್ಮಲ್ಲಿಯೇ ಒಬ್ಬ ಸಮರ್ಥನನ್ನಾರಿಸಿ ಅವರಿಗೆ ಈ ಜವಾಬುದಾರಿ ಒಪ್ಪಿಸಿರಿ.”

ಸ್ವಾಮಿಗಳು ಹಾಗೆ ಸ್ಪಷ್ಟವಾಗಿ ಹೇಳಿದ ಮೇಲೆ ಪುನಃ ಅವರನ್ನು ಕಾಡುವ ಪ್ರಶ್ನೆಯೇ ಇರಲಿಲ್ಲ. ಸಭಿಕರ ಗಮನ ಬೇರೆಯವರತ್ತ ಹೊರಳುವುದು ಅನಿವಾರ್ಯವೇ ಆಯಿತು.

“ಕಿತ್ತೂರಿನ ಬಿಡುಗಡೆಗಾಗಿ ಎಲ್ಲಾ ರೀತಿಯಲ್ಲೂ ದುಡಿದು ಇಂದಿನ ವಿಜಯಕ್ಕೆ ಕಾರಣರಾಗಿರುವವರೆಂದರೆ ಹಿರಿಯರಾದ ತಲ್ಲೂರು ದೇಸಾಯರು. ದೊರೆಗಳು ಬರುವವರೆಗೆ ರಾಜ್ಯಾಧಿಕಾರ ವಹಿಸಿಕೊಳ್ಳಲೂ ಅವರೇ ಅರ್ಹರು,” ಎಂದ ತಿಮ್ಮನಗೌಡ.

“ಛೆ. ಛೆ. ನಾಯಕರು ನನ್ನನ್ನು ಕ್ಷಮಿಸಬೇಕು. ಕೆಲಸ ಏನಿದ್ದರೂ ನನಗೆ ಹೇಳಿರಿ. ಮಾಡುತ್ತೇನೆ. ಆಡಳಿತದ ಜವಾಬುದಾರಿ ಮಾತ್ರ ನನಗೆ ಸುತರಾಂ ಬೇಡ. ಅದನ್ನು ಕಿತ್ತೂರಿನವರೇ ಆದ ನಿಮ್ಮಲ್ಲಿ ಯಾರಾದರೂ ವಹಿಸಿಕೊಳ್ಳಬೇಕು,” ಎಂದರು ದೇಸಾಯರು.

“ತಾವು ಕಿತ್ತೂರಿನವರಲ್ಲ ಎಂಬ ಭಾವನೆ ಬರುವಂತೆ ದೇಸಾಯ ಸಾಹೇಬರು ಮಾತನಾಡುವುದು ಕೇಳಿ ನನಗಂತೂ ಬಹಳ ದುಃಖವಾಯಿತು,” ಎಂದ ಗುರುಸಿದ್ಧಪ್ಪ.

“ಹಾಗಲ್ಲ ಗುರುಸಿದ್ಧಪ್ಪನವರೆ, ನನ್ನ ಮಾತನ್ನು ತಪ್ಪಾಗಿ ಭಾವಿಸಬೇಡಿರಿ. ಕಿತ್ತೂರಿನ ಅಭಿಮಾನಕ್ಕಾಗಿಯೇ ಅಲ್ಲವೇ ನಾನು ಏನೋ ಅಷ್ಟು ಸೇವೆ ಸಲ್ಲಿಸಿದ್ದು? ಅಧಿಕಾರದ ಮಾತು ಮಾತ್ರ ಬೇಡ ಅಂದೆ, ಅಷ್ಟೆ,” ಎಂದು ದೇಸಾಯರು ವಿವರಣೆಯಿತ್ತರು.

“ಹಾಗಾದರೆ ರಾಣೀಸಾಹೇಬರೇ ಅಧಿಕಾರ ನೋಡಿಕೊಳ್ಳಲಿ. ಅವರಿಗೆ ಸಲಹೆ ಕೊಡಲು ಪ್ರಧಾನಿಯೊಬ್ಬರನ್ನು ನೇಮಿಸಿದರಾಯಿತು,” ಎಂದ ಶಾಬಾಸೇಖಾನ್.

“ಇದೀಗ ಸರಿಯಾದ ಸೂಚನೆ. ಇದಕ್ಕೆ ಯಾರ ಆಕ್ಷೇಪಣೆಯೂ ಇರಲಾರದು,” ಎಂದ, ದೊಡ್ಡವಾಡ ರುದ್ರಪ್ಪ.

“ಅವ್ವನವರು ಅಧಿಕಾರ ವಹಿಸಬೇಕು, ಗುರುಸಿದ್ಧಪ್ಪನವರು ಪ್ರಧಾನಿಗಳಾಗಬೇಕು,” ಎಂದ, ಗುರುಪುತ್ರಪ್ಪನವರ ವೀರಪ್ಪ.

“ಚಿಂತೋಪಂತರನ್ನು ಮರೆತೇಬಿಟ್ಟರಲ್ಲಾ?” ಎಂದು ಯಾರೋ ಒಬ್ಬರು ಧ್ವನಿಯೆತ್ತಿದರು.

“ಚಿಂತೋಪಂತರು? ಯಾವ ಚಿಂತೋಪಂತರು?” ಎಂದು ಇನ್ನೊಬ್ಬರು ಸವಾಲು ಹಾಕಿದರು.

“ಏನ್ರಿ, ಹೀಗೆ ಮಾತಾಡುತ್ತೀರಲ್ಲ? ಚಿಂತೋಪಂತರೆಂದರೆ ಯಾರಿಗೆ ಗೊತ್ತಿಲ್ಲ? ಕಿತ್ತೂರಿನ ಮುತ್ಸದ್ದಿಗಳಲ್ಲೆಲ್ಲ ಅವರೇ ಬುದ್ಧಿವಂತರು....”

“ನಿಮ್ಮ ಮಾತಿಗೆ ಆಧಾರವೇನಿದೆ?”

“ಆಧಾರ? ಆಧಾರ ಎಲ್ಲಿಂದ ಬರಬೇಕು? ಅದೆಲ್ಲಾ ಅನುಭವದಿಂದ ತಿಳಿದು ಬರುವಂಥಾದ್ದು.”

“ಅವರ ಬುದ್ಧಿವಂತಿಕೆ ಎಷ್ಟು ಅನ್ನುವದು ನಮಗೂ ಅನುಭವದಿಂದಲೇ ತಿಳಿದುಹೋಗಿದೆ,” ಎಂದ ತಿಮ್ಮನಗೌಡ.

“ಏನು ತಿಳಿಯಿತು?”

“ಮಿರಜಕ್ಕೆ ಎರಡು ಸಾರಿ ಹೋದರೂ ಪಟವರ್ಧನರಿಂದ ಸ್ವಲ್ಪ ಸಹಾಯವನ್ನೂ ತರಲಾಗಲಿಲ್ಲ ಅವರಿಂದ. ಅಷ್ಟು ಬುದ್ಧಿವಂತರವರು!”

“ಪೇಶ್ವೆ–ಪಟವರ್ಧನರ ಹಿತಚಿಂತಕರಾಗಿ ಕೆಲಸ ಮಾಡುವವರಿಗೆ ನಮ್ಮ ದರಬಾರದಲ್ಲಿ ಸ್ಥಾನ ಕೊಡಬಾರದೆಂದೇ ನನ್ನ ಅಭಿಪ್ರಾಯ. ಇಂಥ ಮನೆಮುರುಕರ ಮುತ್ಸದ್ದಿತನದಿಂದಲೇ ನಮ್ಮ ದೊರೆಗಳು ಟೀಪುವಿನ ಕೈಗೆ ಸಿಕ್ಕಿಬಿದ್ದದ್ದು. ಇನ್ನಾದರೂ ನಾವು ಬುದ್ಧಿ ಕಲಿಯಬೇಕು,” ಎಂದ, ಅಂದಾಕಾರಿ ಶಿವರುದ್ರಪ್ಪ.

“ಹಿಂದೆ ಆದದ್ದು ಆಗಿಹೋಯ್ತು ಶಿವರುದ್ರಪ್ಪ. ಅದಕ್ಕಾಗಿ ಯಾರ ಮೇಲೂ ಆರೋಪ ಹೊರಿಸುವದು ಬೇಡ. ಅದರ ಆಗತ್ಯವೂ ಇಲ್ಲ,” ಎಂದು ಹೇಳಿ ಸ್ವಾಮಿಗಳು ಆ ಮಾತಿಗೆ ತಡೆ ಹಾಕಿದರು.

ದೊರೆಗಳು ಬರುವವರಿಗೆ ಗುರುಸಿದ್ಧಪ್ಪನೇ ಪ್ರಧಾನಿಯ ಕೆಲಸ

ನೋಡಿಕೊಳ್ಳಬೇಕೆಂದೂ, ಆತನ ಸಲಹೆಯಂತೆ ರುದ್ರಮ್ಮರಾಣಿಯೇ ಆಡಳಿತ ನಡಸಬೇಕೆಂದೂ ಕೊನೆಗೆ ಸರ್ವಾನುಮತದಿಂದ ತೀರ್ಮಾನವಾಯಿತು.

೨೦

ಭಾರತಕ್ಕೆ ವ್ಯಾಪಾರಕ್ಕೆಂದು ಬಂದ ಆಂಗ್ಲರು ಇಲ್ಲಿ ರಾಜಮಹಾರಾಜರುಗಳಲ್ಲಿ ನಡೆದಿದ್ದ ಜಗಳಗಳ ದುರ್ಲಾಭ ಪಡೆದು, ಒಬ್ಬರನ್ನು ಇನ್ನೊಬ್ಬರ ವಿರುದ್ಧ ಎತ್ತಿಕಟ್ಟಿ, ನಿಧಾನವಾಗಿ ತಮ್ಮ ಅಧಿಕಾರವನ್ನು ಪ್ರಸ್ಥಾಪಿಸುತ್ತ ನಡೆದಿದ್ದ ಕಾಲ ಅದು. ಕೊಯಿಮತ್ತೂರಿನಲ್ಲೊಂದು ಸೈನಿಕ ಠಾಣ್ಯವನ್ನೂ ನೆಲೆಗೊಳಿಸಿ ಅವರು ದಕ್ಷಿಣದಲ್ಲಿ ತಮ್ಮ ಸ್ಥಾನವನ್ನು ಭದ್ರಪಡಿಸಿಕೊಂಡಿದ್ದರು. ದಕ್ಷಿಣಾಪಥದಲ್ಲಿ ಅವರ ಆಕ್ರಮಣವನ್ನು ದಿಟ್ಟತನದಿಂದ ಎದುರಿಸಿ ಮೇಲಿಂದ ಮೇಲೆ ಅವರ ಮೇಲೆ ಬಲವಾದ ಆಘಾತ ವುಂಟುಮಾಡಿದ ಟೀಪುಸುಲ್ತಾನನ ಮೇಲೆ ಅವರಿಗೆ ಸಹಜವಾಗಿಯೇ ರೋಷವಿತ್ತು– ಟೀಪುವಿನ ಶಕ್ತಿಯನ್ನು ಮುರಿದ ಹೊರತೂ ದಕ್ಷಿಣ ಭಾರತದಲ್ಲಿ ತಮ್ಮ ಬೇಳೆ ಬೇಯಲಾರದೆಂದು ಮನಗಂಡ ಆಂಗ್ಲರು ಅವನ ವಿರುದ್ಧವಾಗಿ ಸುತ್ತಲಿನ ಚಿಕ್ಕಪುಟ್ಟ ರಾಜರನ್ನೂ ಪಾಳಯಗಾರರನ್ನೂ ಸಂಘಟಿಸುವುದರಲ್ಲಿ ತೊಡಗಿದರು.

ಎಂತಲೇ, ಕಿತ್ತೂರು ರಾಜ್ಯದ ದೊರೆ ಟೀಪುವಿನ ಕಾರಾಗೃಹದಿಂದ ತಪ್ಪಿಸಿಕೊಂಡು ತಮ್ಮನ್ನು ಭೆಟ್ಟಿಯಾಗಲು ಬಂದಾಗ, ಕೊಯಿಮತ್ತೂರಿನಲ್ಲಿದ್ದ ಆಂಗ್ಲ ಅಧಿಕಾರಿಗಳಿಗೆ ತುಂಬ ಸಂತೋಷವಾಯಿತು. ರಾಜರಿಗೆ ಸಲ್ಲತಕ್ಕ ಸನ್ಮಾನದಿಂದಲೇ ಅವರು ಮಲ್ಲಸರ್ಜನನ್ನು ಸ್ವಾಗತಿಸಿ ಅವನ ಬಿಡಾರಕ್ಕಾಗಿ ಅರಮನೆಯಂಥ ದಿವ್ಯಭವನವೊಂದನ್ನು ಗೊತ್ತುಮಾಡಿ ಕೊಟ್ಟರು. ಕಿತ್ತೂರು ದೊರೆಗಳಿಗೆ ಯಾವುದರದೂ ಕೊರತೆಯಾಗದಂತೆ ಸರ್ವವ್ಯವಸ್ಥೆಯೂ ಆಯಿತು. ದಿವ್ಯವಾದ ವಸ್ತ್ರಗಳು, ಸವಾರಿಗಾಗಿ ಅರಬಸ್ತಾನದ ಶ್ವೇತಾಶ್ವಗಳು, ಮೃಗಾವಲಿಗೆಂದು ಒಂದು ಪಡೆ ಎಲ್ಲವೂ ಒದಗಿಸಲ್ಪಟ್ಟುವು. ತಮಗೆ ಲಭಿಸಿದ ಆ ಅದ್ಭುತ ಆತಿಥ್ಯವನ್ನು ಕಂಡು ಮಲ್ಲಸರ್ಜ ಚಕಿತನಾದ. ಆಂಗ್ಲರು ಇಷ್ಟು ಉದಾರಿಗಳಾಗಿರಬಹುದೆಂದು ಆತ ಭಾವಿಸಿರಲಿಲ್ಲ.

ಈ ವಿಚಾರವಾಗಿ ಮಡಿವಾಳನೊಡನೆ ಏಕಾಂತದಲ್ಲಿ ಮಾತನಾಡುತ್ತ ಮಲ್ಲಸರ್ಜನೆಂದ: "ಸಾಮಾನ್ಯವಾಗಿ ವ್ಯಾಪಾರಿಗಳೆಲ್ಲ ಕೃಪಣರಾಗಿರುವುದುಂಟು. ಇಂಗ್ಲೀಷರೂ ಹಾಗೇ ಇರಬಹುದೆಂದು ನಾವು ತಿಳಿದಿದ್ದೆವು. ಇಲ್ಲಿಯ ಅನುಭವವಂತೂ ಅದಕ್ಕೆ ವ್ಯತಿರಿಕ್ತವಾಗಿದೆಯಲ್ಲ?"

"ಟೀಪುವಿನ ವೈರಿಗಳನ್ನೆಲ್ಲಾ ಇವರು ಗೆಳೆಯರಂತೆ ನಡಸಿಕೊಳ್ಳಿತ್ತಿರಬೇಕು. ನಮಗೆ ಇಷ್ಟು ಸೌಕರ್ಯ ಒದಗಿಸಲಿಕ್ಕೂ ಅದೇ ಕಾರಣ ಅಂತ ನನಗನಿಸ್ತದೆ."

"ನಿಜ. ಅದೇ ಕಾರಣವಿರಬಹುದು. ಆದರೂ ಒಮ್ಮೊಮ್ಮೆ ಸತ್ಕಾರ ಅತಿಯಾಯಿತು ಅಂತ ನಮಗನಿಸುತ್ತದೆ."

ಅವರು ಕೊಯಿಮುತ್ತೂರು ಠಾಣ್ಯಕ್ಕೆ ಬಂದುದಕ್ಕೆ ನಾಲ್ಕು ದಿನ ಕಳೆದು ಹೋಗಿದ್ದುವು. ಆಂಗ್ಲ ಸೈನ್ಯಾಧಿಕಾರಿ ಅವರನ್ನು ದಿನವೂ ನೋಡುತ್ತಿದ್ದನಾದರೂ ಔಪಚಾರಿಕ ಕುಶಲಪ್ರಶ್ನೆಗಳ ಹೊರತು ಅನ್ಯ ವಿಚಾರಗಳನ್ನು ಪ್ರಸ್ತಾಪಿಸಿರಲಿಲ್ಲ. ಅಲ್ಲಿ ಕಾಲಹರಣ ಮಾಡುತ್ತ ಕುಳಿತುಕೊಳ್ಳದೆ ಆದಷ್ಟು ಬೇಗ ಕಿತ್ತೂರಿಗೆ ಹೊರಡಬೇಕೆಂದು ಮಲ್ಲಸರ್ಜ ಇಚ್ಛಿಸುತ್ತಿದ್ದನಾದರೂ ಆಂಗ್ಲ ಅಧಿಕಾರಿ ಅಷ್ಟು ಬೇಗ ಅವರನ್ನು ಕಳಿಸಲು ಒಡಂಬಡುತ್ತಿರಲಿಲ್ಲ.

"ಆ ಸೈತಾನನ ಸೆರೆಯಲ್ಲಿ ಬಿದ್ದು ನಿಮ್ಮ ಆರೋಗ್ಯವೆಲ್ಲಾ ಹಾಳಾಗಿ ಹೋಗಿದೆ. ಇಂಥ ಸ್ಥಿತಿಯಲ್ಲಿ ಅಷ್ಟು ದೂರ ಪ್ರಯಾಣ ಮಾಡುವದು ಸಾಧ್ಯವಾಗಲಾರದು. ಇನ್ನೂ ಹತ್ತು ಹದಿನೈದು ದಿನ ಇಲ್ಲೇ ಇದ್ದು ವಿರಾಮವಾಗಿ ಉಂಡು ತಿಂದು ಸುಧಾರಿಸಿಕೊಳ್ಳಿ," ಎಂದು ಆತ ಹೇಳುತ್ತಿದ್ದ.

"ತಮ್ಮ ವಿಶ್ವಾಸಕ್ಕಾಗಿ ಕೃತಜ್ಞರಾಗಿದ್ದೇವೆ ಸಾಹೇಬರೆ. ಆದರೆ ನಮ್ಮ ರಾಜ್ಯ ವೈರಿಯ ಕೈಯಲ್ಲಿರುತ್ತ ನಾವಿಲ್ಲಿ ನೆಮ್ಮದಿಯಿಂದ ಕಾಲ ಕಳೆಯುವದೇ ಸಾಧ್ಯವಿಲ್ಲ. ಕಿತ್ತೂರಿಗೆ ಹೋಗಿ ವೈರಿ ಸೇನೆಯನ್ನೋಡಿಸಿ ಕೋಟೆಯನ್ನು ವಶಪಡಿಸಿಕೊಂಡಾಗಲೇ ನಮಗೆ ಸಮಾಧಾನ."

ಆ ವೀರ ಚೇತನವನ್ನು ಕಂಡು ಆಂಗ್ಲ ಅಧಿಕಾರಿಗೂ ಪರಮ ಸಂತೋಷವಾಗುತ್ತಿತ್ತು. ಉತ್ತರದ ಚಿಕ್ಕ ರಾಜ್ಯವೊಂದರ ಈ ಯುವಕ ದೊರೆಯ ವ್ಯಕ್ತಿತ್ವ ಅಧಿಕಾರಿಯ ಮನವನ್ನು ಸೂರೆಗೊಂಡಿತ್ತು. ಮಲ್ಲ

ಸರ್ಜನಿಗೆ ಸಾಧ್ಯವಿದ್ದ ಸಹಾಯವನ್ನೆಲ್ಲ ಒದಗಿಸಿಕೊಟ್ಟು, ಸಂಸ್ಥಾನ ಆತನ ಕೈಗೆ ಬರುವಂತೆ ಮಾಡುವುದಲ್ಲದೆ ಮುಂದೆಯೂ ಸಹ ಆತನನ್ನು ತನ್ನ ಸ್ನೇಹಿತನನ್ನಾಗಿಯೇ ಉಳಿಸಿಕೊಳ್ಳಬೇಕೆಂದು ಅಧಿಕಾರಿ ನಿಶ್ಚಯ ಮಾಡಿಕೊಂಡಿದ್ದ.

ಒಂದು ಬಾರಿ ಅವರಿಬ್ಬರೂ ಉದ್ಯಾನವನದಲ್ಲಿ ವಾಯುವಿಹಾರ ಹೊರಟಿದ್ದಾಗ ಮಾತಿಗೆ ಮಾತು ಹೊರಟು, ಕಿತ್ತೂರಿನ ಗತ ಇತಿಹಾಸದ ಪ್ರಸ್ತಾಪ ಬಂತು. ಆಂಗ್ಲ ಅಧಿಕಾರಿಗೆ ಆ ವಿಚಾರವಾಗಿ ಏನೂ ತಿಳಿದಿರಲಿಲ್ಲ. ಎಂತಲೇ ಆತ ಕುತೂಹಲದಿಂದ ಕೇಳಿದ : “ ತಮ್ಮ ರಾಜ್ಯ ಸ್ಥಾಪನೆಯಾಗಿ ಎಷ್ಟು ವರ್ಷವಾಯಿತು ಮಹಾರಾಜಾ ?”

“ ಎರಡು ನೂರು ವರ್ಷ ಆಗುತ್ತ ಬಂತು.”

“ ಹಾಗಾದರೆ ಬಹಳ ಹಳೆಯ ರಾಜ್ಯವೆಂದಾಯಿತು. ತಮ್ಮ ಮೂಲ ವಂಶಜರು ಎಲ್ಲಿಯವರು ? ಕಿತ್ತೂರಿನವರೋ ?”

“ ಅಲ್ಲ ಸಾಹೇಬರೆ. ನಮ್ಮ ರಾಜ್ಯಸ್ಥಾಪಕರು ಸಾಗರ ಪ್ರಾಂತದವರು. ಬಿಜಾಪುರದ ಇಬ್ರಾಹಿಂಷಹನ ದಂಡಿನಲ್ಲಿ ಸೇರಿಕೊಂಡು ಎಷ್ಟೋ ಯುದ್ಧಗಳಲ್ಲಿ ಪರಾಕ್ರಮದಿಂದ ಹೋರಾಡಿದ್ದರಿಂದ ಬಾದಷಹ ಸಂತುಷ್ಟನಾಗಿ ‘ಸಮಶೇರ್ ಜಂಗಬಹದ್ದೂರ್ ’ ಎಂಬ ಪ್ರಶಸ್ತಿಯಿತ್ತು ಗೌರವಿಸಿ ಹುಬ್ಬಳ್ಳಿ ಪ್ರಾಂತದ ಸರದೇಶಮುಖಿಯನ್ನು ಜಹಗೀರು ಹಾಕಿಕೊಟ್ಟ. ಆಗ ಆ ಭಾಗದಲ್ಲಿ ವಿಶೇಷ ಜನವಸತಿಯೇ ಇರಲಿಲ್ಲವಂತೆ. ನಮ್ಮ ಆ ಹಿರಿಯರು ತಮ್ಮ ಪ್ರಾಂತದಿಂದ ಜನರನ್ನು ಕರೆದು ತಂದು ಅಡವಿಯನ್ನು ಕಡಿದೊಗೆದು ಭೂಮಿಯನ್ನು ಸರಿಗೊಳಿಸಿ ಸಾಗುಮಾಡಲು ಹಚ್ಚಿದರು. ಅದೇ ಕಿತ್ತೂರು ರಾಜ್ಯದ ಆರಂಭಕಾಲ. ವಿಜಯನಗರದ ಪತನದ ತರುವಾಯ ಕರ್ನಾಟಕದಲ್ಲಿ ಸ್ವಸಾಮರ್ಥ್ಯದಿಂದ ಉದಯಕ್ಕೆ ಬಂದ ಸಂಸ್ಥಾನಿಕರೆಂದರೆ ಇವರೇ. ರಾಜ್ಯಸ್ಥಾಪಕನಾದ ಹಿರೇಮಲ್ಲಸೆಟ್ಟಿ ಮಹಾ ಪರಾಕ್ರಮಿ, ಅವನ ತರುವಾಯ ಬಂದವರೂ ಅವನಂತೆಯೇ ಶೂರರಾಗಿದ್ದು ಮುಸಲ್ಮಾನರನ್ನು ಕಲಿತನದಿಂದ ಎದುರಿಸಿ ರಾಜ್ಯ ವಿಸ್ತಾರ ಮಾಡಿದರು. ಈ ಪೀಳಿಗೆಯಲ್ಲಿ ಹತ್ತನೆಯವರೇ ನಮ್ಮ ಪೂಜ್ಯ ತಂದೆಯವರು, ಪಟವರ್ಧನರೊಡನೆ ನಡೆದ ಯುದ್ಧದಲ್ಲಿ ಕಾದುತ್ತ ಕಾದುತ್ತಲೇ ಅವರು ವೀರಸ್ವರ್ಗ ಪಡೆದರು.”

" ಪಟವರ್ಧನರೊಡನೆ ಯುದ್ಧ? ಅವರೂ ಪೇಶ್ವೆಯವರೂ ನಿಮ್ಮ ಸ್ನೇಹಿತರೆಂದು ನಾನು ತಿಳಿದಿದ್ದೇನಲ್ಲ?" ಎಂದ ಅಧಿಕಾರಿ.

" ನಾವೇನೋ ಸ್ನೇಹಭಾವದಿಂದಲೇ ಇದ್ದೇವೆ ಸಾಹೇಬರೆ. ಅವರು ಮಾತ್ರ ನಮ್ಮೊಡನೆ ಸರಳತನದಿಂದ ನಡೆದುಕೊಳ್ಳಲೊಲ್ಲರು. ಅದಕ್ಕೆ ಯಾರೇನು ಮಾಡುವದು? ನಮ್ಮ ರಾಜ್ಯಕ್ಕೇ ಸೇರಿದಂತೆ ಗೋಕಾಕ ಎಂಬು ದೊಂದು ನಗರವಿದೆ. ಅದನ್ನು ಸವಣೂರು ನವಾಬರು ಅನ್ಯಾಯದಿಂದ ಹಿಡಿದುಕೊಂಡಿದ್ದರು. ನಮ್ಮ ತಂದೆಯವರು ಯುದ್ಧ ಮಾಡಿ ನವಾಬ ನಿಂದ ಆ ನಗರವನ್ನು ಗೆದ್ದುಕೊಂಡಿದ್ದರು. ಅದನ್ನು ನೋಡಿ ಪಟವರ್ಧನ ರಿಗೆ ಅಸೂಯೆಯೆನ್ನಿಸಿ ಕಾರಣವೇನೂ ಇಲ್ಲದೆ ನಮ್ಮ ಮೇಲೆ ದಂಡೆತ್ತಿ ಬಂದರು. ನಮ್ಮ ತಂದೆಯವರೂ ಸುಮ್ಮನಿರದೆ ಶಕ್ತಿ ಮೀರಿ ಹೋರಾಡಿದ ರಾದರೂ ದುರ್ದೈವದಿಂದ ಅಸುನೀಗಬೇಕಾಯಿತು."

" ಪಟವರ್ಧನರೊಡನೆ ಈಗಲೂ ವೈರವೇ ಇದೆಯೆಂದಂತಾಯಿತಲ್ಲ?"

" ಅವರ ಭಾವನೆ ಹೇಗಿದೆಯೋ ತಿಳಿಯದು. ನಮಗಂತೂ ಅವರ ಬಗ್ಗೆ ವೈರವೇನೂ ಇಲ್ಲ. ನೆರೆಹೊರೆಯ ರಾಜರೊಡನೆ ಸ್ನೇಹದಿಂದಲೇ ಇದ್ದು ನಮ್ಮ ಸೀಮೆಯಲ್ಲಿ ನಾವು ಸ್ವತಂತ್ರವಾಗಿರುವ ಬಯಕೆ ನಮ್ಮದು. ಪೇಶ್ವೆ ಪಟವರ್ಧನರಿಗೆ ಮಾತ್ರ ನಮ್ಮ ಮೇಲೆ ಅಧಿಕಾರ ನಡಸುವ ದುರಾಸೆ. ಹಿಂದಕ್ಕೆ ಮೊಗಲರಿದ್ದರಲ್ಲ ಹಾಗೆ. ಇದೂ ಒಂದು ಸಾಮ್ರಾಜ್ಯ ಶಾಹಿ."

" ಟೀಪೂನ ಸ್ವಭಾವವೂ ಹಾಗೆಯೇ."

" ಹೌದು. ಅವನೂ ಅವರಂತೆಯೇ ಸರಿ. ಪೇಶ್ವೆ—ಪಟವರ್ಧನರಿ ಗಿಂತ ಹತ್ತು ಹೆಜ್ಜೆ ಮುಂದಿಡುವವನು ಈತ. ನಮ್ಮಿಂದ ಕಪ್ಪಕಾಣಿಕೆ ತೆಗೆದುಕೊಂಡು ನಮ್ಮ ರಾಜ್ಯಗಳನ್ನು ನಮಗೇ ಬಿಡುವ ಧೋರಣೆ ಅವರದು. ಇವನಾದರೋ ನಮ್ಮನ್ನು ಕೈದುಮಾಡಿ ಸೆರೆಯಲ್ಲಿಟ್ಟು ಹಿಂಸಿಸಿ, ಸಾಯಿಸಿ, ತನ್ನವರನ್ನೇ ಅಧಿಕಾರಕ್ಕೇರಿಸುವಾತ. ಸ್ವಾಭಿಮಾನಿಗಳಾದವರಾರೂ ಈ ಅನ್ಯಾಯವನ್ನು ಹೆಚ್ಚು ದಿನ ಸಹಿಸಿ ಸುಮ್ಮನಿರಲಾರರೆಂಬುದು ಈ ಸುಲ್ತಾನ ನಿಗಿನ್ನೂ ತಿಳಿಯದಾಗಿದೆ. ನೂರಾರು ಗಾವುದ ದೂರದಲ್ಲಿರುವ ಸೀಮೆ ಗಳನ್ನು ಶಾಶ್ವತವಾಗಿ ಅಂಕಿತದಲ್ಲಿಟ್ಟುಕೊಂಡು ಶಾಂತಿಯಿಂದ ಅವುಗಳನ್ನಾ ಳುವದೆಂದರೆ ಸಾಮಾನ್ಯ ಮಾತಲ್ಲ."

"ಟೀಪು ಮಹಾ ಅಹಂಕಾರಿ. ಭಾರತದ ಬಾದಷಹನಾಗುವದಕ್ಕಾಗಿಯೇ ತನ್ನ ಅವತಾರವಾಗಿದೆಯೆಂದು ಆತ ಭ್ರಮಿಸಿದಂತಿದೆ. ಅವನ ಆಕ್ರಮಣ ನೀತಿಗೆ ಅದೇ ಕಾರಣ. ಅಕ್ಬರ್, ಔರಂಗಜೇಬರಿಗೆ ಸಾಧ್ಯವಾಗದ್ದು ಇಂಥ ಅಲ್ಪನಿಗೆ ಸಾಧ್ಯವಾದೀತೇ? ಅವನ ಅವನತಿಯ ಕಾಲ ಸಮಿಾಪಿಸುತ್ತಿದೆ. ನೀವು ನಿಶ್ಚಿಂತರಾಗಿರಿ," ಎಂದ ಅಧಿಕಾರಿ.

ಒಂದು ನಿಮಿಷ ಬಿಟ್ಟು ಮತ್ತೆ ಆತನೇ ಹೇಳಿದ.

"ಟೀಪುವಿನಂಥ ಅತ್ಯಾಚಾರಿಗಳಿಂದ ನಿಮ್ಮಂಥ ಧರ್ಮಾತ್ಮರ ಮೇಲಾಗುವ ಅನ್ಯಾಯಗಳನ್ನು ನೋಡಿ ಸುಮ್ಮನಿರಲಾಗದೆ ನಾವೂ ಕತ್ತಿಯೆತ್ತಬೇಕಾಗಿ ಬಂದಿದೆ. ನಿಜವಾಗಿ ನಮಗೇನು ರಾಜ್ಯದಾಹವಿಲ್ಲ. ನಾವು ವ್ಯಾಪಾರಕ್ಕಾಗಿ ಬಂದವರು. ವ್ಯಾಪಾರ ಸರಿಯಾಗಿ ನಡೆಯುತ್ತಿದ್ದರಾಯಿತು. ನಮಗೆ ತೃಪ್ತಿ. ಆದರೆ, ಟೀಪುವಿನಂಥ ದುಷ್ಟರಿಗೆ ನಾವಿಲ್ಲಿ ವ್ಯಾಪಾರ ಮಾಡುವದೂ ಸಹನೆಯಾಗದು. ನಾವು ಪರದೇಶೀಯರೆಂದು ಹೇಳಿ ನಮ್ಮನ್ನು ಈ ದೇಶದಿಂದಲೇ ಓಡಿಸಲು ಪ್ರಯತ್ನಿಸುತ್ತಾರೆ. ನೀವೇ ಹೇಳಿ, ಇದು ನ್ಯಾಯವೇ?"

"ಇದೆಂಥ ನ್ಯಾಯ ಸಾಹೇಬರೆ? ಬೇರೆ ಬೇರೆ ದೇಶಗಳಲ್ಲಿ ವ್ಯಾಪಾರ ವ್ಯವಹಾರ ವಿನಿಮಯ ನಡೆಯಲೇಬೇಕು. ಸಾವಿರಾರು ವರ್ಷಗಳಿಂದ ನಡೆದುಕೊಂಡೂ ಬಂದಿದೆ. ನಮ್ಮಲ್ಲಿ ಉತ್ಪನ್ನವಾಗದಂಥ ಸಾಮಾನು ನೀವು ತಂದುಕೊಡಬೇಕು, ನಿಮ್ಮಲ್ಲಿ ಉತ್ಪನ್ನವಾಗದ್ದನ್ನು ಇಲ್ಲಿಂದ ಒಯ್ಯಬೇಕು. ಆದರಿಂದ ಉಭಯತರಿಗೂ ಪ್ರಯೋಜನ."

"ನಿಮ್ಮ ದೇಶಕ್ಕೆ ನಾವೇನೂ ಹೊಸಬರಲ್ಲ. ನೂರಾರು ವರ್ಷಗಳಿಂದಲೂ ಇಲ್ಲಿ ವಖಾರಗಳನ್ನು ಕಟ್ಟಿಸಿಕೊಂಡು ವ್ಯಾಪಾರ ನಡಸಿದ್ದೇವೆ. ಆದರಿಂದ ನಿಮ್ಮ ದೇಶಕ್ಕೂ ಸಾಕಷ್ಟು ಲಾಭವಾಗಿದೆ. ಇದನ್ನೆಲ್ಲಾ ಲಕ್ಷ್ಯಕ್ಕೆ ತಂದುಕೊಳ್ಳದೆ ಸುಮ್ಮಸುಮ್ಮನೆ ನಮ್ಮನ್ನು ದ್ವೇಷಿಸಿದರೇನು ಬಂತು? ಟೀಪೂಗೆ ಮಾತ್ರ ನಮ್ಮನ್ನು ಕಂಡಲಾಗದು. ಆತ ಅಧಿಕಾರಕ್ಕೆ ಬಂದಂದಿನಿಂದ ನಮಗೆ ಉಪಟಳ ಕೊಡುತ್ತಲೇ ಇದಾನೆ—ನಿಮಗೆ ತೊಂದರೆ ಕೊಟ್ಟ ಹಾಗೇ."

"ಕೆಲವರ ಸ್ವಭಾವವೇ ಹೀಗಿರುತ್ತದೆಂದು ತೋರುತ್ತದೆ."

" ಇಂಥವರಿಗೆ ಬುದ್ಧಿ ಕಲಿಸುವವರೂ ಹುಟ್ಟಿಕೊಳ್ಳುತ್ತಾರೆ. ಟೀಪೂನ ದುಷ್ಟಕೃತ್ಯಗಳಿಗೆ ಇಷ್ಟರಲ್ಲೀ ಪ್ರಾಯಶ್ಚಿತ್ತವೂ ಸಿಕ್ಕೀತು."

ಅಷ್ಟು ಹೇಳಿ ಅಧಿಕಾರಿ ಆ ಮಾತು ನಿಲ್ಲಿಸಿದ. ಮಲ್ಲಸರ್ಜನೂ ಮುಂದೆ ಮಾತು ಬೆಳೆಸಲಿಲ್ಲ.

ಆ ರಾತ್ರಿ ಮಡಿವಾಳನೊಡನೆ ಆ ವಿಚಾರ ಪ್ರಸ್ತಾಪಿಸುತ್ತ ಮಲ್ಲಸರ್ಜನೆಂದ: " ಟೀಪೂನ ಮೇಲೆ ಆಂಗ್ಲರಿಗೆ ಭಯಂಕರ ಸಿಟ್ಟಿದೆ ಮಡಿವಾಳಾ. ಇಷ್ಟರಲ್ಲೀ ಅವನ ವಿರುದ್ಧ ದೊಡ್ಡ ಯುದ್ಧವನ್ನೇ ಹೂಡುವಂತೆ ಕಾಣುತ್ತದೆ."

" ಏನಾದರೂ ಆಗಿ ಕೊನೆಗೊಮ್ಮೆ ಅವನ ಸೊಕ್ಕು ಅಡಗುವಂತಾಗಬೇಕು ಪ್ರಭು. ಈ ಪರದೇಶೀಯರು ಹೊಸಹೊಸ ಆಯುಧ ತಯಾರಿಸಿದ್ದಾರೆ, ಶಿಸ್ತಿನಿಂದ ಯುದ್ಧ ಮಾಡುತ್ತಾರೆ, ಟೀಪುವಿನ ಹತ್ತುಸಾವಿರ ಸೈನಿಕರನ್ನು ಓಡಿಸಲು ಇವರ ಸಾವಿರ ಸೈನಿಕರು ಸಾಕು. ಟೀಪೂನದೆಲ್ಲಾ ಬರಿಯ ಅವ್ಯವಸ್ಥೆ. ಇವರದಾದರೋ ಎಲ್ಲಾ ಅಚ್ಚುಕಟ್ಟು. ಈ ಕೆಂಪು ಮೋರೆಯವರಿಂದ ನಾವು ಕಲಿತುಕೊಳ್ಳಬೇಕಾದ್ದು ಬಹಳವಿದೆ ಪ್ರಭು."

" ಇರಬಹುದು. ಆದರೆ ನಮಗೊಂದೇ ಚಿಂತೆ. ಮನೆಯ ದೆವ್ವ ಓಡಿಸಲೆಂದು ಈ ಹೊರಗಿನ ದೆವ್ವವನ್ನು ನಾವಾಗಿಯೇ ಬರಮಾಡಿಕೊಳ್ಳುತ್ತಿರುವೆವೊ ಏನೊ. ಟೀಪುವನ್ನು ಸೋಲಿಸಿದನಂತರ ಇವರೂ ಅವನಂತೆಯೇ ಸಾಮ್ರಾಜ್ಯವಾದಿಗಳಾಗಲಿಕ್ಕಿಲ್ಲವೆಂಬ ಭರವಸೆಯೇನು? ರಾಜ್ಯಗೆದೆಯುವ ಇಚ್ಛೆ ತಮಗಿಲ್ಲವೆಂದು ಹೇಳುತ್ತಲೇ ಇವರು ಈಗಾಗಲೇ ಸಾಕಷ್ಟು ರಾಜ್ಯ ಹಿಡಿದುಕೊಂಡಿದ್ದಾರೆ. ಟೀಪುವನ್ನು ಸೋಲಿಸಿದ ಮೇಲಂತೂ ದಕ್ಷಿಣಾಪಥಕ್ಕೆಲ್ಲ ಈ ಪರಕೀಯರೇ ಸಾಮ್ರಾಟರಾಗಬಹುದು."

" ಹೌದು ಪ್ರಭು. ಹಾಗೂ ಆಗಬಹುದು."

" ಅಂತೂ ಇಂತೂ ನಮ್ಮ ದೇಶಕ್ಕೆ ಇದು ಒಳ್ಳೆಯ ಕಾಲವಲ್ಲವೆಂದೇ ತೋರುತ್ತದೆ. ಒಂದು ಕಡೆ ಹುಲಿ, ಇನ್ನೊಂದು ಕಡೆ ದರಿ. ಇತ್ತ ಟೀಪು, ಅತ್ತ ಪೇಶ್ವೆ–ಪಟವರ್ಧನರು, ಇತ್ತ ಇಂಗ್ಲಿಷರು. ಈ ಮೂರು ಶಕ್ತಿಗಳ ಸೆಣಸಾಟದಲ್ಲಿ ಪ್ರಜೆಗಳಿಗೆ ಕಷ್ಟ–ನಷ್ಟ, ಸಾವು–ನೋವು."

" ಟೀಪುವಿನ ವಿರುದ್ಧ ನಡೆಯಲಿರುವ ಯುದ್ಧದಲ್ಲಿ ನಮ್ಮನ್ನು ತಮ್ಮ

ಪಕ್ಷಕ್ಕೆಳೆದುಕೊಳ್ಳಬೇಕೆಂದೇ ಆಂಗ್ಲರು ಯೋಚಿಸಿಕೊಂಡಿರಬೇಕು. ಅಲ್ಲವೇ ಪ್ರಭು?"

"ಹೌದು. ಅದಂತೂ ಸ್ಪಷ್ಟವಾಗಿಯೇ ಇದೆ. ಟೀಪು ನಮ್ಮ ಜನ್ಮ ವೈರಿ. ಅವನನ್ನು ಬಗ್ಗುಬಡಿಯುವವರಿಗೆ ನಾವು ನೆರವಾಗಬೇಕಾದ್ದೂ ಅಗತ್ಯವೆ. ಆದರೆ ನಾವು ಏನೇ ಮಾಡಿದರೂ ಸ್ವತಂತ್ರರಾಗಿ ಮಾಡಬೇಕು. ಯಾರಿಗೂ ಸಾಮಂತರಾಗಿರಬಾರದು. ಈ ಇಂಗ್ಲೀಷರ ಹಂಗಿಗೂ ನಾವು ಸಿಕ್ಕಿಕೊಳ್ಳಬಾರದು ಮಡಿವಾಳಾ. ಈಗ ನಾವು ಇವರ ಸಹಾಯ ಪಡೆದೆವೆಂದೆರೆ ನಾಳೆ ಇವರು ಹೇಳಿದಂತೆ ಕೇಳಬೇಕಾಗ್ತದೆ."

"ನಾವು ಇವರ ಮಾಂಡಲಿಕರಾಗುವದೂ ಬೇಡ, ನಮಗೆ ಇವರ ಸಹಾಯವೂ ಬೇಡ. ಆದಷ್ಟು ಬೇಗ ಕಿತ್ತೂರಿಗೆ ಹೊರಡೋಣ ಪ್ರಭು."

"ಹೊರಡಬೇಕೆಂದೇ ನಾವೂ ಪ್ರಯತ್ನ ಮಾಡುತ್ತಿದ್ದೇವೆ. ಈ ಸಾಹೇಬರು ಮಾತ್ರ ಬಿಡಲೊಲ್ಲರು. ತಿಮ್ಮನಗೌಡರಿಗೆ ಹೇಳಿಕಳಿಸಿದ್ದೂ ಆಗಿದೆ. ಇಷ್ಟರಲ್ಲೇ ಆ ಕಡೆಯಿಂದ ಜನ ಬರಬಹುದು. ಆಮೇಲೆ ಮಾತ್ರ ಒಂದು ದಿನವೂ ನಿಲ್ಲುವಂತಿಲ್ಲ. ಆಗಿಂದಾಗ ಹೊರಟುಬಿಡೋಣ."

ಕಿತ್ತೂರಿನಿಂದ ಜನ ಬರಲು ಇನ್ನೂ ಕಾಲಾವಕಾಶವಿತ್ತು. ಆಂಗ್ಲ ಪಾಳಯದಲ್ಲಿ ಸೋಮಾರಿಯಾಗಿ ಕುಳಿತಿರಲಾರದೆ ಮಲ್ಲಸರ್ಜ ತನ್ನ ಮೈಗಾವಲ ಪಡೆಯವರ ಸಮೇತ ಆಗಾಗ ಟೀಪುವಿನ ಸೀಮೆಯಲ್ಲಿ ಪ್ರವೇಶಿಸಿ ಬೇರೆ ಬೇರೆ ಯುದ್ಧರಂಗಗಳಿಗೆ ಪಯಣ ಬೆಳೆಸುತ್ತಿದ್ದ ವೈರಿ ಸೈನ್ಯ ಕಾಣಿಸಿದರೆ ಹಠಾತ್ತಾಗಿ ಅವುಗಳ ಮೇಲೆರಗಿ, ಸಿಕ್ಕಿದಷ್ಟು ಸಾಮಗ್ರಿಗಳನ್ನೂ ದ್ರವ್ಯವನ್ನೂ ಹಾರಿಸಿಕೊಂಡು ಬರುತ್ತಿದ್ದ. ಒಂದು ಬಾರಿ ಹೀಗೇ ದಾಳಿ ಮಾಡಿದಾಗ ನೂರಾರು ಕುದುರೆಗಳೂ ಮದ್ದುಗುಂಡಿನ ಗಾಡಿಗಳೂ ಅವನ ಕೈವಶವಾದುವು. ಆಂಗ್ಲ ಪಾಳಯಕ್ಕೆ ಅವುಗಳನ್ನೆಲ್ಲ ಸಾಗಿಸಿಕೊಂಡು ಬಂದುದಾಯಿತು. ಕಿತ್ತೂರಿನ ವರೆಗೆ ಅವೆಲ್ಲವನ್ನೂ ತೆಗೆದುಕೊಂಡು ಹೋಗುವಂತಿರಲಿಲ್ಲ. ಅಂತೆಯೆ, ತಮ್ಮ ಕಾಣಿಕೆಯೆಂದು ಅವುಗಳನ್ನು ಸ್ವೀಕರಿಸಬೇಕೆಂದು ಆಂಗ್ಲ ಸೈನ್ಯಾಧಿಕಾರಿಯನ್ನು ಕೇಳಿಕೊಂಡ.

"ಥ್ಯಾಂಕ್‌ಯೂ ರಾಜಾಸಾಹೇಬ್. ನಿಮ್ಮ ಮನಸ್ಸು ದೊಡ್ಡದು."

ಮತ್ತೆ ಏಳೆಂಟುಬಾರಿ ವೈರಿ ಸೈನ್ಯದ ಮೇಲೆ ದಾಳಿ ನಡಸಿದುದಾ

ಯಿತು. ಕಂದಾಯದ ಹಣವನ್ನು ಶ್ರೀರಂಗಪಟ್ಟಣಕ್ಕೆ ಸಾಗಿಸುತ್ತಿದ್ದ ದಳವೊಂದರ ಮೇಲೆ ಬಿದ್ದು ಅದನ್ನೆಲ್ಲ ತುಂಡರಿಸಿ ಲಕ್ಷಾಂತರ ಹೊನ್ನಿನ ಪೆಟ್ಟಿಗೆಗಳನ್ನು ವಶಪಡಿಸಿಕೊಂಡುದುದಾಯಿತು. ಆ ವಾರ್ತೆ ತಲುಪುತ್ತಲೂ ಸುಲ್ತಾನ ಕರಕರನೆ ಹಲ್ಲು ಕಡಿದನಾದರೂ ಆ ಬಗೆಗೆ ಯಾವ ಕ್ರಮವನ್ನೂ ಕೈಗೊಳ್ಳಲು ಶಕ್ತನಾಗಲಿಲ್ಲ. ಅತ್ತ ನಿಜಾಮನೂ ಪೇಶ್ವೆಯರೂ ಒಟ್ಟುಗೂಡಿ ಅವನ ಮೇಲೆ ಸಾಗಿಬರಲು ಸಿದ್ಧತೆ ನಡಸುತ್ತಿದ್ದ ವಾರ್ತೆಯಿತ್ತು. ಆ ದೊಡ್ಡ ದಾಳಿಯನ್ನೆದುರಿಸಲು ಆತ ತನ್ನ ಸರ್ವಶಕ್ತಿಯನ್ನು ಕೇಂದ್ರೀಕರಿಸಬೇಕಾಗಿತ್ತು. ಎಂತಲೇ, ದಕ್ಷಿಣದ ಗಡಿಯಲ್ಲಿ ನಡೆಯುತ್ತಿದ್ದ ಈ ಸಣ್ಣಪುಟ್ಟ ಚಕಮಕಿಗಳ ಕಡೆಗೆ ಆತ ಲಕ್ಷ್ಯವೀಯುವುದು ಸಾಧ್ಯವಿರಲಿಲ್ಲ.

ಕೆಲದಿನಗಳಲ್ಲಿಯೇ ಸರದಾರ ವೀರಸಂಗಪ್ಪನೂ ತನ್ನ ಸಂಗಡಿಗರೊಡನೆ ಬಂದಿಳಿದ. ಅನೇಕ ತಿಂಗಳುಗಳ ಅಗಲಿಕೆಯ ತರುವಾಯ ತಮ್ಮ ಪ್ರೀತಿಯ ಪ್ರಭುವನ್ನು ಕಂಡು ಆ ಸ್ವಾಮಿಭಕ್ತರಿಗಾದ ಆನಂದ ಅಷ್ಟಿಷ್ಟಲ್ಲ. ಮಲ್ಲಸರ್ಜನೂ ಅವರನ್ನು ತಬ್ಬಿಕೊಂಡು, ಕುಶಲ ಪ್ರಶ್ನೆ ಕೇಳಿ, ಉಡುಗೊರೆಯಿತ್ತು ಸನ್ಮಾನಿಸಿದ. ಕಿತ್ತೂರು ಪುನಃ ತಮ್ಮ ಕೈವಶವಾದ ವಾರ್ತೆಯಂತೂ ಅವರ ಆನಂದವನ್ನು ಇಮ್ಮಡಿಗೊಳಿಸಿತು.

"ಜಮಾನಖಾನನನ್ನೋಡಿಸಲು ತಮ್ಮ ಮಾವನವರು, ತಲ್ಲೂರ ದೇಸಾಯಿ ಸಾಹೇಬರು ಬಹಳ ಶ್ರಮ ವಹಿಸಿದರು ಪ್ರಭು. ಸ್ವತಃ ರಾಣೀ ಸಾಹೇಬರೂ ಕತ್ತಿ ಹಿಡಿದು ಕಾದಾಡಿದರು. ಅವರ ಉತ್ಸಾಹ ನೋಡಿ ಮೀಸೆ ಹೊತ್ತ ನಮಗೇ ನಾಚಿಕೆಯಾಗುತ್ತಿತ್ತು," ಎಂದು ವೀರಸಂಗಪ್ಪ ಅಭಿಮಾನದಿಂದ ಬಣ್ಣಿಸಿ ಹೇಳಿದ.

ಪತ್ನಿಯ ಶೌರ್ಯದ ಬಣ್ಣನೆಯನ್ನಾಲಿಸುತ್ತಿದ್ದ ಹಾಗೆ ಮಲ್ಲಸರ್ಜನಿಗೆ ಒಂದು ಬಾರಿ ಹೆಮ್ಮೆಯೆನಿಸಿತು, ಇನ್ನೊಂದು ಬಾರಿ ಲಜ್ಜೆಯೂ ಎನಿಸಿತು. ಹೆಂಗುಸಾದ ಆಕೆ ಅಲ್ಲಿ ಗಂಡುಸರಂತೆ ಯುದ್ಧ ಮಾಡುತ್ತಿದ್ದಾಗ ಇಲ್ಲಿ ತಾನು ಅಸಹಾಯನಾಗಿ ಕುಳಿತುಕೊಂಡಿರಬೇಕಾಯಿತಲ್ಲ!

ಮಲ್ಲಸರ್ಜನ ಮಡದಿಯ ಪರಾಕ್ರಮದ ವಿಚಾರ ಕೇಳಿ ಆಂಗ್ಲ ಸೈನ್ಯಾಧಿಕಾರಿಗೂ ಕೌತುಕವೆನಿಸದಿರಲಿಲ್ಲ. ತನ್ನ ಹೃತ್ಪೂರ್ವಕ ಮೆಚ್ಚಿಗೆ ವ್ಯಕ್ತಗೊಳಿಸುತ್ತ ಅಧಿಕಾರಿಯೆಂದ: "ಇಂಥ ಅರಸಿಯನ್ನು ಪಡೆದ ನೀವೇ ಸುದೈವಿಗಳು ರಾಜಾ ಸಾಹೇಬ್!"

ಆಗ ಮಾತ್ರ ಮಲ್ಲಸರ್ಜನ ಮನದ ದುಗುಡ ದೂರವಾಗಿ ಮತ್ತೆ ಆತ ಉಲ್ಲಸಿತನಾದ.

ಅಧಿಕಾರಿಯ ಅನುಮತಿ ಪಡೆದ ಅವನನ್ನು ಬೀಳ್ಕೊಂಡು ಮಾರನೆಯ ದಿನ ಬೆಳಗಿನ ಜಾವದಲ್ಲಿ ಅವರು ಪಯಣ ಹೊರಟರು. ಟೀಪುವಿನ ಸೀಮೆಯಲ್ಲಿ ಪ್ರವೇಶಿಸದೆ, ಬಳಸಿಕೊಂಡು ಹೋಗಿ ನಿಜಾಮನ ರಾಜ್ಯದಲ್ಲಿ ಹಾದು ಬಿಜಾಪುರದ ಮಾರ್ಗವಾಗಿ ಕಿತ್ತೂರಿಗೆ ಹೋಗಬೇಕಾಗಿತ್ತು. ಎಲ್ಲರೂ ಅಶ್ವಾರೂಢರಾಗಿ ಎಂಟು ದಿನಗಳ ಕಾಲ ಪ್ರವಾಸ ಮಾಡಿ ಬಿಜಾಪುರ ಸೀಮೆಯಲ್ಲಿದ್ದ ಬಬಲೇಶ್ವರಕ್ಕೆ ಬಂದು ತಲುಪಿದರು. ರುದ್ರಮ್ಮಾಜಿಯ ಸೋದರ ಮಾವಂದಿರಾಗಿದ್ದ ಬಬಲೇಶ್ವರದ ದೇಸಾಯರು ಕಿತ್ತೂರು ದೊರೆಯನ್ನು ಪ್ರೀತಿಯಿಂದ ಬರಮಾಡಿಕೊಂಡು ಸತ್ಕರಿಸಿದರು. ಅಲ್ಲಿ ಒಂದೆರಡುದಿನ ವಿರಮಿಸಿಕೊಳ್ಳುತ್ತಿದ್ದಾಗಲೇ ಕಿತ್ತೂರಿನಿಂದ ಮತ್ತೆ ಜನ ಬಂದಿತು. ಬಬಲೇಶ್ವರದಿಂದ ಮತ್ತೆ ಪಯಣ ಹೊರಟು ಮೂರು ದಿನಗಳೊಳಗಾಗಿ ಕಿತ್ತೂರಿಗೆ ಬಂದು ಮುಟ್ಟಿದರು. ಕುಶಾಲು ತೋಫು ಹಾರಿಸಿ ಅರಸನನ್ನು ಸ್ವಾಗತಿಸಲಾಯಿತು.

ಕೋಟೆಯಲ್ಲಿ ಅಡಿಯಿಡುವುದಕ್ಕೆ ಮೊದಲು ಮಲ್ಲಸರ್ಜ ಮಠಕ್ಕೆ ಹೋಗಿ ಸ್ವಾಮಿಗಳ ದರ್ಶನಾಶೀರ್ವಾದ ಪಡೆದುಕೊಂಡ.

"ತಮ್ಮ ದಯದಿಂದ ನಾನು ಸುಖರೂಪವಾಗಿ ಹಿಂದಿರುಗಿ ಬಂದೆ. ಇಲ್ಲೂ ಎಲ್ಲಾ ಒಳ್ಳೆಯದೇ ಆಗಿದೆ. ಸ್ವಾಮಿಗಳು ಇದೇ ರೀತಿ ಕೃಪೆಯಿಡಬೇಕು."

"ನಮ್ಮದೇನಿದೆ ಮಲ್ಲಸರ್ಜ? ಎಲ್ಲಾ ಗುರುಸಿದ್ಧೇಶ್ವರನ ಕೃಪೆ. ನೀನು ಒಳ್ಳೆಯವನಾಗಿರುವವರೆಗೆ ನಿನಗೇನೂ ಕೇಡು ತಾಗದು. ಎಂಥ ಸಂಕಟ ಬಂದರೂ ನಿವಾರಣೆಯಾಗುವದು."

"ನಾನು ಯಾವಾಗಲೂ ಒಳ್ಳೆಯ ದಾರಿಯಲ್ಲಿಯೇ ನಡೆಯುವಂತೆ ಹರಸಿರಿ ಗುರುದೇವಾ."

"ನಾನೇನೋ ಆಶೀರ್ವಾದ ಮಾಡಬಹುದು. ಮುಂದೆ ಅದರಂತೆ ನಡೆದುಕೊಳ್ಳುವದು ನಿನಗೇ ಸೇರಿದ್ದು ತಾನೆ? ಸಂತೋಷ. ನಿನಗೂ ನಿನ್ನ ಪರಿವಾರಕ್ಕೂ ಮಂಗಲವಾಗಲಿ. ನಿನ್ನ ಆಳಿಕೆಯಲ್ಲಿ ಕಿತ್ತೂರು ಕೀರ್ತಿಶಾಲಿಯಾಗಲಿ," ಎಂದು ಸ್ವಾಮಿಗಳು ಮನಃಪೂರ್ವಕವಾಗಿ ಹರಸಿದರು.

೨೧

ದೊರೆಯ ಆಗಮನದ ಪ್ರೀತ್ಯರ್ಥವಾಗಿ ಕಿತ್ತೂರು ಪಟ್ಟಣವೆಲ್ಲವೂ ತಳಿರು ತೋರಣಗಳಿಂದ ಅಲಂಕೃತವಾಗಿತ್ತು. ಪ್ರತಿಯೊಂದು ಬೀದಿಯಲ್ಲಿಯೂ ಹಸಿರುವಾಣಿ ಚಪ್ಪರಗಳನ್ನು ನಿರ್ಮಿಸಿ, ಮೇಲೆ ಕಿತ್ತೂರಿನ ಬಾವುಟ ಏರಿಸಿ ಅರಸನನ್ನು ಸ್ವಾಗತಿಸಲು ಅಣಿಮಾಡಲಾಗಿತ್ತು. ಮಠದಿಂದ ಹೊರಟ ದೊರೆಯ ಪರಿವಾರ ಮೆರೆವಣಿಗೆಯಲ್ಲಿ ಸಾಗಿ ನಗರದಲ್ಲಿ ಪ್ರವೇಶಿಸಿತು. ಕೊಂಬು ಕಹಳೆಗಳು ಭೋರ್ಗರೆಯುತ್ತಿದ್ದುವು, ನಗಾರಿ—ನೌಬತ್ತು ಡಮುಡಮಿಸುತ್ತಿದ್ದುವು, ಕುಶಾಲು ಗುಂಡು ಹಾರುತ್ತಿದ್ದುವು. ಗಾಯಕರು ಗಾಯನ ಮಾಡುತ್ತ ನಡೆದಿದ್ದರು, ಬಟ್ಟಂಗಿಗಳು ಬಿರುದು ಹೊಗಳುತ್ತಿದ್ದರು, ನರ್ತಕಿಯರು ನರ್ತಿಸುತ್ತಿದ್ದರು, ಗರಡೀ ಮನೆಗಳ ಯುವಕರು ಕತ್ತಿ ವರಸೆ ದೊಣ್ಣೆ ವರಸೆ ತೋರಿಸುತ್ತ ಸಾಗಿದ್ದರು. ಮೆರವಣಿಗೆಯ ಮಧ್ಯ ಭಾಗದಲ್ಲಿ ದಿವ್ಯವಾದ ಶ್ವೇತಾಶ್ವವನ್ನೇರಿ ಬರುತ್ತಿದ್ದ ತೇಜಸ್ವಿಯೂ ತರುಣನೂ ಆದ ಮಲ್ಲಸರ್ಜ ದೊರೆಯನ್ನು ಕಂಡು ಆನಂದ ಬಾಷ್ಪ ಸುರಿಸುತ್ತಿದ್ದರು. ಪ್ರತಿಯೊಂದು ಮನೆಯ ಎದುರಿಗೂ ದೊರೆಯ ಕುದುರೆಯನ್ನು ನಿಲ್ಲಿಸಿ ಕೊಡಗಳಲ್ಲಿ ನೀರು ತಂದು ಅಭಿಷೇಕ ಮಾಡಿ ಸುಮಂಗಲೆಯರು ಆರತಿ ಎತ್ತಿ ಸ್ವಾಗತಿಸುತ್ತಿದ್ದರು. ವಂದಿಸಿದ ಜನರಿಗೆಲ್ಲ ಪ್ರತಿಯಾಗಿ ವಂದನೆ ಸಲ್ಲಿಸುತ್ತ, ಗದ್ದಲದಲ್ಲಿ ದಿಗಿಲುಗೊಂಡು ಕೆನೆಯುತ್ತಿದ್ದ ಕುದುರೆಯನ್ನು ಸಂತೈಸಿ ಸಾವಧಾನದಿಂದ ನಡಸುತ್ತ ಮಲ್ಲಸರ್ಜ ಉಲ್ಲಸಿತ ಮುಖಮುದ್ರೆಯಿಂದ ಸಾಗಿಬರುತ್ತಿದ್ದ. ಅವನ ಎಡಬದಿಯಲ್ಲಿ ಮಡಿವಾಳನೂ ಬಲಬದಿಯಲ್ಲಿ ವೀರಸಂಗಪ್ಪನೂ ಅಶ್ವಾರೋಹಿಗಳಾಗಿ ಬರುತ್ತಿದ್ದರು. ಹಿಂಭಾಗದಲ್ಲೂ ಮುಂಭಾಗದಲ್ಲೂ ಅಂಗರಕ್ಷಕ ಪಡೆಯ ಭಟರಿದ್ದರು. ತಿಮ್ಮನಗೌಡ, ಗುರುಸಿದ್ಧಪ್ಪ, ರುದ್ರಪ್ಪ ಮೊದಲಾದ ಇತರ ಪ್ರಮುಖರು ಸನಿಯದಲ್ಲಿಯೇ ನಡೆದು ಬರುತ್ತಿದ್ದರು.

ಮೆರೆವಣಿಗೆ ಕುಂಬಾರರ ಓಣಿಯಲ್ಲಿ ಹೊರಟದ್ದ ಹಾಗೆ ಮಡಿವಾಳನ ದೃಷ್ಟಿ ಸಹಜವಾಗಿಯೇ ತನ್ನ ಮನೆಯತ್ತ ತಿರುಗಿತು. ಕಿತ್ತೂರು ತಮ್ಮಾವರ

ವಶವಾಗುತ್ತಲೂ ತನ್ನ ತಂದೆಯೂ ಹೆಂಡತಿಯೂ ಪಟ್ಟಣಕ್ಕೆ ಮರಳಿ ಬಂದು ತಮ್ಮ ನಿತ್ಯಕಾರ್ಯಕದಲ್ಲಿ ತೊಡಗಿಕೊಂಡಿರಬಹುದೆಂದು ಆತ ಭಾವಿಸಿದ್ದ. ನಿಜವಾಗಿ ನಡೆದಿದ್ದುದೂ ಹಾಗೆಯೆ. ಎಲ್ಲ ಮನೆಗಳೆದರು ಇದ್ದಂತೆ ಅವರ ಮನೆಯೆದುರೂ ತಳಿರು ತೋರಣಗಳು ಶೋಭಿಸುತ್ತಿದ್ದುವು. ಅಂಗಳದಲ್ಲಿ ರಂಗವಲ್ಲಿಯ ಚಿತ್ರವೂ ಎದ್ದು ಕಾಣುತ್ತಿತ್ತು. ಮೆರವಣಿಗೆ ಮನೆಯ ಮುಂದೆ ಬರುತ್ತಲೂ ತೋಪಿನ ತೆನೆಯ ಜರತಾರಿ ಸೆರಗಿನ ಸೀರೆಯುಟ್ಟು ಕೊಂಡ ಸಿದ್ಧಮತಿ ಅವನತಮುಖಿಯಾಗಿ ನಡೆದು ಬಂದು ಆರತಿ ಬೆಳಗಿ, ದೊರೆಯ ಪಕ್ಕದಲ್ಲಿದ್ದ ಪತಿಯನ್ನೊಂದು ಬಾರಿ ಪ್ರೀತಿಯಿಂದಲೂ ಹೆಮ್ಮೆ ಯಿಂದಲೂ ದಿಟ್ಟಿಸಿ ನೋಡಿ ಬಂದಂತೆಯೇ ಹಿಂದೆ ಸರಿದು ಮನೆಯೊಳಗಡೆ ಮಾಯವಾದಳು.

ಮೆರವಣಿಗೆ ಮತ್ತೆ ಮುಂದೆ ನಡೆಯಿತು.

ಸೆರೆಮನೆ ವಾಸದಲ್ಲಿಯೂ ಅನಂತರವೂ ದೊರೆಗಳ ಜೊತೆಯಲ್ಲಿದ್ದವ ನೆಂಬ ಕಾರಣದಿಂದ ಮಡಿವಾಳನ ಹೆಸರೂ ಆ ವೇಳೆಗಾಗಲೇ ಕಿತ್ತೂರಿನ ಲ್ಲೆಲ್ಲ ಮನೆ ಮಾತಾಗಿತ್ತು. ದೊರೆಯನ್ನು ನೋಡಲು ತವಕಪಡುತ್ತಿದ್ದಂತೆ ಜನರು ಮಡಿವಾಳನನ್ನು ನೋಡಲು ಕುತೂಹಲಿಗಳಾಗಿದ್ದರು. ಅರಸನಿಗೆ ಸಲ್ಲುತ್ತಿದ್ದ ಮಾನ ಸನ್ಮಾನಗಳು ಮಡಿವಾಳನಿಗೂ ಸಲ್ಲುತ್ತಿದ್ದುವು. ತಮ್ಮ ಓಣಿಯು, ತಮ್ಮ ಕಾರ್ಯಕದ ಯುವಕನೊಬ್ಬ ಅರಸನ ಅಂತರಂಗದ ಮಿತ್ರನೂ, ಆತ್ಮೀಯ ಸಂಗಡಿಗನೂ ಆದುದಕ್ಕಾಗಿ ಕುಂಬಾರ ಓಣಿಯ ಸರಳ ಜೀವಿಗಳಿಗೆಲ್ಲ ಸಹಜವಾಗಿಯೇ ಸಂತೋಷವಾಗಿತ್ತು. ಗಡಿಗೆ ಮಡಕೆ ತಯಾರಿಸುತ್ತ ಕೈ ಹೊಲಸು ಮಾಡಿಕೊಳ್ಳಬೇಕಿದ್ದ ಕುಂಬಾರ ನೊಬ್ಬ ಕತ್ತಿಯ ಬಂಟನೆನಿಸಿಕೊಂಡು ದೊರೆಯ ಸಮವಾಗಿ ಕುದುರೆಯೇರಿ ಠೀವಿಯಿಂದ ಹೊರಟ ದೃಶ್ಯ ಕಂಡು ಅವರಿಗೆ ಹೆಮ್ಮೆಯೂ ಎನ್ನಿಸಿತ್ತು.

ಮೆರವಣಿಗೆ ಮುಂದೆ ಸಾಗುತ್ತಲೂ ನೆರೆಮನೆಯ ಕುಂಬಾರ ಶಿವಣ್ಣ ಸಿದ್ಧರಾಮಪ್ಪನನ್ನು ಕುರಿತು ಹೇಳಿದ: “ ನೀನೇ ಭಾಗ್ಯವಂತ ನೋಡೋ ಮಾವಾ. ಎಲ್ಲರ ಹೊಟ್ಟೆಯೊಳಗೂ ಇಂಥಾ ಮಗ ಹುಟ್ಟುವದಿಲ್ಲ.”

ಮಗನ ಸ್ಥಾನಮಾನ ಕಂಡು ಸಿದ್ಧರಾಮಪ್ಪನಿಗೂ ಅಭಿಮಾನವೆನಿ ಸಿದ್ದಿತಾದರೂ ಅದನ್ನು ಬಹಿರಂಗವಾಗಿ ಪ್ರದರ್ಶಿಸದೆ ಆತ ವಿನಯದಿಂದ ಹೇಳಿದ:“ ಏನು ಭಾಗ್ಯಾನೋ ಬಿಡಪ್ಪಾ ಶಿವಣ್ಣಾ. ಹಿರಿಯರಿಂದ ಬಂದ

ಕಾಯಕಾ ಮಾಡಿಕೊಂಡು ರೊಟ್ಟೀ ಅಂಬಲಿ ತಿಂದು ತಣ್ಣಗಿರೋದೆ ಚಲೋದು. ಕತ್ತಿ—ಕೋವಿ—ಕುದುರಿ—ಕಾಳಗಾ ಅಂತ ಮನೀ ಬಿಟ್ಟು ಮಾರು ಬಿಟ್ಟು ಮಡದೀ ಬಿಟ್ಟು ಪಿರೀ ಪಿರೀ ತಿರುಗೂದರಾಗ ಏನು ಅಂಥಾ ಸುಕಾ ಇದ್ದೀತು!"

"ಇದೇನು ಕಡಮಿ ಏನೋ ಮಾವಾ? ಅರಸರ ಪಕ್ಕದಾಗ ಕುದುರೀ ಮ್ಯಾಲ ಕೂತು ಮೆರೀತಾ ಬರೂ ಭಾಗ್ಯ ಎಲ್ಲರಿಗೂ ಸಿಗ್ತದೇನು?....ದೊರೆಗಳು...."

ವಾದ್ಯಗಳ ಗದ್ದಲದಲ್ಲಿ ಶಿವಣ್ಣನ ಮುಂದಿನ ಮಾತು ಕೇಳಿಸಲೇ ಇಲ್ಲ—ಮೆರೆವಣಿಗೆ ನಗರದಲ್ಲೆಲ್ಲ ಸುತ್ತಿ, ಕೋಟೆಯಲ್ಲಿ ಪ್ರವೇಶಿಸುವ ವೇಳೆಗೆ ಸೂರ್ಯಾಸ್ತವಾಗಿ ಹೋಗಿತ್ತು. ಕೋಟೆಯ ಗೋಡೆಗಳ ಮೇಲೆ ಉರಿಯುತ್ತಿದ್ದ ಸಾಲು ದೀಪಗಳು ಆರುತಿಯೆತ್ತಿ ಅರಸನನ್ನು ಸ್ವಾಗತಿಸಿದುವು. ಮತ್ತೊಮ್ಮೆ ತೋಫುಖಾನೆ ದನಿದೆಗೆದು ಗರ್ಜಿಸಿತು. ಬಿಚ್ಚುಗತ್ತಿಯ ಸೈನಿಕರ ಶಿಸ್ತಿನ ವಂದನೆಯನ್ನು ಸ್ವೀಕರಿಸುತ್ತ ಮಲ್ಲಸರ್ಜ ಕುದುರೆಯಿಂದಿಳಿದು ಅರಮನೆಯ ಮುಂದೆ ಬರುತ್ತಲೂ ಮುತ್ತಿನ ಪೀತಾಂಬರವುಟ್ಟು, ರತ್ನಖಚಿತ ಆಭರಣಗಳನ್ನಿಟ್ಟುಕೊಂಡು ರುದ್ರಾಣಿ ಚಿನ್ನದ ಹರಿವಾಣದಲ್ಲಿ ಸಂಚಾರತಿಯಿಟ್ಟುಕೊಂಡು ಬಂದು ಸುಕುಮಾರ ಬಾಹುಗಳನ್ನೆತ್ತಿ ತನ್ನ ಆರಸನಿಗೆ ಆರತಿ ಬೆಳಗಿ, ಕಸ್ತೂರಿ ತಿಲಕವಿಟ್ಟು ಸಂಭ್ರಮದಿಂದ ಸರಿದು ನಿಂತಳು.

ಆರತಿಯ ತಟ್ಟೆಯನ್ನು ದಾಸಿಯರು ಎತ್ತಿಕೊಳ್ಳುತ್ತಿರಲು, ಅಡಿಗಳಿಗೆರಗುತ್ತಿದ್ದ ಪ್ರೀತಿಯ ಮಡದಿಯನ್ನು ಹಿಡಿದೆಬ್ಬಿಸಿ ಅಕ್ಕರೆಯಿಂದ ಕೈಹಿಡಿದುಕೊಂಡು ಮಲ್ಲಸರ್ಜ ಅರಮನೆಯಲ್ಲಿ ಪ್ರವೇಶಿಸಿದ. ಒಳಗಡೆ ಕಾದು ನಿಂತಿದ್ದ ತಲ್ಲೂರು ದೇಸಾಯರಿಗೂ, ಅತ್ತೆ ನೀಲಮ್ಮಾಜಿಯವರಿಗೂ ಆರಸ ಅರಸಿಯರಿಬ್ಬರೂ ಒಂದುಗೂಡಿಯೇ ವಂದಿಸಿದರು.

ಪುನರ್ಮಿಲನದ ಉದ್ರೇಕವಿಳಿಯುತ್ತಿದ್ದಂತೆಯೇ ಮಡಿವಾಳ ಬಂದು ಕಾಣಿಸಿಕೊಂಡು, ಮನೆಗೆ ಹೋಗಲು ದೊರೆಯ ಅಪ್ಪಣೆ ಬೇಡಿಕೊಂಡ.

"ಈಗಲೇ ಹೋಗಕೂಡದು ಮಡಿವಾಳಾ. ಇಂದು ಇಲ್ಲೇ ಎಲ್ಲರೂ ಸೇರಿಯೇ ಊಟ ಮಾಡೋಣ. ತಿಮ್ಮನಗೌಡನು, ಗುರುಸಿದ್ಧಪ್ಪ, ವೀರ

ಸಂಗಪ್ಪ ಅವರಿಗೂ ತಿಳಿಸು." ಎಂದು ಹೇಳಿ ಮಲ್ಲಸರ್ಜ ನೀಲಮ್ಮಾಜಿಯ ಕಡೆ ಹೊರಳಿ ನುಡಿದ: "ಈ ಮಡಿವಾಳನಿಂದ ನನಗೆ ಬಹಳ ಸಹಾಯ ವಾಯಿತು ಅಮ್ಮಾಜಿ. ಇವನು ನನ್ನ ಸಂಗಡ ಇರದಿದ್ದರೆ ಇನ್ನೂ ಎಂಥ ಪ್ರಸಂಗಗಳು ಬರುತ್ತಿದ್ದವೊ!"

"ನಾನೇನೂ ಅಂಥಾ ಶತಕೃತ್ಯ ಮಾಡಲಿಲ್ಲ ಅವ್ವನವರೆ. ಪ್ರಭು ಗಳನ್ನು ನೆರಳಿನಂತೆ ಹಿಂಬಾಲಿಸುತ್ತಿದ್ದೆನಷ್ಟೆ."

"ಇನ್ನು ಮುಂದೆಯೂ ನೀನು ನೆರಳಿನಂತೆಯೇ ನಮ್ಮ ಜೊತೆಗಿರ ಬೇಕು ಮಡಿವಾಳಾ. ನಿನ್ನನ್ನು ನಮ್ಮ ಖಾಸಾ ಕಾರಾಭಾರಿಯನ್ನಾಗಿ ನೇಮಿ ಸಿದ್ದೇವೆ. ಒಪ್ಪಿದೆಯೊ?"

"ಒಪ್ಪಿಗೆಯ ಪ್ರಶ್ನೆಯೇ ಇಲ್ಲ ಪ್ರಭು. ನಿಮಗಾಗಿ ನನ್ನ ಜೀವವೇ ಮೀಸಲು" ಎಂದು ಕತ್ತಿ ಹಿರಿದು, ವೀರಮಂಡಿಯೂರಿ ಕುಳಿತು ಪ್ರಣಾಮ ಗೈದ ಮಡಿವಾಳ.

ರಾತ್ರಿ ಭೋಜನ ನಡೆದಿದ್ದ ಹಾಗೆಯೇ ತಿಮ್ಮನಗೌಡ ಹೊಸ ವಾರ್ತೆ ಯೊಂದನ್ನು ಅರುಹಿದ: "ತಾವು ಹಿಂದಿರುಗಿ ಬಂದ ಗಳಿಗೆ ಅಮೃತ ಗಳಿಗೆ ಪ್ರಭು. ಕಿತ್ತೂರ ಮೇಲೆ ಕವಿಯುವಂತಿದ್ದ ಸಂಕಟವೊಂದು ಇದ್ದಕ್ಕಿದ್ದ ಹಾಗೇ ಕರಗಿಹೋಯ್ತು."

"ಏನಾಯ್ತು ನಾಯಕರೆ?" ವೀರಸಂಗಪ್ಪ ಉತ್ಸುಕತೆಯಿಂದ ವಿಚಾರಿಸಿದ.

"ಬುರ್ಹಾನುದ್ದೀನ್ ಮತ್ತೆ ನಮ್ಮ ಮೇಲೆ ಸಾಗಿ ಬರಬಹುದಂತ ನಾವು ತಿಳಿದಿದ್ದೆವಲ್ಲವೆ? ಅವನು ಬಂದೇ ಬರುವನೆಂದು ಭಾವಿಸಿ ಅವನನ್ನು ಚೆನ್ನಾಗಿ ಹಣ್ಣು ಮಾಡಲು ತಯಾರಿಯನ್ನೂ ಮಾಡಿಕೊಂಡಿದ್ದೆವು. ನಮ್ಮಿಂದ ಹೊಡೆತ ತಿಂದು ಅಪಮಾನ ಮಾಡಿಸಿಕೊಂಡು ಹೋಗಲು ಅವ ನಿಗೆ ಮನಸ್ಸಿಲ್ಲವೋ ಅಥವಾ ಟೀಪುವಿನ ಅಪ್ಪಣೆಯೇ ಹಾಗಿದೆಯೋ— ಬುರ್ಹಾನುದ್ದೀನ್ ಸದ್ಯಕ್ಕಂತೂ ಇತ್ತ ಬರುವುದಿಲ್ಲವಂತೆ. ನಮ್ಮ ಗುಪ್ತ ಚಾರರು ಇಂದೇ ಮಧ್ಯಾಹ್ನ ಸುದ್ದಿ ತಂದಾರೆ."

"ಧಾರವಾಡದಲ್ಲಿನ ಸೈನ್ಯ?"

"ಅಲ್ಲೂ ಈಗ ಹೆಚ್ಚು ಸೈನ್ಯವಿಲ್ಲವಂತೆ. ಅರ್ಧಕ್ಕಿಂತಲೂ ಹೆಚ್ಚು ದಂಡು ಹಿಂದಿರುಗಿ ಬಿದನೂರಿಗೆ ಹೋಗಿದೆಯಂತೆ."

"ನಿಜಾಮರೂ ಪೇಶ್ವೆಯರೂ ಒಂದುಗೂಡಿ ಟೀಪುವನ್ನು ಹಣಿಯಲು ಸಿದ್ಧತೆ ನಡಸುತ್ತಿದ್ದಾರೆ. ಅದಕ್ಕಾಗಿ ಟೀಪುವೂ ಸಿದ್ಧತೆ ಮಾಡಿಕೊಳ್ಳುತ್ತಿರಬೇಕು," ಎಂದ ಮಲ್ಲಸರ್ಜ.

"ಅವಸರದ ಪ್ರಸಂಗ ತಪ್ಪಿತೆಂದು ನಾವೂ ಸುಮ್ಮನೆ ಕೂತುಕೊಳ್ಳಬಾರದು. ಎರಡು ಮೂರು ತಿಂಗಳಲ್ಲಿಯೇ ಮಹಾಯುದ್ಧಕ್ಕಾರಂಭವಾಗುವದು ಖಂಡಿತ. ಕಿತ್ತೂರಿನ ಸಮೀಪದಲ್ಲಿಯೇ ಯುದ್ಧ ನಡೆಯುವ ಸಂಭವವೂ ಉಂಟು. ನಾವೂ ನಮ್ಮ ತಯಾರಿಯಲ್ಲೇ ಇರಬೇಕು."

"ನಾಳೆಯಿಂದಲೇ ಸೈನಿಕರ ಸಂಗ್ರಹಕಾರ್ಯ ಶುರುವಾಗಲಿ. ಹತ್ತು ಸಾವಿರದಷ್ಟಾದರೂ ಕಾಲ್ದಳ ಸಿದ್ಧಗೊಳಿಸಬೇಕು. ಶಸ್ತ್ರಾಗಾರದಲ್ಲಿ ಹಗಲೂ ರಾತ್ರಿ ಕೆಲಸಕ್ಕಾರಂಭವಾಗಲಿ. ಕತ್ತಿ—ಕೋವಿ—ಮದ್ದು—ಗುಂಡು ಯಾತಕ್ಕೂ ಕೊರತೆಯಾಗಬಾರದು. ಕಬ್ಬಿಣವಂತೂ ಸಾಕಷ್ಟು ಸಿಕ್ಕುತ್ತಿರಬೇಕಲ್ಲ? ಗಣಿಯ ಕೆಲಸ ಮತ್ತೆ ಶುರುವಾಗಿದೆಯಷ್ಟೆ?" ಎಂದ ಮಲ್ಲಸರ್ಜ.

"ಆಗಿದೆ ಪ್ರಭು. ವೈರಿಗಳನ್ನೋಡಿಸುತ್ತಲೂ ಎಲ್ಲಕ್ಕೂ ಮೊದಲು ಗಣಿಯ ಕೆಲಸದ ಬಗ್ಗೆ ವಿಚಾರಿಸಿಕೊಂಡೆ. ದಿನಾಲೂ ಇಪ್ಪತ್ತು ಬಂಡಿಗಳಲ್ಲಿ ಕಬ್ಬಿಣ ಬಂದು ಬೀಳುತ್ತಿದೆ."

"ಹಾಗಿದ್ದರೆ ಪರವಿಲ್ಲ. ನಮಗೆ ಉಕ್ಕಿನ ಕೊರತೆಯೇನೂ ಆಗಲಾರದು. ದೇಶದಲ್ಲೆಲ್ಲಾ ತಯಾರಾಗದಂಥ ಹರಿತವಾದ ಆಯುಧಗಳು ತಯಾರಾಗಲಿ. ಆ ಟಿಪ್ಪೂಗೆ ಮತ್ತೆ ದುರ್ಬುದ್ಧಿ ಬಂದು ಕಿತ್ತೂರ ಮೇಲೆ ದಾಳಿ ಮಾಡಿದ್ದೇ ಆದರೆ ತೋರಿಸೋಣ ಅವನಿಗೆ ನಮ್ಮ ಕೈ."

"ಟಿಪ್ಪು ಅಷ್ಟೇ ಅಲ್ಲ—ಯಾವ ವೈರಿ ಬಂದರೂ ಸರಿ! ಚೆನ್ನಾಗಿ ಬುದ್ಧಿ ಕಲಿಸೋಣ," ಎಂದ ವೀರಸಂಗಪ್ಪ. "ಗುರುಸಿದ್ದೇಶ್ವರನ ಕೃಪೆಯಿದ್ದರೆ, ಪ್ರಭು ಸ್ವಾಮಿಗಳ ಆಶೀರ್ವಾದವಿದ್ದರೆ, ಹಿರಿಯರಾದ ದೇಸಾಯಿಸಾಹೇಬರ ಬೆಂಬಲವಿದ್ದರೆ, ರಾಣೀಸಾಹೇಬರ ಉತ್ತೇಜನವಿದ್ದರೆ ಎಂಥ ಪ್ರಬಲ ಶತ್ರುವನ್ನೂ ನಾವು ಸೋಲಿಸಬಲ್ಲೆವು. ಏನಂತೀರಿ ನಾಯಕರೆ?"

"ನೂರಕ್ಕೆ ನೂರು ನಿಜವಾದ ಮಾತು," ಎಂದ ತಿಮ್ಮನಗೌಡ.

"ಇಂಥ ಆತ್ಮವಿಶ್ವಾಸವೂ ಅಗತ್ಯವಾಗಿ ಬೇಕು. ಅದರೊಡನೆ ಸಂಯಮವೂ ಇರಬೇಕು," ಎಂದು ದೇಸಾಯರು ಗಂಭೀರವಾಗಿ ನುಡಿದರು.

ಬಸವರಾಜ ಕಟ್ಟೀಮನಿ ಅವರ ಕೃತಿಗಳು

ಕಾದಂಬರಿಗಳು

ಸ್ವಾತಂತ್ರ್ಯದೆಡೆಗೆ
ಮಾಡಿ ಮಡಿದವರು
ಜ್ವಾಲಾ ಮುಖಿಯ ಮೇಲೆ
ಮೋಹದ ಬಲೆಯಲ್ಲಿ
ಬೀದಿಯಲ್ಲಿ ಬಿದ್ದವಳು
ಮಣ್ಣು ಮತ್ತು ಹೆಣ್ಣು
ಜರತಾರಿ ಜಗದ್ಗುರು
ನೀ ನನ್ನ ಮುಟ್ಟಬೇಡ
ಜನಿವಾರ ಮತ್ತು ಶಿವದಾರ
ಬಲೆಯ ಬೀಸಿದರು
ನಾನು ಪೋಲೀಸನಾಗಿದ್ದೆ
ಬಂಗಾರದ ಜಿಂಕೆಯ ಹಿಂದೆ
ಗೋವಾದೇವಿ
ಪಾತರಗಿತ್ತಿ
ಆಶ್ರಮವಾಸಿ
ಸಾಕ್ಷಾತ್ಕಾರ
ಖಾನಾವಳಿಯ ನೀಲಾ
ಬೆಳಗಿನ ಗಾಳಿ
ಗಿರಿಯ ನವಿಲು
ಸಮರಭೂಮಿ
ಜಲತರಂಗ
ಪೌರುಷ ಪರೀಕ್ಷೆ

ಕಥಾಸಂಗ್ರಹಗಳು

ಕಾರವಾನ್
ಗುಲಾಬಿ ಹೂ
ಆಗಸ್ಟ್ ಒಂಭತ್ತು
ಸೆರೆಯಿಂದ ಹೊರಗೆ
ಜೋಳದ ಬೆಳೆಯ ನಡುವೆ
ಸುಂಟರಗಾಳಿ

ನಾಟಕ

ಪಟ್ಟಣದ ಹುಡುಗಿ